ಮಂಗಳವಾರ, ಮಾರ್ಚ್ 23, 2021 | ₹ 6.00

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ: ಕನ್ನಡದ 'ಅಕ್ಷಿ' ಅತ್ಯುತ್ತಮ ಚಲನಚಿತ್ರ

ಕಂಗನಾಗೆ ಅತ್ಯುತ್ತಮ ನಟಿ ಪ್ರಶಸ್ತಿ

ನವದೆಹಲಿ (ಪಿಟಿಐ): 67ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ಸೋಮವಾರ ಘೋಷಣೆಯಾಗಿದ್ದು, ಕನ್ನಡ ಭಾಷೆ ವಿಭಾಗದಲ್ಲಿ 'ಅಕ್ಷಿ' ಅತ್ಯುತ್ತಮ ಚಲನಚಿತ್ರ ಪ್ರಶಸ್ತಿ ಪಡೆದಿದೆ.

'ಮಣಿಕರ್ಣಿಕಾ' ಹಾಗೂ 'ಪಂಗಾ' ಚಿತ್ರದಲ್ಲಿನ ನಟನೆಗಾಗಿ ನಟಿ ಕಂಗನಾ ರನೌತ್ ಅತ್ಯುತ್ತಮ ನಟಿ ಪ್ರಶಸ್ತಿಗಳಿಸಿದ್ದಾರೆ. 'ಭೋಂಸ್ಲೆ' ಚಿತ್ರದಲ್ಲಿನ ನಟನೆಗಾಗಿ ಬಾಲಿವುಡ್ ನಟ ಮನೋಜ್ ಬಾಜಪೇಯಿ ಹಾಗೂ 'ಅಸುರನ್' ಚಿತ್ರದಲ್ಲಿನ ನಟನೆಗಾಗಿ ತಮಿಳು ನಟ ಧನುಷ್ ಜಂಟಿಯಾಗಿ ಈ ಬಾರಿ ಅತ್ಯುತ್ತಮ ನಟ ಪ್ರಶಸ್ತಿ ಪಡೆದಿದ್ದಾರೆ ಎಂದು ಪ್ರಶಸ್ತಿ ತೀರ್ಪುಗಾರರ ಮಂಡಳಿಯ ನೇತೃತ್ವ ವಹಿಸಿದ್ದ ಚಿತ್ರ ನಿರ್ಮಾಪಕ ಎನ್.ಚಂದ್ರ ಘೋಷಿಸಿದರು. ಕೋವಿಡ್–19 ಕಾರಣದಿಂದಾಗಿ ಪ್ರಶಸ್ತಿ ಘೋಷಣೆ ಒಂದು ವರ್ಷ ವಿಳಂಬವಾಗಿತ್ತು.


ಮಲಯಾಳಂ ಚಿತ್ರ ನಿರ್ದೇಶಕ ಪ್ರಿಯದರ್ಶನ್ ಅವರ 'ಮರಕ್ಕರ್; ಅರಬ್ಬಿಕಡಲಿಂಡೆ ಸಿಂಹಂ' ಚಲನಚಿತ್ರವು ಅತ್ಯುತ್ತಮ ಚಲನಚಿತ್ರ ಪ್ರಶಸ್ತಿ ಪಡೆದಿದ್ದು, 'ಬಹತ್ತರ್ ಹೂರೈ' ಚಿತ್ರಕ್ಕಾಗಿ ನಿರ್ದೇಶಕ ಸಂಜಯ್ ಪೂರನ್ ಸಿಂಗ್ ಚೌಹಾಣ್ ಅವರು ಅತ್ಯುತ್ತಮ ನಿರ್ದೇಶಕ ಪ್ರಶಸ್ತಿ ಪಡೆದಿದ್ದಾರೆ. ದಿವಂಗತ ನಟ ಸುಶಾಂತ್ ಸಿಂಗ್ ರಜಪೂತ್ ನಟನೆಯ 'ಚಿಚೋರೆ' ಚಿತ್ರವು ಅತ್ಯುತ್ತಮ ಹಿಂದಿ ಚಿತ್ರವೆಂದು ಘೋಷಣೆಯಾಗಿದೆ.

ಅತ್ಯುತ್ತಮ ಕನ್ನಡ ಚಲನಚಿತ್ರ ಪ್ರಶಸ್ತಿ ಪಡೆದ 'ಅಕ್ಷಿ' ಚಿತ್ರವನ್ನು ಕಲಾದೇಗುಲ ಸ್ಟೂಡಿಯೋ ನಿರ್ಮಾಣ ಮಾಡಿದ್ದು, ಮನೋಜ್ ಕುಮಾರ್ ಕಥೆ, ಚಿತ್ರಕಥೆ ಬರೆದು ನಿರ್ದೇಶಿಸಿದ್ದಾರೆ. ಸಂವಿಧಾನದ ಎಂಟನೇ ಪರಿಚ್ಛೇದದಲ್ಲಿ ಇರದ ಇತರೆ ಭಾಷೆಗಳಲ್ಲಿನ ಚಲನಚಿತ್ರ ವಿಭಾಗದಲ್ಲಿ ತುಳು ಭಾಷೆಯ 'ಪಿಂಗಾರ' ಚಿತ್ರಕ್ಕೆ ಅತ್ಯುತ್ತಮ ತುಳು ಚಲನಚಿತ್ರ ಪ್ರಶಸ್ತಿ ದೊರೆತಿದೆ. ಇದನ್ನು ಡಿಎಂಕೆ ಪ್ರೊಡಕ್ಷನ್ಸ್ ನಿರ್ಮಿಸಿದ್ದು, ಆರ್.ಪ್ರೀತಂ ಶೆಟ್ಟಿ ನಿರ್ದೇಶಿಸಿದ್ದಾರೆ. ರಕ್ಷಿತ್ ಶೆಟ್ಟಿ ಅಭಿನಯದ 'ಅವನೇ ಶ್ರೀಮನ್ನಾರಾಯಣ' ಚಿತ್ರದಲ್ಲಿನ ಸಾಹಸ ನಿರ್ದೇಶನಕ್ಕಾಗಿ ವಿಕ್ರಮ್ ಮೋರ್ ಅವರಿಗೆ ಅತ್ಯುತ್ತಮ ಸಾಹಸ ನಿರ್ದೇಶನ ಪ್ರಶಸ್ತಿ ದೊರಕಿದೆ.

ಪಿ.ಆರ್.ರಾಮದಾಸ್ ನಾಯ್ಡು ಅವರು ಬರೆದ 'ಕನ್ನಡ ಸಿನಿಮಾ: ಜಾಗತಿಕ ಸಿನಿಮಾ; ವಿಕಾಸ, ಪ್ರೇರಣೆ, ಪ್ರಭಾವ' ಕೃತಿಗೆ ಸಿನಿಮಾ ಕುರಿತ ಉತ್ತಮ ಕೃತಿ(ವಿಶೇಷ ಮನ್ನಣೆ) ಪ್ರಶಸ್ತಿ ದೊರೆತಿದೆ. ಅಮೋಘವರ್ಷ ಜೆ.ಎಸ್. ನಿರ್ಮಿಸಿರುವ 'ವೈಲ್ಡ್ ಕರ್ನಾಟಕ'ವು ಅತ್ಯುತ್ತಮ ಎಕ್ಸ್‌ಪ್ಲೋರೇಷನ್ ಚಿತ್ರಕ್ಕೆ ಆಯ್ಕೆಯಾಗಿದೆ. ಇದೇ ಚಿತ್ರದ ಹಿನ್ನೆಲೆ ಧ್ವನಿಗಾಗಿ ಸರ್ ಡೇವಿಡ್ ಅಟನ್‌ಬ್ರೊ ಅವರಿಗೆ ಅತ್ಯುತ್ತಮ ನಿರೂಪಣೆ ಪ್ರಶಸ್ತಿ ದೊರೆತಿದೆ.


ಕಂಗನಾ ರನೌತ್


ಮನೋಜ್ ಬಾಜಪೇಯಿ


ಧನುಷ್

ಇತರೆ ಪ್ರಶಸ್ತಿಯ ವಿವರ	
ಅತ್ಯುತ್ತಮ ಪೋಷಕ ನಟ	ವಿಜಯ್ ಸೇತುಪತಿ(ತಮಿಳು–ಸೂಪರ್ ಡಿಲಕ್ಸ್)
ಅತ್ಯುತ್ತಮ ಪೋಷಕ ನಟಿ	ಪಲ್ಲವಿ ಜೋಶಿ(ಹಿಂದಿ–ದಿ ತಾಷ್ಕೆನ್ ಫೈಲ್ಸ್)
ಅತ್ಯುತ್ತಮ ಬಾಲನಟ	ನಾಗ ವಿಶಾಲ್(ತಮಿಳು–ಕರುಪ್ಪ ದೊರೈ)
ಅತ್ಯುತ್ತಮ ಮಕ್ಕಳ ಸಿನಿಮಾ	ಕಸ್ತೂರಿ(ಹಿಂದಿ)
ಅತ್ಯುತ್ತಮ ತೆಲುಗು ಚಿತ್ರ	ಜೆರ್ಸಿ
ಅತ್ಯುತ್ತಮ ತಮಿಳು ಚಿತ್ರ	ಅಸುರನ್
ಅತ್ಯುತ್ತಮ ಪಂಜಾಬಿ ಚಿತ್ರ	ರಬ್ ದಾ ರೇಡಿಯೊ 2
ಅತ್ಯುತ್ತಮ ಒಡಿಯಾ ಚಿತ್ರ	ಸಾಲಾ ಬುದಾರ್ ಬದ್ಲಾ ಹಾಗೂ ಕಲಿರಾ ಅತೀತಾ
ಅತ್ಯುತ್ತಮ ಮಣಿಪುರ ಚಿತ್ರ	ಇಗಿ ಕೋನಾ
ಅತ್ಯುತ್ತಮ ಮಲಯಾಳಂ ಚಿತ್ರ	ಕಳ್ಳ ನೋಟ್ಟಂ
ಅತ್ಯುತ್ತಮ ಮರಾಠಿ ಚಿತ್ರ	ಬಾರ್ಡೋ
ಅತ್ಯುತ್ತಮ ಕೊಂಕಣಿ ಚಿತ್ರ	ಕಾಜ್ರೊ
ಅತ್ಯುತ್ತಮ ಬಂಗಾಳಿ ಚಿತ್ರ	ಗುಮ್ನಾಮಿ
ಅತ್ಯುತ್ತಮ ಅಸ್ಸಾಮಿ ಚಿತ್ರ	ರೋನುವಾ– ಹು ನೆವರ್ ಸರಂಡರ್ಸ್
ಅತ್ಯುತ್ತಮ ಮನರಂಜನಾ ಚಿತ್ರ	ಮಹರ್ಷಿ (ತೆಲುಗು)
ಅತ್ಯುತ್ತಮ ಛಾಯಾಗ್ರಹಣ	ಜಲ್ಲಿಕಟ್ಟು(ಮಲಯಾಳಂ–ಗಿರೀಶ್ ಗಂಗಾಧರನ್)
ಅತ್ಯುತ್ತಮ ನೃತ್ಯ ನಿರ್ದೇಶನ	ಮಹರ್ಷಿ(ತೆಲುಗು–ರಾಜು ಸುಂದರಂ)
ಅತ್ಯುತ್ತಮ ಸ್ಪೆಷಲ್ ಎಫೆಕ್ಟ್ಸ್	ಮರಕ್ಕರ್(ಮಲಯಾಳಂ–ಸಿದ್ಧಾರ್ಥ್ ಪ್ರಿಯದರ್ಶನ್)
ಅತ್ಯುತ್ತಮ ಸಾಹಿತ್ಯ	ಆರೋಡುಂ ಪರಯುಗ ವೈಯ್ಯ (ಕೂಳಂಬಿ, ಮಲಯಾಳಂ–ಪ್ರಭಾ ವರ್ಮ)
ಅತ್ಯುತ್ತಮ ಸಂಗೀತ ನಿರ್ದೇಶನ	ವಿಶ್ವಾಸಂ(ತಮಿಳು–ಡಿ. ಇಮ್ಮಾನ್)
ಅತ್ಯುತ್ತಮ ಹಿನ್ನೆಲೆ ಸಂಗೀತ	ಜೇಷ್ಠಪುತ್ರೊ(ಬಂಗಾಳಿ–ಪ್ರಬುದ್ಧ ಬ್ಯಾನರ್ಜಿ)
ಅತ್ಯುತ್ತಮ ಹಿನ್ನೆಲೆ ಗಾಯಕ	ಬಿ. ಪ್ರಾಕ್(ತೇರಿ ಮಿಟ್ಟಿ– ಹಿಂದಿ ಚಿತ್ರ ಕೇಸರಿ)
ಅತ್ಯುತ್ತಮ ಹಿನ್ನೆಲೆ ಗಾಯಕಿ	ಸಾವನಿ ರವೀಂದ್ರ(ಮರಾಠಿ ಚಿತ್ರ ಬಾರ್ಡೋ)
ಸಾಮಾಜಿಕ ಸಮಸ್ಯೆಯ ಮೇಲೆ ಚಿತ್ರೀಕರಿಸಲಾದ ಅತ್ಯುತ್ತಮ ಚಿತ್ರ	ಆನಂದಿ ಗೋಪಾಲ್(ಮರಾಠಿ)
ಚೊಚ್ಚಲ ನಿರ್ದೇಶನ ನೀಡುವ ಇಂದಿರಾ ಗಾಂಧಿ ಪ್ರಶಸ್ತಿ	ಮಾತುಕುಟ್ಟಿ ಕ್ಸೇವಿಯರ್(ಹೆಲನ್)
ನರ್ಗೀಸ್ ದತ್ ಪ್ರಶಸ್ತಿ	ತಾಜ್‌ಮಹಲ್ ಚಿತ್ರಕ್ಕೆ

'ಆಸ್ಟ್ರಾಜೆನೆಕಾ ಲಸಿಕೆ ಶೇ 79ರಷ್ಟು ಪರಿಣಾಮಕಾರಿ'

ಲಂಡನ್ (ಪಿಟಿಐ): ಅಮೆರಿಕ ಮತ್ತು ದಕ್ಷಿಣ ಅಮೆರಿಕದ ಪೆರು ಮತ್ತು ಚಿಲಿಯಲ್ಲಿ ನಡೆಸಿದ ಅಧ್ಯಯನದಲ್ಲಿ ದೊರೆತ ದತ್ತಾಂಶಗಳ ಪ್ರಕಾರ ಆಕ್ಸ್‌ಫರ್ಡ್–ಆಸ್ಟ್ರಾಜೆನೆಕಾ ಲಸಿಕೆಯು ಕೋವಿಡ್–19 ನಿಯಂತ್ರಣದಲ್ಲಿ ಶೇ 79 ರಷ್ಟು ಪರಿಣಾಮಕಾರಿಯಾಗಿದೆ.

ಲಸಿಕೆಯಿಂದಾಗಿ ಸೋಂಕಿನ ತೀವ್ರತೆ ಗಣನೀಯವಾಗಿ ಕಡಿಮೆಯಾಗಿದ್ದು, ಸೋಂಕಿನ ಕಾರಣಕ್ಕೆ ಆಸ್ಪತ್ರೆಗೆ ದಾಖಲಾಗುವವರ ಪ್ರಮಾಣವನ್ನು ನಿಯಂತ್ರಿಸುವಲ್ಲಿ ಇದು ಸಂಪೂರ್ಣವಾಗಿ ಯಶಸ್ಸು ಗಳಿಸಿದೆ ಎಂದು ಅಧ್ಯಯನ ತಿಳಿಸಿದೆ.



32 ಸಾವಿರ ಸ್ವಯಂ ಸೇವಕರನ್ನು ಈ ಕಾರ್ಯಕ್ಕೆ ನಿಯೋಜಿಸಲಾಗಿತ್ತು. 65 ವರ್ಷದ ಮತ್ತು ಅದಕ್ಕೂ ಮೇಲ್ಪಟ್ಟವರ ಮೇಲೆ ಈ ಲಸಿಕೆಯ ಪರಿಣಾಮ ಶೇ 80 ರಷ್ಟಿತ್ತು. ನಾಲ್ಕು ವಾರಗಳ ಅಂತರದಲ್ಲಿ ಇವರಿಗೆ ಎರಡು ಡೋಸ್ ಲಸಿಕೆ ನೀಡಲಾಗಿತ್ತು ಎಂದು ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದ ಲಸಿಕೆಯ ಪ್ರಯೋಗದ ಪ್ರಮುಖ ಅಧಿಕಾರಿ ಆಂಡ್ರ್ಯೂ ಪೊಲಾರ್ಡ್ ತಿಳಿಸಿದ್ದಾರೆ.

ಭಾರತದ ಸೀರಂ ಸಂಸ್ಥೆ ಜೊತೆಗಿನ ಒಪ್ಪಂದದ ಅನ್ವಯ ಈ ಲಸಿಕೆಯನ್ನು ಅಭಿವೃದ್ಧಿಪಡಿಸಲಾಗಿದೆ. ಈ ಲಸಿಕೆ ಪಡೆದ ಅನೇಕರಲ್ಲಿ ಯಾವುದೇ ಅಡ್ಡಪರಿಣಾಮ ಕಂಡು ಬಂದಿಲ್ಲ. ಗುಣಮುಖರಾಗುವವರ ಪ್ರಮಾಣವೂ ಹೆಚ್ಚಿದೆ ಎಂದು ಅವರು ಹೇಳಿದ್ದಾರೆ.

ವಿಧಾನಸೌಧವನ್ನೇ ಎಪಿಎಂಸಿ ಮಾಡಿ: ರಾಕೇಶ್ ಟಿಕಾಯತ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸರ್ಕಾರ ಎಪಿಎಂಸಿಗಳನ್ನು ಮುಚ್ಚಲು ಕಾನೂನು ತಂದಿರುವ ಕಾರಣ ರೈತರು ತಾವು ಬೆಳೆದ ಫಸಲನ್ನು ವಿಧಾನಸೌಧಕ್ಕೆ ತಂದು ಮಾರಾಟ ಮಾಡಿ' ಎಂದು ರಾಷ್ಟ್ರೀಯ ಸಂಯುಕ್ತ ಕಿಸಾನ್ ಮೋರ್ಚಾದ ಅಧ್ಯಕ್ಷ ರಾಕೇಶ್ ಟಿಕಾಯತ್ ರೈತರಿಗೆ ಕರೆ ನೀಡಿದರು.

ಸಂಯುಕ್ತ ಹೋರಾಟ ಕರ್ನಾಟಕ ಆಯೋಜಿಸಿದ್ದ ವಿಧಾನಸೌಧ ಚಲೋ ಹೋರಾಟದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

'ಪೊಲೀಸರು ನಿಮ್ಮನ್ನು ತಡೆದರೆ ಕೇಂದ್ರ ಸರ್ಕಾರದ ಹೊಸ ಕಾಯ್ದೆ ಪ್ರಕಾರ ಕೃಷಿ ಉತ್ಪನ್ನಗಳನ್ನು ಎಪಿಎಂಸಿಯಲ್ಲೇ ಮಾರಾಟ ಮಾಡಬೇಕೆಂದಿಲ್ಲ. ಎಲ್ಲಿ ಬೇಕಿದ್ದರೂ ಮಾರಾಟ ಮಾಡಬಹುದು ಎಂದು ತಿಳಿಸಿ. ಅದಕ್ಕೂ ಒಪ್ಪದಿದ್ದರೆ ಅಲ್ಲೇ ಕುಳಿತು ಮಾರಾಟ ಮಾಡಿ, ಇಲ್ಲವೇ ಪೊಲೀಸ್ ಠಾಣೆಗಳನ್ನೇ ಮಾರುಕಟ್ಟೆಗಳನ್ನಾಗಿ ಮಾಡಿಕೊಳ್ಳಿ. ಉತ್ತರ ಪ್ರದೇಶದಲ್ಲಿ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಕಬ್ಬು ಮತ್ತು ಭತ್ತ ಮಾರಾಟ ಮಾಡುವ ಹೋರಾಟ ಆರಂಭಿಸಲಾಗಿದೆ' ಎಂದು ಅವರು ತಿಳಿಸಿದರು.

'ಕರ್ನಾಟಕದ ರೈತರು ದೆಹಲಿಗೆ ಬರಲು ಆಗದಿದ್ದರೆ ಬೆಂಗಳೂರಿನಲ್ಲೇ ಹೊಸದಾಗಿ ಕಿಸಾನ್ ಮೋರ್ಚಾ ಆರಂಭಿಸಲಾಗುವುದು. ಟ್ರ್ಯಾಕ್ಟರ್‌ಗಳನ್ನು ತೆಗೆದುಕೊಂಡು ಬೀದಿಗೆ ಬನ್ನಿ. ಪೊಲೀಸರ ಬ್ಯಾರಿಕೇಡ್‌ಗಳನ್ನು ಮುರಿದು ಮುನ್ನುಗ್ಗುವುದನ್ನು ರೈತರು ಕಲಿಯಬೇಕು' ಎಂದು ಹೇಳಿದರು.

'ರಾಮನ ಹೆಸರಿನಲ್ಲಿ ರಾಜಕಾರಣ ನಡೆಯುತ್ತಿದೆ. ನಾವು 'ಜೈ ರಾಮ್–ಜೈ ಭೀಮ್', 'ಅಲ್ಲಾ ಹೊ ಅಕ್ಬರ್–ಹರಹರ ಮಹಾದೇವ' ಎಂಬ ಘೋಷಣೆಗಳೊಂದಿಗೆ ಮುನ್ನಡೆಯಬೇಕಿದೆ' ಎಂದು ಹೇಳಿದರು.

ರೈತ, ಕಾರ್ಮಿಕ, ದಲಿತ ಮತ್ತು ಪ್ರಗತಿಪರ ಸಂಘಟನೆಗಳ ನೇತೃತ್ವದಲ್ಲಿ ಕೆಎಸ್‌ಆರ್ ರೈಲು ನಿಲ್ದಾಣದ ಬಳಿ ಜಮಾಯಿಸಿದ್ದ ಸಾವಿರಾರು ರೈತರು, ವಿಧಾನಸೌಧದತ್ತ ಹೆಜ್ಜೆ ಹಾಕಿದರು.

ಸ್ವಾತಂತ್ರ್ಯ ಉದ್ಯಾನದ ಬಳಿ ಅಡ್ಡಗಟ್ಟಿದ ಪೊಲೀಸರು, ವಿಧಾನ ಸೌಧದತ್ತ ಹೋಗುವುದನ್ನು ತಡೆದರು.

ಮೆರವಣಿಗೆ ಸಂದರ್ಭದಲ್ಲಿ ಕೆಲ ಕಾಲ ಸುತ್ತಮುತ್ತಲ ರಸ್ತೆಗಳಲ್ಲಿ ಸಂಚಾರ ದಟ್ಟಣೆ ಉಂಟಾಗಿತ್ತು.



ಬೆಂಗಳೂರಿನಲ್ಲಿ ವಿಧಾನಸೌಧ ಚಲೋ ನಡೆಸಿದ ರೈತರು, ಕಾರ್ಮಿಕರು – ಪ್ರಜಾವಾಣಿ ಚಿತ್ರ

ರಾಮ ಯಾರಪ್ಪನ ಸ್ವತ್ತೂ ಅಲ್ಲ: ಯುದ್ಧವೀರ ಸಿಂಗ್

'ಶ್ರೀರಾಮ ಯಾರಪ್ಪನ ಸ್ವತ್ತೂ ಅಲ್ಲ. ರೈತರು, ಕಾರ್ಮಿಕರ ಕಣ ಕಣದಲ್ಲಿ, ಅವರ ದುಡಿಮೆಯಲ್ಲಿ ರಾಮ ಇದ್ದಾನೆ. ರಾಮನನ್ನು ಹುಡುಕಿಕೊಂಡು ಮಂದಿರಗಳಿಗೆ ಹೋಗುವ ಅಗತ್ಯವಿಲ್ಲ' ಎಂದು ರಾಷ್ಟ್ರೀಯ ಸಂಯುಕ್ತ ಕಿಸಾನ್ ಮೋರ್ಚಾದ ಕಾರ್ಯದರ್ಶಿ ಯುದ್ಧವೀರ ಸಿಂಗ್ ಹೇಳಿದರು.

'ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಹೊಸ ನಾಟಕ ಶುರು ಮಾಡಿದೆ. ಒಂದು ಮುಷ್ಟಿ ಅಕ್ಕಿ ಕೊಡಿ ಎಂದು ಕೇಳುತ್ತಿದ್ದಾರೆ. ಅಕ್ಕಿಯನ್ನು ಧರ್ಮಕ್ಕೂ, ಧರ್ಮವನ್ನು ಮತಕ್ಕೂ ಜೋಡಣೆ ಮಾಡಲಾಗುತ್ತಿದೆ. ಒಂದು ಮುಷ್ಟಿ ಅಕ್ಕಿ ಕೊಡಲು ನಾವು ಸಿದ್ಧರಿದ್ದೇವೆ, ಆ ಅಕ್ಕಿಗೆ ಕನಿಷ್ಠ ಬೆಂಬಲ ಬೆಲೆ ನೀಡುವ ಕಾನೂನು ರೂಪಿಸಿ ಎಂದು ಕೇಳಬೇಕಿದೆ' ಎಂದರು.

ಏಪ್ರಿಲ್ 9ರಂದು ಸಭೆ

'ದಕ್ಷಿಣ ಭಾರತಕ್ಕೂ ರೈತರ ಹೋರಾಟವನ್ನು ವಿಸ್ತರಿಸುವ ನಿಟ್ಟಿನಲ್ಲಿ ರಾಜ್ಯದ ಎಲ್ಲಾ ರೈತ, ದಲಿತ ಮತ್ತು ಪ್ರಗತಿಪರ ಸಂಘಟನೆಗಳ ಸಭೆಯನ್ನು ಏಪ್ರಿಲ್ 9ರಂದು ಸಂಯುಕ್ತ ಕಿಸಾನ್ ಮೋರ್ಚಾ ಸಂಘಟಿಸಲಿದೆ' ಎಂದು ರಾಷ್ಟ್ರೀಯ ಸಂಯುಕ್ತ ಕಿಸಾನ್ ಮೋರ್ಚಾ ಸಂಚಾಲಕ ಡಾ. ದರ್ಶನ್‌ಪಾಲ್ ತಿಳಿಸಿದರು.

ಮಾ.23 (ಮಂಗಳವಾರ) ಭಗತ್‌ಸಿಂಗ್, ರಾಜಗುರು, ಸುಖದೇವ್ ಅವರನ್ನು ನೇಣಿಗೆ ಏರಿಸಿದ ದಿನವಾಗಿದೆ. ಆ ದಿನವನ್ನು ಹುತಾತ್ಮರ ದಿನವನ್ನಾಗಿ ಆಚರಿಸಲು ಕಿಸಾನ್ ಮೋರ್ಚಾ ಕರೆ ನೀಡುತ್ತಿದೆ ಎಂದರು.

ಸೂಕ್ತ ತೀರ್ಮಾನ: ರೈತರ ಮನವಿ ಪತ್ರ ಸ್ವೀಕರಿಸಿದ್ದೇನೆ. ಈ ಸಂಬಂಧ ಮುಖ್ಯಮಂತ್ರಿಗಳ ಜೊತೆ ಚರ್ಚಿಸಿ ಸೂಕ್ತ ತೀರ್ಮಾನ ಕೈಗೊಳ್ಳಲಾಗುವುದು ಎಂದು ಕೃಷಿ ಸಚಿವ ಬಿ.ಸಿ.ಪಾಟೀಲ ಪ್ರತಿಕ್ರಿಯಿಸಿದ್ದಾರೆ.

ಬಿಜೆಪಿಯ ರವಿಕುಮಾರ್ ಪ್ರಸ್ತಾವ: ಜೆಡಿಎಸ್ ಹೋರಾಟ

ನರ್ಸಿಂಗ್ ಕಾಲೇಜು ಲೋಪ: ತನಿಖೆಗೆ ಜಂಟಿ ಸದನ ಸಮಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿರುವ ಎಲ್ಲ ನರ್ಸಿಂಗ್ ಮತ್ತು ಅರೆ ವೈದ್ಯಕೀಯ ಕಾಲೇಜುಗಳಲ್ಲಿನ ಲೋಪದೋಷಗಳ ತನಿಖೆಗೆ ಜಂಟಿ ಸದನ ಸಮಿತಿ ರಚಿಸಲು ಸರ್ಕಾರ ಸಮ್ಮತಿಸಿದೆ. ಆ ಮೂಲಕ, ಜೆಡಿಎಸ್ ಸದಸ್ಯರ ಪಟ್ಟಿಗೆ ಮಣಿದಿದೆ.

ವಿಧಾನ ಪರಿಷತ್‌ನಲ್ಲಿ ಬಿಜೆಪಿಯ ಎನ್. ರವಿಕುಮಾರ್ ಕಳೆದ ಗುರುವಾರ ಮಂಡಿಸಿದ ಗಮನ ಸೆಳೆಯುವ ಸೂಚನೆಯ ಮೇಲೆ ಚರ್ಚೆಗೆ ಅವಕಾಶ ಪಡೆದ ಜೆಡಿಎಸ್ ಸದಸ್ಯರು, ಸದನ ಸಮಿತಿ ರಚನೆಗೆ ಆಗ್ರಹಿಸಿ ಸಭಾಪತಿ ಪೀಠದ ಎದುರು ಗುರುವಾರ ಮತ್ತು ಶುಕ್ರವಾರ ಧರಣಿ ನಡೆಸಿದ್ದರು. ಸೋಮವಾರ ಕೂಡಾ ಕಲಾಪ ಆರಂಭವಾಗುತ್ತಿದ್ದಂತೆ ಧರಣಿ ಮುಂದುವರಿಸಿದರು.

ಸದನದಲ್ಲಿದ್ದ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, 'ಈ ವಿಚಾರವನ್ನು ಹೈಕೋರ್ಟ್ ನ್ಯಾಯಮೂರ್ತಿಯಿಂದ ತನಿಖೆ ನಡೆಸಲಾಗುವುದು' ಎಂದು ಮನವಿ ಮಾಡಿದರು.

ಅದಕ್ಕೂ ಜೆಡಿಎಸ್ ಸದಸ್ಯರು ಒಪ್ಪಲಿಲ್ಲ. ಹೀಗಾಗಿ, ಕಲಾಪವನ್ನು 10 ನಿಮಿಷ ಮುಂದೂಡಿದ ಸಭಾಪತಿ, ತಮ್ಮ ಕಚೇರಿಯಲ್ಲಿ ಮುಖ್ಯಮಂತ್ರಿ, ವಿರೋಧ ಪಕ್ಷದ ನಾಯಕ ಎಸ್.ಆರ್. ಪಾಟೀಲ ಮತ್ತು ಜೆಡಿಎಸ್ ಸದಸ್ಯರ ಜೊತೆ ಚರ್ಚಿಸಿದರು.

ಮತ್ತೆ ಕಲಾಪ ಆರಂಭವಾಗುತ್ತಿದ್ದಂತೆ, ಜಂಟಿ ಸದನ ಸಮಿತಿ ರಚಿಸುವ ಸರ್ಕಾರದ ತೀರ್ಮಾನವನ್ನು ಮುಖ್ಯಮಂತ್ರಿ ಪ್ರಕಟಿಸಿದರು. ಬಳಿಕ ಜೆಡಿಎಸ್ ಸದಸ್ಯರು ಧರಣಿ ವಾಪಸ್ ಪಡೆದರು. ಕಾಂಗ್ರೆಸ್ಸಿನ ಸಿ.ಎಂ ಇಬ್ರಾಹಿಂ ಮತ್ತು ವಿರೋಧ ಪಕ್ಷದ ನಾಯಕ ಎಸ್. ಆರ್. ಪಾಟೀಲ, 'ಪರಿಷತ್ತಿನ ಸದಸ್ಯರನ್ನೇ ಸಮಿತಿಗೆ ಅಧ್ಯಕ್ಷರನ್ನಾಗಿ ನೇಮಿಸಬೇಕು' ಎಂದು ಸಲಹೆ ನೀಡಿದರು. ಈ ವಿಚಾರದಲ್ಲಿ ನಿಯಮಾವಳಿ ಪ್ರಕಾರ ಕ್ರಮ ಕೈಗೊಳ್ಳುತ್ತೇನೆ' ಎಂದು ಸಭಾಪತಿ ಹೇಳಿದರು.

ಕಲಾಪ ಆರಂಭವಾಗುತ್ತಿದ್ದಂತೆ ಮಾತನಾಡಿದ ಜೆಡಿಎಸ್‌ನ ಕೆ.ಟಿ. ಶ್ರೀಕಂಠೇಗೌಡ, 'ಕೆಲವು ನರ್ಸಿಂಗ್ ಮತ್ತು ಅರೆ ವೈದ್ಯಕೀಯ ಕಾಲೇಜುಗಳಲ್ಲಿ ವಿದ್ಯಾರ್ಥಿಗಳು ತರಗತಿಗೇ ಹಾಜರಾಗುತ್ತಿಲ್ಲ. ನೇರವಾಗಿ ಪರೀಕ್ಷೆಗೆ ಬಂದು ಪ್ರಮಾಣಪತ್ರ ತೆಗೆದುಕೊಂಡು ಹೋಗುತ್ತಿದ್ದಾರೆ. ಈಗಾಗಲೇ ಗಂಗಾ ಕಲ್ಯಾಣ ಹಾಗೂ ಶುದ್ಧ ಕುಡಿಯುವ ನೀರಿನ ಯೋಜನೆ ಸಂಬಂಧ ತನಿಖೆಗೆ ಸದನ ಸಮಿತಿ ರಚಿಸಲಾಗಿದೆ. ಈ ವಿಷಯದಲ್ಲಿ ಪ್ರತಿಷ್ಠೆ ಯಾಕೆ? ಸದನ ಸಮಿತಿ ಮಾಡಿ, ಆಡಳಿತ ಪಕ್ಷದ ಸದಸ್ಯರೇ ಸದಸ್ಯರಾಗಲಿ' ಎಂದು ಒತ್ತಾಯಿಸಿದರು.

ಎಸ್.ಆರ್.ಪಾಟೀಲ, 'ಮೂರು ದಿನಗಳಿಂದ ಕಲಾಪ ವ್ಯರ್ಥವಾಗುತ್ತಿದೆ. ಜೆಡಿಎಸ್‌ನವರು ಪಟ್ಟು ಸಡಿಲಿಸುತ್ತಿಲ್ಲ. ಸದನ ಸಮಿತಿ ಮಾಡಿ ಸಮಸ್ಯೆ ಬಗೆಹರಿಸಿ' ಎಂದರು.

ಆಗ ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ. ಸುಧಾಕರ್, 'ರಾಜ್ಯದಲ್ಲಿರುವ ಎಲ್ಲ 600 ನರ್ಸಿಂಗ್ ಸಂಸ್ಥೆಗಳ ಮೂಲಸೌಲಭ್ಯಗಳ ಕುರಿತು ತಜ್ಞರ ಸಮಿತಿಯಿಂದ ತನಿಖೆ ಮಾಡುತ್ತೇವೆ. ಲೋಪದೋಷಗಳಿದ್ದರೆ ಸರಿಪಡಿಸುತ್ತೇವೆ' ಎಂದರು.

ಅದಕ್ಕೆ ಜೆಡಿಎಸ್ ಸದಸ್ಯರು ಒಪ್ಪಲಿಲ್ಲ. ಅಷ್ಟೇ ಅಲ್ಲ, 'ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿಯ ನೇತೃತ್ವದಲ್ಲಿ ಸಮಿತಿ ಮಾಡುತ್ತೇವೆ. ನ್ಯಾಯಮೂರ್ತಿ ಹೆಸರು ನೀವೇ ಶಿಫಾರಸು ಮಾಡಿ' ಎಂದು ಮುಖ್ಯಮಂತ್ರಿ ಭರವಸೆ ನೀಡಿದರೂ ಪಟ್ಟು ಸಡಿಲಿಸಲಿಲ್ಲ.

ಜೆಡಿಎಸ್‌ನ ಮರಿತಿಬ್ಬೇಗೌಡ, 'ನ್ಯಾಯಮೂರ್ತಿಗಳ ನೇತೃತ್ವದಲ್ಲಿ ಈ ಹಿಂದೆ ರಚಿಸಿದ್ದ ಸಮಿತಿಗಳ ವರದಿ ಏನಾಗಿವೆ ಎಂದು ನಮಗೆ ಗೊತ್ತಿದೆ. ನ್ಯಾಯಮೂರ್ತಿಗಳಿಂದ ತನಿಖೆ ನಡೆಸಿದರೆ ಸಚಿವರು ಅವರನ್ನೇ ಬುಕ್ ಮಾಡುತ್ತಾರೆ' ಎಂದು ಆರೋಪಿಸಿದರು. ಆಗ ಆಡಳಿತ ಮತ್ತು ವಿರೋಧ ಪಕ್ಷಗಳ ಸದಸ್ಯರ ನಡುವೆ ವಾಗ್ವಾದ ನಡೆಯಿತು. ವೈಯಕ್ತಿಕ ವಿಚಾರ ಪ್ರಸ್ತಾಪಿಸದಂತೆ ಸಭಾಪತಿ ಸೂಚಿಸಿದರು.

ಗೃಹಸಚಿವರಿಂದ ಭ್ರಷ್ಟಾಚಾರ: ಸಿಎಂ ರಾಜೀನಾಮೆಗೆ ಬಿಜೆಪಿ ಸದಸ್ಯರ ಒತ್ತಾಯ, ಸಿಬಿಐ ತನಿಖೆಗೆ ಆಗ್ರಹ

ಸಂಸತ್ತಿನಲ್ಲಿ ಪ್ರತಿಧ್ವನಿಸಿದ ಮಹಾರಾಷ್ಟ್ರ ಪ್ರಕರಣ

ನವದೆಹಲಿ (ಪಿಟಿಐ): ಮಹಾರಾಷ್ಟ್ರದ ಗೃಹ ಸಚಿವ ಅನಿಲ್ ದೇಶಮುಖ್ ವಿರುದ್ಧ ಮುಂಬೈನ ಮಾಜಿ ಪೊಲೀಸ್ ಕಮಿಷನರ್ ಪರಮ್ ಬಿರ್ ಸಿಂಗ್ ಮಾಡಿರುವ ₹ 100 ಕೋಟಿ ಭ್ರಷ್ಟಾಚಾರ ಆರೋಪವು ಸೋಮವಾರ ಸಂಸತ್ತಿನ ಉಭಯ ಸದನದಲ್ಲೂ ಪ್ರತಿಧ್ವನಿಸಿದ್ದು, ಮುಖ್ಯಮಂತ್ರಿ ಉದ್ಧವ್ ಠಾಕ್ರೆ ರಾಜೀನಾಮೆಗೆ ಬಿಜೆಪಿ ಆಗ್ರಹಪಡಿಸಿತು.

ಶಿವಸೇನೆ ಮತ್ತು ಎನ್‌ಸಿಪಿ ಸದಸ್ಯರ ತೀವ್ರ ಪ್ರತಿಭಟನೆಯ ನಡುವೆಯೂ ಶೂನ್ಯವೇಳೆಯಲ್ಲಿ ಬಿಜೆಪಿಯ ಮನೋಜ್ ಕೊಟಕ್ ವಿಷಯ ಪ್ರಸ್ತಾಪಿಸಿದರು. 'ಇದು ಗಂಭೀರವಾದ ವಿಷಯ. ಗೃಹ ಸಚಿವರು, ಮುಖ್ಯಮಂತ್ರಿ ರಾಜೀನಾಮೆ ನೀಡಬೇಕು. ಪ್ರಕರಣದ ತನಿಖೆಯನ್ನು ಸಿಬಿಐಗೆ ಒಪ್ಪಿಸಬೇಕು. ರಾಜ್ಯದ ಮೈತ್ರಿ ಸರ್ಕಾರದ ಪ್ರಮುಖರೇ ಕಾನೂನು-ಬಾಹಿರವಾಗಿ ಭಾರಿ ಮೊತ್ತ ಸಂಗ್ರಹಿಸುವುದರಲ್ಲಿ ಭಾಗಿಯಾಗಿರುವುದು ಈ ಆರೋಪದಿಂದ ತಿಳಿಯಲಿದೆ' ಎಂದು ಕೊಟಕ್ ಹೇಳಿದರು.

ಮಹಾರಾಷ್ಟ್ರ ಸರ್ಕಾರ ಕೂಡಲೇ ರಾಜೀನಾಮೆ ನೀಡಬೇಕು. ಪ್ರಕರಣದ ಬಗ್ಗೆ ನಿಷ್ಪಕ್ಷಪಾತ ತನಿಖೆ ಆಗಬೇಕು ಎಂದು ಆಗ್ರಹಪಡಿಸಿದರು. ಬಿಜೆಪಿಯ ಮತ್ತೊಬ್ಬ ಸದಸ್ಯ ಕಪಿಲ್ ಪಾಟೀಲ್ ಅವರು, ಡಿಜಿಪಿ ದರ್ಜೆಯ ಅಧಿಕಾರಿಯೊಬ್ಬರೂ ಇಂಥದೇ ಸ್ವರೂಪದ ಪತ್ರವನ್ನು ಈ ಹಿಂದೆ ಬರೆದಿದ್ದರು ಎಂದು ಇದೇ ವೇಳೆ ಗಮನ ಸೆಳೆದರು.

ಪೊಲೀಸ್ ಕಮಿಷನರ್ ಭ್ರಷ್ಟಾಚಾರ ಆರೋಪ ಮಾಡಿರುವ ಅವಧಿಯಲ್ಲಿ ಗೃಹ ಸಚಿವರು ಆಸ್ಪತ್ರೆಗೆ ದಾಖಲಾಗಿದ್ದರು. ಆಸ್ಪತ್ರೆಯ ಪ್ರಮಾಣಪತ್ರವೂ ಇದೆ. ರಾಜೀನಾಮೆಯ ಪ್ರಶ್ನೆ ಉದ್ಭವಿಸದು.

ಶರದ್ ಪವಾರ್, ಎನ್‌ಸಿಪಿ ಮುಖ್ಯಸ್ಥ

ಆದರೆ, ರಾಜ್ಯ ಸರ್ಕಾರವನ್ನು ಬಲವಾಗಿ ಸಮರ್ಥಿಸಿಕೊಂಡ ಶಿವಸೇನೆ ಸದಸ್ಯ ವಿನಾಯಕ್ ರಾವುತ್, ರಾಜ್ಯ ಸರ್ಕಾರವನ್ನು ಪದಚ್ಯುತಿಗೊಳಿಸಿ ಬಿಜೆಪಿ ನೇತೃತ್ವದ ಸರ್ಕಾರ ಸ್ಥಾಪಿಸುವ ಸಂಚು ಕಳೆದ 14 ತಿಂಗಳಿನಿಂದಲೂ ನಡೆಯುತ್ತಿದೆ. ಈಗಿನ ಆರೋಪವು ಆ ಸಂಚಿನ ಭಾಗವೇ ಆಗಿದೆ ಎಂದು ಆರೋಪಿಸಿದರು.

ಪತ್ರ ಬರೆದಿರುವ ಐಪಿಎಸ್ ಅಧಿಕಾರಿಯು ಅತ್ಯಂತ ಭ್ರಷ್ಟ ಅಧಿಕಾರಿ. ರಾಜ್ಯ ಸರ್ಕಾರ ಅವರನ್ನು ಕಮಿಷನರ್ ಸ್ಥಾನದಿಂದ ವರ್ಗಾವಣೆ ಮಾಡಿದೆ. ವರ್ಗಾವಣೆ ಹಿಂದೆಯೇ ಅವರು ಪತ್ರ ಬರೆದಿದ್ದಾರೆ ಎಂದು ಹೇಳಿದರು.

ಕಾಂಗ್ರೆಸ್ ಸದನದ ಮುಖಂಡ ರವನೀತ್ ಸಿಂಗ್ ಬಿಟ್ಟೂ ಅವರು, ಬಿಜೆಪಿಯೇತರ ಪಕ್ಷಗಳ ಆಡಳಿತವಿರುವ ರಾಜ್ಯಗಳಲ್ಲಿ ಕೇಂದ್ರ ತನಿಖಾ ಸಂಸ್ಥೆಗಳನ್ನು ದುರ್ಬಳಕೆ ಮಾಡಿಕೊಳ್ಳಲಾಗುತ್ತಿದೆ ಎಂದು ಆರೋಪಿಸಿದರು.

ರಾಜ್ಯಸಭೆಯಲ್ಲಿಯೂ ಈ ವಿಷಯ ಕೋಲಾಹಲ ಸ್ಥಿತಿಗೆ ಕಾರಣವಾಯಿತು. ಮಧ್ಯಾಹ್ನದವರೆಗೂ ಕಲಾಪವನ್ನೇ ಮುಂದೂಡಲಾಯಿತು. ಪ್ರಶ್ನೋತ್ತರ ಅವಧಿ ಆರಂಭವಾದಂತೆ ಆಡಳಿತ ಪಕ್ಷದ ಸದಸ್ಯರು ವಿಷಯ ಪ್ರಸ್ತಾಪಿಸಿ ಚರ್ಚೆಗೆ ಅವಕಾಶ ಕೋರಿದರು.

ಉಪಾಧ್ಯಕ್ಷ ಹರಿವಂಶ್ ಅವರು ಎದ್ದುನಿಂತು ನಿಗದಿತ ಕಲಾಪ ನಡೆಸಲು ಅವಕಾಶ ಕಲ್ಪಿಸುವಂತೆ ಸದಸ್ಯರಿಗೆ ಮನವಿ ಮಾಡಿದರು.

ಒಂದು ಹಂತದಲ್ಲಿ ಸದಸ್ಯರ ಪ್ರಶ್ನೆಗಳೇ ಕೇಳುತ್ತಿಲ್ಲ ಎಂದು ಸಚಿವ ಪ್ರಕಾಶ್ ಜಾವಡೇಕರ್ ಪೀಠದ ಗಮನಕ್ಕೆ ತಂದರು. ಕೋಲಾಹಲ ಸ್ಥಿತಿ ಮುಂದುವರಿದಂತೆ ಕಲಾಪವನ್ನು ಮುಂದೂಡಲಾಯಿತು.

'ರಾಷ್ಟ್ರಪತಿಗೆ ವಸ್ತುಸ್ಥಿತಿ ವರದಿ ಸಲ್ಲಿಸಲಿ'

ಮುಂಬೈ (ಪಿಟಿಐ): ಗೃಹಸಚಿವರ ವಿರುದ್ಧದ ಭ್ರಷ್ಟಾಚಾರ ಆರೋಪ, ರಾಜಕೀಯ ಪರಿಸ್ಥಿತಿ ಕುರಿತು ರಾಷ್ಟ್ರಪತಿಗೆ ವಸ್ತುಸ್ಥಿತಿ ವರದಿಯನ್ನು ಸಲ್ಲಿಸಬೇಕು ಎಂದು ರಾಜ್ಯ ಬಿಜೆಪಿ ಮುಖಂಡ ಸುಧೀರ್ ಮುಂಗಂತೀವರ್ ರಾಜ್ಯಪಾಲ ಬಿ.ಎಸ್.ಕೊಶಿಯಾರಿ ಅವರಿಗೆ ಆಗ್ರಹಪಡಿಸಿದ್ದಾರೆ.

'ಸದ್ಯ ಮಹಾರಾಷ್ಟ್ರದಲ್ಲಿ 1980ರಲ್ಲಿ ಮೂಡಿದ್ದ ಸ್ಥಿತಿ ಮರುಕಳಿಸಿದೆ. ಆಗ ಶರದ್ ಪವಾರ್ ನೇತೃತ್ವದ ಸರ್ಕಾರ ವಜಾಗೊಂಡಿದ್ದು, ರಾಷ್ಟ್ರಪತಿ ಆಡಳಿತ ಹೇರಲಾಗಿತ್ತು. ಎರಡೂ ಸಂದರ್ಭಗಳಿಗೆ ಹೋಲಿಕೆ ಇದ್ದರೂ ನಾನು ರಾಷ್ಟ್ರಪತಿ ಆಡಳಿತಕ್ಕೆ ಒತ್ತಾಯಿಸುವುದಿಲ್ಲ' ಎಂದು ಸ್ಪಷ್ಟಪಡಿಸಿದರು.

ಇದೊಂದು ಗಂಭೀರ ಆರೋಪ. ಹಗುರವಾಗಿ ಪರಿಗಣಿಸಬಾರದು. ರಾಜ್ಯದಲ್ಲಿ ಸಂವಿಧಾನದ ಮುಖ್ಯಸ್ಥರಾಗಿ ರಾಜ್ಯಪಾಲರು, ರಾಷ್ಟ್ರಪತಿ ಗಮನಕ್ಕೆ ವಸ್ತುಸ್ಥಿತಿ ತರಬೇಕು ಎಂದೂ ಪ್ರತಿಪಾದಿಸಿದರು. ಆದರೆ, ಆರೋಪವನ್ನು ಆಧಾರರಹಿತವಾದುದು ಎಂದು ಗೃಹ ಸಚಿವರು ತಳ್ಳಿಹಾಕಿದ್ದಾರೆ.

www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಆಳ-ಅಗಲ
ಕರಾವಳಿ ಮೇಲೆ ಬೇಡ್ತಿ–ವರದಾ ಜೋಡಣೆಯ ಕಾರ್ಮೋಡ

‘ಕೋವಿಶೀಲ್ಡ್ ಲಸಿಕೆ ಡೋಸ್‌ಗಳ ನಡುವೆ ಅಂತರವಿರಲಿ’ 3A

‘ಆತಂಕ ಬೇಕಿಲ್ಲ; ಎಚ್ಚರ ತಪ್ಪಂಗಿಲ್ಲ’ 8

ಸೆನ್ಸೆಕ್ಸ್	ನಿಫ್ಟಿ	₹/$
49,771 ▼	14,737 ▼	72.37 ▲

ಎಸ್ಸೆಸ್ಸೆಲ್ಸಿ- ಪಿಯುಸಿ
ಪರೀಕ್ಷೆ ದಿಕ್ಸೂಚಿ
ಪ್ರಿಯ ವಿದ್ಯಾರ್ಥಿಗಳೇ,
ಕೋವಿಡ್‌ನಿಂದಾಗಿ ಈ ವರ್ಷ ತರಗತಿಗಳಿಗೆ ಖುದ್ದಾಗಿ ಹಾಜರಾಗಲು ನಿಮಗೆ ಸಾಧ್ಯವಾಗದಿರಬಹುದು. ಎಸ್ಸೆಸ್ಸೆಲ್ಸಿ-ಪಿಯುಸಿ ಪರೀಕ್ಷೆ ಬರೆಯುವ ನಿಮಗಾಗಿ ಅನುಭವಿ ಶಿಕ್ಷಕರು ನೀಡಿರುವ ಮಾರ್ಗದರ್ಶನ ದಿಕ್ಸೂಚಿಯಲ್ಲಿ..
ಪುಟ–5

ಇಂದಿನ ಪಾಡ್‌ಕಾಸ್ಟ್ ವಿಶೇಷ
ಸುದ್ದಿ ಸ್ವಾರಸ್ಯ
ಪ್ರತೀ ದಿನ: ದಿನದ ಸೂಕ್ತಿ, ವಚನವಾಣಿ ಸಂಪಾದಕೀಯ, ಪ್ರಚಲಿತ
Prajavani.net/podcast

ಒಳ ಪುಟ
ಅಸ್ಸಾಂ ಕಣದಲ್ಲಿ ಬಿಜೆಪಿ- ಕಾಂಗ್ರೆಸ್ ವಾಕ್ಸಮರ 9

ಚಿನಕುರಳಿ

ಪ್ರಕಾಶ್ ಶೆಟ್ಟಿ



ಸಿ.ಡಿ: ರಮೇಶ ಜಾರಕಿಹೊಳಿ ವಿವಾದ– ಕಾಂಗ್ರೆಸ್ ಧರಣಿ

ಅತ್ಯಾಚಾರ ಪ್ರಕರಣ ದಾಖಲಿಸಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಲೈಂಗಿಕ ದೌರ್ಜನ್ಯದ ಆರೋಪ ಹೊತ್ತಿರುವ ಸಿ.ಡಿ ಪ್ರಕರಣದಲ್ಲಿ ಬಿಜೆಪಿ ಶಾಸಕ ರಮೇಶ ಜಾರಕಿಹೊಳಿ ವಿರುದ್ಧ ಅತ್ಯಾಚಾರ ಪ್ರಕರಣ ದಾಖಲಿಸಬೇಕು ಮತ್ತು ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಗಳ ಉಸ್ತುವಾರಿಯಲ್ಲಿ ಸ್ವತಂತ್ರ ತನಿಖೆ ನಡೆಸಬೇಕು’ ಎಂದು ಒತ್ತಾಯಿಸಿ ಕಾಂಗ್ರೆಸ್ ಸದಸ್ಯರು ವಿಧಾನಸಭೆಯಲ್ಲಿ ಸೋಮವಾರ ಧರಣಿ ನಡೆಸಿದರು.

ಅಲ್ಲದೆ, ಈ ಪ್ರಕರಣದಲ್ಲಿ ಕೋಟಿಗಟ್ಟಲೆ ಹಣದ ಬಳಕೆ ಆಗಿದೆ ಎಂಬ ಆರೋಪ ಇರುವುದರಿಂದ ಜಾರಿ ನಿರ್ದೇಶನಾಲಯ ಮತ್ತು ಆದಾಯ ತೆರಿಗೆ ಇಲಾಖೆಯಿಂದಲೂ ತನಿಖೆ ನಡೆಸಬೇಕು. ತಮ್ಮ ವಿರುದ್ಧ ಮಾನಹಾನಿಕಾರಕ ಮಾಹಿತಿಗಳನ್ನು ಪ್ರಕಟಿಸಬಾರದು ಎಂದು ನ್ಯಾಯಾಲಯದಿಂದ ಪ್ರತಿಬಂಧಕಾಜ್ಞೆ ತಂದಿರುವ ಆರು ಸಚಿವರು ರಾಜೀನಾಮೆ ನೀಡಬೇಕು ಎಂದೂ ಕಾಂಗ್ರೆಸ್ ಒತ್ತಾಯಿಸಿತು.


ಸಿ.ಡಿ ಪ್ರಕರಣದ ಕುರಿತು ಕಾಂಗ್ರೆಸ್ ಮಂಡಿಸಿದ್ದ ನಿಲುವಳಿ ಸೂಚನೆಯನ್ನು ಪರಿವರ್ತಿಸಿದ ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ನಿಯಮ 69 ರಡಿ ಚರ್ಚೆಗೆ ಅವಕಾಶ ನೀಡಿದರು. ನೈತಿಕತೆ, ಅಪರಾಧ ಕೃತ್ಯ, ಕಾನೂನಿನ ವ್ಯಾಖ್ಯಾನಗಳ ಬಗ್ಗೆ ಕೆಲವೊಮ್ಮೆ ಗಂಭೀರ, ಹಾಸ್ಯ ಭರಿತ, ಭಾವಾವೇಶ ಮತ್ತು ಆಕ್ರೋಶದಿಂದ ಕೂಡಿದ ಚರ್ಚೆ ನಡೆಯಿತು. ತಮ್ಮ ಪಕ್ಷದ ಸಚಿವರು ಹಾಗೂ ಶಾಸಕರ ಪರ ಬಿಜೆಪಿ ಸದಸ್ಯರು ರಕ್ಷಣೆಗೂ ಧಾವಿಸಲಿಲ್ಲ.

ವಿಷಯ ಪ್ರಸ್ತಾಪಿಸಿದ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಗೃಹ ಸಚಿವರನ್ನು ಉದ್ದೇಶಿಸಿ ವಿಡಿಯೊ ಬಿಡುಗಡೆ ಮಾಡಿರುವ ಸಂತ್ರಸ್ತೆ, ಉದ್ಯೋಗ ಕೊಡಿಸುವುದಾಗಿ ಹೇಳಿದ್ದ ರಮೇಶ ಜಾರಕಿಹೊಳಿ ತಮ್ಮನ್ನು ‘ಬಳಸಿಕೊಂಡಿರುವುದಾಗಿ’ ಉಲ್ಲೇಖಿಸಿದ್ದಾರೆ. ಒಪ್ಪಿಗೆ ಇಲ್ಲದೇ ಬಳಸಿಕೊಂಡಿದ್ದಾರೆ ಎಂದರೆ ಅತ್ಯಾಚಾರವಾಗುತ್ತದೆ. ‘ನಿರ್ಭಯಾ’ ಪ್ರಕರಣದಲ್ಲಿ ಸುಪ್ರೀಂಕೋರ್ಟ್ ನೀಡಿರುವ ತೀರ್ಪಿನ ಪ್ರಕಾರ ಪೊಲೀಸರು ತಕ್ಷಣವೇ ದೂರು ದಾಖಲಿಸಿಕೊಳ್ಳಬೇಕಿತ್ತು. ಆದರೆ, ಪೊಲೀಸರು ದೂರು ದಾಖಲಿಸದೇ ಲೋಪ ಎಸಗಿದ್ದಾರೆ ಎಂದು ಹರಿಹಾಯ್ದರು.

ಈವರೆಗೂ ಸೆಕ್ಷನ್ 376 ರಡಿ ಏಕೆ ಕೇಸು ದಾಖಲಿಸಿಲ್ಲ? ರಮೇಶ ಜಾರಕಿಹೊಳಿಗೊಂದು ನ್ಯಾಯ ಮತ್ತು ಸಂತ್ರಸ್ತೆಗೆ ಬೇರೆ ನ್ಯಾಯವೇ? ಅಲ್ಲದೆ, ಎಸ್‌ಐಟಿ ರಚಿಸಿದಾಗಲೂ ಕಾರ್ಯವ್ಯಾಪ್ತಿಯನ್ನು ಆದೇಶದಲ್ಲಿ ಉಲ್ಲೇಖಿಸಿಲ್ಲ. ಇದು ಗಂಭೀರ ಲೋಪ ಎಂದು ಖಾರವಾಗಿ ನುಡಿದರು.

8ನೇ ಪುಟ ನೋಡಿ

ನ್ಯಾಯ ಸಮ್ಮತ ತನಿಖೆ: ಬೊಮ್ಮಾಯಿ



ಸಿ.ಡಿ ಪ್ರಕರಣಕ್ಕೆ ಸಂಬಂಧಿಸಿದಂತೆ ಎಸ್‌ಐಟಿಯಿಂದ ನ್ಯಾಯ ಸಮ್ಮತ ತನಿಖೆ ನಡೆಸಲಾಗುವುದು. ಪೊಲೀಸ್ ಅಧಿಕಾರಿಗಳಿಗೆ ಮುಕ್ತ ಅಧಿಕಾರ ನೀಡಲಾಗಿದೆ ಎಂದು ಗೃಹ ಸಚಿವ ಬಸವರಾಜ ಬೊಮ್ಮಾಯಿ ತಿಳಿಸಿದರು.

ಈ ಪ್ರಕರಣದಲ್ಲಿ ರಮೇಶ ಜಾರಕಿಹೊಳಿಯವರನ್ನೂ ವಿಚಾರಣೆಗೆ ಒಳಪಡಿಸಲಾಗಿದೆ. ಷಡ್ಯಂತ್ರ ಸೇರಿದಂತೆ ಎಲ್ಲ ಆಯಾಮಗಳಿಂದಲೂ ಸಮಗ್ರ ತನಿಖೆ ನಡೆಸಲಾಗುವುದು. ಸತ್ಯ ಬಯಲಿಗೆ ಬರಬೇಕು ಎಂಬುದಷ್ಟೆ ಸರ್ಕಾರದ ಕಳಕಳಿ. ಯಾರನ್ನೂ ರಕ್ಷಿಸುವ ಪ್ರಶ್ನೆಯೇ ಇಲ್ಲ ಎಂದು ಹೇಳಿದರು.

‘ಹಿಂದೆ ನೀವು ಮುಖ್ಯಮಂತ್ರಿ ಆಗಿದ್ದಾಗ ಎಚ್.ವೈ.ಮೇಟಿ ವಿರುದ್ಧ ಸಂತ್ರಸ್ತೆ ಅತ್ಯಾಚಾರದ ದೂರು ನೀಡಿದ್ದರೂ, ದೂರು ಏಕೆ ದಾಖಲಿಸಲಿಲ್ಲ. ಸಿಐಡಿ ತನಿಖೆ ನೆಪದಲ್ಲಿ ಕ್ಲಿನ್ ಚೀಟ್ ನೀಡಿದಿರಿ’ ಎಂದು ಬೊಮ್ಮಾಯಿ ಅವರು ಸಿದ್ದರಾಮಯ್ಯ ಅವರನ್ನು ತರಾಟೆಗೆ ತೆಗೆದುಕೊಂಡರು.

ಮಂಚದ ಕೆಲಸ ಮಾಡುವಾಗ ಅದೇ ಕೆಲಸ ಮಾಡಬೇಕು. ಕನ್ನಡದ ಬಗ್ಗೆ, ಮುಖ್ಯಮಂತ್ರಿ ಬಗ್ಗೆ ಯಾಕೆ ಮಾತನಾಡಬೇಕು
ಡಿ.ಕೆ.ಶಿವಕುಮಾರ್, ಕಾಂಗ್ರೆಸ್

ಇದೊಂದು ಗಂಭೀರ ಪ್ರಕರಣವಾಗಿರುವುದರಿಂದ ರಾಜ್ಯಪಾಲರು ಮಧ್ಯ ಪ್ರವೇಶಿಸಿ ಕ್ರಮ ತೆಗೆದುಕೊಳ್ಳಬೇಕು
ಎಚ್.ಕೆ.ಪಾಟೀಲ, ಕಾಂಗ್ರೆಸ್

ಈ ಪ್ರಕರಣದ ಡೈರೆಕ್ಷನ್, ಸ್ಕ್ರಿಪ್ಟ್ ರೈಟರ್, ಪ್ಲಾನಿಂಗ್ ಎಲ್ಲವೂ ಹೊರಬರಬೇಕು. ವಾಟ್ಸ್ ಆ್ಯಪ್‌ನಲ್ಲಿ ಎಲ್ಲ ಬಯಲಿಗೆ ಬರ್ತಾ ಇದೆ
ಎಸ್.ಟಿ.ಸೋಮಶೇಖರ್
ಸಹಕಾರ ಸಚಿವ

17 ಶಾಸಕರ ವಿರುದ್ಧ ಪಿತೂರಿ ನಡೆದಿದೆ. ನಮ್ಮನ್ನು ಮುಗಿಸಲು ವ್ಯವಸ್ಥಿತ ಸಂಚು ಮಾಡಲಾಗಿದೆ
ಡಾ.ಕೆ.ಸುಧಾಕರ್, ಆರೋಗ್ಯ ಸಚಿವ

ಇನ್ನಷ್ಟು ಸುದ್ದಿಗಳು 8,3B

ಶೇ 50ರ ಮಿತಿ ಹೆಚ್ಚಾಗಲಿ

ಮೀಸಲಾತಿ: ಮರುಪರಿಶೀಲನೆಗೆ ‘ಸುಪ್ರೀಂ’ಗೆ ಅರ್ಜಿ

ಪ್ರಜಾವಾಣಿ ವಾರ್ತೆ

ನವದೆಹಲಿ: ‘ಮೀಸಲಾತಿ ಪ್ರಮಾಣವು ಶೇ 50 ಮೀರಬಾರದು ಎಂದು ಒಂಬತ್ತು ಸದಸ್ಯರ ಪೀಠ 1992ರಲ್ಲಿ ನೀಡಿದ್ದ ತೀರ್ಪಿನ ಮರುಪರಿಶೀಲನೆ ಅಗತ್ಯವಿದೆ’ ಎಂದು ಕರ್ನಾಟಕ ಸರ್ಕಾರ ಸೋಮವಾರ ಸುಪ್ರೀಂ ಕೋರ್ಟ್‌ಗೆ ತಿಳಿಸಿದೆ. ಇಂದಿರಾ ಸಹಾನಿ ಪ್ರಕರಣದಲ್ಲಿ ಪೀಠ ಈ ತೀರ್ಪು ನೀಡಿತ್ತು.

ಸೋಮವಾರ ಬೆಂಗಳೂರಿನಲ್ಲಿ ನಡೆದ ರಾಜ್ಯ (ಕರ್ನಾಟಕ) ಸಚಿವ ಸಂಪುಟ ಸಭೆಯಲ್ಲಿ ಈ ಬಗ್ಗೆ ನಿರ್ಧಾರ ಕೈಗೊಳ್ಳಲಾಗಿದೆ.

ಸಾಮಾಜಿಕ ಸ್ತರಗಳಲ್ಲಿ ಸಾಕಷ್ಟು ಬದಲಾವಣೆಗಳಾಗಿವೆ. ಸುಪ್ರೀಂ ಕೋರ್ಟ್ ನಿಗದಿಪಡಿಸಿದ ಮಿತಿಯಲ್ಲಿ, ವಸ್ತುಸ್ಥಿತಿಯನ್ನು ಪರಿಗಣಿಸಿ, ನ್ಯಾಯ ಒದಗಿಸುವ ಗುರಿ ಸಾಧಿಸಲಾಗದು ಎಂದು ಕರ್ನಾಟಕ ಸರ್ಕಾರ ಈ ಸಂಬಂಧ ಸಲ್ಲಿಸಿದ ಅರ್ಜಿಯಲ್ಲಿ ಪ್ರತಿಪಾದಿಸಿದೆ.

ಹಿಂದುಳಿದ ವರ್ಗಗಳ ಜನರಿಗೆ ಮೀಸಲಾತಿ ಕಲ್ಪಿಸುವಲ್ಲಿ ರಾಜ್ಯ ಸರ್ಕಾರದ ಅನುಭವದ ಪ್ರಕಾರ, ಮೀಸಲಾತಿ ಮಿತಿ ಶೇ 50ರಷ್ಟು ಮೀರುವುದು ಅಗತ್ಯ ಎಂದೂ ಪ್ರತಿಪಾದಿಸಿದೆ. ಈ ಸಂಬಂಧ ಲಿಖಿತ ಹೇಳಿಕೆಯನ್ನು ಸರ್ಕಾರದ ಪರವಾಗಿ ವಕೀಲ ಶುಭ್ರಾಂಶು ಪಧಿ ಅವರು ಕೋರ್ಟ್‌ಗೆ ಸಲ್ಲಿಸಿದರು.

ಮರಾಠಾ ಸಮುದಾಯಕ್ಕೆ ಮೀಸಲಾತಿ ಒದಗಿಸಲು ಮಹಾರಾಷ್ಟ್ರ ಸರ್ಕಾರ ರಚಿಸಿರುವ ಕಾಯ್ದೆಯ ಪರಿಶೀಲನೆ ವೇಳೆ ನ್ಯಾಯಮೂರ್ತಿ ಅಶೋಕ್ ಭೂಷಣ್ ನೇತೃತ್ವದ ಪಂಚಸದಸ್ಯರ ಪೀಠವು ರೂಪಿಸಿದ ಪ್ರಶ್ನಾವಳಿಗೆ ಪ್ರತಿಕ್ರಿಯೆಯಾಗಿ ಸರ್ಕಾರ ಈ ಪ್ರತಿಕ್ರಿಯೆಯನ್ನು ದಾಖಲಿಸಿದೆ.

ಆರ್ಥಿಕವಾಗಿ ಹಿಂದುಳಿದ ವರ್ಗಗಳಿಗೆ (ಇಡಬ್ಲ್ಯುಎಸ್) ಶೇ 10ರಷ್ಟು ಮೀಸಲಾತಿ ಕಲ್ಪಿಸುವ ಸಂವಿಧಾನದ 103ನೇ ತಿದ್ದುಪಡಿಯನ್ನು ರಾಜ್ಯ ಸರ್ಕಾರ ಉಲ್ಲೇಖಿಸಿದ್ದು, ಸಂವಿಧಾನದಲ್ಲಿಯೇ ಮೀಸಲಾತಿ ಮಿತಿಯು ಶೇ 50ರಷ್ಟು ಮೀರಲು ಅವಕಾಶ ಕಲ್ಪಿಸಲಾಗಿದೆ ಎಂದಿದೆ. ಮಿತಿ ಶೇ 50 ಮೀರಬಹುದು ಎಂದು ಸುಪ್ರೀಂ ಕೋರ್ಟ್ ಕೂಡಾ ಸ್ಪಷ್ಟಪಡಿಸಿದೆ ಎಂದಿರುವ ಸರ್ಕಾರ, ಸಮರ್ಥನೆಯಾಗಿ ಎಸ್.ವಿ.ಜೋಷಿ ಪ್ರಕರಣವನ್ನು (2012) ಉಲ್ಲೇಖಿಸಿತು.

ಕಳೆದ ಹಲವು ದಶಕಗಳಲ್ಲಿ ಸಾಮಾಜಿಕ ಸ್ತರ, ವಸ್ತು ಸ್ಥಿತಿಯಲ್ಲಿ ಸಾಕಷ್ಟು ಬದಲಾವಣೆಗಳಾಗಿವೆ. ಈ ಅಂಶದ ಆಧಾರದಲ್ಲಿಯೇ ಇಂದಿರಾ ಸಹಾನಿ ಪ್ರಕರಣದ ತೀರ್ಪನ್ನು ಮರುಪರಿಶೀಲಿಸಬೇಕು. ಹಿಂದುಳಿದ ವರ್ಗಗಳಿಗೆ ಶೇ 52ರವರೆಗೆ ಮೀಸಲಾತಿಗೆ ಅವಕಾಶ ಕಲ್ಪಿಸಿದ ಮಂಡಲ ಆಯೋಗವು, ಇದಕ್ಕೆ1931ರಲ್ಲಿ ಇದ್ದ ಜಾತಿವಾರು ಜನಸಂಖ್ಯೆಯನ್ನು ಆಧರಿಸಿತ್ತು. ಕಳೆದ 40 ವರ್ಷಗಳಲ್ಲಿ ಈ ವರ್ಗಗಳ ಜನಸಂಖ್ಯೆಯಲ್ಲಿಯೂ ಸಾಕಷ್ಟು ಬದಲಾಗಿದೆ ಎಂದಿದೆ.

ರಾಷ್ಟ್ರೀಯ ಹಿಂದುಳಿದ ವರ್ಗಗಳ ಆಯೋಗಕ್ಕೆ ಶಾಸನಬದ್ಧ ಅಧಿಕಾರವನ್ನು ನೀಡುವ ಸಂವಿಧಾನದ 102ನೇ ತಿದ್ದುಪಡಿಯು, ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದ ವರ್ಗಳಿಗೆ ಮೀಸಲಾತಿ ಒದಗಿಸುವ ಉದ್ದೇಶದಿಂದ ಕಾಯ್ದೆ ರೂಪಿಸುವ ರಾಜ್ಯಗಳ ಅಧಿಕಾರಕ್ಕೆ ಧಕ್ಕೆ ಉಂಟು ಮಾಡುವುದಿಲ್ಲ ಎಂದೂ ಸರ್ಕಾರ ತನ್ನ ಅರ್ಜಿಯಲ್ಲಿ ಉಲ್ಲೇಖಿಸಿದೆ.

‘ರಾಜ್ಯಗಳಿಗೆ ಅಧಿಕಾರ ಕೊಡಿ’

‘ಹಿಂದುಳಿದ ವರ್ಗಗಳಿಗೆ ಉದ್ಯೋಗ ಮತ್ತು ಶಿಕ್ಷಣದಲ್ಲಿ ಶೇ 50ರ ಮಿತಿಯನ್ನು ಮೀರಿ ಮೀಸಲಾತಿ ಅಗತ್ಯ. ಒಂದು ವೇಳೆ ತೀರ್ಪಿನ ಮರುಪರಿಶೀಲನೆಯನ್ನು ಉನ್ನತ ಪೀಠಕ್ಕೆ ವಹಿಸಲಾಗದು ಎಂಬ ತೀರ್ಮಾನಕ್ಕೆ ಕೋರ್ಟ್ ಬರುವುದಾದರೆ, ಅಗತ್ಯತೆ ಮತ್ತು ಪ್ರಮಾಣೀಕೃತ ಅಂಕಿಅಂಶಗಳನ್ನು ಆಧರಿಸಿ ರಾಜ್ಯ ಸರ್ಕಾರಗಳೇ ತೀರ್ಮಾನವನ್ನು ತೆಗೆದುಕೊಳ್ಳಬಹುದು ಎಂದು ಘೋಷಿಸಬೇಕು’ ಎಂದೂ ಸರ್ಕಾರ ಮನವಿ ಮಾಡಿದೆ.

ದೆಹಲಿ ರೈತ ಸ್ಮಾರಕಕ್ಕೆ ಕರ್ನಾಟಕದ ಮಣ್ಣು!

ಬಳ್ಳಾರಿ: ದೆಹಲಿಯ ಮೂರು ಗಡಿಗಳಲ್ಲಿ ಏಪ್ರಿಲ್‌ನಲ್ಲಿ ನಿರ್ಮಾಣವಾಗಲಿರುವ ರೈತ ಸ್ಮಾರಕಗಳಿಗೆ ಕರ್ನಾಟಕದ ರೈತ ಹೋರಾಟಗಳ ನೆನಪಿನ ಮಣ್ಣು ಕೂಡ ಸೇರ್ಪಡೆಯಾಗಲಿದೆ. ಮಾರ್ಚ್ 5ರಿಂದ ಬಸವ ಕಲ್ಯಾಣದಿಂದ ಆರಂಭವಾಗಿರುವ ರೈತರ ಪಾದಯಾತ್ರೆಯು ಬಳ್ಳಾರಿಯಲ್ಲಿ 23ರಂದು ಸಮಾರೋಪಗೊಳ್ಳಲಿದ್ದು, ಮಾರ್ಗ ಮಧ್ಯದ 26 ಗ್ರಾಮಗಳ ಹೊಲಗಳಿಂದ ಮಣ್ಣನ್ನು ಸಂಗ್ರಹಿಸಲಾಗಿದೆ. 4

ಶಬರಿಮಲೆ ಪ್ರವೇಶ: ಸಿಪಿಎಂ ನಿಲುವಿಗೆ ತರಾಟೆ

ತಿರುವನಂತಪುರ (ಕೇರಳ): ಶಬರಿಮಲೆ ದೇವಸ್ಥಾನಕ್ಕೆ ಮಹಿಳೆಯರ ಪ್ರವೇಶ ಕುರಿತಂತೆ ಸುಪ್ರೀಂ ಕೋರ್ಟ್‌ಗೆ ತಾನು ಸಲ್ಲಿಸಿರುವ ಪ್ರಮಾಣಪತ್ರಕ್ಕೆ ಬದ್ಧ ಇರುವುದಾಗಿ ಸಿಪಿಎಂ ಸೋಮವಾರ ಸ್ಪಷ್ಟಪಡಿಸಿದೆ. ಇದಕ್ಕೆ ಬಿಜೆಪಿ ಹಾಗೂ ಕಾಂಗ್ರೆಸ್ ತೀಕ್ಷ್ಣ ಪ್ರತಿಕ್ರಿಯೆ ನೀಡಿವೆ. 9

ಶಿಕ್ಷಕರ ಸಂಘದ ವಂಚನೆ: ‘ಸುಪ್ರೀಂ’ ನೋಟಿಸ್

ನವದೆಹಲಿ: ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಪದಾಧಿಕಾರಿಗಳಿಗೆ ಸಂಬಂಧಿಸಿದ ವಂಚನೆ ಪ್ರಕರಣದಲ್ಲಿ ರಾಜ್ಯ ಹೈಕೋರ್ಟ್ ನೀಡಿರುವ ಆದೇಶದ ಸಿಂಧುತ್ವ ಪ್ರಶ್ನಿಸಿ ಕರ್ನಾಟಕ ಲೋಕಾಯುಕ್ತದಿಂದ ಸಲ್ಲಿಕೆಯಾಗಿರುವ ಮೇಲ್ಮನವಿಯ ವಿಚಾರಣೆ ಕುರಿತು ಪರಿಶೀಲಿಸುವುದಾಗಿ ಸುಪ್ರೀಂ ಕೋರ್ಟ್ ತಿಳಿಸಿದೆ. 10

‘ನರೇಗಾ ಅನುದಾನ ಜಲಸಂರಕ್ಷಣೆಗೆ ಬಳಸಿ’

ನವದೆಹಲಿ: ‘ಮಹಾತ್ಮಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ (ನರೇಗಾ) ಯೋಜನೆಗೆ ಮೀಸಲಿಟ್ಟಿರುವ ಅನುದಾನದ ಪ್ರತಿ ಪೈಸೆಯನ್ನೂ ಮುಂಗಾರು ಆರಂಭವಾಗುವವರೆಗೂ ಮಳೆ ನೀರು ಸಂರಕ್ಷಣೆ ಉದ್ದೇಶಗಳಿಗೆ ವ್ಯಯಿಸಲು ಒತ್ತು ನೀಡಬೇಕು’ ಎಂದು ಪ್ರಧಾನಿ ನರೇಂದ್ರ ಮೋದಿ ಸಲಹೆ ನೀಡಿದರು. 10

ಹೈಕೋರ್ಟ್‌ಗೆ ಹೆಚ್ಚುವರಿ ನ್ಯಾಯಮೂರ್ತಿಗಳ ನೇಮಕ

ನವದೆಹಲಿ: ರಾಜ್ಯ ಹೈಕೋರ್ಟ್‌ಗೆ ಇಬ್ಬರು ಹೆಚ್ಚುವರಿ ನ್ಯಾಯಮೂರ್ತಿಗಳನ್ನು ನೇಮಕ ಮಾಡಿ ಕೇಂದ್ರ ಸರ್ಕಾರ ಸೋಮವಾರ ಅಧಿಸೂಚನೆ ಹೊರಡಿಸಿದೆ.

ನ್ಯಾಯಾಂಗ ಅಧಿಕಾರಿಗಳಾದ ರಾಜೇಂದ್ರ ಬಾದಾಮಿಕರ್ ಹಾಗೂ ಖಾಜಿ ಜಯಾಬುನ್ನೀಸಾ ಮೊಹಿದ್ದಿನ್ ಹೆಚ್ಚುವರಿ ನ್ಯಾಯಮೂರ್ತಿಗಳಾಗಿ ನೇಮಕಗೊಂಡಿದ್ದು, ಎರಡು ವರ್ಷಗಳ ಸೇವಾ ಅವಧಿ ಹೊಂದಿದ್ದಾರೆ. ಫೆಬ್ರುವರಿಯಲ್ಲಿ ಸಭೆ ಸೇರಿದ್ದ ಸುಪ್ರೀಂ ಕೋರ್ಟ್ ಕೊಲಿಜಿಯಮ್‌ನ ಶಿಫಾರಸ್ಸಿನ ಮೇರೆಗೆ ಈ ನೇಮಕದ ಆದೇಶ ಹೊರಡಿಸಲಾಗಿದೆ.

ಇಪಿಎಸ್ ಪಿಂಚಣಿ: ಅನುದಾನ ಇಲ್ಲದೆ ಹೆಚ್ಚಳವಿಲ್ಲ

ನವದೆಹಲಿ (ಪಿಟಿಐ): ಬಜೆಟ್‌ನಲ್ಲಿ ಹೆಚ್ಚುವರಿ ಅನುದಾನ ಇಲ್ಲದಿದ್ದರೆ ನೌಕರರ ಪಿಂಚಣಿ ಯೋಜನೆಯ (ಇಪಿಎಸ್–95) ಅಡಿ ನೀಡುತ್ತಿರುವ ಕನಿಷ್ಠ ಪಿಂಚಣಿ ಮೊತ್ತ ಹೆಚ್ಚಿಸಲಾಗದು ಎಂದು ಕೇಂದ್ರ ಸರ್ಕಾರ ಸ್ಪಷ್ಟಪಡಿಸಿದೆ. ಇಪಿಎಸ್–95 ಯೋಜನೆಯನ್ನು ಸಮಗ್ರವಾಗಿ ಪರಿಶೀಲಿಸಲು, ಮೌಲ್ಯಮಾಪನ ನಡೆಸಲು ಕೇಂದ್ರವು ಉನ್ನತ ಅಧಿಕಾರ ಇರುವ ಮೇಲ್ವಿಚಾರಣಾ ಸಮಿತಿ ರಚಿಸಿತ್ತು ಎಂದು ಕೇಂದ್ರ ಕಾರ್ಮಿಕ ಸಚಿವ ಸಂತೋಷ್ ಗಂಗ್ವಾರ್ ಲೋಕಸಭೆಗೆ ನೀಡಿರುವ ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ.



ಕೋವಿಡ್ ಲಸಿಕೆ ಕಾರ್ಯಕ್ರಮವನ್ನು ಬಿಜೆಪಿ ನಾಯಕರು ತಮ್ಮ ಕಾರ್ಯಕ್ರಮ ಎಂದು ಬಿಂಬಿಸಿಕೊಳ್ಳುತ್ತಿದ್ದಾರೆ ಎಂದು ಆರೋಪಿಸಿ ಹನುಮಂತನಗರದ ಬ್ಲಾಕ್ ಕಾಂಗ್ರೆಸ್ ಸಮಿತಿ ಸದಸ್ಯರು ಸೋಮವಾರ ಪ್ರತಿಭಟನೆ ನಡೆಸಿದರು

ರಾಚೇನಹಳ್ಳಿ ಕೆರೆಗೆ ಕೊಳಚೆ ನೀರು ಸೇರದಂತೆ ತಡೆಯಲು ಎಸ್‌ಟಿಪಿ ನಿರ್ಮಾಣ

238 ನೀಲಗಿರಿ ಮರಗಳ ತೆರವಿಗೆ ಸಿದ್ಧತೆ

• ಪ್ರವೀಣ್ ಕುಮಾರ್ ಪಿ.ವಿ.

ಬೆಂಗಳೂರು: ರಾಚೇನಹಳ್ಳಿ ಕೆರೆಗೆ ಕೊಳಚೆ ನೀರು ಸೇರ್ಪಡೆ ತಡೆಯಲು ಜಕ್ಕೂರಿನ ಮಹಾತ್ಮ ಗಾಂಧಿ ಗ್ರಾಮೀಣ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆಯ (ಎಂಜಿಐಆರ್‌ಎಇಡಿ) ಜಾಗದಲ್ಲಿ ತ್ಯಾಜ್ಯ ನೀರು ಶುದ್ಧೀಕರಣ ಘಟಕ (ಎಸ್‌ಟಿಪಿ) ಸ್ಥಾಪಿಸಲಾಗುತ್ತಿದೆ. ಇದಕ್ಕಾಗಿ ಸಂಸ್ಥೆಯು 1.5 ಎಕರೆಯನ್ನು ಜಲಮಂಡಳಿಗೆ ಒದಗಿಸಿದ್ದು, ಅಲ್ಲಿರುವ 238 ನೀಲಗಿರಿ ಮರಗಳನ್ನು ಕಡಿಯಲು ಸಿದ್ಧತೆ ನಡೆದಿದೆ.

ಮರಗಳನ್ನು ಕಡಿಯುವ ಬೆಂಗಳೂರು ನಗರ ಜಿಲ್ಲೆಯ ಉಪ ಅರಣ್ಯ ಸಂರಕ್ಷಣಾಧಿಕಾರಿ ಕಚೇರಿಯು 1976ರ ಕರ್ನಾಟಕ ಮರಗಳ ಸಂರಕ್ಷಣಾ ಕಾಯ್ದೆಯ ಸೆಕ್ಷನ್ 8 (3) (vii) ಅಡಿಯಲ್ಲಿ ಇತ್ತೀಚೆಗೆ ಸಾರ್ವಜನಿಕ ಪ್ರಕಟಣೆ ಹೊರಡಿಸಿದ್ದು, ಆಕ್ಷೇಪಣೆಗಳನ್ನು ಆಹ್ವಾನಿಸಿದೆ.

‘ಎಸ್‌ಟಿಪಿ ನಿರ್ಮಾಣಕ್ಕೆ ಬೇರೆಲ್ಲೂ ಜಾಗ ಸಿಗದ ಕಾರಣ ಜಲಮಂಡಳಿಯವರು ನಮ್ಮ ಸಂಸ್ಥೆಯ ಜಾಗ ಒದಗಿಸುವಂತೆ ಕೋರಿದ್ದರು. ಇದರಿಂದ ಕೆರೆಗೆ ಕೊಳಚೆ ನೀರು ಸೇರುವುದು ತಪ್ಪುತ್ತದೆ ಹಾಗೂ ಸಾರ್ವಜನಿಕರಿಗೆ ಅನುಕೂಲವಾಗುತ್ತದೆ ಎಂಬ ಕಾರಣಕ್ಕೆ ನಾವು ಒಂದೂವರೆ ಎಕರೆ ಜಾಗವನ್ನು ಜಲಮಂಡಳಿಗೆ ಒದಗಿಸಲು ಒಪ್ಪಿದ್ದೇವೆ’ ಎಂದು (ಎಂಜಿಐಆರ್‌ಎಇಡಿ) ಕಾರ್ಯಕಾರಿ ನಿರ್ದೇಶಕ ಮನೋಜ್ ಕುಮಾರ್ ಶುಕ್ಲ ‘ಪ್ರಜಾವಾಣಿ’ಗೆ ತಿಳಿಸಿದರು.

> **ನಗರದಲ್ಲಿ ಹಸಿರಿನ ಕೊರತೆ ನೀಗಿಸಲು ವೃಕ್ಷೋದ್ಯಾನಗಳನ್ನು ನಿರ್ಮಿಸುವುದಾಗಿ ಸರ್ಕಾರ ಹೇಳುತ್ತಿದೆ. ಇನ್ನೊಂದೆಡೆ ಇರುವ ಹಸಿರನ್ನೂ ನಾಶ ಪಡಿಸಲು ಮುಂದಾಗಿದೆ**
>
> **ಸಂಜೀವ ದ್ಯಾಮಣ್ಣವರ್,** ಜಕ್ಕೂರು ನಿವಾಸಿ

ಸಂಸ್ಥೆಯ ಜಾಗವನ್ನು ಎಸ್‌ಟಿಪಿ ನಿರ್ಮಾಣಕ್ಕೆ ಬಿಟ್ಟುಕೊಡುವುದಕ್ಕೆ ಹಾಗೂ ಸಂಸ್ಥೆಯ ಪ್ರಾಂಗಣದಲ್ಲಿರುವ 238 ಮರಗಳನ್ನು ಕಡಿಯುವುದಕ್ಕೆ ಜಕ್ಕೂರಿನ ನಿವಾಸಿಗಳು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

‘ಎಸ್‌ಟಿಪಿ ನಿರ್ಮಿಸುವುದಕ್ಕೆ ನಮ್ಮದೇನೂ ತಕರಾರು ಇಲ್ಲ. ಆದರೆ, 238 ಮರಗಳನ್ನು ಕಡಿಯುವುದಕ್ಕೆ ಆಕ್ಷೇಪ ಇದೆ. ರಾಚೇನಹಳ್ಳಿ ಕೆರೆಯನ್ನು ಅನೇಕ ಪಕ್ಷಿ ಸಂಕುಲಗಳೂ ಅವಲಂಬಿಸಿವೆ. ಇಷ್ಟೊಂದು ಸಂಖ್ಯೆಯಲ್ಲಿ ಮರಗಳು ತೆರವುಗೊಂಡರೆ ಇಲ್ಲಿನ ಜೀವವೈವಿಧ್ಯಕ್ಕೂ ಕುತ್ತು ಉಂಟಾಗಲಿದೆ’ ಎಂದು ಜಕ್ಕೂರು ನಿವಾಸಿ ಸಂಜೀವ ದ್ಯಾಮಣ್ಣನವರ್ ಕಳವಳ ವ್ಯಕ್ತಪಡಿಸಿದರು.

‘ಇಂಧನ ಕ್ಷೇತ್ರದಲ್ಲಿ ಗಮನಾರ್ಹ ಬದಲಾವಣೆಗಳು ಆಗುತ್ತಿವೆ. ಗ್ರಾಮೀಣ ಪ್ರದೇಶದಲ್ಲಿ ಸುಸ್ಥಿರ ಇಂಧನ ಬಳಕೆ ಉತ್ತೇಜನಕ್ಕೆ ತರಬೇತಿ ಹಮ್ಮಿಕೊಳ್ಳಲು ಸಂಸ್ಥೆಯು ಇರುವ ಜಾಗವನ್ನು ಉಳಿಸಿಕೊಳ್ಳಬೇಕು. ಎಸ್‌ಟಿಪಿ ನಿರ್ಮಾಣಕ್ಕೆ ಒಂದೂವರೆ ಎಕರೆ ಜಾಗವನ್ನು ಪರ್ಯಾಯ ಭೂಮಿಯನ್ನು ಪಡೆಯದೆಯೇ ಎಂಜಿಐಆರ್‌ಎಇಡಿ ಬಿಟ್ಟುಕೊಡುವುದು ಸರಿಯಲ್ಲ’ ಎಂದರು.

‘ನೀಲಗಿರಿ ಮರಗಳು ಪರಿಸರ ಸಮತೋಲನದ ದೃಷ್ಟಿಯಿಂದ ಸೂಕ್ತವಲ್ಲ. ಇಲ್ಲಿನ 238 ಮರಗಳನ್ನು ಎಸ್‌ಟಿಪಿ ನಿರ್ಮಾಣದ ಸಲುವಾಗಿ ಕಡಿದರೂ, ಅಲ್ಲಿ ವಿವಿಧ ಜಾತಿಯ ಇತರ ಗಿಡಗಳನ್ನು ಬೆಳೆಸಲಿದ್ದೇವೆ’ ಎಂದು ಶುಕ್ಲ ತಿಳಿಸಿದರು.

‘ಒತ್ತುವರಿ ತೆರವುಗೊಂಡ ಜಾಗ ಬಳಸಲಿ’

‘ಇತ್ತೀಚೆಗೆ ಜಿಲ್ಲಾಡಳಿತವು ಈ ಕೆರೆಯ ಸಮೀಪದಲ್ಲಿರುವ ಬಿಡಿಎ ಉದ್ಯಾನದ ಬಳಿ (ಧೀರಜ್ ಅಪಾರ್ಟ್‌ಮೆಂಟ್ ಸಮುಚ್ಚಯದ ಸಮೀಪ) ಒತ್ತುವರಿಯಾಗಿರದ್ದ 4 ಎಕರೆಗಳಷ್ಟು ಜಾಗವನ್ನು ಮತ್ತೆ ವಶಪಡಿಸಿಕೊಂಡಿದೆ. ಆ ಜಾಗದಲ್ಲಿ ಸರ್ಕಾರ ಎಸ್‌ಟಿಪಿ ನಿರ್ಮಾಣಕ್ಕೆ ಬಳಸಿಕೊಳ್ಳಲಿ. ಈ ಜಾಗವು ಎದುರಿನ ಜಾಗವು ಎಸ್‌ಟಿಪಿ ನಿರ್ಮಾಣಕ್ಕೂ ಪೂರಕವಾಗಿದೆ’ ಎಂದು ಸಂಜೀವ್ ಸಲಹೆ ನೀಡಿದರು.

ಆಲೂರು ಗ್ರಾ.ಪಂ : 36 ಅಭ್ಯರ್ಥಿಗಳು ಕಣದಲ್ಲಿ

ಹೆಸರಘಟ್ಟ: ಆಲೂರು ಗ್ರಾಮ ಪಂಚಾಯಿತಿ ಚುನಾವಣೆಯಲ್ಲಿ 36 ಅಭ್ಯರ್ಥಿಗಳು ಅಂತಿಮವಾಗಿ ಕಣದಲ್ಲಿ ಉಳಿದುಕೊಂಡಿದ್ದಾರೆ.

22 ಸ್ಥಾನಗಳಿಗೆ 76 ಅಭ್ಯರ್ಥಿಗಳು ನಾಮಪತ್ರವನ್ನು ಸಲ್ಲಿಸಿದ್ದರು. 33 ಅಭ್ಯರ್ಥಿಗಳು ನಾಮಪತ್ರವನ್ನು ಹಿಂಪಡೆದಿದ್ದು, 7 ಜನ ಅವಿರೋಧವಾಗಿ ಆಯ್ಕೆಗೊಂಡಿದ್ದಾರೆ.

ಎಸ್‌ಜೆಐಎಂ: ಪಿಜಿಡಿಎಂಗೆ ರಜತ ಮಹೋತ್ಸವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಸೇಂಟ್ ಜೋಸೆಫ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನ (ಎಸ್‌ಜೆಐಎಂ) ಪಿಜಿಡಿಎಂ ಕಾರ್ಯಕ್ರಮವು 25 ವರ್ಷಗಳನ್ನು ಪೂರೈಸಿತು.

ಇದರ ಅಂಗವಾಗಿ ನಡೆದ ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಭಾಗವಹಿದ್ದ ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿ (ಎಐಸಿಟಿಇ) ಅಧ್ಯಕ್ಷ ಪ್ರೊ.ಅನಿಲ್ ಡಿ.ಸಹಸ್ರಬುದ್ಧೆ, ‘ಎಐಸಿಟಿಇ ಶಿಕ್ಷಣದಲ್ಲಿ ನೈತಿಕ ಮಾದರಿ ಹೊಂದಿದೆ. ಇದರಡಿ ಸಾಂಸ್ಕೃತಿಕ ಮತ್ತು ಸಾಮಾಜಿಕ-ಆರ್ಥಿಕ ಸಂದರ್ಭದಲ್ಲಿ ಗುಣಮಟ್ಟದ ಸೂಚನೆಗಳನ್ನು ನೀಡಲಾಗುತ್ತದೆ’ ಎಂದರು.

ವೋಲ್ವೊ ಇಂಡಿಯಾದ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಕಮಲ್ ಬಾಲಿ, ‘ಸಾಂಕ್ರಾಮಿಕ-ನಂತರದ ಜಗತ್ತು ಭಾರತಕ್ಕೆ ಸಾಮಾಜಿಕ-ಆರ್ಥಿಕ ಬೆಳವಣಿಗೆಗೆ ಒಂದು ಸುವರ್ಣಾವಕಾಶ ಒದಗಿಸಿದೆ’ ಎಂದರು.



ಕಾರ್ಯಕ್ರಮವನ್ನು (ಎಡದಿಂದ ಐದನೆಯವರು) ಅನಿಲ್ ಡಿ.ಸಹಸ್ರಬುದ್ಧೆ ಉದ್ಘಾಟಿಸಿದರು. ಯೇಸು ಸಭೆಯ ಕರ್ನಾಟಕದ ಪ್ರಾಂತ್ಯಾಧಿಕಾರಿ ಫಾ.ಡೈನೇಸಿಯಸ್ ವಾಝ್, ಸಂಸ್ಥೆಯ ಕಾರ್ಯನಿರ್ವಾಹಕ ನಿರ್ದೇಶಕ ಮನೋಜ್ ಡಿಸೋಜ, ಶಾಸಕ ಎನ್.ಎ.ಹ್ಯಾರಿಸ್ ಹಾಗೂ ಕಮಲ್ ಬಾಲಿ ಇದ್ದಾರೆ

ಕಾರ್ಯಕ್ರಮದಲ್ಲಿ ಎಸ್‌ಜೆಐಎಂ ಶ್ರೇಷ್ಠ ಸಾಮಾಜಿಕ ಉದ್ಯಮಿ ಪ್ರಶಸ್ತಿಯನ್ನು ಟೀಚ್ ಫಾರ್ ಇಂಡಿಯಾ ಸಂಸ್ಥೆಗೆ ನೀಡಲಾಯಿತು. ಪಿಜಿಡಿಎಂ ಕಾರ್ಯಕ್ರಮದ 60 ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಅವರ ಅಧ್ಯಯನಕ್ಕೆ ನೆರವಾಗಲು ₹95 ಲಕ್ಷಗಳ ವಿದ್ಯಾರ್ಥಿವೇತನ ವಿತರಿಸಲಾಯಿತು.

ದೇವೇಂದ್ರಪ್ಪ ಪ್ರಾಸಿಕ್ಯೂಷನ್‌ಗೆ ಅನುಮತಿ

ಬೆಂಗಳೂರು: ಬೊಮ್ಮನಹಳ್ಳಿ ವಲಯದ ಯೋಜನಾ ವಿಭಾಗದ ಪ್ರಭಾರ ಸಹಾಯಕ ನಿರ್ದೇಶಕರಾಗಿದ್ದ ಎನ್.ಎಸ್.ದೇವೇಂದ್ರಪ್ಪ ಅವರನ್ನು ನ್ಯಾಯಾಲಯದಲ್ಲಿ ಪ್ರಾಸಿಕ್ಯೂಷನ್‌ಗೆ ಒಳಪಡಿಸುವುದಕ್ಕೆ ಬಿಬಿಎಂಪಿ ಆಯುಕ್ತ ಎನ್.ಮಂಜುನಾಥ ಪ್ರಸಾದ್ ಅವರು ಮಂಜೂರಾತಿ ನೀಡಿದ್ದಾರೆ.

ಲಂಚ ಪಡೆದ ಆರೋಪದ ಮೇಲೆ ಭ್ರಷ್ಟಾಚಾರ ನಿಗ್ರಹ ದಳದ (ಎಸಿಬಿ) ಪೊಲೀಸರು ದೇವೇಂದ್ರಪ್ಪ ಅವರನ್ನು ಫೆ 05ರಂದು ಬಂಧಿಸಿದ್ದರು. ಅವರನ್ನು ಪ್ರಾಸಿಕ್ಯೂಷನ್‌ಗೆ ಒಳಪಡಿಸಲು ಅನುಮತಿ ನೀಡುವಂತೆ ಕೋರಿ ಎಸಿಬಿಯ ಪೊಲೀಸ್ ಮಹಾನಿರ್ದೇಶಕರು ಬಿಬಿಎಂಪಿ ಆಯುಕ್ತರಿಗೆ ಮಾರ್ಚ್ 16ರಂದು ಪತ್ರ ಬರೆದಿದ್ದರು.

ದೇವೇಂದ್ರಪ್ಪ ಅವರ ಸ್ವಿಫ್ಟ್ ಕಾರಿನಲ್ಲಿ ₹ 7.42 ಲಕ್ಷ ನಗದು ಪತ್ತೆಯಾಗಿತ್ತು. ಅವರ ಬಳಿ ಬಿಬಿಎಂಪಿಗೆ ಸಂಬಂಧಿಸಿದ 488 ಕಡತಗಳು ಹಾಗೂ ವಿವಿಧ ದರ್ಜೆಯ ಅಧಿಕಾರಿಗಳ 66 ಮೊಹರುಗಳು ಪತ್ತೆಯಾಗಿದ್ದವು. ಬಿಬಿಎಂಪಿ ಆಯುಕ್ತರು ಅವರನ್ನು ಹುದ್ದೆಯಿಂದ ಅಮಾನತು ಮಾಡಿದ್ದರು.

ಸುದ್ದಿ 2 ನಿಮಿಷ

ಮಾರ್ಷಲ್‌ಗಳಿಂದ ತೊಂದರೆ: ಹೋಟೆಲ್ ಮಾಲೀಕರ ಆರೋಪ

ಬೆಂಗಳೂರು: ‘ಮಾರ್ಷಲ್‌ಗಳು, ಪೊಲೀಸರು ಹಾಗೂ ಪಾಲಿಕೆ ಅಧಿಕಾರಿಗಳು ಸಣ್ಣ ಪುಟ್ಟ ಕಾರಣಗಳನ್ನು ಮುಂದಿಟ್ಟುಕೊಂಡು ಹೋಟೆಲ್ ಮಾಲೀಕರಿಗೆ ಸಮಸ್ಯೆ ನೀಡುತ್ತಿದ್ದಾರೆ’ ಎಂದು ಬೃಹತ್ ಬೆಂಗಳೂರು ಹೋಟೆಲ್‌ಗಳ ಸಂಘದ ಅಧ್ಯಕ್ಷ ಪಿ.ಸಿ.ರಾವ್ ದೂರಿದ್ದಾರೆ.

ಈ ಸಂಬಂಧ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಹಾಗೂ ಪಾಲಿಕೆ ಆಯುಕ್ತ ಎನ್. ಮಂಜುನಾಥ ಪ್ರಸಾದ್ ಅವರಿಗೆ ಸಂಘದ ವತಿಯಿಂದ ಪತ್ರ ಬರೆಯಲಾಗಿದೆ.

‘ಮಾರ್ಷಲ್‌ಗಳು ಇತ್ತೀಚೆಗೆ ಸಣ್ಣಪುಟ್ಟ ಹೋಟೆಲ್‌ಗಳಿಗೆ ಬಂದು ತೊಂದರೆ ನೀಡುತ್ತಿದ್ದಾರೆ. ಮಲ್ಲೇಶ್ವರದ ಹೋಟೆಲ್‌ವೊಂದರಲ್ಲಿ ಕಸದ ಬುಟ್ಟಿಯಲ್ಲಿದ್ದ ಪ್ಲಾಸ್ಟಿಕ್ ತುಣುಕನ್ನು ತೋರಿಸಿ, ₹5 ಸಾವಿರ ದಂಡ ಹಾಕಿದ್ದಾರೆ. ಬಳಿಕ ಹೋಟೆಲ್‌ನ ಪರವಾನಗಿ ರದ್ದು ಮಾಡುವುದಾಗಿ ಹೆದರಿಸಿದ್ದಾರೆ. ಕೋವಿಡ್ ಹೆಸರಿನಲ್ಲಿ ಮಾರ್ಷಲ್‌ಗಳ ವರ್ತನೆ ಮಿತಿ ಮೀರಿದೆ’ ಎಂದು ಪಿ.ಸಿ.ರಾವ್ ಆರೋಪಿಸಿದ್ದಾರೆ.

‘ರಾಜಕೀಯ ಮುಖಂಡರ ಸಭೆಗಳು ಹಾಗೂ ಮುಷ್ಕರಗಳು ನಡೆದಾಗ ಕೋವಿಡ್ ನಿಯಮಗಳನ್ನು ಉಲ್ಲಂಘಿಸಿದರೂ ಅವುಗಳನ್ನು ದಂಡಿಸುವ ಕೆಲಸ ನಡೆಯಲಿಲ್ಲ. ಸರ್ಕಾರದ ಸೂಚಿಸಿರುವ ನಿಯಮ ಪಾಲಿಸುತ್ತ ಕೈಜೋಡಿಸಿದ್ದರೂ ಹೋಟೆಲ್ ಮಾಲೀಕರಿಗೆ ತೊಂದರೆ ಕೊಡುವುದು ಸರಿಯಲ್ಲ. ಪಾಲಿಕೆ ಈ ಸಮಸ್ಯೆಯನ್ನು ಶೀಘ್ರವಾಗಿ ಪರಿಹರಿಸಬೇಕು’ ಎಂದು ಒತ್ತಾಯಿಸಿದ್ದಾರೆ.

ದಾಸನಪುರ ಎಪಿಎಂಸಿ ವರ್ತಕರಿಂದ ಪ್ರತಿಭಟನೆ



ಹೆಸರಘಟ್ಟ: ಮಳಿಗೆ ಬಾಡಿಗೆ ನೀಡುವಂತೆ ಅಧಿಕಾರಿಗಳು ಒತ್ತಡ ಹಾಕುತ್ತಿದ್ದಾರೆ ಎಂದು ಆರೋಪಿಸಿ ದಾಸನಪುರ ಎ.ಪಿ.ಎಂ.ಸಿ. ವರ್ತಕರ ಸಂಘವು ಪ್ರತಿಭಟನೆ ನಡೆಸಿತು.

‘ದಾಸನಪುರ ಎಪಿಎಂಸಿಯನ್ನು ಅಭಿವೃದ್ಧಿ ಪಡಿಸಲು ಅಧಿಕಾರಿಗಳು ಯಾವುದೇ ಕ್ರಮ ಕೈಗೊಂಡಿಲ್ಲ. ₹300 ಕೋಟಿ ಬಂಡವಾಳ ಹಾಕಿ ನಿರ್ಮಿಸಿರುವ ಈ ಎಪಿಎಂಸಿಯಲ್ಲಿ ಮೂರು ವರ್ಷಗಳಿಂದ ಯಾವುದೇ ಅಭಿವೃದ್ಧಿ ಕಾರ್ಯ ಕೈಗೊಳ್ಳದೆ ಸರ್ಕಾರದ ಬೊಕ್ಕಸಕ್ಕೆ ನಷ್ಟ ಉಂಟು ಮಾಡಿದ್ದಾರೆ’ ಎಂದು ವರ್ತಕರ ಸಂಘದ ಅಧ್ಯಕ್ಷ ಬಿ.ಅರ್.ಶ್ರೀರಾಮ ರೆಡ್ಡಿ ಆಕ್ರೋಶ ವ್ಯಕ್ತಪಡಿಸಿದರು.

‘ಕೋವಿಡ್ ಬಿಕ್ಕಟ್ಟಿನ ಕಾರಣ ಬಾಡಿಗೆ ಮನ್ನಾ ಮಾಡುವುದಾಗಿ ಅಧಿಕಾರಿಗಳು ಹೇಳಿದ್ದರು. ಈಗ ಕಟ್ಟಲೇಬೇಕು ಎಂದು ಒತ್ತಡ ಹಾಕುತ್ತಿದ್ದಾರೆ. ಅಧಿಕಾರಿಗಳ ಈ ವರ್ತನೆ ಬೇಸರ ತಂದಿದೆ’ ಎಂದರು.

‘ಯಶವಂತಪುರ ಮತ್ತು ದಾಸನಪುರ ಎರಡು ಕೇಂದ್ರಗಳಲ್ಲಿ ವ್ಯಾಪಾರ ಕೇಂದ್ರವನ್ನು ತೆರೆದಿರುವುದರಿಂದ ದಾಸನಪುರ ಕೇಂದ್ರದಲ್ಲಿ ವ್ಯಾಪಾರ ನಡೆಯುತ್ತಿಲ್ಲ. ಯಾವುದಾದರೂ ಒಂದು ಕೇಂದ್ರದಲ್ಲಿ ವ್ಯಾಪಾರ ಮಾಡಲು ಅವಕಾಶ ಕೊಡಿ ಎಂದು ಅಧಿಕಾರಿಗಳಿಗೆ ಮನವಿ ಪತ್ರ ಕೊಟ್ಟಿದ್ದೇವೆ. ಆದರೆ ಯಾವುದೇ ಪ್ರಯೋಜವಾಗಿಲ್ಲ’ ಎಂದರು.

ಮಳೆ ನೀರು ಸಂಗ್ರಹಕ್ಕೆ ಎರಡು ಹಂತಗಳಲ್ಲಿ 73 ಇಂಗು ಗುಂಡಿ ನಿರ್ಮಾಣ, ಆರು ಬಾವಿಗಳ ಪುನಶ್ಚೇತನ

ಕಬ್ಬನ್: ಸಿಪಿಆರ್ ಯೋಜನೆಯಡಿ ಜಲಸಂರಕ್ಷಣೆ



ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಲ ಸಂರಕ್ಷಣೆ ಉದ್ದೇಶದಿಂದ ಕಬ್ಬನ್ ಉದ್ಯಾನದಲ್ಲಿ ಕೈಗೆತ್ತಿಕೊಂಡಿದ್ದ 'ಕಬ್ಬನ್ ಪಾರ್ಕ್ ಪುನಶ್ಚೇತನ ಯೋಜನೆ' (ಸಿಪಿಆರ್) ಪೂರ್ಣಗೊಂಡಿದ್ದು, ವಿಶ್ವ ಜಲ ದಿನದ ಅಂಗವಾಗಿ ಯೋಜನೆಯ ಕಾರ್ಯಗಳನ್ನು ಸೋಮವಾರ ಪರಿಚಯಿಸಲಾಯಿತು.

ಸಿಪಿಆರ್ ಯೋಜನೆಯಡಿ ಕಬ್ಬನ್ ಉದ್ಯಾನದಲ್ಲಿದ್ದ ಆರು ಬಾವಿಗಳ ಅಭಿವೃದ್ಧಿ, ದುರಸ್ತಿ ಹಾಗೂ ಮಳೆ ನೀರು ಸಂಗ್ರಹಕ್ಕಾಗಿ 73 ಇಂಗು ಗುಂಡಿಗಳನ್ನು ನಿರ್ಮಿಸುವ ಯೋಜನೆಯನ್ನು ಎರಡು ಹಂತಗಳಲ್ಲಿ 2017ರಿಂದ ಕೈಗೆತ್ತಿಕೊಳ್ಳಲಾಗಿತ್ತು. ಕಳೆದ ವರ್ಷವೇ ಯೋಜನೆ ಪೂರ್ಣಗೊಂಡಿದ್ದು, ಕೋವಿಡ್ ಸ್ಥಿತಿಯಿಂದ ಉದ್ಘಾಟನೆ ಸಾಧ್ಯವಾಗಿರಲಿಲ್ಲ.

ತೋಟಗಾರಿಕೆ ಇಲಾಖೆಯ ಆಶ್ರಯದಲ್ಲಿ ಬಯೋಮಿ ಎನ್ವಿರಾನ್‌ಮೆಂಟಲ್ ಟ್ರಸ್ಟ್, ಫ್ರೆಂಡ್ಸ್ ಆಫ್ ಲೇಕ್ಸ್ ಹಾಗೂ ಇಂಡಿಯಾ ಕೇರ್ ಫೌಂಡೇಷನ್ ಸಂಸ್ಥೆಗಳು ಈ ಯೋಜನೆಗೆ ಕೈಜೋಡಿಸಿದ್ದವು.

ಯೋಜನೆಯ ಕಾರ್ಯಕ್ರಗಳನ್ನು ಪರಿಶೀಲಿಸಿ ಮಾತನಾಡಿದ ತೋಟಗಾರಿಕೆ ಸಚಿವ ಆರ್.ಶಂಕರ್,'ಪ್ರಧಾನಿ ನರೇಂದ್ರ ಮೋದಿ ಅವರು ವಿಶ್ವ ಜಲ ದಿನದ ಅಂಗವಾಗಿ ಮಳೆ ನೀರು ಹಿಡಿದಿಟ್ಟುಕೊಳ್ಳುವ ಅಭಿಯಾನವನ್ನು ಘೋಷಿಸಿದ್ದಾರೆ. ಉದ್ಯಾನದಲ್ಲಿ ಮಳೆ ನೀರು ಸಂಗ್ರಹಕ್ಕಾಗಿ ಸಿಪಿಆರ್ ಯೋಜನೆಯ ಕಾರ್ಯಗಳು ಶ್ಲಾಘನೀಯ' ಎಂದರು.

'ಉದ್ಯಾನದಲ್ಲಿ ಸಾಂಪ್ರದಾಯಿಕ ತೆರೆದ ಬಾವಿಗಳು ಮತ್ತು ಮಳೆನೀರು ಸಂಗ್ರಹ ಗುಂಡಿಗಳನ್ನು ನಿರ್ಮಿಸಿರುವುದು ಸಂತೋಷಕರ ಸಂಗತಿ. ಇವುಗಳಿಂದ ಉದ್ಯಾನಕ್ಕೆ ಅಗತ್ಯವಾದ ನೀರು ಲಭ್ಯವಾಗಲಿದೆ. ಮಳೆ ನೀರು ಸಂರಕ್ಷಣೆಗೆ ಇಂತಹ ಹೆಚ್ಚಿನ ಯೋಜನೆಗಳಿಗೆ ಇಲಾಖೆ ಕೈಜೋಡಿಸಲಿದೆ' ಎಂದು ಹೇಳಿದರು.



ಮಳೆ ನೀರು ಸಂಗ್ರಹಕ್ಕಾಗಿ ಕಬ್ಬನ್ ಉದ್ಯಾನದಲ್ಲಿ ನಿರ್ಮಿಸಿರುವ ಇಂಗು ಗುಂಡಿಯನ್ನು ಸಚಿವ ಆರ್‌ಶಂಕರ್ ವೀಕ್ಷಿಸಿದರು. ತೋಟಗಾರಿಕೆ ಇಲಾಖೆಯ ಪ್ರಧಾನ ಕಾರ್ಯದರ್ಶಿ ರಾಜೇಂದ್ರ ಕುಮಾರ್ ಕಟಾರಿಯಾ, ನಿರ್ದೇಶಕಿ ಫೌಜಿಯಾ ತರನುಮ್, ಜಂಟಿ ನಿರ್ದೇಶಕ ಎಂ.ಜಗದೀಶ್, ಉಪನಿರ್ದೇಶಕರಾದ ಜಿ.ಕುಸುಮಾ, ಬಾಲಕೃಷ್ಣ, ಇತರರು ಇದ್ದಾರೆ –ಪ್ರಜಾವಾಣಿ ಚಿತ್ರ

ದಿನಕ್ಕೆ ಒಂದು ಲಕ್ಷ ಲೀಟರ್ ನೀರು ಲಭ್ಯ

'ಸಿಪಿಆರ್ ಯೋಜನೆಯಡಿ ಉದ್ಯಾನದಲ್ಲಿದ್ದ ಆರು ಸಾಂಪ್ರದಾಯಿಕ ಬಾವಿಗಳನ್ನು ದುರಸ್ತಿ ಮಾಡಿ ನೀರು ಲಭ್ಯವಾಗುವಂತೆ ಮಾಡಲಾಗಿದೆ. ಇದರಿಂದ ಈಗ ದಿನಕ್ಕೆ ಒಂದು ಲಕ್ಷ ಲೀಟರ್‌ನಷ್ಟು ನೀರು ಲಭ್ಯವಾಗುತ್ತಿದೆ' ಎಂದು ಸಿಪಿಆರ್ ಯೋಜನೆ ತಂಡದ ಟಿ.ಆರ್.ಧನುಷ್ 'ಪ್ರಜಾವಾಣಿ'ಗೆ ತಿಳಿಸಿದರು.

'ವಿವಿಧ ಸಂಘ ಸಂಸ್ಥೆಗಳ ಆರ್ಥಿಕ ನೆರವಿನಿಂದ ಒಟ್ಟು ₹85 ಲಕ್ಷ ವೆಚ್ಚದಲ್ಲಿ ಈ ಯೋಜನೆ ಪೂರ್ಣಗೊಂಡಿದೆ. ಮಳೆಗಾಲದಲ್ಲಿ ಉದ್ಯಾನದಲ್ಲಿ ಹರಿಯುವ ನೀರನ್ನು ಬಾವಿಗಳಲ್ಲಿ ಸಂಗ್ರಹಿಸುವ ವ್ಯವಸ್ಥೆ ಮಾಡಿದ್ದೇವೆ. ಈ ಗುಂಡಿಗಳು ಹಾಗೂ ಬಾವಿಗಳಿಂದ ಅಪಾರ ಪ್ರಮಾಣದ ನೀರು ಉದ್ಯಾನಕ್ಕೆ ಸಿಗುತ್ತಿದೆ. ಈ ನೀರನ್ನು ಉದ್ಯಾನದ ಗಿಡಗಳಿಗೆ ನೀರುಣಿಸವುದೂ ಸೇರಿದಂತೆ ವಿವಿಧ ಉದ್ದೇಶಗಳಿಗಾಗಿ ಬಳಸಿಕೊಳ್ಳಲಾಗುತ್ತಿದೆ' ಎಂದು ವಿವರಿಸಿದರು.

'ಮಳೆ ನೀರು ಸಂಗ್ರಹಕ್ಕಾಗಿ ಬೆಂಗಳೂರಿನಾದ್ಯಂತ 10 ಲಕ್ಷ ಬಾವಿಗಳನ್ನು ನಿರ್ಮಿಸುವ 'ಮಿಲಿಯನ್ ಬಾವಿ ಅಭಿಯಾನ' ಹಮ್ಮಿಕೊಳ್ಳಲಾಗಿದೆ. ಈ ಅಭಿಯಾನದಡಿ ಈಗಾಗಲೇ ಅಲ್ಲಲ್ಲಿ ಬಾವಿಗಳನ್ನು ನಿರ್ಮಾಣ ಪ್ರಗತಿಯಲ್ಲಿದೆ' ಎಂದು ಮಾಹಿತಿ ನೀಡಿದರು.

ನಗರದ ಬೃಹತ್ ಕಟ್ಟಡಗಳಲ್ಲಿ ಮಳೆನೀರು ಬಳಕೆ ಕಡ್ಡಾಯ

ಹೊಸ ಕಾಯ್ದೆಗೆ ಸಂಪುಟ ಸಭೆ ನಿರ್ಧಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿನ ಬೃಹತ್ ಕಟ್ಟಡಗಳಲ್ಲಿ ಮಳೆ ನೀರು ಸಂಗ್ರಹಿಸಿ, ಬಳಸುವುದನ್ನು ಕಡ್ಡಾಯಗೊಳಿಸಲು ಬೆಂಗಳೂರು ಜಲಮಂಡಳಿ ಕಾಯ್ದೆಗೆ ತಿದ್ದುಪಡಿ ತರುವ ಪ್ರಸ್ತಾವಕ್ಕೆ ಸಚಿವ ಸಂಪುಟ ಸೋಮವಾರ ಒಪ್ಪಿಗೆ ನೀಡಿದೆ.

'10,000 ಚದರ ಅಡಿಗಿಂತ ಹೆಚ್ಚು ವಿಸ್ತೀರ್ಣದ ಕಟ್ಟಡಗಳಲ್ಲಿ ನೀರು ಪೂರೈಕೆಗೆ ಎರಡು ಕೊಳವೆ ಮಾರ್ಗ ಅಳವಡಿಸಿಕೊಂಡು, ಅಲ್ಲಿ ಸಂಗ್ರಹಿಸುವ ಮಳೆ ನೀರನ್ನು ಒಂದು ಕೊಳವೆಯ ಮೂಲಕ ಬಳಕೆ ಮಾಡುವುದನ್ನು ಕಡ್ಡಾಯಗೊಳಿಸುವ ಪ್ರಸ್ತಾವ ತಿದ್ದುಪಡಿಯಲ್ಲಿದೆ' ಎಂದು ಮೂಲಗಳು ತಿಳಿಸಿವೆ.

ಈಗಾಗಲೇ ನಗರದಲ್ಲಿ ಎಲ್ಲ ಕಟ್ಟಡಗಳಲ್ಲೂ ಮಳೆ ನೀರು ಸಂಗ್ರಹ ವ್ಯವಸ್ಥೆ ಅಳವಡಿಸುವುದು ಕಡ್ಡಾಯವಿದೆ. ಅದರೆ, ಹೆಚ್ಚಿನವರು ಸಂಗ್ರಹವಾದ ನೀರನ್ನು ಬಳಕೆ ಮಾಡುವುದಿಲ್ಲ. ಬದಲಿಗೆ ತ್ಯಾಜ್ಯ ನೀರಿನ ಜತೆಗೆ ನೇರವಾಗಿ ಚರಂಡಿಗೆ ಹರಿಸುತ್ತಿದ್ದಾರೆ. ಇದನ್ನು ತಡೆಯಲು ಈ ತಿದ್ದುಪಡಿ ತರಲಾಗುತ್ತಿದೆ.

'ಹೆಚ್ಚಿನವರು ತಮ್ಮ ಕಟ್ಟಡಗಳಲ್ಲಿ ಸಂಗ್ರಹಿಸಿದ ಶುದ್ಧವಾದ ಮಳೆ ನೀರನ್ನು ಬಳಕೆ ಮಾಡುವುದಿಲ್ಲ. ಬದಲಿಗೆ ಚರಂಡಿಗೆ ಹರಿಸುತ್ತಾರೆ. ಇದರಿಂದ ತ್ಯಾಜ್ಯ ನೀರು ಶುದ್ಧೀಕರಣಕ್ಕಾಗಿ ಮಾಡುವ ವೆಚ್ಚವೂ ಹೆಚ್ಚಾಗುತ್ತಿದೆ. ಅದನ್ನು ತಪ್ಪಿಸಲು ಮಳೆ ನೀರಿನ ಬಳಕೆ ಕಡ್ಡಾಯಗೊಳಿಸಲಾಗುತ್ತಿದೆ' ಎಂದು ಜಲಮಂಡಳಿ ಅಧ್ಯಕ್ಷ ಎನ್. ಜಯರಾಂ ತಿಳಿಸಿದರು.

'ಪ್ರಸ್ತಾವಿತ ತಿದ್ದುಪಡಿ ಪ್ರಕಾರ, ಎಲ್ಲ ಕಟ್ಟಡಗಳಲ್ಲೂ ಮಳೆ ನೀರು ಬಳಕೆಗೆ ಪ್ರತ್ಯೇಕ ಕೊಳವೆ ಇರಬೇಕು. ಅದರ ಮೂಲಕ ಮಳೆ ನೀರನ್ನು ಶೌಚಾಲಯ, ಉದ್ಯಾನಗಳಿಗೆ ಪೂರೈಕೆ ಮಾಡಬೇಕು. ತಿದ್ದುಪಡಿ ಮಸೂದೆಗೆ ವಿಧಾನ ಮಂಡಲದ ಅನುಮೋದನೆ ದೊರೆತ ಬಳಿಕ ಈ ವ್ಯವಸ್ಥೆ ಜಾರಿಗೆ ಬರಲಿದೆ' ಎಂದರು.



ನಂಜುಂಡಸ್ವಾಮಿ ಅವರ ಮನೆಗೆ ಭೇಟಿ ನೀಡಿದ್ದ ಯುದ್ಧವೀರ ಸಿಂಗ್ ಮತ್ತು ರಾಕೇಶ್ ಟಿಕಾಯತ್. ಚುಕ್ಕಿ ನಂಜುಂಡಸ್ವಾಮಿ ಇದ್ದರು

ಪ್ರೊ.ಎಂಡಿಎನ್ ನೆನೆದು ಭಾವುಕರಾದ ಟಿಕಾಯತ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರೊ. ಎಂ.ಡಿ. ನಂಜುಂಡಸ್ವಾಮಿ ಅವರು ವಾಸವಿದ್ದ ಮನೆ ಚಳವಳಿಯ ಮ್ಯೂಸಿಯಂ ಇದ್ದಂತೆ' ಎಂದು ರಾಷ್ಟ್ರೀಯ ಸಂಯುಕ್ತ ಕಿಸಾನ್ ಮೋರ್ಚಾ ಅಧ್ಯಕ್ಷ ರಾಕೇಶ್ ಟಿಕಾಯತ್ ಭಾವುಕರಾದರು.

ನಂಜುಂಡಸ್ವಾಮಿ ಅವರ ಮನೆಗೆ ಬಂದ ಟಿಕಾಯತ್ ಮತ್ತು ಮೋರ್ಚಾದ ಕಾರ್ಯದರ್ಶಿ ಯುದ್ಧವೀರ ಸಿಂಗ್ ಅವರನ್ನು ಸಾಮೂಹಿಕ ನಾಯಕತ್ವ ರೈತ ಸಂಘಟನೆಯ ಚುಕ್ಕಿ ನಂಜುಂಡಸ್ವಾಮಿ ಬರ ಮಾಡಿಕೊಂಡರು.

ಒಂದೆರಡು ನಿಮಿಷ ಕುಳಿತಿದ್ದ ಟಿಕಾಯತ್ ಅವರು, ನಂಜುಂಡಸ್ವಾಮಿ ಅವರು ಅಧ್ಯಯನ ಮತ್ತು ವಿಶ್ರಾಂತಿಗೆ ಬಳಸುತ್ತಿದ್ದ ಕೋಣೆಗೆ ಹೋದರು. ನಂಜುಂಡಸ್ವಾಮಿ ಬದುಕಿದ್ದಾಗ ಮಲಗುತ್ತಿದ್ದ ಮಂಚ, ಕುಳಿತುಕೊಳ್ಳುತ್ತಿದ್ದ ಕುರ್ಚಿಯಲ್ಲಿ ಕುಳಿತು ಭಾವುಕರಾದರು.

'ಪ್ರೊಫೆಸರ್ ಮನೆಗೆ ಬಂದಾಗ ಅವರ ಪುಸ್ತಕಗಳು, ಇಲ್ಲಿರುವ ವಸ್ತುಗಳನ್ನು ನೋಡಿದರೆ ಅದೊಂದು ಚಳವಳಿಯ ಮ್ಯೂಸಿಯಂ ರೀತಿ ಕಾಣಿಸುತ್ತದೆ. ಅವರ ವಿಚಾರಧಾರೆಗಳು ನೆನಪಿಗೆ ಬರುತ್ತವೆ. ಪ್ರೊಫೆಸರ್ ಮತ್ತು ನಮ್ಮ ಕುಟುಂಬದ ಸಂಬಂಧ ಕೇವಲ ಹೋರಾಟಕ್ಕೆ ಸೀಮಿತ ಆಗಿರಲಿಲ್ಲ. ಮೂರ್ನಾಲ್ಕು ದಶಕ ಒಂದೇ ಕುಟುಂಬದಂತೆ ಇದ್ದೆವು. ಇಲ್ಲಿಗೆ ಬಂದರೆ ನಮ್ಮ ಮನೆಗೆ ಬಂದ ಅನುಭವವಾಗುತ್ತದೆ' ಎಂದರು.

'ರೈತರ ವಿಷಯ, ಅಂತರರಾಷ್ಟ್ರೀಯ ಕೃಷಿ ಕಾನೂನುಗಳು, 1993ರಲ್ಲಿ ಆದ ಗ್ಯಾಟ್ ಒಪ್ಪಂದದ ಬಗ್ಗೆ ಅವರು ನಮಗೆಲ್ಲಾ ಅರ್ಥ ಮಾಡಿಸುತ್ತಿದ್ದುದು ನೆನಪಿಗೆ ಬರುತ್ತಿದೆ. ನನ್ನ ತಂದೆ ಮಹೇಂದ್ರ ಸಿಂಗ್ ಟಿಕಾಯತ್ ಅವರಿಗೆ ಇಂಗ್ಲಿಷ್ ಮಾತನಾಡಲು ಬರುತ್ತಿರಲಿಲ್ಲ. ಪ್ರೊಫೆಸರ್ ಅವರಿಗೆ ಹಿಂದಿ ಬರುತ್ತಿರಲಿಲ್ಲ. ಆದರೂ ಇಬ್ಬರು ಇಡೀ ದೇಶ ಸುತ್ತಿ ರೈತ ಚಳವಳಿ ಕಟ್ಟಿದರು. ಚಳವಳಿಗೆ ಭಾಷೆ ಅಡ್ಡಿಯಾಗುವುದಿಲ್ಲ ಎಂಬುದಕ್ಕೆ ಅವರೇ ಸಾಕ್ಷಿ. ನಂಜುಂಡಸ್ವಾಮಿ ಮಕ್ಕಳು ಕೂಡ ಇಡೀ ದೇಶ ಸುತ್ತಿ ರೈತರನ್ನು ಸಂಘಟಿಸಬೇಕು' ಎಂದು ಹೇಳಿದರು.

'ಉತ್ತರ ಮತ್ತು ದಕ್ಷಿಣ ಭಾರತದ ಯುವ ಚಳವಳಿಗಾರರನ್ನು ಸೇರಿಸಿ ಅಮೃತಭೂಮಿಯಲ್ಲಿ ಹೊಸ ಸಮಸ್ಯೆ–ಸವಾಲುಗಳ ಬಗ್ಗೆ ಅಧ್ಯಯನ ಶಿಬಿರಗಳನ್ನು ಏರ್ಪಡಿಸಬೇಕು. ಇಂತಹ ಅಧ್ಯಯನ ಕೇಂದ್ರದ ಅಗತ್ಯದ ಬಗ್ಗೆ ಪ್ರೊಫೆಸರ್ ಅವರಿಗೆ 25 ವರ್ಷಗಳ ಹಿಂದೆಯೇ ತಿಳಿದಿತ್ತು. ಹೀಗಾಗಿಯೇ ಅಮೃತಭೂಮಿ ಸ್ಥಾಪಿಸಿದರು' ಎಂದರು.

ಬಿಬಿಎಂಪಿ ಬಜೆಟ್– ಇನ್ನೂ ನಿಗದಿಯಾಗಿಲ್ಲ ದಿನಾಂಕ

ಬಿಬಿಎಂಪಿ ಕಾಯ್ದೆಯನ್ವಯ ಹೊಸ ಆರ್ಥಿಕ ವರ್ಷದ ಆರಂಭಕ್ಕೆ ಮೂರು ವಾರ ಮುನ್ನ ಬಜೆಟ್ ಮಂಡನೆ ಕಡ್ಡಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿಯ 2021–21ನೇ ಆರ್ಥಿಕ ವರ್ಷ ಆರಂಭವಾಗಲು ಒಂದು ವಾರ ಮಾತ್ರ ಬಾಕಿ ಉಳಿದಿದೆ. ಆದರೆ, ಮುಂದಿನ ಆರ್ಥಿಕ ವರ್ಷದ ಬಜೆಟ್ ಮಂಡನೆಗೆ ಇನ್ನೂ ದಿನಾಂಕ ನಿಗದಿಯಾಗಿಲ್ಲ.

'ಬಿಬಿಎಂಪಿಗೆ 2021–22ನೇ ಸಾಲಿನ ಬಜೆಟನ್ನು ವಾರದಲ್ಲಿ ಮಂಡಿಸಲಿದ್ದೇವೆ. ಕೊನೆಯ ಹಂತದ ಸಲಹೆ–ಸೂಚನೆಗಳನ್ನು ಪಡೆಯುವ ಕಾರ್ಯ ಪ್ರಗತಿಯಲ್ಲಿದೆ. ಬಜೆಟ್ ಮಂಡನೆ ದಿನಾಂಕ ಇನ್ನೂ ಅಂತಿಮಗೊಂಡಿಲ್ಲ. ಶೀಘ್ರವೇ ದಿನ ನಿಗದಿಪಡಿಸುತ್ತೇವೆ' ಎಂದು ಆಡಳಿತಾಧಿಕಾರಿ ಗೌರವ್ ಗುಪ್ತ 'ಪ್ರಜಾವಾಣಿ'ಗೆ ತಿಳಿಸಿದರು.

ಪಾಲಿಕೆಯಲ್ಲಿ ಪ್ರಸ್ತುತ 2020ರ ಬಿಬಿಎಂಪಿ ಕಾಯ್ದೆಯನ್ವಯ ಆಡಳಿತ ನಡೆಯುತ್ತಿದೆ. ಈ ಕಾಯ್ದೆಯ ಸೆಕ್ಷನ್ 196ರ ಪ್ರಕಾರ ಪಾಲಿಕೆಯ ಬಜೆಟ್ ಅಂದಾಜು ಯಾವ ವರ್ಷಕ್ಕೆ ಸಂಬಂಧಿಸಿದೆಯೋ ಆ ವರ್ಷದ ಆರಂಭಕ್ಕೆ ಕನಿಷ್ಠ ಮೂರು ವಾರಗಳಿಗೆ ಮುಂಚೆ ಅದನ್ನು ಅಂಗೀಕರಿಸತಕ್ಕದ್ದು. ಈ ಪ್ರಕಾರ ಮಾ. 10ರ ಒಳಗೆ ಬಜೆಟ್ ಅಂಗೀಕಾರಗೊಳ್ಳಬೇಕಿತ್ತು. ಈ ಗಡುವು ಮೀರಿ ಎರಡು ವಾರಗಳು ಉರುಳಿವೆ. ಮುಂದಿನ ಆರ್ಥಿಕ ವರ್ಷದ ಬಜೆಟ್ ರೂಪರೇಷೆಗಳ ಚರ್ಚೆ ನಡೆದಿದೆಯಾದರೂ, ಇನ್ನೂ ಅದಕ್ಕೆ ಅಂತಿಮ ರೂಪ ನೀಡಿಲ್ಲ. ಮಂಡನೆಯ ದಿನಾಂಕವೂ ಅಂತಿಮಗೊಂಡಿಲ್ಲ.

ಬಿಬಿಎಂಪಿ ಕಾಯ್ದೆಯ ಸೆಕ್ಷನ್ 194ರ ಪ್ರಕಾರ ತೆರಿಗೆ, ಹಣಕಾಸು ಮತ್ತು ಅಪೀಲುಗಳ ಸ್ಥಾಯಿ ಸಮಿತಿ ಜ.15ರಂದು ಅಥವಾ ನಂತರ ಆದಷ್ಟು ಬೇಗ ಮುಖ್ಯ ಆಯುಕ್ತರು ಬಜೆಟ್‌ಗೆ ಸಂಬಂಧಿಸಿದಂತೆ ಕಳುಹಿಸುವ ಅಂದಾಜುಗಳನ್ನು ಮತ್ತು ಪ್ರಸ್ತಾವನೆಗಳನ್ನು ಪರ್ಯಾವಲೋಚನೆ ಮಾಡಬೇಕು. ಇತರ ಸ್ಥಾಯಿ ಸಮಿತಿಗಳ ಪ್ರಸ್ತಾವನೆಗಳೇನಾದರೂ ಇದ್ದರೆ ಅವುಗಳನ್ನು ಪಡೆದುಕೊಂಡು ಮುಖ್ಯ ಆಯುಕ್ತರಿಂದ ಇದರ ಕುರಿತ ವಿವರವಾದ ಮಾಹಿತಿ ಪಡೆದು ಬಜೆಟ್ ಅಂದಾಜನ್ನು ಸಿದ್ಧಪಡಿಸಬೇಕು.

ಬಿಬಿಎಂಪಿಯಲ್ಲಿ ಚುನಾಯಿತ ಕೌನ್ಸಿಲ್ ಅಸ್ತಿತ್ವದಲ್ಲಿಲ್ಲದ ಕಾರಣ ಬಜೆಟ್ ರೂಪಿಸುವ ಹೊಣೆಗಳೆಲ್ಲವೂ ಆಡಳಿತಾಧಿಕಾರಿಯವರದು. ಅವರು ಮೇಯರ್ ಹಾಗೂ ಸ್ಥಾಯಿ ಸಮಿತಿಗಳ ಅಧ್ಯಕ್ಷರ ಅಧಿಕಾರಗಳೆಲ್ಲವೂ ಆಡಳಿತಾಧಿಕಾರಿ ಹೊಂದಿರುತ್ತಾರೆ.

ವಲಯವಾರು ಬಜೆಟ್: ವಾರ್ಡ್ ಸಮಿತಿಗಳಿಂದ ಬೇಡಿಕೆ ಪಟ್ಟಿ ಪಡೆದು ಬಿಬಿಎಂಪಿ ಬಜೆಟನ್ನು ವಲಯವಾರು ಸಿದ್ಧಗೊಳಿಸಬೇಕು ಎನ್ನುತ್ತದೆ ಹೊಸ ಕಾಯ್ದೆ. ಅಸ್ತಿತ್ವದಲ್ಲಿರುವ ಯೋಜನೆಗಳನ್ನು ಕಾರ್ಯಗತಗೊಳಿಸಲು ಅಗತ್ಯವಾದ ಮಾನವ ಸಂಪನ್ಮೂಲ ಮತ್ತು ಇತರ ವೆಚ್ಚಗಳನ್ನು ಪ್ರತಿ ವಲಯ ಸಮಿತಿಯು ಸಲ್ಲಿಸತಕ್ಕದ್ದು. ಚುನಾಯಿತ ಕೌನ್ಸಿಲ್ ಇಲ್ಲದ ಕಾರಣ ವಲಯ ಸಮಿತಿಗಳು ಅಸ್ತಿತ್ವದಲ್ಲಿಲ್ಲ. ಆದರೂ ಪ್ರತಿ ವಲಯದ ಜಂಟಿ ಆಯುಕ್ತರಿಂದ ವರದಿ ತರಿಸಿಕೊಂಡು ಬಜೆಟ್ ಸಿದ್ಧಗೊಳಿಸಲಾಗುತ್ತಿದೆ.

ಆಯಾ ವಾರ್ಡ್‌ನ ನೋಡಲ್ ಅಧಿಕಾರಿಗಳ ನೇತೃತ್ವದಲ್ಲಿ ನಡೆಯುವ ವಾರ್ಡ್ ಸಭೆಗಳಲ್ಲಿ, ಅಭಿವೃದ್ಧಿ ಕಾರ್ಯಗಳಿಗೆ ಸಂಬಂಧಿಸಿದ ಬೇಡಿಕೆಗಳ ಬಗ್ಗೆ ಚರ್ಚಿಸಿ ಪ್ರಸ್ತಾವನೆ ಕಳುಹಿಸುವಂತೆ ಆಯುಕ್ತರು ಸೂಚಿಸಿದ್ದರು. ಕೆಲವು ವಾರ್ಡ್ ಸಭೆಗಳಲ್ಲಿ ಈ ಬಗ್ಗೆ ಚರ್ಚೆ ನಡೆದಿದೆ. ಆದರೆ, ಕೆಲವು ವಾರ್ಡ್‌ಗಳಲ್ಲಿ ವಾರ್ಡ್ ಸಭೆಗಳೇ ಸಮರ್ಪಕವಾಗಿ ನಡೆದಿಲ್ಲ.

ಬಜೆಟ್ ಗಾತ್ರ ₹ 7500 ಕೋಟಿ?

ಈ ಬಾರಿ ವಾಸ್ತವ ಬಜೆಟ್ ಸಿದ್ಧಪಡಿಸಲಾಗಿದೆ. ವರಮಾನ ನಿರೀಕ್ಷಿಸುವಾಗಲೂ ವಾಸ್ತವದ ಅಂಕಿ ಅಂಶಗಳನ್ನು ಆಧರಿಸಿಯೇ ಲೆಕ್ಕಾಚಾರ ಹಾಕಲಾಗಿದೆ. ಹಾಗಾಗಿ ಬಜೆಟ್ ಗಾತ್ರ ₹ 7500 ಕೋಟಿ ಆಸುಪಾಸಿನಲ್ಲಿ ಇರಲಿದೆ ಎನ್ನುತ್ತವೆ ಬಿಬಿಎಂಪಿ ಮೂಲಗಳು.

'ಆಸ್ತಿ ತೆರಿಗೆ, ಜಾಹೀರಾತು, ಸ್ವಂತ ಆಸ್ತಿಗಳಿಂದ ಬರುವ ವರಮಾನ ಹಾಗೂ ಇತರ ಮೂಲಗಳಿಂದ ಬಿಬಿಎಂಪಿಯು ಪ್ರತಿ ವರ್ಷ ಹೆಚ್ಚೆಂದರೆ ₹ 3500 ಕೋಟಿಗಳಷ್ಟು ಆದಾಯವನ್ನು ಗಳಿಸುತ್ತಿದೆ. ರಾಜ್ಯ ಸರ್ಕಾರದ 2021–22ನೇ ಸಾಲಿನ ಬಜೆಟ್‌ನಲ್ಲಿ ಬಿಬಿಎಂಪಿಗೆ ₹ 3,300 ಕೋಟಿ ಅನುದಾನ ಮೀಸಲಿಟ್ಟಿದೆ. ಕೇಂದ್ರ ಸರ್ಕಾರದ ಬರುವ ಅನುದಾನವೂ ಸೇರಿ ಎರಡೂ ಸರ್ಕಾರಗಳಿಂದ ಒಟ್ಟು ₹ 4000 ಕೋಟಿಗಳಷ್ಟು ಅನುದಾನ ನಿರೀಕ್ಷಿಸಲಾಗಿದೆ. ಹಾಗಾಗಿ, ಈ ಬಾರಿ ₹7,500 ಕೋಟಿ ಗಾತ್ರದ ಬಜೆಟ್ ಮಂಡನೆಗೆ ಸಿದ್ಧತೆ ನಡೆದಿದೆ' ಎಂದು ಹೆಸರು ಬಹಿರಂಗಪಡಿಸಲು ಬಯಸದ ಅಧಿಕಾರಿಯೊಬ್ಬರು ತಿಳಿಸಿದರು.

ಇಂದಿರಾ ಕ್ಯಾಂಟೀನ್‌ಗೆ ಅನುದಾನ?

ಈ ಬಾರಿಯೂ ರಾಜ್ಯ ಸರ್ಕಾರದ ಬಜೆಟ್‌ನಲ್ಲಿ ಇಂದಿರಾ ಕ್ಯಾಂಟೀನ್‌ಗಳ ನಿರ್ವಹಣೆಗೆ ಪ್ರತ್ಯೇಕ ಅನುದಾನ ಕಾಯ್ದಿರಿಸಿಲ್ಲ. ಹಾಗಾಗಿ ಬಿಬಿಎಂಪಿ ಬಜೆಟ್‌ನಲ್ಲೇ ಇದಕ್ಕೆ ಅನುದಾನ ಕಾಯ್ದಿರಿಸಲಾಗುತ್ತದೆ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ನಗರದಲ್ಲಿರುವ ಇಂದಿರಾ ಕ್ಯಾಂಟೀನ್‌ಗಳ ನಿರ್ವಹಣೆಗೆ ಪ್ರತಿವರ್ಷ ₹ 70 ಕೋಟಿಯಿಂದ ₹ 75 ಕೋಟಿಗಳಷ್ಟು ವೆಚ್ಚವಾಗುತ್ತದೆ.

ಗ್ರಂಥಾಲಯ ಸೆಸ್ ಬಿಬಿಎಂಪಿ ಶಾಲೆಗಳಿಗೂ ಬಳಕೆ

ಬಿಬಿಎಂಪಿಯು ಆಸ್ತಿ ತೆರಿಗೆ ಜೊತೆ ಶೇ 6ರಷ್ಟು ಗ್ರಂಥಾಲಯ ಸೆಸ್ ಸಂಗ್ರಹಿಸುತ್ತದೆ. ಸುಮಾರು ₹ 250 ಕೋಟಿಯಿಂದ ₹ 300 ಕೋಟಿ ಇದರಿಂದ ಸಂಗ್ರಹವಾಗುತ್ತದೆ.

ಇಷ್ಟು ಬೇಡಿಕೆ ನಗರದ ಗ್ರಂಥಾಲಯಗಳಿಂದ ಇಲ್ಲ. ಹಾಗಾಗಿ ಬಿಬಿಎಂಪಿ ಶಾಲೆಗಳ ಅಭಿವೃದ್ಧಿಗೂ ಈ ಮೊತ್ತವನ್ನು ಬಳಸಲು ಅವಕಾಶ ಕಲ್ಪಿಸುವಂತೆ ಬಜೆಟ್‌ನಲ್ಲಿ ಮಾರ್ಪಾಡು ಮಾಡಿಕೊಳ್ಳಲು ಸಿದ್ಧತೆ ನಡೆಸಿದೆ ಎಂದು ಮೂಲಗಳು ತಿಳಿಸಿವೆ.

ಗಾಂಧಿ ಶಾಂತಿ ಪ್ರತಿಷ್ಠಾನ ಅಧ್ಯಕ್ಷರಾಗಿ ಜೇರಿಗೆ ಲೋಕೇಶ್ ಪುನರಾಯ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗಾಂಧಿವಾದಿ ಜೇರಿಗೆ ಲೋಕೇಶ್ ಅವರು ಬೆಂಗಳೂರು ಗಾಂಧಿ ಶಾಂತಿ ಪ್ರತಿಷ್ಠಾನದ ಅಧ್ಯಕ್ಷರಾಗಿ ಅವಿರೋಧವಾಗಿ ಪುನರಾಯ್ಕೆಯಾಗಿದ್ದಾರೆ.

ಕರ್ನಾಟಕ ಸಂಸ್ಕೃತ ವಿಶ್ವ ವಿದ್ಯಾಲಯದ ವಿಶ್ರಾಂತ ಕುಲಪತಿ ಮಲ್ಲೇಪುರಂ ಜಿ.ವೆಂಕಟೇಶ ಗೌರವ ಉಪಾಧ್ಯಕ್ಷ, ಕವಿ ಸತ್ಯಮಂಗಲ



ಮಹಾದೇವ ಗೌರವ ಕಾರ್ಯದರ್ಶಿ ಹಾಗೂ ಎಸ್. ರಾಮಲಿಂಗೇಶ್ವರ ಗೌರವ ಖಜಾಂಚಿಯಾಗಿ ಅವಿರೋಧ ಆಯ್ಕೆಯಾಗಿದ್ದಾರೆ.

ವೂಡೇ ಪಿ.ಕೃಷ್ಣ ಮತ್ತು ಚಂದ್ರಿಕಾ ಪುರಾಣಿಕ್ ಕಾರ್ಯಕಾರಿ ಸಮಿತಿಯ ಸದಸ್ಯರಾಗಿರುತ್ತಾರೆ ಎಂದು ಪ್ರಕಟಣೆ ತಿಳಿಸಿದೆ.



ಸನ್ಮಾನ... ಮಂಜುನಾಥ ಟ್ರಸ್ಟ್ ಹಾಗೂ ರುಡ್ ಸೆಟ್ ಸಂಸ್ಥೆಗಳ ಸಹಯೋಗದಲ್ಲಿ ಮಹಾಲಕ್ಷ್ಮೀ ಬಡಾವಣೆಯ ಕುರುಬರಹಳ್ಳಿಯಲ್ಲಿ ಸೋಮವಾರ ಆಯೋಜಿಸಿದ್ದ 'ಮಹಿಳಾ ಉದ್ಯಮಶೀಲ ಅಭಿವೃದ್ಧಿ ಜಾಗೃತಿ ಶಿಬಿರ'ದಲ್ಲಿ ಹೇಮಲತಾ ಗೋಪಾಲಯ್ಯ ಸೇರಿ ಇತರರನ್ನು ಸನ್ಮಾನಿಸಲಾಯಿತು. ಮಂಜುನಾಥ್ ಟ್ರಸ್ಟ್ ಅಧ್ಯಕ್ಷ ಅವೀನ್ ಆರಾಧ್ಯ, ರುದ್ರ ಮುನಿ, ಕುಮಾರ್, ಬೋರೇಗೌಡ ಹಾಗೂ ಇತರರು ಇದ್ದರು.



ಮುಖ್ಯಮಂತ್ರಿ ಅವರನ್ನು ಭೇಟಿಯಾದ ಶಾಸಕರು ಅಭಿವೃದ್ಧಿ ವಿಚಾರಗಳ ಬಗ್ಗೆ ಚರ್ಚಿಸಿದರು.

ಯತ್ನಾಳ್ ವಿರುದ್ಧ ಕ್ರಮಕ್ಕೆ ಬಿಜೆಪಿ ಶಾಸಕರ ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ವಿರುದ್ಧ ಹೇಳಿಕೆ ನೀಡುತ್ತಿರುವ ಶಾಸಕ ಬಸನಗೌಡ ಪಾಟೀಲ ಯತ್ನಾಳ್ ವಿರುದ್ಧ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಅವರಿಗೆ ದೂರು ನೀಡಲು 30 ಕ್ಕೂ ಹೆಚ್ಚು ಶಾಸಕರು ನಿರ್ಧರಿಸಿದ್ದಾರೆ.

ಸೋಮವಾರ ರಾತ್ರಿ ಮುಖ್ಯಮಂತ್ರಿಯವರನ್ನು ಭೇಟಿ ಮಾಡಿದ ಈ ಶಾಸಕರು ಯತ್ನಾಳ್ ವರ್ತನೆ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. 'ರಾಜ್ಯ ಬಿಜೆಪಿ ಉಸ್ತುವಾರಿ ಅರುಣ್ ಸಿಂಗ್ ಅವರು ಎಚ್ಚರಿಕೆ ನೀಡಿದ್ದರೂ ಲೆಕ್ಕಿಸದೇ ವಾಗ್ದಾಳಿ ಮುಂದುವರಿಸಿದ್ದಾರೆ. ಇದನ್ನು ಸಹಿಸಲು ಸಾಧ್ಯವಿಲ್ಲ. ಪರಿಸ್ಥಿತಿ ಸುಧಾರಿಸದೇ ಇದ್ದರೆ ವರಿಷ್ಠರಿಗೆ ದೂರು ನೀಡುತ್ತೇವೆ' ಎಂದೂ ಹೇಳಿದ್ದಾರೆ.

ದಿನಕ್ಕೊಂದು ಹೇಳಿಕೆಗಳನ್ನು ನೀಡಿ ಮುಖ್ಯಮಂತ್ರಿಯವರಿಗೆ ಮುಜುಗರ ತರುತ್ತಿದ್ದಾರೆ. ಇದು ವಿರೋಧಿಗಳಿಗೆ ಅಸ್ತ್ರವಾಗಿದೆ. ಇದರಿಂದ ವಿಧಾನಸಭೆಯಲ್ಲೂ ಸರ್ಕಾರ ಇಕ್ಕಟ್ಟಿಗೆ ಸಿಲುಕುವಂತಾಗಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು ಎಂದು ಮೂಲಗಳು ತಿಳಿಸಿವೆ.

ಕೆಲವು ಸಚಿವರ ಕಾರ್ಯವೈಖರಿಯ ಬಗ್ಗೆಯೂ ಶಾಸಕರು ಮುಖ್ಯಮಂತ್ರಿಯವರಿಗೆ ದೂರು ನೀಡಿದರು. ತಮ್ಮ ಕ್ಷೇತ್ರಕ್ಕೆ ಸಂಬಂಧಿಸಿದ ಕೆಲಸಗಳನ್ನು ಮಾಡಿಕೊಡುತ್ತಿಲ್ಲ. ಪಕ್ಷದ ಶಾಸಕರ ಬಗ್ಗೆ ನಿರ್ಲಕ್ಷ್ಯ ತಾಳಿದ್ದಾರೆ. ವಿಶೇಷವಾಗಿ ಗ್ರಾಮೀಣಾಭಿವೃದ್ಧಿ ಇಲಾಖೆಯ ಕೆಲಸಗಳು ಆಗುತ್ತಿಲ್ಲ ಎಂದು ದೂರಿದರು. ಈ ಬಗ್ಗೆ ಸಚಿವರು ಮತ್ತು ಶಾಸಕರ ಸಭೆಯನ್ನು ಕರೆದು ಸಮಸ್ಯೆ ಬಗೆಹರಿಸುವುದಾಗಿ ಭರವಸೆ ನೀಡಿದರು.

ಶಾಸಕರಾದ ಎಂ.ಪಿ. ರೇಣುಕಾಚಾರ್ಯ, ಬೆಳ್ಳಿಪ್ರಕಾಶ್, ಮಾಡಾಳ್ ವಿರೂಪಾಕ್ಷಪ್ಪ, ಪೂರ್ಣಿಮಾ ಶ್ರೀನಿವಾಸ್, ಆರಗ ಜ್ಞಾನೇಂದ್ರ, ಹರತಾಳ ಹಾಲಪ್ಪ, ಎಂ.ಪಿ.ಕುಮಾರಸ್ವಾಮಿ, ಲಾಲಾಜಿ ಮೆಂಡನ್ ಮುಂತಾದವರು ಇದ್ದರೆಂದು ಮೂಲಗಳು ತಿಳಿಸಿವೆ.

ನರ್ಸಿಂಗ್ ಪೂರ್ಣಗೊಳಿಸಿದ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ

ಪ್ರಜಾವಾಣಿ ವಾರ್ತೆ

ಯಲಹಂಕ: ಮಾನವೀಯ ಮೌಲ್ಯಗಳ ಜೊತೆಗೆ ತಾಳ್ಮೆಯ ಗುಣ ಮೈಗೂಡಿಸಿಕೊಂಡು, ರೋಗಿಗಳಿಗೆ ಉತ್ತಮ ಆರೋಗ್ಯಸೇವೆ ಒದಗಿಸುವ ಮೂಲಕ ಸಮಾಜದಲ್ಲಿ ಒಳ್ಳೆಯ ದಾದಿಯರಾಗಿ ಹೊರಹೊಮ್ಮಬೇಕು ಎಂದು ಜಿಲ್ಲಾ ಪಂಚಾಯಿತಿ ಮಾಜಿ ಉಪಾಧ್ಯಕ್ಷ ಕೆ.ಅಶೋಕನ್ ಹೇಳಿದರು.

ಅಂತರರಾಷ್ಟ್ರೀಯ ವಿಮಾನನಿಲ್ದಾಣ ರಸ್ತೆಯ ಶಕ್ತಿ ನಗರದಲ್ಲಿರುವ ಆಕ್ಸ್‌ಫರ್ಡ್ ಸಮೂಹ ಶಿಕ್ಷಣಸಂಸ್ಥೆಯಲ್ಲಿ ನರ್ಸಿಂಗ್ ಶಿಕ್ಷಣ ಪೂರ್ಣಗೊಳಿಸಿದ ವಿದ್ಯಾರ್ಥಿಗಳಿಗಾಗಿ ಆಯೋಜಿಸಿದ್ದ ಬೀಳ್ಕೊಡುಗೆ ಮತ್ತು ಪ್ರತಿಜ್ಞಾವಿಧಿ ಸ್ವೀಕಾರ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, 'ರೋಗಿಗಳ ಆರೈಕೆಯಲ್ಲಿ ದಾದಿಯರ ಪಾತ್ರ ಮಹತ್ವದ್ದಾಗಿದೆ. ಸರ್ಕಾರ ಇವರ ಸೇವೆಯನ್ನು ಪರಿಗಣಿಸಿ, ಅಗತ್ಯ ಸೌಲಭ್ಯಗಳನ್ನು ಕಲ್ಪಿಸುವುದರ ಜೊತೆಗೆ ಸೂಕ್ತಗೌರವ ಸ್ಥಾನಮಾನಗಳನ್ನು ನೀಡಿ ಪ್ರೋತ್ಸಾಹಿಸಬೇಕು' ಎಂದು ಹೇಳಿದರು.

'ಆಕ್ಸ್‌ಫರ್ಡ್ ಸಮೂಹ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಡಾ.ಎ.ಎಸ್. ರಾಜು, ಕಾರ್ಯದರ್ಶಿ ಸುಜಾತಾ ರಾಜು, ಸ್ಥಳೀಯ ಮುಖಂಡರಾದ ಮುನಿಸ್ವಾಮಿಗೌಡ, ಮಧು ಮತ್ತಿತರರು ಉಪಸ್ಥಿತರಿದ್ದರು.

ಹಿಂದುಳಿದ ವರ್ಗಗಳ ಆಯೋಗದಿಂದ ಪಂಚಮಸಾಲಿ ಅರ್ಜಿ ವಿಚಾರಣೆ

ಮೀಸಲಾತಿ ಬೇಡಿಕೆಗೆ ಪಂಕ್ತಿಭೇದದ ಸಾಕ್ಷ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇವಾಲಯಗಳು, ಮಠಗಳಲ್ಲಿ ಗರ್ಭಗುಡಿ ಪ್ರವೇಶಕ್ಕೆ ಅವಕಾಶ ಇಲ್ಲದಿರುವುದು ಹಾಗೂ ಮೇಲ್ಜಾತಿಯವರ ಜತೆ ಸಹಪಂಕ್ತಿ ಭೋಜನಕ್ಕೆ ಅವಕಾಶ ಇಲ್ಲದಿರುವುದನ್ನು ಪರಿಗಣಿಸಿ ತಮಗೆ ಹಿಂದುಳಿದ ವರ್ಗಗಳ ಪ್ರವರ್ಗ '2ಎ' ಅಡಿಯಲ್ಲಿ ಮೀಸಲಾತಿ ನೀಡಬೇಕು ಎಂದು ಲಿಂಗಾಯತ ಪಂಚಮಸಾಲಿ ಸಮುದಾಯ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಮುಂದೆ ಬೇಡಿಕೆ ಮಂಡಿಸಿದೆ.

ಪಂಚಮಸಾಲಿ ಸಮುದಾಯದ ಬೇಡಿಕೆ ಕುರಿತು ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಕೆ. ಜಯಪ್ರಕಾಶ್ ಹೆಗ್ಡೆ ನೇತೃತ್ವದಲ್ಲಿ ಸೋಮವಾರ ಬಹಿರಂಗ ವಿಚಾರಣೆ ನಡೆಯಿತು. ಅಖಿಲ ಭಾರತ ಲಿಂಗಾಯತ ಪಂಚಮಸಾಲಿ ಮಹಾಸಭಾ ಪರವಾಗಿ ವಾದ ಮಂಡಿಸಿದ ವಕೀಲ ದಿನೇಶ್ ಪಾಟೀಲ, ಪಂಕ್ತಿಭೇದ ಮತ್ತು ಗರ್ಭಗುಡಿ ಪ್ರವೇಶಕ್ಕೆ ಅವಕಾಶ ನೀಡದಿರುವುದನ್ನು ಪ್ರಸ್ತಾಪಿಸಿದರು.

'ಹೆಚ್ಚಿನ ದೇವಾಲಯಗಳು ಮತ್ತು ಮಠಗಳಲ್ಲಿ ಪಂಚಮಸಾಲಿ ಸಮುದಾಯದ ಜನರು ಇತರ ಮೇಲ್ಜಾತಿಯ ಜನರ ಜತೆಗೆ ಒಂದೇ ಪಂಕ್ತಿಯಲ್ಲಿ ಕುಳಿತು ಊಟ ಮಾಡಲು ಅವಕಾಶವಿಲ್ಲ. ದೇವಾಲಯಗಳ ಗರ್ಭಗುಡಿಗೆ ಪ್ರವೇಶವೇ ಇಲ್ಲ. ಇದು ನಮ್ಮ ಸಮುದಾಯ ಸಾಮಾಜಿಕವಾಗಿ ಶೋಷಣೆಗೊಳಗಾಗಿದೆ ಎಂಬುದನ್ನು ದೃಢೀಕರಿಸುತ್ತದೆ. ಈ ವಿಚಾರವನ್ನು ಪ್ರಬಲ ಆಧಾರವಾಗಿ ಪರಿಗಣಿಸಿ ಪ್ರವರ್ಗ 2ಎ ಅಡಿಯಲ್ಲಿ ಮೀಸಲಾತಿ ನೀಡಬೇಕು' ಎಂದು ಆಗ್ರಹಿಸಿದರು.

ಮೈಸೂರು ಮಹಾರಾಜರು ನೇಮಿಸಿದ್ದ ಮಿಲ್ಲರ್ ಆಯೋಗದ ವರದಿಯಲ್ಲಿ ಲಿಂಗಾಯತ ಪಂಚಮಸಾಲಿ ಸಮುದಾಯವನ್ನು 'ದಲಿತರು' ಎಂದು ಪರಿಗಣಿಸಲಾಗಿತ್ತು. ಮೀಸಲಾತಿ ಕಲ್ಪಿಸುವಾಗ ಆರ್ಥಿಕ ಅಂಶವನ್ನು ಪರಿಗಣಿಸಬೇಕು. ಸಾಮಾಜಿಕ ಮತ್ತು ಶೈಕ್ಷಣಿಕ ಹಿಂದುಳಿದಿರುವಿಕೆಯನ್ನೇ ಆಧರಿಸಿ ನಿರ್ಧಾರ ಕೈಗೊಳ್ಳಬೇಕು ಎಂದು ಮನವಿ ಮಾಡಿದರು.

ವಿಚಾರಣೆ ಮುಕ್ತಾಯವಾದ ಬಳಿಕ ಮಾಧ್ಯಮ ಪ್ರತಿನಿಧಿಗಳ ಜತೆ ಮಾತನಾಡಿದ ದಿನೇಶ್ ಪಾಟೀಲ, 'ಹಲವು ಅಂಶಗಳನ್ನು ಆಯೋಗದ ಗಮನಕ್ಕೆ ತರಲಾಗಿದೆ. ಪೂರಕ ಸಾಕ್ಷ್ಯಗಳನ್ನು ಮುಂದಿನ ವಿಚಾರಣೆ ವೇಳೆ ಒದಗಿಸಲಾಗುವುದು. 2002ರಲ್ಲಿ ಹಿಂದುಳಿದ ವರ್ಗಗಳ ಪ್ರವರ್ಗಗಳ ಮರು ವರ್ಗೀಕರಣದ ಸಂದರ್ಭದಲ್ಲಿ ಆಯೋಗ ನೀಡಿದ್ದ 72 ಸಲಹೆಗಳನ್ನು ಸರ್ಕಾರ ಒಪ್ಪಿಕೊಂಡಲ್ಲಿ ಸಮಸ್ಯೆಗೆ ಪರಿಹಾರ ದೊರಕುತ್ತದೆ ಎಂಬುದನ್ನೂ ತಿಳಿಸಲಾಗಿದೆ' ಎಂದರು.

ಕೂಡಲ ಸಂಗಮದ ಪಂಚಮಸಾಲಿ ಪೀಠದ ಬಸವ ಜಯ ಮೃತ್ಯುಂಜಯ ಸ್ವಾಮೀಜಿ ಮಾತನಾಡಿ, 'ಸಮುದಾಯದ ಪರವಾಗಿ ನಮ್ಮ ವಕೀಲರು ಪ್ರಬಲ ವಾದ ಮಂಡಿಸಿದ್ದಾರೆ. ಜನಸಂಖ್ಯೆ ಮತ್ತು ಆರ್ಥಿಕ ಆಧಾರದಲ್ಲಿ ಮೀಸಲಾತಿ ಕೇಳುತ್ತಿಲ್ಲ. ಸಾಮಾಜಿಕ ಮತ್ತು ಶೈಕ್ಷಣಿಕ ಹಿಂದುಳಿದಿರುವಿಕೆಯನ್ನೇ ಆಧರಿಸಿ ಮೀಸಲಾತಿ ಕೇಳುತ್ತಿದ್ದೇವೆ ಎಂಬುದನ್ನು ಆಯೋಗಕ್ಕೆ ಮನವರಿಕೆ ಮಾಡಲು ಯತ್ನಿಸಿದ್ದಾರೆ' ಎಂದು ಹೇಳಿದರು.

ಅಖಿಲ ಭಾರತ ಲಿಂಗಾಯತ ಪಂಚಮಸಾಲಿ ಮಹಾಸಭಾ ಅಧ್ಯಕ್ಷ ವಿಜಯಾನಂದ ಕಾಶಪ್ಪನವರ ಸೇರಿದಂತೆ ಸಮುದಾಯದ ಹಲವು ಮುಖಂಡರು ಆಯೋಗದ ವಿಚಾರಣೆ ವೇಳೆ ಹಾಜರಿದ್ದರು.

'ಸಾರ್ವಜನಿಕ ಸಾರಿಗೆ ನಮ್ಮ ಸಂಸ್ಕೃತಿಯಾಗಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಾರ್ವಜನಿಕ ಸಾರಿಗೆಯು ನಮ್ಮ ಸಂಸ್ಕೃತಿಯಾಗಬೇಕು. ಆಗ ಮಾತ್ರ ಹವಾಮಾನ ಬದಲಾವಣೆ ತಡೆಗಟ್ಟಲು ಸಾಧ್ಯ. ಹಸಿರುಮನೆ ಪರಿಣಾಮ ತಡೆಯುವ ಉದ್ದೇಶದಿಂದ ಸಿ40 ಸಂಸ್ಥೆ ಜೊತೆ ಬಿಬಿಎಂಪಿ ಮಾಡಿಕೊಂಡಿರುವ ಒಪ್ಪಂದದ ಆಶಯ ಈಡೇರಲೂ ಇದು ಸಹಕಾರಿ' ಎಂದು ಸಂಚಾರ ವಿಭಾಗದ ಜಂಟಿ ಕಮಿಷನರ್ ಬಿ.ಆರ್.ರವಿಕಾಂತೇಗೌಡ ಹೇಳಿದರು.

ಇಎಸ್‌ಜಿ ಗ್ರೂಪ್ ಸೋಮವಾರ ಹಮ್ಮಿಕೊಂಡಿದ್ದ 'ಬೆಂಗಳೂರು ಹವಾಮಾನದ ಕ್ರಿಯಾಯೋಜನೆ' ಕುರಿತ ಆನ್‌ಲೈನ್ ಚರ್ಚಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಹವಾಮಾನ ವೈಪರೀತ್ಯ ಹಾಗೂ ಜಾಗತಿಕ ತಾಪಮಾನದಲ್ಲಾಗುತ್ತಿರುವ ಏರುಪೇರಿಗೆ ವಾಯು ಮಾಲಿನ್ಯವೇ ಪ್ರಮುಖ ಕಾರಣ. ಎಲೆಕ್ಟ್ರಿಕ್ ವಾಹನಗಳ ಬಳಕೆಯಿಂದ ಇದಕ್ಕೆ ಕಡಿವಾಣ ಹಾಕಬಹುದು' ಎಂದರು.

ಬಿಬಿಎಂಪಿ ಆಡಳಿತಾಧಿಕಾರಿ ಗೌರವ್ ಗುಪ್ತಾ 'ಜಾಗತಿಕ ತಾಪಮಾನ ನಿಯಂತ್ರಣವು ಪ್ಯಾರಿಸ್ ಒಪ್ಪಂದದ ಮೂಲ ಆಶಯ. ಹೀಗಾಗಿ ನಗರದಲ್ಲಿ ಗ್ರೀನ್ ಪಾರ್ಕ್‌ಗಳ ನಿರ್ಮಾಣಕ್ಕೆ ಹೆಚ್ಚಿನ ಒತ್ತು ನೀಡಿದ್ದೇವೆ. ಬೆಂಗಳೂರು ವ್ಯಾಪ್ತಿಯಲ್ಲಿರುವ 25 ಕೆರೆಗಳ ಅಭಿವೃದ್ಧಿಗೂ ಚಾಲನೆ ನೀಡಲಾಗಿದೆ. ಈ ವರ್ಷ ಒಟ್ಟು 10 ಲಕ್ಷ ಗಿಡಗಳನ್ನು ನೆಡಲಾಗುವುದು' ಎಂದು ತಿಳಿಸಿದರು.

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಸದಸ್ಯ ಕಾರ್ಯದರ್ಶಿ ಕೆ. ಶ್ರೀನಿವಾಸಲು, 'ಕೈಗಾರಿಕಾ ತ್ಯಾಜ್ಯ ಸಾಗಣೆ ಮತ್ತು ವೈಜ್ಞಾನಿಕ ವಿಲೇವಾರಿ ಮೇಲೆ ನಿಗಾ ಇಡಲು ಜಿಪಿಎಸ್ ಟ್ರ್ಯಾಕಿಂಗ್ ವ್ಯವಸ್ಥೆ ಜಾರಿಗೊಳಿಸಿದ್ದೇವೆ. ಪ್ರತಿಯೊಬ್ಬರಿಗೂ ತಾವು ಉಸಿರಾಡುವ ಗಾಳಿಯ ಗುಣಮಟ್ಟ, ತನ್ನ ಸಮೀಪದ ಕೆರೆಯ ನೀರಿನ ಗುಣ ಮಟ್ಟದ ಅರಿವು ಇರಬೇಕು. ಇದಕ್ಕಾಗಿ 'ಕೆಎಸ್‌ಪಿಸಿಬಿ' ಮೊಬೈಲ್ ಆ್ಯಪ್ ಅಭಿವೃದ್ಧಿಪಡಿಸಿದ್ದೇವೆ. ಮಾಲಿನ್ಯ ನಿಯಂತ್ರಣಕ್ಕೆ ಇವು ಸಹಕಾರಿ' ಎಂದರು.

ಶಾಸಕಿ ಸೌಮ್ಯಾ ರೆಡ್ಡಿ, 'ಸೈಕಲ್ ಬಳಕೆ ಮಾಡುವ ಮೂಲಕವೂ ನಾವು ಮಾಲಿನ್ಯ ತಡೆಯಬಹುದು' ಎಂದರು.

ಭಾರ್ಗವಿ ರಾವ್, ಲಿಯೊ ಸಲ್ಡಾನ ಹಾಗೂ ಅಂಜಲಿ ದಾಲ್ಮಿಯಾ ಇದ್ದರು.

ಕಲಾಸಿಪಾಳ್ಯ ಬಸ್ ನಿಲ್ದಾಣದ ಬಳಿ ಅವ್ಯವಸ್ಥೆ: ಚಾಲಕರು–ನಿರ್ವಾಹಕರು, ಪ್ರಯಾಣಿಕರ ಪಡಿಪಾಟಲು

ಇಲ್ಲಿ ಶೌಚಾಲಯವೇ ಇಲ್ಲ, ಬಯಲಲ್ಲೇ ಎಲ್ಲಾ!

• ಜಿ.ಶಿವಕುಮಾರ

ಬೆಂಗಳೂರು: ಸಾಲುಗಟ್ಟಿ ನಿಂತಿರುವ ಬಸ್‌ಗಳು. ಅವುಗಳ ಮರೆಯಲ್ಲಿ ನಿಂತು ಮೂತ್ರ ವಿಸರ್ಜಿಸುವ ಪ್ರಯಾಣಿಕರು. ದುರ್ನಾತ ಬೀರುತ್ತಿರುವ ಆ ಸ್ಥಳದಲ್ಲೇ ಹೋಟೆಲ್ ತ್ಯಾಜ್ಯ ಸುರಿದು ಹೋಗುವ ಸಿಬ್ಬಂದಿ. ಅವುಗಳನ್ನು ಮೆಲ್ಲುತ್ತಾ ನಿಂತಿರುವ ಹಸುಗಳು...

ಕಲಾಸಿಪಾಳ್ಯ ಬಸ್ ನಿಲ್ದಾಣದ ಸುತ್ತ ಒಮ್ಮೆ ಓಡಾಡಿದರೆ ಈ ದೃಶ್ಯಗಳು ಕಣ್ಣಿಗೆ ರಾಚುತ್ತವೆ.

ಕೆ.ಆರ್.ಮಾರುಕಟ್ಟೆಯ ಪಕ್ಕದಲ್ಲೇ ಇರುವ ಈ ನಿಲ್ದಾಣದಿಂದ ನಿತ್ಯವೂ ನೂರಾರು ಮಂದಿ ಬೇರೆ ಬೇರೆ ಊರುಗಳಿಗೆ ಪ್ರಯಾಣಿಸುತ್ತಾರೆ. ಹೀಗಾಗಿ ಈ ಪ್ರದೇಶ ಸದಾ ಜನಜಂಗುಳಿಯಿಂದ ಕೂಡಿರುತ್ತದೆ. ಮಹಿಳೆಯರು, ಮಕ್ಕಳು, ವಯಸ್ಕರು ಹೀಗೆ ಎಲ್ಲಾ ವಯೋಮಾನದವರೂ ಬಸ್‌ಗಾಗಿ ಕಾದು ಕುಳಿತಿರುತ್ತಾರೆ. ಹೀಗಿರುವಾಗ ಯಾರಾದರೂ ತುರ್ತಾಗಿ ಮೂತ್ರ ವಿಸರ್ಜನೆ ಮಾಡಬೇಕೆಂದರೆ ಬಸ್‌ಗಳ ಮರೆಗೆ ಹೋಗಿ ನಿಲ್ಲುವುದು ಅನಿವಾರ್ಯ. ಏಕೆಂದರೆ ಇಲ್ಲಿ ಶೌಚಾಲಯವೇ ಇಲ್ಲ!

ಹಿಂದೆ ನಿಲ್ದಾಣದ ಎರಡು ಭಾಗಗಳಲ್ಲೂ ಶೌಚಾಲಯಗಳಿದ್ದವು. ನೂತನ ಬಸ್ ನಿಲ್ದಾಣದ ನಿರ್ಮಾಣ ಕಾಮಗಾರಿ ಶುರುವಾದ ಬೆನ್ನಲ್ಲೇ ಅವುಗಳನ್ನು ಕೆಡವಲಾಗಿತ್ತು. ಬಳಿಕ ಅಲ್ಲಿ ತಾತ್ಕಾಲಿಕವಾಗಿ ಯಾವುದೇ ವ್ಯವಸ್ಥೆ ಮಾಡಿಲ್ಲ. ಹೀಗಾಗಿ ಪ್ರಯಾಣಿಕರು ಪರದಾಡುವಂತಾಗಿದೆ. ಬಿಎಂಟಿಸಿ, ಕೆಎಸ್‌ಆರ್‌ಟಿಸಿ ಮತ್ತು ಖಾಸಗಿ ಬಸ್‌ಗಳ ನಿರ್ವಾಹಕರು ಹಾಗೂ ಇತರೆ ಸಿಬ್ಬಂದಿಯೂ ಗೋಳಾಡುವಂತಾಗಿದೆ.

‘ಪುರುಷರು ಹೇಗೋ ಸುಧಾರಿಸಿಕೊಳ್ಳುತ್ತಾರೆ, ಆದರೆ ಮಹಿಳಾ ಪ್ರಯಾಣಿಕರಿಗೆ ತುಂಬಾ ತೊಂದರೆಯಾಗುತ್ತಿದೆ. ಕೆಲವರು ನಮ್ಮ ಬಳಿ ಬಂದು ವಿಚಾರಿಸುತ್ತಾರೆ. ಸಂಕೋಚ ಮನೋಭಾವದವರು ದೈಹಿಕ ಸಂಕಟ ತಡೆದುಕೊಂಡು ಸುಮ್ಮನಾಗುತ್ತಾರೆ. ನಿಲ್ದಾಣದಿಂದ ಅರ್ಧ ಕಿ.ಮೀ. ದೂರದಲ್ಲಿರುವ ಪೆಟ್ರೋಲ್ ಬಂಕ್ ಸನಿಹ ಶೌಚಾಲಯವಿದೆ. ನಮ್ಮ ಬಳಿ ಕೇಳಿದವರಿಗೆಲ್ಲಾ ಅಲ್ಲಿಗೆ ಹೋಗುವಂತೆ ಸೂಚಿಸುತ್ತೇವೆ. ಕೆಲವರು ದೊಡ್ಡ ಲಗೇಜು ಹೊತ್ತುಕೊಂಡಿರುತ್ತಾರೆ. ಜೊತೆಗೆ ಚಿಕ್ಕ ಮಕ್ಕಳೂ ಇರುತ್ತಾರೆ. ಅವರನ್ನು ಕರೆದುಕೊಂಡು ಅಲ್ಲಿಗೆ ಹೋಗಿ ಬರುವುದು ಕಷ್ಟ. ಒಮ್ಮೊಮ್ಮೆ ಅವರು ಹಿಂತಿರುಗುವಷ್ಟರಲ್ಲಿ ಬಸ್ ಹೋಗಿಬಿಟ್ಟಿರುತ್ತದೆ. ಆಗ ವಿಧಿ ಇಲ್ಲದೆ ಮತ್ತಷ್ಟು ಕಾಲ ರಸ್ತೆ ಬದಿಯಲ್ಲೇ ಕೂತಿರುತ್ತಾರೆ. ನಿತ್ಯವೂ ನಾವು ಇಂತಹ ದೃಶ್ಯಗಳನ್ನು ನೋಡುತ್ತಿರುತ್ತೇವೆ’ ಎಂದು ನಿಲ್ದಾಣದ ಎದುರು ನಿಂತಿದ್ದ ಆಟೊ ಚಾಲಕರು ಹೇಳಿದರು.

‘ಪ್ರಯಾಣಿಕರಿಗಷ್ಟೇ ಅಲ್ಲ ಸರ್ ನಮಗೂ ತೊಂದರೆಯಾಗುತ್ತದೆ. ನಿಲ್ದಾಣದ ಸುತ್ತಮುತ್ತ ಇರುವ ಗೂಡಂಗಡಿಗಳ ವ್ಯಾಪಾರಿಗಳೂ ಇದೇ ಸಮಸ್ಯೆ ಎದುರಿಸುತ್ತಿದ್ದಾರೆ. ಬಸ್ ನಿಲ್ದಾಣ ಕಾಮಗಾರಿ ಮುಗಿಯಲು ಇನ್ನು ಎಷ್ಟು ತಿಂಗಳುಗಳಾಗುತ್ತವೊ ಗೊತ್ತಿಲ್ಲ. ಅಲ್ಲಿಯವರೆಗೂ ಈ ಸಮಸ್ಯೆ ತಪ್ಪಿದ್ದಲ್ಲ’ ಎಂದೂ ಅವರು ಬೇಸರ ವ್ಯಕ್ತಪಡಿಸಿದರು.

‘ನಮ್ಮ ಸಿಬ್ಬಂದಿಗೂ ತುಂಬಾ ತೊಂದರೆಯಾಗಿದೆ. ನಾವು ಮೂತ್ರ ವಿಸರ್ಜಿಸಲು ಹತ್ತಿರದ ಹೋಟೆಲ್‌ಗೆ ಹೋಗಬೇಕಾದ ಸ್ಥಿತಿ ಇದೆ. ಹಾಗೆ ಹೋಗಿ ಬರುವುದಕ್ಕೆ ಮುಜುಗರವಾಗುತ್ತದೆ. ಆದ್ದರಿಂದ ಅನಿವಾರ್ಯವಾಗಿ ಒಂದು ಕಪ್ ಚಹಾ ಕುಡಿದು ಬರುತ್ತೇವೆ’ ಎಂದು ಬಿಎಂಟಿಸಿ ಸಿಬ್ಬಂದಿ ತಿಳಿಸಿದರು.



ನಗರದ ಕಲಾಸಿಪಾಳ್ಯ ಬಸ್ ನಿಲ್ದಾಣದ ಸನಿಹ ಸಾರ್ವಜನಿಕ ಶೌಚಾಲಯವಿಲ್ಲದ ಕಾರಣ ಪ್ರಯಾಣಿಕರು ಹಾಗೂ ಖಾಸಗಿ ಬಸ್ ನಿರ್ವಾಹಕರು ಬಯಲಲ್ಲೇ ಮೂತ್ರ ವಿಸರ್ಜಿಸುತ್ತಿರುವುದು



ಕಲಾಸಿಪಾಳ್ಯ ಬಸ್ ನಿಲ್ದಾಣದ ನೋಟ ಪ್ರಜಾವಾಣಿ ಚಿತ್ರಗಳು/ ರಂಜು ಪಿ

‘ಸಂಚಾರಿ ಶೌಚಾಲಯ ಒದಗಿಸಲಿ’

‘ಬಿಬಿಎಂಪಿ ಮಾರ್ಷಲ್‌ಗಳು ಬಯಲಲ್ಲಿ ನಿಂತು ಮೂತ್ರ ವಿಸರ್ಜಿಸುವವರನ್ನು ಹಿಡಿದು ದಂಡ ಹಾಕುತ್ತಾರೆ. ಅದು ಎಷ್ಟರ ಮಟ್ಟಿಗೆ ಸರಿ. ಇಲ್ಲಿ ಶೌಚಾಲಯ ಇದ್ದಿದ್ದರೆ ಜನರೆಲ್ಲಾ ಅದನ್ನೇ ಬಳಸುತ್ತಿದ್ದರು. ಬಸ್‌ಗಳ ಮರೆಗೆ ಹೋಗುವ ಪರಿಸ್ಥಿತಿಯೇ ಉದ್ಭವಿಸುತ್ತಿರಲಿಲ್ಲ. ಇದನ್ನು ಮಾರ್ಷಲ್‌ಗಳು ಅರ್ಥ ಮಾಡಿಕೊಳ್ಳಬೇಕು. ಬಿಎಂಟಿಸಿ ಹಾಗೂ ಬಿಬಿಎಂಪಿ ಅಧಿಕಾರಿಗಳಿಗೆ ಇಲ್ಲಿನ ಪರಿಸ್ಥಿತಿ ಗೊತ್ತಿಲ್ಲವೇ. ಅವರೇಕೆ ಕಣ್ಣು ಮುಚ್ಚಿ ಕುಳಿತಿದ್ದಾರೆ. ಅವರು ನಿರ್ಲಕ್ಷ್ಯ ಧೋರಣೆ ಕೈಬಿಡಬೇಕು. ಈಗಲಾದರೂ ಎಚ್ಚೆತ್ತುಕೊಂಡು ತಾತ್ಕಾಲಿಕವಾಗಿ ಸಂಚಾರಿ ಶೌಚಾಲಯದ ವ್ಯವಸ್ಥೆಯನ್ನಾದರೂ ಮಾಡಬೇಕು’ ಎಂದು ಖಾಸಗಿ ಬಸ್ ನಿರ್ವಾಹಕ ನಾಗೇಶ್ ಒತ್ತಾಯಿಸಿದರು.

ಪ್ರಯಾಣಿಕರ ಜೊತೆಗೆ ನಮ್ಮ ಸಿಬ್ಬಂದಿಗೂ ತೊಂದರೆಯಾಗುತ್ತಿದೆ. ತಾತ್ಕಾಲಿಕ ವ್ಯವಸ್ಥೆ ಮಾಡಿಕೊಡುವಂತೆ ಮೇಲಧಿಕಾರಿಗಳಿಗೆ ಹಲವು ಬಾರಿ ಮನವಿ ಮಾಡಿದ್ದೇವೆ. ಮತ್ತೊಮ್ಮೆ ಚರ್ಚಿಸುತ್ತೇನೆ

ಪಂಕಜ, ಅಸಿಸ್ಟೆಂಟ್ ಟ್ರಾಫಿಕ್ ಸೂಪರಿಟೆಂಡೆಂಟ್, ಬಿಎಂಟಿಸಿ

ನಾವು ಇಲ್ಲಿ ಇರುವುದು ಗೊತ್ತಿದ್ದರೂ ಪಕ್ಕದಲ್ಲೇ ಹೋಗಿ ಕೆಲವರು ಮೂತ್ರ ವಿಸರ್ಜಿಸುತ್ತಾರೆ. ಇದರಿಂದ ಮುಜುಗರವಾಗುತ್ತದೆ. ಗಬ್ಬು ವಾಸನೆ ಮೂಗಿಗೆ ಬಡಿಯುತ್ತದೆ. ಅದನ್ನು ಸಹಿಸಿಕೊಂಡು ನಿಲ್ಲುವುದು ಅನಿವಾರ್ಯ

ಸುಬ್ಬಮ್ಮ, ಪ್ರಯಾಣಿಕರು



ರಾಮೋಹಳ್ಳಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳಿಗೆ ಕನ್ನಡ ಶಬ್ದಕೋಶ ಹಾಗೂ ಅಟ್ಲಾಸ್‌ಗಳನ್ನು ಸಿದ್ಧಾರೂಢ ಮಿಷನ್ ಆಶ್ರಮದ ಅಧ್ಯಕ್ಷ ಆರೂಢಭಾರತೀ ಸ್ವಾಮೀಜಿ ಅವರು ಸೋಮವಾರ ವಿತರಿಸಿದರು. ಸಿದ್ಧಾರೂಢ ಮಿಷನ್‌ನ ಟ್ರಸ್ಟಿ ಜಿ.ಎಲ್.ಸಂತೋಷ್, ಟ್ರಸ್ಟ್‌ನ ಕಾರ್ಯದರ್ಶಿ ಸಿ.ಎಚ್.ಕೃಷ್ಣಯ್ಯ, ಶಾಲಾ ಸಿಬ್ಬಂದಿ ಇದ್ದರು.

ಮಾಜಿ ಶಾಸಕರ ಅಳಿಯನಿಗೆ ಬೆದರಿಕೆ ಕರೆ: ದೂರು

ಅಪರಾಧ ಸುದ್ದಿ

ಬೆಂಗಳೂರು: ಭಾರತಿನಗರದ ಮಾಜಿ ಶಾಸಕ ಎನ್. ರಾಜಣ್ಣ ಅವರ ಅಳಿಯ ಮನೋಜ್‌ಕುಮಾರ್ ಅವರಿಗೆ ಜೀವಬೆದರಿಕೆ ಕರೆ ಬಂದಿದ್ದು, ಈ ಸಂಬಂಧ ಪುಲಿಕೇಶಿನಗರ ಠಾಣೆಗೆ ದೂರು ನೀಡಿದ್ದಾರೆ.

‘ಮೊಬೈಲ್‌ಗೆ ಕರೆ ಮಾಡಿ ಹಣಕ್ಕೆ ಬೇಡಿಕೆ ಇಡುತ್ತಿರುವ ಅಪರಿಚಿತರು, ಕೇಳಿದಷ್ಟು ಹಣ ಕೊಡದಿದ್ದರೆ ಸುಮ್ಮನೇ ಬಿಡುವುದಿಲ್ಲವೆಂದು ಜೀವ ಬೆದರಿಕೆ ಹಾಕುತ್ತಿದ್ದಾರೆ’ ಎಂದು ಮನೋಜ್‌ಕುಮಾರ್ ದೂರಿನಲ್ಲಿ ತಿಳಿಸಿದ್ದಾರೆ.

ದೂರು ಪರಿಶೀಲಿಸಿರುವ ಪೊಲೀಸರು, ಎನ್‌ಸಿಆರ್ (ಗಂಭೀರವಲ್ಲದ ಅಪರಾಧ) ದಾಖಲಿಸಿಕೊಂಡಿದ್ದಾರೆ.

‘ಕಾಕ್ಸ್‌ಟೌನ್ ನಿವಾಸಿ ಮನೋಜ್‌ಕುಮಾರ್, ಹಿಟಾಚಿ ರೈಲು ಎಸ್.ಟಿ.ಎಸ್ ಇಂಡಿಯಾ ಕಂಪನಿ ಮುಖ್ಯಸ್ಥ. ಅವರಿಗೆ ಮಾ. 21ರಂದು ಜೀವ ಬೆದರಿಕೆ ಕರೆ ಬಂದಿದೆ. ಸದ್ಯಕ್ಕೆ ಎನ್‌ಸಿಆರ್ ದಾಖಲಿಸಿಕೊಳ್ಳಲಾಗಿದ್ದು, ನ್ಯಾಯಾಲಯದ ನಿರ್ದೇಶನದಂತೆ ಮುಂದಿನ ಕ್ರಮ ಕೈಗೊಳ್ಳಲಾಗುವುದು’ ಎಂದು ಪೊಲೀಸ್ ಮೂಲಗಳು ಹೇಳಿವೆ.

ಕೋವಿಡ್ ಪ್ರಕರಣ ತುಸು ಇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಕಳೆದ ವಾರ ನಿತ್ಯ ಸಾವಿರಕ್ಕೂ ಅಧಿಕ ಪ್ರಕರಣಗಳು ದಾಖಲಾಗುತ್ತಿದ್ದವು. ಆದರೆ, ಸೋಮವಾರ ಕೊರೊನಾ ಸೋಂಕಿತರ ಸಂಖ್ಯೆಯಲ್ಲಿ ತುಸು ಇಳಿಕೆಯಾಗಿದೆ.

‘ಕಳೆದ ಮೂರು ದಿನಗಳ ಹಿಂದೆ ನಗರದಲ್ಲಿ 1030 ಕೋವಿಡ್ ಪ್ರಕರಣಗಳು ಪತ್ತೆಯಾಗಿದ್ದವು. ಸೋಮವಾರ 886 ಪ್ರಕರಣಗಳು ಮಾತ್ರ ದಾಖಲಾಗಿವೆ’ ಎಂದು ಬಿಬಿಎಂಪಿ ಆಯುಕ್ತ ಎನ್.ಮಂಜುನಾಥ ಪ್ರಸಾದ್ ತಿಳಿಸಿದರು.

‘ನಗರದಲ್ಲಿ ಮತ್ತೆ ಕೋವಿಡ್ ಪ್ರಕರಣಗಳು ಹೆಚ್ಚಳವಾಗಲು ಶುರುವಾದ ಬಳಿಕ ಒಂದು ವಾರದಿಂದ ಈಚೆಗೆ ಕೋವಿಡ್ ಪರೀಕ್ಷೆ ಸಂಖ್ಯೆ ಗಣನೀಯವಾಗಿ ಹೆಚ್ಚಳ ಮಾಡಿದ್ದೇವೆ. ಶನಿವಾರ 50 ಸಾವಿರದಷ್ಟು ಕೋವಿಡ್ ಪರೀಕ್ಷೆ ನಡೆಸಿದ್ದೆವು. ವಾರದಿಂದ ಈಚೆಗೆ ಕೋವಿಡ್ ಪ್ರಕರಣ ಹೆಚ್ಚು ಪತ್ತೆಯಾಗುವುದಕ್ಕೆ ಇದು ಕೂಡಾ ಕಾರಣ’ ಎಂದು ಅವರು ವಿವರಿಸಿದರು.

‘ರೋಗ ಲಕ್ಷಣ ಇಲ್ಲದ ಸೋಂಕಿತರ ಆರೈಕೆಗೆ ಹಜ್‌ಭವನ ಹಾಗೂ ಎಚ್‌ಎಎಲ್‌ನ ಸಭಾಂಗಣ ಸಜ್ಜಾಗಿದೆ. ಆದರೆ, ಹೊಸತಾಗಿ ಕಂಡು ಬರುತ್ತಿರುವ ಪ್ರಕರಣಗಳು ಅಪಾರ್ಟ್‌ಮೆಂಟ್ ಸಮುಚ್ಚಯಗಳ ಬಳಿಯೇ ಹೆಚ್ಚಾಗಿ ಪತ್ತೆಯಾಗುತ್ತಿವೆ. ಅವರು ಮನೆಯಲ್ಲೇ ಪ್ರತ್ಯೇಕ ವಾಸಕ್ಕೆ ಒಳಗಾಗಲು ವ್ಯವಸ್ಥೆ ಹೊಂದಿರುತ್ತಾರೆ. ಹಾಗಾಗಿ ಆರೈಕೆ ಕೇಂದ್ರಗಳಿಗೆ ಬರುವವರ ಸಂಖ್ಯೆ ಕಡಿಮೆ ಇದೆ’ ಎಂದರು.

‘ಯಲಹಂಕ, ಆರ್.ಆರ್.ನಗರ ಹಾಗೂ ದಾಸರಹಳ್ಳಿ ಹೊರತಾಗಿ ಉಳಿದ ಐದೂ ವಲಯಗಳಲ್ಲೂ ಹೊಸ ಪ್ರಕರಣಗಳು ಹೆಚ್ಚಿನ ಸಂಖ್ಯೆಯಲ್ಲಿ ಪತ್ತೆಯಾಗಿವೆ. ಸೋಂಕಿತರ ಜೊತೆ ನೇರ ಸಂಪರ್ಕ ಹೊಂದಿದವರನ್ನು ಪತ್ತೆಹಚ್ಚಿ ಅವರನ್ನು ಪ್ರತ್ಯೇಕವಾಸಕ್ಕೆ ಒಳಪಡಿಸುವ ಮೂಲಕ ಸೋಂಕು ಹರಡದಂತೆ ನಿಯಂತ್ರಿಸಲಾಗುತ್ತಿದೆ’ ಎಂದರು.

ಪ್ರಚಾರದಿಂದ ಬರುವವರಿಗೆ ನೆಗೆಟಿವ್ ವರದಿ ಕಡ್ಡಾಯ

ಮಂಗಳೂರು: ‘ಕೇರಳದಲ್ಲಿ ಚುನಾವಣಾ ಪ್ರಚಾರ ಮುಗಿಸಿ ಬರುವವರು, ಗಡಿಯಲ್ಲಿನ ತಪಾಸಣೆ ಕೇಂದ್ರದಲ್ಲಿ ಕಡ್ಡಾಯವಾಗಿ ಆರ್‌ಟಿಪಿಸಿಆರ್ ನೆಗೆಟಿವ್ ವರದಿ ನೀಡಬೇಕು. ನಿತ್ಯ ಪ್ರಚಾರಕ್ಕೆ ತೆರಳುವವರು 15 ದಿನಕ್ಕೊಮ್ಮೆ ಪರೀಕ್ಷೆಗೆ ಒಳಪಡಬೇಕು’ ಎಂದು ಜಿಲ್ಲಾಧಿಕಾರಿ ಡಾ.ರಾಜೇಂದ್ರ ಕೆ.ವಿ. ತಿಳಿಸಿದರು.

ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಅವರು, ‘ಆರ್ಥಿಕ ವರ್ಷಾಂತ್ಯದ ಕಾರಣ ಗಡಿಯಲ್ಲಿ ಬಿಗಿ ಕ್ರಮ ಕೈಗೊಳ್ಳಲಾಗುತ್ತಿಲ್ಲ. ರ‍್ಯಾಂಡಮ್ ಪರೀಕ್ಷೆ ನಡೆಸುತ್ತಿರುವುದಕ್ಕೆ ಯಾವುದೇ ರಾಜಕೀಯ ಕಾರಣಗಳಿಲ್ಲ. ಏಪ್ರಿಲ್ ಬಳಿಕ ಬಿಗಿ ಕ್ರಮ ಕೈಗೊಳ್ಳಲಾಗುವುದು’ ಎಂದರು.

‘ಪ್ರಯಾಣಿಕರಿಗೆ ಆರ್‌ಟಿಪಿಸಿಆರ್ ನೆಗೆಟಿವ್ ವರದಿ ಕಡ್ಡಾಯಗೊಳಿಸುವ ಬಗ್ಗೆ ದಕ್ಷಿಣ ರೈಲ್ವೆ ಪಾಲ್ಘಾಟ್ ವಿಭಾಗೀಯ ಕಚೇರಿ ಹಾಗೂ ಕೊಂಕಣ ರೈಲ್ವೆಗೆ ಪತ್ರ ಬರೆದಿದ್ದರೂ, ಸ್ಪಂದನೆ ಸಿಕ್ಕಿಲ್ಲ’ ಎಂದರು.

ರೂಪಾಂತರ ವೈರಸ್ ಇಲ್ಲ: ‘2020ರ ಮಾರ್ಚ್‌ನಲ್ಲಿ ಕಂಡುಬಂದ ಕೊರೊನಾ ಸೋಂಕಿನ ಲಕ್ಷಣಕ್ಕೂ, ಈಚಿನ ಪ್ರಕರಣಗಳಿಗೂ ಯಾವುದೇ ವ್ಯತ್ಯಾಸಗಳಿಲ್ಲ. ನಾವು ನಿಮ್ಹಾನ್ಸ್‌ಗೆ ನಿರಂತರವಾಗಿ ಮಾದರಿ ಕಳುಹಿಸುತ್ತಿದ್ದೇವೆ. ಆದರೆ, ಈ ತನಕ ರೋಗಾಣು ರೂಪಾಂತರದ ಲಕ್ಷಣ ಕಂಡುಬಂದಿಲ್ಲ’ ಎಂದರು.

ಕೋವಿಶೀಲ್ಡ್ ಲಸಿಕೆ ಡೋಸ್‌ಗಳ ನಡುವೆ ಅಂತರವಿರಲಿ

ನವದೆಹಲಿ: ತಜ್ಞರ ಶಿಫಾರಸು ಆಧರಿಸಿ ಕೋವಿಡ್ -19 ಲಸಿಕೆ ಕೋವಿಶೀಲ್ಡ್ ಎರಡು ಡೋಸ್‌ಗಳ ನಡುವಿನ ಅಂತರವನ್ನು 6ರಿಂದ 8 ವಾರಗಳಿಗೆ ಹೆಚ್ಚಿಸುವಂತೆ ಕೇಂದ್ರ ಸರ್ಕಾರವು ಸೋಮವಾರ ಎಲ್ಲ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಸೂಚನೆ ನೀಡಿದೆ.

ಕೋವಿಶೀಲ್ಡ್ ಲಸಿಕೆಯ ಎರಡು ಡೋಸ್‌ಗಳ ಅಂತರವನ್ನು ಪ್ರತಿರೋಧ ಶಕ್ತಿಯ ರಾಷ್ಟ್ರೀಯ ತಾಂತ್ರಿಕ ಸಲಹಾ ತಂಡ (ಎನ್‌ಟಿಎಜಿಐ) ಮತ್ತು ಕೋವಿಡ್ 19 ಲಸಿಕೆ ಆಡಳಿತದ ರಾಷ್ಟ್ರೀಯ ಪರಿಣತರ ತಂಡ (ಎನ್‌ಇಜಿವಿಎಸಿ) ತನ್ನ 20ನೇ ಸಭೆಯಲ್ಲಿ ಈ ಶಿಫಾರಸು ಮಾಡಿವೆ.

ಕೋವಿಶೀಲ್ಡ್‌ನ ಎರಡನೇ ಡೋಸ್ ಅನ್ನು 6-8 ವಾರಗಳ ನಡುವೆ ನೀಡಿದರೆ ಹೆಚ್ಚು ಪರಿಣಾಮಕಾರಿಯಾಗಿರಲಿದೆ. ವೈಜ್ಞಾನಿಕವಾಗಿಯೂ ಇದು ದೃಢಪಟ್ಟಿದೆ. ಆದರೆ ಎಂಟು ವಾರಗಳ ನಿಗದಿತ ಅವಧಿ ಮೀರಬಾರದು ಎಂದು ಕೇಂದ್ರ ಸರ್ಕಾರ ಎಚ್ಚರಿಸಿದೆ.

ಇದಕ್ಕೂ ಮೊದಲು ಕೋವಿಶೀಲ್ಡ್ ಲಸಿಕೆಯ ಎರಡು ಡೋಸ್‌ಗಳ ಅಂತರ 4ರಿಂದ 6 ವಾರಗಳಿಗೆ ನಿಗದಿಪಡಿಸಲಾಗಿತ್ತು. ಹಾಗೆಯೇ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ವೈರಾಲಜಿ ಮತ್ತು ಭಾರತ್ ಬಯೋಟೆಕ್ ಸ್ಥಳೀಯವಾಗಿ ಅಭಿವೃದ್ಧಿಪಡಿಸಿರುವ ಲಸಿಕೆ ಕೋವಾಕ್ಸಿನ್‌ನ ಎರಡು ಡೋಸ್ ನೀಡುವ ಅಂತರದಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ ಎಂದು ಸರ್ಕಾರ ಸ್ಪಷ್ಟಪಡಿಸಿದೆ.

ಸುದ್ದಿ 2 ನಿಮಿಷ

‘ಅಲ್ಪಸಂಖ್ಯಾತರಿಗೆ ₹10 ಸಾವಿರ ಕೋಟಿ ಅನುದಾನ ಘೋಷಿಸಿ’

ಬೆಂಗಳೂರು: ‘ರಾಜ್ಯದಲ್ಲಿ ಸಂಕಷ್ಟದಲ್ಲಿರುವ ಅಲ್ಪಸಂಖ್ಯಾತ ಸಮುದಾಯಗಳ ಅಭಿವೃದ್ಧಿಗಾಗಿ ಸರ್ಕಾರ ₹10 ಸಾವಿರ ಕೋಟಿ ವಿಶೇಷ ಅನುದಾನ ಬಿಡುಗಡೆ ಮಾಡಬೇಕು’ ಎಂದು ಲೈಕ್ ಮೈಂಡೆಡ್ ಮೈನಾರಿಟೀಸ್ ಸಂಘಟನೆ ಒತ್ತಾಯಿಸಿದೆ.

ಸೋಮವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘಟನೆಯ ಅಪ್ಸರ್ ಕೊಡ್ಲಿಪೇಟೆ, ’ಬಜೆಟ್‌ನಲ್ಲಿ ಸಮುದಾಯಕ್ಕೆ ಕೇವಲ ₹1,500 ಕೋಟಿ ಘೋಷಿಸಲಾಗಿದೆ. ಇದರಿಂದ ಸಮುದಾಯದ ಅಭಿವೃದ್ಧಿ ಸಾಧ್ಯವಾಗುವುದಿಲ್ಲ. ಶೈಕ್ಷಣಿಕ, ಆರ್ಥಿಕ ಹಾಗೂ ಸಾಮಾಜಿಕವಾಗಿ ಹಿಂದುಳಿದಿರುವ ಸಮುದಾಯದಲ್ಲಿ ಬಡವರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಸಮುದಾಯದ ಅಭಿವೃದ್ಧಿಗಾಗಿ ವಿಶೇಷ ಯೋಜನೆಗಳನ್ನು ಸರ್ಕಾರ ಹಮ್ಮಿಕೊಳ್ಳಬೇಕು. ಅಲ್ಪಸಂಖ್ಯಾತ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಬೇಕು’ ಎಂದು ಒತ್ತಾಯಿಸಿದರು.

ಹೆಗ್ಗನಹಳ್ಳಿ: ವಿಶ್ವ ಮಹಿಳಾ ದಿನಾಚರಣೆ



ಪೀಣ್ಯ ದಾಸರಹಳ್ಳಿ: 'ಇಲ್ಲಿನ ಮೂಲಸೌಕರ್ಯ ಸಮಸ್ಯೆಗಳ ಬಗ್ಗೆ ಮಹಿಳೆಯರು ಗಮನ ಸೆಳೆದಿದ್ದಾರೆ. ಈ ಸಮಸ್ಯೆಗಳನ್ನು ಶೀಘ್ರದಲ್ಲಿ ಬಗೆಹರಿಸಲಾಗುವುದು' ಎಂದು ಶಾಸಕ ಆರ್.ಮಂಜುನಾಥ್ ಹೇಳಿದರು.

ಹೆಗ್ಗನಹಳ್ಳಿಯ ವಾರ್ಡ್ ಜೆಡಿಎಸ್ ಅಧ್ಯಕ್ಷ ಎಚ್. ಆರ್. ಪ್ರಕಾಶ್ ನೇತೃತ್ವದಲ್ಲಿ ಆಯೋಜಿಸಿದ್ದ ಮಹಿಳಾ ದಿನಾಚರಣೆ ಮತ್ತು ನೋಟ್ ಬುಕ್ ವಿತರಣಾ ಸಮಾರಂಭದಲ್ಲಿ ಮಾತನಾಡಿದರು.

'ಇಂದು ಮಹಿಳೆಯರು ಕಲೆ, ಸಾಹಿತ್ಯ, ಸಂಗೀತ, ಶಿಕ್ಷಣ, ವಿಜ್ಞಾನ ಹಾಗೂ ರಾಜಕೀಯ ಕ್ಷೇತ್ರಗಳಲ್ಲಿ ಉನ್ನತ ಹುದ್ದೆಗಳನ್ನು ಅಲಂಕರಿಸುವ ಮೂಲಕ ಮಾದರಿಯಾಗಿದ್ದಾರೆ' ಎಂದರು.

ಈ ಸಂದರ್ಭದಲ್ಲಿ ಕ್ಷೇತ್ರ ಜೆಡಿಎಸ್ ಅಧ್ಯಕ್ಷ ಎಂ. ಮುನಿಸ್ವಾಮಿ, ಜೆಡಿಎಸ್ ಮುಖಂಡರಾದ ಅಂದಾನಪ್ಪ, ಗಂಗಸ್ವಾಮಣ್ಣ, ಗಿರೀಶ್ ಗೌಡ, ಸ್ವಾಮಿ, ನಂಜೇಗೌಡ, ಮಂಜುನಾಥ್ ಇದ್ದರು.

ಮೆಟ್ರೊ ಯೋಜನೆಯಲ್ಲಿ ಷರತ್ತು ಪಾಲನೆ ಆಗಿದೆಯೇ?: ಹೈಕೋರ್ಟ್

ಬೆಂಗಳೂರು: ಒಂದನೇ ಮತ್ತು ಎರಡನೇ ಹಂತದ ಮೆಟ್ರೊ ರೈಲು ಯೋಜನೆ ಅನುಷ್ಠಾನ ಮಾಡವಾಗ ಒಪ್ಪಂದ ಷರತ್ತುಗಳನ್ನು ಪಾಲಿಸಲಾಗಿದೆಯೇ ಎಂದು ಪ್ರಶ್ನಿಸಿರುವ ಹೈಕೋರ್ಟ್, ಇದನ್ನು ಸ್ವತಂತ್ರ ಸಂಸ್ಥೆ ಮೂಲಕ ಖಚಿತಪಡಿಸಲು ಸಿದ್ಧವಿರುವ ಬಗ್ಗೆ ಅಭಿಪ್ರಾಯ ತಿಳಿಸುವಂತೆ ರಾಜ್ಯ, ಕೇಂದ್ರ ಸರ್ಕಾರ ಮತ್ತು ಮೆಟ್ರೊ ರೈಲು ನಿಗಮಕ್ಕೆ(ಬಿಎಂಆರ್‌ಸಿಎಲ್) ನಿರ್ದೇಶನ ನೀಡಿದೆ.

ದೊಮ್ಮಲೂರು ನಿವಾಸಿ ಡಿ.ಟಿ. ದೇವರೆ ಹಾಗೂ ‘ಬೆಂಗಳೂರು ಎನ್ವಿರಾನ್‌ಮೆಂಟ್ ಟ್ರಸ್ಟ್’ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಎ.ಎಸ್.ಓಕಾ ನೇತೃತ್ವದ ವಿಭಾಗೀಯ ಪೀಠ ವಿಚಾರಣೆ ನಡೆಸಿತು.

‘ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್(ಐಐಎಂ) ಅಥವಾ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಐಐಟಿ) ರೀತಿಯ ಸಂಸ್ಥೆಗಳಿಗೆ ವಹಿಸಿ ವರದಿ ಪಡೆಯಲು ಸಿದ್ಧವಿದ್ದೀರಾ’ ಎಂದು ಪೀಠ ಕೇಳಿತು. ಮುಂದಿನ ವಿಚಾರಣೆ ವೇಳೆ ನಿರ್ಧಾರ ತಿಳಿಸಬೇಕು ಎಂದು ಸೂಚಿಸಿತು. ವಿಚಾರಣೆಯನ್ನು ಮಾ.24ಕ್ಕೆ ಮುಂದೂಡಿತು.

ಫ್ಯೂಚರ್: ಏಕಸದಸ್ಯ ಪೀಠದ ಆದೇಶಕ್ಕೆ ತಡೆ


ನವದೆಹಲಿ (ಪಿಟಿಐ): ಫ್ಯೂಚರ್ ಸಮೂಹವು ತನ್ನ ರಿಟೇಲ್ ಹಾಗೂ ಸಗಟು ವಹಿವಾಟು ಅಂಗಗಳನ್ನು ರಿಲಯನ್ಸ್ ಇಂಡಸ್ಟ್ರೀಸ್‌ಗೆ ಮಾರಾಟ ಮಾಡುವ ವಿಚಾರದಲ್ಲಿ ಮುಂದಡಿ ಇರಿಸುವಂತಿಲ್ಲ ಎಂದು ಏಕಸದಸ್ಯ ಪೀಠ ನೀಡಿದ್ದ ಆದೇಶಕ್ಕೆ ದೆಹಲಿ ಹೈಕೋರ್ಟ್‌ನ ವಿಭಾಗೀಯ ಪೀಠ ತಡೆಯಾಜ್ಞೆ ನೀಡಿದೆ.

ವಿಭಾಗೀಯ ಪೀಠವು ಮುಂದಿನ ವಿಚಾರಣೆಯನ್ನು ಏಪ್ರಿಲ್ 30ಕ್ಕೆ ನಿಗದಿ ಮಾಡಿದೆ. ಫ್ಯೂಚರ್ ಸಮೂಹದ ಕಿಶೋರ್ ಬಿಯಾನಿ ಹಾಗೂ ಇತರರ ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳುವಂತೆ ಏಕಸದಸ್ಯ ಪೀಠ ನೀಡಿದ್ದ ಆದೇಶಕ್ಕೂ ತಡೆಯಾಜ್ಞೆ ನೀಡಲಾಗಿದೆ.

ನಗರದಲ್ಲಿ ಇಂದು

ರಾಮಮನೋಹರ ಲೋಹಿಯಾ ಜನ್ಮದಿನ: ಭಾವಚಿತ್ರಕ್ಕೆ ಮಾಲಾರ್ಪಣೆ–ಲೇಖಕ ನಟರಾಜ್ ಹುಳಿಯಾರ್, ಟಿ.ಪ್ರಭಾಕರ್, ಕಾಳಪ್ಪ, ಎಂ.ಪಿ.ಸುಮಾ, ಶಾಂತವೇರಿ ರಾಮಮನೋಹರ್, ದಯಾನಂದ ಕೋಲಾರ, ಕೆ.ಎಸ್. ನಾಗರಾಜ್, ಅನಿತಾ ಪ್ರದೀಪ್ ವೆಂಕಟ್ ರಾವ್, ಆಯೋಜನೆ–ಭಾರತೀಯ ಯಾತ್ರಾ ಕೇಂದ್ರ, ಲೋಕನಾಯಕ ಜಯಪ್ರಕಾಶ್ ನಾರಾಯಣ್ ವಿಚಾರ ವೇದಿಕೆ, ರಾಮಮನೋಹರ ಲೋಹಿಯಾ ಸಮತಾ ವಿಚಾರ ಟ್ರಸ್ಟ್, ಸ್ಥಳ–ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಬೆಳಿಗ್ಗೆ 11

ಸವಿತಾ ಮಹರ್ಷಿ ಜಯಂತ್ಯುತ್ಸವ: ಸಾನ್ನಿಧ್ಯ–ಕೊಂಚೂರಿನ ಸವಿತಾ ಪೀಠದ ಧರ್ಮಾಧಿಕಾರಿ ಶ್ರೀಧರಾನಂದ ಸರಸ್ವತಿ ಸ್ವಾಮೀಜಿ, ಉದ್ಘಾಟನೆ–ರಾಜ್ಯ ಸವಿತಾ ಸಮಾಜ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಸ್.ನರೇಶ್ ಕುಮಾರ್, ಅಧ್ಯಕ್ಷತೆ–ಶಾಸಕ ಆರ್. ಮಂಜುನಾಥ್, ಆಯೋಜನೆ–ರಾಜ್ಯ ಸವಿತಾ ಸಮಾಜ, ಸ್ಥಳ–ಸರೋಜಮ್ಮ ಪಾರ್ಟಿ ಹಾಲ್, ಹೆಸರಘಟ್ಟ ಮುಖ್ಯರಸ್ತೆ, ಮಧ್ಯಾಹ್ನ 2



ಸವಿತಾ ಮಹರ್ಷಿ

ರಾಷ್ಟ್ರಕವಿ ಎಂ.ಗೋವಿಂದ ಪೈ ಅವರ ಜನ್ಮದಿನ ಹಾಗೂ ಕವನ ರಚನೆ ಸ್ಪರ್ಧೆ ವಿಜೇತರಿಗೆ ಬಹುಮಾನ ವಿತರಣೆ: ಅಧ್ಯಕ್ಷತೆ–ಲೇಖಕ ಆರ್.ಕೆ.ನಲ್ಲೂರು ಪ್ರಸಾದ್, ಅತಿಥಿಗಳು–ಲೇಖಕರಾದ ಕೋ.ವೆಂ.ರಾಮಕೃಷ್ಣೇಗೌಡ, ಉಷಾ ಪಿ.ರೈ, ನಾ.ದಾಮೋದರ ಶೆಟ್ಟಿ, ರಾಮಣ್ಣ ಕೋಡಿಹೊಸಹಳ್ಳಿ, ಆಯೋಜನೆ–ಕನ್ನಡ ಸಂಘರ್ಷ ಸಮಿತಿ, ಸ್ಥಳ–ಕೃಷ್ಣರಾಜ ಪರಿಷನ್ಮಂದಿರ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 5

‘ಕೋರ್ಟ್ ಮಾರ್ಷಲ್’ ನಾಟಕ ಪ್ರದರ್ಶನ: ನಿರ್ದೇಶನ–ಕೆ.ಪಿ.ಲಕ್ಷ್ಮಣ, ತಂಡ–ಅಭಿನಯ ತರಂಗ ನಾಟಕ ಶಾಲೆ, ಅತಿಥಿ–ಅಭಿನಯ ತರಂಗ ಮುಖ್ಯಸ್ಥೆ ಗೌರಿ ದತ್ತು, ಆಯೋಜನೆ–ಅಂತರಂಗ, ಸ್ಥಳ–ರಂಗಶಂಕರ, ಸಂಜೆ 6.30

ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಹತ್ಯೆ

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: ಯಲಹಂಕ ಬಳಿಯ ಬಂಡು ಕೊಡಿಗೇನಹಳ್ಳಿಯ ಗ್ರಾಮ ಪಂಚಾಯಿತಿ ಕಾರ್ಯದರ್ಶಿ ರಾಮಾಂಜಿ (55) ಅವರನ್ನು ಸೋಮವಾರ ಅವರ ಸ್ವಗ್ರಾಮ ಗುಡಿಬಂಡೆ ತಾಲ್ಲೂಕು ಅವಲ ನಾಗೇನಹಳ್ಳಿಯಲ್ಲಿ ದುಷ್ಕರ್ಮಿಗಳು ಹತ್ಯೆ ಮಾಡಿದ್ದಾರೆ.

ಸಂಜೆ ಪತ್ನಿಯ ಜತೆ ಜಮೀನಿಗೆ ತೆರಳಿದ್ದಾಗ ಹತ್ಯೆ ಮಾಡಲಾಗಿದೆ. ಅವರ ಪತ್ನಿಗೂ ಗಾಯಗಳಾಗಿವೆ. ಪ್ರಾಣಾಪಾಯದಿಂದ ಪಾರಾಗಿದ್ದಾರೆ.

’ಯಾವ ಕಾರಣದಿಂದ ಹತ್ಯೆ ಮಾಡಿದ್ದಾರೆ ಎನ್ನುವುದು ಖಚಿತವಾಗಿಲ್ಲ. ಎರಡು ಮೂರು ಕೋನಗಳಲ್ಲಿ ತನಿಖೆ ನಡೆಯುತ್ತಿದೆ’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಜಿ.ಕೆ.ಮಿಥುನ್ ಕುಮಾರ್ ತಿಳಿಸಿದ್ದಾರೆ.

ಜಮೀನಿನ ವಿವಾದವೇ ಹತ್ಯೆಗೆ ಕಾರಣ ಎಂದು ರಾಮಾಂಜಿ ಅವರ ಪುತ್ರಿ ಲೀಲಾವತಿ ಆರೋಪಿಸಿದ್ದಾರೆ.

50ಕ್ಕೂ ಹೆಚ್ಚು ಪ್ರಕರಣದಲ್ಲಿ ಭಾಗಿ; ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಕೆಲ ಮನೆಗಳಲ್ಲಿ ಕಳ್ಳತನ ಎಸಗಿದ್ದ ಆರೋಪಿ ಶ್ರೀನಿವಾಸ್ ಅಲಿಯಾಸ್ ಡೊಳ್ಳ ಸೀನನನ್ನು (42) ರಾಜಾಜಿನಗರ ಪೊಲೀಸರು ಬಂಧಿಸಿದ್ದಾರೆ.

‘ಪೀಣ್ಯ ನಿವಾಸಿ ಶ್ರೀನಿವಾಸ್, ನಗರ ಹಾಗೂ ಹೊರ ಜಿಲ್ಲೆಗಳಲ್ಲಿ 50ಕ್ಕೂ ಹೆಚ್ಚು ಕಡೆ ಕಳ್ಳತನ ಎಸಗಿದ್ದ. ಜೈಲಿಗೂ ಹೋಗಿ ಜಾಮೀನು ಮೇಲೆ ಹೊರಬಂದಿದ್ದ ಆಗ, ಪುನಃ ಕೃತ್ಯ ಎಸಗಲಾರಂಭಿಸಿದ್ದ. ಆತನಿಂದ ₹ 6 ಲಕ್ಷ ಮೌಲ್ಯ ಚಿನ್ನಾಭರಣ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಜಾಲಹಳ್ಳಿ ಕ್ರಾಸ್ ಬಳಿ ಆರೋಪಿ ಅನುಮಾನಾಸ್ಪದವಾಗಿ ಓಡಾಡುತ್ತಿದ್ದ. ಗಸ್ತಿನಲ್ಲಿದ್ದ ಸಿಬ್ಬಂದಿ ಆತನನ್ನು ವಶಕ್ಕೆ ಪಡೆದು ಠಾಣೆಗೆ ಕರೆತಂದು ವಿಚಾರಣೆ ನಡೆಸಿದಾಗಲೇ ತಪ್ಪೊಪ್ಪಿಕೊಂಡ’ ಎಂದೂ ತಿಳಿಸಿದರು.

‘ತನ್ನ 17ನೇ ವಯಸ್ಸಿನಿಂದಲೇ ಕಳ್ಳತನ ಎಸಗುತ್ತಿರುವ ಆರೋಪಿ, ಅಪರಾಧ ಹಿನ್ನೆಲೆಯುಳ್ಳವ. ಪೀಣ್ಯ, ರಾಜಗೋಪಾಲನಗರ, ಆರ್‌ಎಂಸಿ ಯಾರ್ಡ್, ನಂದಿನಿ ಲೇಔಟ್, ಬ್ಯಾಡರಹಳ್ಳಿ, ತುಮಕೂರು, ಚಿತ್ರದುರ್ಗ ಸೇರಿದಂತೆ ಹಲವು ಠಾಣೆ ವ್ಯಾಪ್ತಿಯಲ್ಲಿ ಆರೋಪಿ ಕಳ್ಳತನ ಎಸಗಿದ್ದ.’

‘ಹಗಲಿನಲ್ಲಿ ಮನೆಗಳನ್ನು ಗುರುತಿಸುತ್ತಿದ್ದ ಆರೋಪಿ, ರಾತ್ರಿ ವೇಳೆ ಮನೆಗೆ ಹೋಗಿ ಬೀಗ ಮುರಿದು ಕಳ್ಳತನ ಎಸಗುತ್ತಿದ್ದ‘ ಎಂದೂ ಪೊಲೀಸರು ಹೇಳಿದರು.



ಜಪ್ತಿ ಮಾಡಿದ ಆಭರಣ ಜೊತೆ ಆರೋಪಿ ಹಾಗೂ ಆತನನ್ನು ಬಂಧಿಸಿದ ಪೊಲೀಸರ ತಂಡ



ಪಂದ್ಯಾವಳಿಯಲ್ಲಿ ಪ್ರಥಮಸ್ಥಾನ ಗಳಿಸಿದ ಐಕ್ಯ ಕ್ರಿಕೆಟ್ ತಂಡದ ಆಟಗಾರರಿಗೆ ಎನ್. ವೇಣುಗೋಪಾಲ್ ಬಹುಮಾನ ವಿತರಿಸಿದರು

ಐಕ್ಯ ಕ್ರಿಕೆಟ್ ತಂಡ ಚಾಂಪಿಯನ್

ಯಲಹಂಕ: ಹೆಗಡೆನಗರದಲ್ಲಿ ನಡೆದ ’ಹೆಗಡೆನಗರ ಚಾಲೆಂಜರ್ಸ್ ಕಪ್ (ಟಿಸಿಸಿ-2021)‘ ರಾಜ್ಯಮಟ್ಟದ ಟೆನ್ನಿಸ್ ಬಾಲ್ ಕ್ರಿಕೆಟ್ ಪಂದ್ಯಾವಳಿಯಲ್ಲಿ ಬೆಂಗಳೂರಿನ ಐಕ್ಯ ಕ್ರಿಕೆಟ್ ತಂಡದ ಆಟಗಾರರು ಚಾಂಪಿಯನ್ ಆಗಿ ಹೊರಹೊಮ್ಮಿದರು.

ಬ್ಯಾಟರಾಯನಪುರ ಕ್ಷೇತ್ರದ ಜೆಡಿಎಸ್ ಕಾರ್ಯಾಧ್ಯಕ್ಷ ಎನ್. ವೇಣುಗೋಪಾಲ್ ಅವರ ಪ್ರಾಯೋಜನೆಯಲ್ಲಿ ನಡೆದ ಈ ಪಂದ್ಯಾವಳಿಯಲ್ಲಿ ಪ್ರಥಮಸ್ಥಾನ ಗಳಿಸಿದ ಐಕ್ಯ ಕ್ರಿಕೆಟ್ ತಂಡದ ಆಟಗಾರರಿಗೆ ₹1 ಲಕ್ಷ ನಗದು ಮತ್ತು ಟ್ರೋಫಿ ವಿತರಿಸಲಾಯಿತು.

ರಾಜ್ಯ ಮೀಸಲು ಪೊಲೀಸ್ ಪಡೆ (ಕೆಎಸ್‌ಆರ್‌ಪಿ) ನೇಮಕಾತಿಯಲ್ಲಿ ಅಕ್ರಮ

ಜೈಲು ಪಾಲಾದ ಅಭ್ಯರ್ಥಿಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಮೀಸಲು ಪೊಲೀಸ್ ಪಡೆ (ಕೆಎಸ್‌ಆರ್‌ಪಿ) ನೇಮಕಾತಿಯಲ್ಲಿ ಅಕ್ರಮ ಎಸಗಿದ್ದ ಆರೋಪದಡಿ ಮೂವರು ಅಸಲಿ ಹಾಗೂ ಮೂವರು ನಕಲಿ ಅಭ್ಯರ್ಥಿಗಳನ್ನು ನಗರ ಪೊಲೀಸರು ಬಂಧಿಸಿದ್ದಾರೆ.

‘ಕೆಎಸ್‌ಆರ್‌ಪಿ ಕಾನ್‌ಸ್ಟೆಬಲ್‌ಗಳ ನೇಮಕಾತಿಗಾಗಿ ಕಳೆದ ವರ್ಷ ಪ್ರಕ್ರಿಯೆ ಆರಂಭವಾಗಿತ್ತು. ಲಿಖಿತ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದ ಮೂವರು ಅಭ್ಯರ್ಥಿಗಳು, ತಮ್ಮ ಪರವಾಗಿ ನಕಲಿ ಅಭ್ಯರ್ಥಿಗಳನ್ನು ದೈಹಿಕ ಪರೀಕ್ಷೆಗೆ ಕಳುಹಿಸಿ ಹುದ್ದೆಗೆ ಅರ್ಹತೆ ಗಿಟ್ಟಿಸಿಕೊಂಡಿದ್ದರು. ಇದೇ ತಿಂಗಳು ನಡೆದ ಅಂತಿಮ ದಾಖಲಾತಿ ಪರಿಶೀಲನೆ ವೇಳೆ ಅಭ್ಯರ್ಥಿಗಳ ಅಕ್ರಮ ಬಯಲಾಗಿದೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

‘ಅಭ್ಯರ್ಥಿ ಮಲ್ಲಯ್ಯ ಪೂಜಾರಿ ಎಂಬುವರ ಪರವಾಗಿ ಸೈಯದ್ ಚಿಮ್ಮಡ್, ಜಗದೀಶ್ ದೊಡ್ಡಗೌಡರ ಪರವಾಗಿ ಪ್ರಕಾಶ್ ಆಡಿನ್ ಹಾಗೂ ನಾಗಪ್ಪ ಪರವಾಗಿ ಮಲ್ಲಿಕಾರ್ಜುನ್ ಎಂಬುವರು ಪರೀಕ್ಷೆಗೆ ಹಾಜರಾಗಿದ್ದರು. ಇವರೆಲ್ಲರ ವಿರುದ್ಧ ಮಡಿವಾಳ ಹಾಗೂ ಪರಪ್ಪನ ಅಗ್ರಹಾರ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಸದ್ಯ ಅವರು ನ್ಯಾಯಾಂಗ ಬಂಧನದಲ್ಲಿದ್ದಾರೆ’ ಎಂದು ತಿಳಿಸಿದರು.

ಸಂಬಂಧಿಗೆ ನೆರವು ನೀಡಿದ ಮಾಜಿ ಸೈನಿಕ: ‘ಲಿಖಿತ ಪರೀಕ್ಷೆ, ದೈಹಿಕ ಪರೀಕ್ಷೆ ಹಾಗೂ ವೈದ್ಯಕೀಯ ಪರೀಕ್ಷೆ ಎಂಬ ಮೂರು ಹಂತದಲ್ಲಿ ಪರೀಕ್ಷೆ ನಡೆಸಲಾಗುತ್ತಿತ್ತು. ಆರೋಪಿ ನಾಗಪ್ಪ ಲಿಖಿತ ಪರೀಕ್ಷೆಯಲ್ಲಿ ಉತ್ತಮ ಅಂಕ ಪಡೆದಿದ್ದರು. ಆದರೆ, ದೈಹಿಕ ಪರೀಕ್ಷೆಯಲ್ಲಿ ಅನುತ್ತೀರ್ಣವಾಗುವ ಭಯ ಅವರಲ್ಲಿತ್ತು. ಹೀಗಾಗಿ, ಸಂಬಂಧಿಯೂ ಆದ ಮಲ್ಲಿಕಾರ್ಜುನ ನೆರವು ಪಡೆದಿದ್ದರು’ ಎಂದೂ ಅಧಿಕಾರಿ ಹೇಳಿದರು.

‘ಮಾಜಿ ಸೈನಿಕರಾಗಿದ್ದ ಮಲ್ಲಿಕಾರ್ಜುನ್, ದೈಹಿಕ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದರು. ಆದರೆ, ತಮ್ಮ ಹೆಸರು ನಾಗಪ್ಪ ಎಂದು ಹೇಳಿಕೊಂಡಿದ್ದರು. ದಾಖಲೆ ಪರಿಶೀಲನೆ ವೇಳೆ ಹಿರಿಯ ಅಧಿಕಾರಿಗಳ ಕೈಗೆ ಸಿಕ್ಕಿಬಿದ್ದರು’ ಎಂದೂ ತಿಳಿಸಿದರು.

‘ಉಳಿದ ನಾಲ್ವರು ಆರೋಪಿಗಳು ಸಹ ವ್ಯವಸ್ಥಿತ ಸಂಚು ರೂಪಿಸಿ ಕೃತ್ಯ ಎಸಗಿದ್ದರು. ಕೃತ್ಯಕ್ಕಾಗಿ ನಕಲಿ ಅಭ್ಯರ್ಥಿಗಳು ಅಸಲಿ ಅಭ್ಯರ್ಥಿಗಳಿಂದ ಹಣ ಪಡೆದಿರುವ ಮಾಹಿತಿಯೂ ಇದೆ’ ಎಂದೂ ಹೇಳಿದರು.

ಸಂಕ್ಷಿಪ್ತ ಸುದ್ದಿ


ಇಂದು ಹುತಾತ್ಮರ ದಿನ

ಬೆಂಗಳೂರು: ದೇಶದ ಸ್ವಾತಂತ್ರ್ಯಕ್ಕಾಗಿ ಹುತಾತ್ಮರಾದ ಭಗತ್‌ಸಿಂಗ್, ಸುಖದೇವ್ ಹಾಗೂ ರಾಜಗುರು ಅವರ ಸ್ಮರಣಾರ್ಥ ಜೈ ಭಾರತ ಮಾತಾ ಸೇವಾ ಸಮಿತಿಯು ಮಾ.23ರಂದು ಬೆಳಿಗ್ಗೆ 10.30ಕ್ಕೆ ಅರಮನೆ ಮೈದಾನದ ತ್ರಿಪುರ ವಾಸಿನಿಯಲ್ಲಿ ಹುತಾತ್ಮರ ದಿನ ಕಾರ್ಯಕ್ರಮ ಹಮ್ಮಿಕೊಂಡಿದೆ.

ಸೋಮವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಮಿತಿಯ ರಾಷ್ಟ್ರೀಯ ವಕ್ತಾರ ವೈಜನಾಥ ಎಸ್.ಝುಳಕಿ, ’ದೇಶಭಕ್ತಿ ಗೀತೆಗಳ ಗಾಯನ, ವೀರ ಯೋಧರಿಗೆ ನಮನ, ವಿಜಯ್ ಕುಮಾರ್ ಸೋನಾರೆ ಬೀದರ್ ಅವರ ತಂಡದಿಂದ ದೇಶಭಕ್ತಿ ಏಕತೆಯ ಕಿರುನಾಟಕ ಪ್ರದರ್ಶನ ಇರಲಿದೆ’ ಎಂದು ಮಾಹಿತಿ ನೀಡಿದರು.

ವೆಂಕಟೇಶ್‌ಗೆ ಇಡುಕ್ಕಿ ಕ್ಷೇತ್ರದ ವೀಕ್ಷಕ ಹೊಣೆ

ಬೆಂಗಳೂರು: ಕೇರಳ ರಾಜ್ಯ ವಿಧಾನ ಸಭೆಗೆ ಏ. 6ರಂದು ಚುನಾವಣೆ ನಡೆಯಲಿದ್ದು, ಆ ರಾಜ್ಯದ ಇಡುಕ್ಕಿ ಕ್ಷೇತ್ರಕ್ಕೆ ಕಾಂಗ್ರೆಸ್ ವೀಕ್ಷಕರಾಗಿ ವಿಧಾನಪರಿಷತ್ ಸದಸ್ಯ ಯು.ಬಿ. ವೆಂಕಟೇಶ್ ಅವರನ್ನು ಎಐಸಿಸಿ ನೇಮಿಸಿದೆ.



ಎಐಸಿಸಿ ಅಧ್ಯಕ್ಷೆ ಸೋನಿಯಾ ಗಾಂಧಿ ಸಲಹೆಯಂತೆ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಈ ನೇಮಕ ಮಾಡಿದ್ದಾರೆ.

ಸೌಂದರ್ಯ ಸ್ಪರ್ಧೆಗೆ ಆನ್‌ಲೈನ್ ಆಡಿಷನ್

ಬೆಂಗಳೂರು: ಟೀಮ್ ಐಕ್ಯಂ ವತಿಯಿಂದ ಕಾರ್ಪೊರೇಟ್ ಫ್ಯಾಷನ್ ವೀಕ್ ಸೌಂದರ್ಯ ಸ್ಪರ್ಧೆಗೆ ಆನ್‌ಲೈನ್ ಆಡಿಷನ್ ನಡೆಯಲಿದೆ.

ನಗರದ ಹೋಟೆಲ್ ಗ್ರಾಂಡ್ ಸ್ಟಾರ್‌ನಲ್ಲಿ ಅಂತಿಮ ಸ್ಪರ್ಧೆ ಏಪ್ರಿಲ್‌ನಲ್ಲಿ ನಡೆಯಲಿದೆ. ಎಲ್ಲ ವರ್ಗದ ಹಾಗೂ ವಯೋಮಾನದ ಮಹಿಳೆಯರು ಆಡಿಷನ್‌ನಲ್ಲಿ ಭಾಗವಹಿಸಬಹುದು.

ಆಸಕ್ತರು ವರ್ಚುವಲ್ ಆಡಿಷನ್‌ನಲ್ಲಿ ಭಾಗವಹಿಸಲು ಮೊಬೈಲ್ ಸಂಖ್ಯೆ 8660820661 ಅಥವಾ www.cfwglobal.com ಅನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ನಾಳೆ ಕಾರ್ಮಿಕರ ಪ್ರತಿಭಟನೆ

ಬೆಂಗಳೂರು: ಗುತ್ತಿಗೆ ಪೌರಕಾರ್ಮಿಕರನ್ನು ಕಾಯಂಗೊಳಿಸುವುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಕಾರ್ಮಿಕ ಹಕ್ಕುಗಳ ವೇದಿಕೆಯ ನೇತೃತ್ವದಲ್ಲಿ ಇದೇ 24ರಂದು ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ವೇದಿಕೆಯ ಬೆಂಗಳೂರು ನಗರ ಜಿಲ್ಲಾ ಘಟಕದ ಅಧ್ಯಕ್ಷ ಜಿ.ಟಿ.ಮುತ್ಯಾಲು ತಿಳಿಸಿದ್ದಾರೆ.


ಪ್ರವಾಸೋದ್ಯಮ ಸಚಿವ ಸಿ.ಪಿ. ಯೋಗೀಶ್ವರ್

‘ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡಿ, ನಿರುದ್ಯೋಗಿಗಳಿಗೆ ಉದ್ಯೋಗ ಕಲ್ಪಿಸುವುದು ಕೂಡ ಸರ್ಕಾರದ ಉದ್ದೇಶವಾಗಿದೆ’

‘ನಂದಿಬೆಟ್ಟಕ್ಕೆ ರೋಪ್‌ವೇ ಶೀಘ್ರ’

ಬೆಂಗಳೂರು: ‘ನಂದಿಬೆಟ್ಟಕ್ಕೆ ರೋಪ್‌ವೇ ನಿರ್ಮಿಸಲು ನಿರ್ಧರಿಸಲಾಗಿದೆ. ಶೀಘ್ರದಲ್ಲಿಯೇ ಕಾಮಗಾರಿ ಆರಂಭವಾಗಲಿದೆ’ ಎಂದು ಪ್ರವಾಸೋದ್ಯಮ ಸಚಿವ ಸಿ.ಪಿ. ಯೋಗೀಶ್ವರ್ ಹೇಳಿದರು.

ವಿಧಾನಪರಿಷತ್‌ನಲ್ಲಿ ಕಾಂಗ್ರೆಸ್‌ನ ರಘು ಆಚಾರ್ ಮತ್ತು ಜೆಡಿಎಸ್‌ನ ರಮೇಶ್ ಗೌಡ ಅವರ ಜಂಟಿ ಪ್ರಶ್ನೆಗೆ ಉತ್ತರಿಸಿದ ಅವರು, ‘ಪ್ರಸಕ್ತ ಸಾಲಿನ ಬಜೆಟ್‌ನಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗೆ ಹೆಚ್ಚಿನ ಅನುದಾನ ಮೀಸಲಿರಿಸಲಾಗಿದೆ’ ಎಂದರು.



‘ರಾಜ್ಯದಲ್ಲಿ ಪ್ರವಾಸೋದ್ಯಮಕ್ಕೆ ಹೆಚ್ಚಿನ ಅವಕಾಶಗಳಿವೆ. ಆದರೆ, ಸರ್ಕಾರ ಈ ಕ್ಷೇತ್ರಕ್ಕೆ ಅನುದಾನ ನೀಡದೆ ನಿರ್ಲಕ್ಷ್ಯ ಮಾಡುತ್ತಿದೆ. ನಂದಿಬೆಟ್ಟಕ್ಕೆ ರೋಪ್‌ವೇ ಕಲ್ಪಿಸುವ ಯೋಜನೆ ಹಲವು ವರ್ಷಗಳಿಂದ ನನೆಗುದಿಗೆ ಬಿದ್ದಿದೆ’ ಎಂದು ರಮೇಶ್ ಗೌಡ ಹೇಳಿದರು.

ಅದಕ್ಕೆ ಯೋಗೀಶ್ವರ್, ‘ಪ್ರವಾಸೋದ್ಯಮ ಅಭಿವೃದ್ಧಿಗೆ ಈ ಬಾರಿ ಹಲವು ವಿನೂತನ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ’ ಎಂದರು.

‘ನಂದಿಬೆಟ್ಟಕ್ಕೆ ರೂಪ್‌ವೇ ಯೋಜನೆ ಪೂರ್ಣಗೊಂಡ ಬಳಿಕ ರಮೇಶ್ ಗೌಡ ಅವರನ್ನು ಕರೆದುಕೊಂಡು ಹೋಗಿ ಅದರಲ್ಲಿ ಕೂರಿಸಲಾಗುವುದು’ ಎಂದು ಯೋಗೇಶ್ವರ್ ಹೇಳಿದರು. ಆಗ ಸಭಾಪತಿ, ‘ಅವರನ್ನು ಕರೆದುಕೊಂಡು ಹೋಗುವಾಗ ಹುಷಾರು’ ಎಂದು ಹಾಸ್ಯ ಚಟಾಕಿ ಹಾರಿಸಿದರು. ಬಿಜೆಪಿ ಸದಸ್ಯ ರವಿಕುಮಾರ್, ‘ರಮೇಶ್ ಗೌಡ ರೂಪ್‌ವೇಯಿಂದ ಕೆಳಗೆ ಜಿಗಿದು ಬಿಡುತ್ತಾರೆ’ ಎಂದರು.

ನಾಪತ್ತೆಯಾಗಿರುವ ನಾಲ್ವರಿಗೆ ಮೂರನೇ ನೋಟಿಸ್– ಎಸ್‌ಐಟಿ ತಡದಿಂದ ವಿವಿಧ ರಾಜ್ಯಗಳಲ್ಲಿ ಶೋಧ

ಸಿ.ಡಿ: ನಾಗರಾಜು ವಿಚಾರಣೆಗೆ ಸಿದ್ಧತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿ.ಡಿ. ಪ್ರಕರಣ ಸಂಬಂಧ ಬಿಜೆಪಿ ಶಾಸಕ ರಮೇಶ ಜಾರಕಿಹೊಳಿ ಪರವಾಗಿ ಸದಾಶಿವನಗರ ಠಾಣೆಗೆ ದೂರು ನೀಡಿದ್ದ ಮಾಜಿ ಶಾಸಕ ಎಂ.ವಿ. ನಾಗರಾಜು ಅವರನ್ನು ವಿಚಾರಣೆ ನಡೆಸಲು ವಿಶೇಷ ತನಿಖಾ ತಂಡದ (ಎಸ್‌ಐಟಿ) ಅಧಿಕಾರಿಗಳು ಸಿದ್ಧತೆ ನಡೆಸುತ್ತಿದ್ದು, ಸದ್ಯದಲ್ಲೇ ನೋಟಿಸ್ ನೀಡುವ ಸಾಧ್ಯತೆ ಇದೆ.

ಪ್ರಕರಣದ ತನಿಖೆಯನ್ನು ಚುರುಕುಗೊಳಿಸಿರುವ ಅಧಿಕಾರಿಗಳು, ಇತ್ತೀಚೆಗಷ್ಟೇ ರಮೇಶ ಜಾರಕಿಹೊಳಿ ಅವರನ್ನು ಎರಡು ಬಾರಿ ವಿಚಾರಣೆಗೆ ಒಳಪಡಿಸಿ ಮಾಹಿತಿ ಕಲೆಹಾಕಿದ್ದರು. ರಮೇಶ ಅವರ ಹೇಳಿಕೆಯಲ್ಲಿ ನಾಗರಾಜು ಹೆಸರು ಉಲ್ಲೇಖವಿದ್ದು, ಅದೇ ಕಾರಣಕ್ಕೆ ವಿಚಾರಣೆ ನಡೆಸಲು ಅಧಿಕಾರಿಗಳು ಮುಂದಾಗಿದ್ದಾರೆ.

‘ತಮ್ಮ ಬಳಿ ಸಿ.ಡಿ ಇರುವುದಾಗಿ ಹೇಳಿದ್ದ ಕೆಲವರು, ನಾಲ್ಕು ತಿಂಗಳ ಹಿಂದೆಯೇ ನಾಗರಾಜು ಅವರ ಮೂಲಕ ಕೋಟ್ಯಂತರ ರೂಪಾಯಿ ಹಣಕ್ಕೆ ಬೇಡಿಕೆ ಇಟ್ಟಿದ್ದರು. ಆ ವಿಷಯವನ್ನು ನಾಗರಾಜು ನನ್ನ ಗಮನಕ್ಕೆ ತಂದಿದ್ದರು. ಸ್ವಲ್ಪ ಹಣವನ್ನೂ ಕೊಟ್ಟಿದ್ದೆ. ಆದರೆ, ಅವರು ಯಾರು ಎಂಬುದು ನನಗೆ ಗೊತ್ತಿಲ್ಲ’ ಎಂಬುದಾಗಿ ರಮೇಶ ಹೇಳಿಕೆಯಲ್ಲಿ ತಿಳಿಸಿದ್ದರು. ಅದೇ ಮಾಹಿತಿ ಆಧರಿಸಿ, ಹಣಕ್ಕೆ ಬೇಡಿಕೆ ಇಟ್ಟಿದ್ದವರು ಯಾರು? ಹಾಗೂ ಸಿ.ಡಿ. ಪ್ರಕರಣದ ಹಿಂದೆ ಯಾರಿದ್ದಾರೆ? ಎಂಬ ದಿಕ್ಕಿನಲ್ಲಿ ಎಸ್‌ಐಟಿ ತನಿಖೆ ನಡೆಸುತ್ತಿದೆ.

‘ಪ್ರಕರಣದಲ್ಲಿ ಪ್ರತಿಯೊಬ್ಬರ ಹೇಳಿಕೆಯೂ ಮಹತ್ವದ್ದಾಗಿದೆ. ಹೀಗಾಗಿ, ಹಲವರ ಪಟ್ಟಿ ಮಾಡಿ ಒಬ್ಬೊಬ್ಬರಾಗಿ ವಿಚಾರಣೆ ನಡೆಸಲಾಗುತ್ತಿದೆ. ಸದ್ಯದಲ್ಲೇ ಎಂ.ವಿ. ನಾಗರಾಜು ಅವರಿಗೂ ನೋಟಿಸ್ ನೀಡಲಾಗುವುದು. ತಮ್ಮ ಬಳಿ ಇರುವ ಮಾಹಿತಿಯನ್ನು ಹಂಚಿಕೊಳ್ಳುವಂತೆ ಕೋರಲಾಗುವುದು’ ಎಂದು ಎಸ್‌ಐಟಿ ಮೂಲಗಳು ಹೇಳಿವೆ.

ನಾಪತ್ತೆಯಾದವರಿಗೆ ಮೂರನೇ ನೋಟಿಸ್: ಪ್ರಕರಣದಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ ಎನ್ನಲಾದ ನಾಲ್ವರು ತಲೆಮರೆಸಿಕೊಂಡಿದ್ದು, ಅವರ ವಿಚಾರಣೆಗಾಗಿ ಮೂರನೇ ಬಾರಿ ಎಸ್‌ಐಟಿ ಅಧಿಕಾರಿ ನೋಟಿಸ್ ನೀಡಿದ್ದಾರೆ.

‘ಪ್ರಕರಣ ಗಂಭೀರವಾಗಿದ್ದು, ಮಾಹಿತಿ ಅಗತ್ಯವಿರುವುದಾಗಿ ಹೇಳಿ ನಾಲ್ವರಿಗೂ ಈಗಾಗಲೇ ಎರಡು ಬಾರಿ ನೋಟಿಸ್ ನೀಡಲಾಗಿತ್ತು. ಅವರು ವಿಚಾರಣೆಗೆ ಬಂದಿಲ್ಲ. ತಲೆಮರೆಸಿಕೊಂಡು ಓಡಾಡುತ್ತಿದ್ದಾರೆ. ಮೂರನೇ ಬಾರಿ ಅವರ ವಿಳಾಸಕ್ಕೆ ಹಾಗೂ ಕುಟುಂಬದವರಿಗೆ ನೋಟಿಸ್ ಪ್ರತಿ ಕಳುಹಿಸಲಾಗಿದೆ’ ಎಂದೂ ಮೂಲಗಳು ತಿಳಿಸಿವೆ.

ಹೊರ ರಾಜ್ಯಗಳಲ್ಲಿ ಸುತ್ತಾಟ: ಪ್ರಕರಣಕ್ಕೆ ಸಂಬಂಧಪಟ್ಟ ಕೆಲವರು, ಹೊರ ರಾಜ್ಯಗಳಲ್ಲಿರುವ ಮಾಹಿತಿ ಎಸ್‌ಐಟಿಗೆ ಸಿಕ್ಕಿದೆ. ಹೀಗಾಗಿ, ವಿಶೇಷ ತಂಡಗಳು ಹೊರ ರಾಜ್ಯಗಳಲ್ಲಿ ಸುತ್ತಾಡುತ್ತಿವೆ.

’ಗೋವಾ, ಮಹಾರಾಷ್ಟ್ರ, ಆಂಧ್ರ ಪ್ರದೇಶ, ತಮಿಳುನಾಡು ಹಾಗೂ ಕೇರಳದಲ್ಲಿ ಶೋಧ ನಡೆಯುತ್ತಿದೆ. ನಾಪತ್ತೆಯಾದವರ ಬಗ್ಗೆ ಸದ್ಯಕ್ಕೆ ಯಾವುದೇ ಮಾಹಿತಿ ಲಭ್ಯವಾಗಿಲ್ಲ’ ಎಂದೂ ಮೂಲಗಳು ಹೇಳಿವೆ.

ಇನ್ನೂ ಸಿಗದ ಮೂಲ ವಿಡಿಯೊ

ರಮೇಶ ಜಾರಕಿಹೊಳಿ ಅವರು ಯುವತಿ ಜೊತೆಗೆ ಇದ್ದಾರೆ ಎನ್ನಲಾದ ವಿಡಿಯೊದ ಮೂಲ ಪ್ರತಿ ಇದುವರೆಗೂ ಎಸ್‌ಐಟಿಗೆ ಸಿಕ್ಕಿಲ್ಲ. ನಾಪತ್ತೆಯಾದವರು ಮತ್ತು ವಿಚಾರಣೆಗೆ ಒಳಪಡಿಸಿದ್ದ ಕೆಲ ವ್ಯಕ್ತಿಗಳ ಮನೆ ಹಾಗೂ ಕಚೇರಿಗಳಲ್ಲಿ ಶೋಧ ನಡೆಸಿದರೂ ಮೂಲ ವಿಡಿಯೊ ಸುಳಿವು ಸಿಕ್ಕಿಲ್ಲ.

‘ಸಂಕಲನ ಮಾಡಿದ ಹಾಗೂ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದ್ದ ವಿಡಿಯೊಗಳು ಮಾತ್ರ ಸಿಕ್ಕಿವೆ. ಅವುಗಳ ಪರೀಕ್ಷೆಯಿಂದ ಮಾಹಿತಿ ಸಿಗುವುದು ಕಷ್ಟ. ಹೀಗಾಗಿ, ಮೂಲ ವಿಡಿಯೊಗಾಗಿ ಹುಡುಕಾಟ ನಡೆದಿದೆ. ಸಿಕ್ಕ ಕೂಡಲೇ ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲಾಗುವುದು’ ಎಂದೂ ಮೂಲಗಳು ಹೇಳಿವೆ.

ತಡೆಯಾಜ್ಞೆ ಸಮರ್ಥಿಸಿಕೊಂಡ ಡಾ.ಸುಧಾಕರ್

ಬೆಂಗಳೂರು: ‘ವಿರೋಧಿಗಳು ನೇರವಾಗಿ ಬಂದರೆ ಎದುರಿಸಬಹುದು. ಹಿಂದಿನಿಂದ ಬರುತ್ತಾರೆ, ಹೀಗಾಗಿ ನಮ್ಮ ರಕ್ಷಣೆಗೆ ನ್ಯಾಯಾಲಯ ಮೆಟ್ಟಿಲು ಹತ್ತಿದೆವು. ಇದರಲ್ಲಿ ತಪ್ಪೇನಿದೆ’ ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಪ್ರಶ್ನಿಸಿದರು.

ರಮೇಶ ಜಾರಕಿಹೊಳಿ ಸಿ.ಡಿ.ಪ್ರಕರಣದಲ್ಲಿ ಆರು ಸಚಿವರು ನ್ಯಾಯಾಲಯಕ್ಕೆ ಮೊರೆ ಹೋದ ವಿಚಾರವನ್ನು ಪ್ರಸ್ತಾಪಿಸಿ ಕಾಂಗ್ರೆಸ್ ಸದಸ್ಯರು ವಿಧಾನಸಭೆಯಲ್ಲಿ ನಡೆಸಿದ ಟೀಕಾ ಪ್ರಹಾರಕ್ಕೆ ಅವರು ಉತ್ತರಿಸಿದರು.

ಇಂಟರ್‌ನೆಟ್‌ನಲ್ಲಿರುವ ಚಿತ್ರವನ್ನು ಬಳಸಿ ತಮಗೆ ಬೇಕಾದಂತೆ ಮಾಡುವ ತಂತ್ರಜ್ಞಾನ ಬಂದಿದೆ. ರಮೇಶ ಅವರ ಪರಿಸ್ಥಿತಿ ಏನಾಗಿದೆ ನೋಡಿ. ಒಮ್ಮೆ ಹೋದ ಮಾನ ಬರುವುದಿಲ್ಲ. ಎಚ್‌.ವೈ.ಮೇಟಿ ವಿರುದ್ಧ ಇಂತಹದ್ದೇ ಪ್ರಕರಣ ದಾಖಲಾಗಿತ್ತು. ತನಿಖೆ ಆದ ಬಳಿಕ ಅವರನ್ನು ನಿರ್ದೋಷಿ ಎಂದು ಘೋಷಿಸಲಾಯಿತು. ಆದರೆ, ಅವರ ಜೀವನ ನಾಶ ಆಯಿತು. ಯಾರು ಕಟ್ಟಿಕೊಡುತ್ತಾರೆ ಎಂದು ಸುಧಾಕರ್ ಪ್ರಶ್ನಿಸಿದರು.

‘ಹಿಂದೆ ಒಬ್ಬರು ಸಚಿವರು ಮತ್ತು ಸಭಾಧ್ಯಕ್ಷರಾಗಿದ್ದವರು ತಮ್ಮ ವಿರುದ್ಧ ಸುದ್ದಿ ವಾಹಿನಿಯಲ್ಲಿ ವರದಿ ಬಂತು ಎಂದು ಹೇಳಿ, ಅಲ್ಲಿಗೆ ಹೋಗಿ ಚಪ್ಪಲಿಯಲ್ಲಿ ಹೊಡೆದು ಬಂದರು. ನಾವು ಆ ರೀತಿ ಮಾಡಲು ಆಗಲ್ಲ. ನಮ್ಮ ರಕ್ಷಣೆಗಾಗಿ ನ್ಯಾಯಾಲಯದ ಮೊರೆ ಹೋಗಿದ್ದೇವೆ’ ಎಂದೂ ಹೇಳಿದರು.

ಇದಕ್ಕೆ ಬಳಿಕ ಪ್ರತಿಕ್ರಿಯಿಸಿದ ಕಾಂಗ್ರೆಸ್‌ನ ಕೆ.ಆರ್. ರಮೇಶ್ ಕುಮಾರ್, ‘ನಾನು ಭೂಮಿ ಅತಿಕ್ರಮಣ ಮಾಡಿದ್ದೇನೆ ಎಂದು ಸುದ್ದಿವಾಹಿನಿಯೊಂದು ಪ್ರೋಮೊ ಹಾಕಿತು. ದೂರವಾಣಿ ಮೂಲಕ ಅದನ್ನು ಪ್ರಶ್ನಿಸಿದೆ. ಇಲ್ಲಿಗೆ ಬಂದು ಮಾತನಾಡಿ ಎಂದು ವಾಹಿನಿಯವರು ಹೇಳಿದರು. ನಾನೊಬ್ಬನೇ ವಾಹಿನಿಯ ಸ್ಟುಡಿಯೋ ಗೆ ಹೋದೆ. ಮುಕ್ಕಾಲು ಗಂಟೆ ಕಳೆದೂ ಯಾರೂ ನನ್ನನ್ನು ಕೇಳಲು ಬರಲಿಲ್ಲ. ನನ್ನ ಚಪ್ಪಲಿ ಅಲ್ಲಿ ಬಿಟ್ಟು ಬಂದೆ ಅಷ್ಟೇ. ಕೆಲವೊಮ್ಮೆ ಕೆಲವು ವಸ್ತು ಬಳಸಲೇಬೇಕಾಗುತ್ತದೆ’ ಎಂದರು.

ನ್ಯಾಯಾಲಯದಿಂದ ತಡೆಯಾಜ್ಞೆ ತಂದಿದ್ದನ್ನು ಸಚಿವರಾದ ಎಸ್‌.ಟಿ.ಸೋಮಶೇಖರ್, ನಾರಾಯಣಗೌಡ, ಶಿವರಾಮ್ ಹೆಬ್ಬಾರ್ ಸಮರ್ಥಿಸಿಕೊಂಡರು.

ವಿಧಾನ ಪರಿಷತ್‌ನಲ್ಲಿ ಲಹರ್ ಸಿಂಗ್ ಸಿರೋಯ ಆರೋಪ

ಶಾಸಕರ ಆಪ್ತರಿಂದ ಹಫ್ತಾ ವಸೂಲಿ

ಪ್ರಜಾವಾಣಿ ವಾರ್ತೆ



ವಿಧಾನ ಮಂಡಲದಲ್ಲಿ

ಬೆಂಗಳೂರು: ‘ಶಾಸಕರ (ಎಂಎಲ್‌ಎ) ಆಪ್ತರು ಬೆಂಗಳೂರಿನಲ್ಲಿ ಪಾದಚಾರಿ ಮಾರ್ಗಗಳನ್ನು ಒತ್ತುವರಿ ಮಾಡಿಕೊಂಡವರಿಂದ ಹಫ್ತಾ ವಸೂಲಿ ಮಾಡುತ್ತಿದ್ದಾರೆ. ಇದರಿಂದಾಗಿಯೇ ಪಾದಚಾರಿ ಮಾರ್ಗಗಳ ಅತಿಕ್ರಮಣ ಅವ್ಯಾಹತವಾಗಿ ನಡೆಯುತ್ತಿದೆ’ ಎಂದು ಬಿಜೆಪಿಯ ಲಹರ್ ಸಿಂಗ್ ಸಿರೋಯ ಸೋಮವಾರ ವಿಧಾನ ಪರಿಷತ್‌ನಲ್ಲಿ ಆರೋಪಿಸಿದರು.

ಬಜೆಟ್ ಮೇಲಿನ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ‘ಬೆಂಗಳೂರು ಜನಸ್ನೇಹಿ ನಗರ ಎಂಬ ವರದಿ ಬಂದಿದೆ. ಆದರೆ, ಪಾದಚಾರಿ ಮಾರ್ಗಗಳಲ್ಲಿ ಜಾಗವಿಲ್ಲದೆ ಜನರು ರಸ್ತೆಯ ಮೇಲೆ ನಡೆಯುವಂತಾಗಿದೆ. ಇತ್ತೀಚೆಗೆ ಮೂವರು ಟ್ಯಾಂಕರ್ ಗುದ್ದಿ ಮೃತಪಟ್ಟಿದ್ದಾರೆ. ಇದಕ್ಕೆಲ್ಲ ಎಂಎಲ್‌ಎಗಳ ಆಪ್ತರ ಹಫ್ತಾ ವಸೂಲಿಯೇ ಕಾರಣ’ ಎಂದು ದೂರಿದರು.

ಹುಕ್ಕಾ ಬಾರ್‌ಗಳನ್ನು ನಿಷೇಧಿಸುವುದಾಗಿ ಗೃಹ ಸಚಿವರು ಹೇಳುತ್ತಿದ್ದಾರೆ. ಆದರೆ, ಮಹಾರಾಷ್ಟ್ರದಲ್ಲಿ ಸಚಿವರ ಮೇಲೆ ಆರೋಪ ಬಂದಿದೆ. ಇಲ್ಲಿಯೂ ಅಂತಹ ಕ್ರಮ ಕೆಲವರು ಹಣ ವಸೂಲಿಗೆ ಅವಕಾಶ ನೀಡುವುದಕ್ಕೆ ಕಾರಣವಾಗಬಾರದು ಎಂದು ಹೇಳಿದರು.

ಬಡವರಿಗೆ ನೆರವು ನೀಡಿ: ‘ಬಜೆಟ್‌ನಲ್ಲಿ ಜಾತಿ ಆಧಾರಿತವಾಗಿ ಅನುದಾನ ನಿಗದಿ ಮಾಡುವುದಕ್ಕಿಂತ ಬಡವರಿಗಾಗಿ ಹೆಚ್ಚು ಹಣ ಮೀಸಲಿಡಬೇಕು. ಎಲ್ಲ ಬಡವರಿಗೂ ತಲುಪಬೇಕು. ಯಾವ ಪಕ್ಷದ ಸರ್ಕಾರಗಳೂ ಈ ದಿಸೆಯಲ್ಲಿ ಕೆಲಸ ಮಾಡುತ್ತಿಲ್ಲ’ ಎಂದು ಲಹರ್ ಸಿಂಗ್ ಸಿರೋಯ ಆಕ್ಷೇಪಿಸಿದರು.

‘ನಗರದಲ್ಲಿನ ಸರ್ಕಾರಿ ಆಸ್ಪತ್ರೆಗಳ ಸುಧಾರಣೆಗೆ ಹೆಚ್ಚು ಅನುದಾನ ಒದಗಿಸಬೇಕು. ಶಾಸಕರು, ಸಂಸದರು ಮತ್ತು ಅವರ ಕುಟುಂಬದವರು ಸರ್ಕಾರಿ ಆಸ್ಪತ್ರೆಗಳಲ್ಲೇ ಚಿಕಿತ್ಸೆ ಪಡೆಯುವುದನ್ನು ಕಡ್ಡಾಯ ಮಾಡಬೇಕು. ನಾನು ಮತ್ತು ನನ್ನ ಕುಟುಂಬ ಯಾವತ್ತೂ ಖಾಸಗಿ ಆಸ್ಪತ್ರೆಗೆ ಹೋಗುವುದಿಲ್ಲ. ವಿಕ್ಟೋರಿಯಾ ಮತ್ತು ಬೌರಿಂಗ್ ಆಸ್ಪತ್ರೆಗಳಲ್ಲೇ ಚಿಕಿತ್ಸೆ ಪಡೆಯುತ್ತೇವೆ. ಅಲ್ಲಿನ ಸ್ಥಿತಿ ಕಂಡು ಬೇಸರವಾಗುತ್ತದೆ’ ಎಂದರು.

‘ಕೋವಿಡ್ ಹೆಸರಲ್ಲಿ ಭ್ರಷ್ಟಾಚಾರ’: ಜೆಡಿಎಸ್‌ನ ಎಚ್‌.ಎಂ. ರಮೇಶ್ ಗೌಡ ಮಾತನಾಡಿ, ‘ಕೋವಿಡ್ ಹೆಸರಿನಲ್ಲಿ ವ್ಯಾಪಕ ಭ್ರಷ್ಟಾಚರ ನಡೆದಿದೆ. ಸೋಂಕಿನಿಂದ ಮೃತಪಟ್ಟಿರುವ ಕೋವಿಡ್ ವಾರಿಯರ್‌ಗಳ ಪೈಕಿ ಒಬ್ಬರ ಕುಟುಂಬಕ್ಕೂ ಈವರೆಗೆ ₹ 30 ಲಕ್ಷ ಪರಿಹಾರ ನೀಡಿಲ್ಲ. ಕೋವಿಡ್ ಆರೈಕೆ ಕೇಂದ್ರದ ಹೆಸರಿನಲ್ಲೂ ಸರ್ಕಾರದ ಹಣ ಲೂಟಿಗೆ ಪ್ರಯತ್ನ ನಡೆಯಿತು’ ಎಂದು ಆರೋಪಿಸಿದರು.



ಸಾಧಕಿಯರಿಗೆ ಸನ್ಮಾನ

ಯಲಹಂಕ ಬಳಿಯ ಹೆಗಡೆ ನಗರದಲ್ಲಿ ನಡೆದ ಮಹಿಳಾ ದಿನಾಚರಣೆಯಲ್ಲಿ ವಿವಿಧ ಕ್ಷೇತ್ರಗಳ ಸಾಧಕಿಯರನ್ನು ಶಾಸಕ ಕೃಷ್ಣ ಬೈರೇಗೌಡ ಸನ್ಮಾನಿಸಿದರು. ಸಾಮಾಜಿಕ ಕಾರ್ಯಕರ್ತೆ ಮೀನಾಕ್ಷಿ ಶೇಷಾದ್ರಿ, ಕಾಂಗ್ರೆಸ್ ಮುಖಂಡರಾದ ಎಂ.ಜಯಗೋಪಾಲಗೌಡ, ಎನ್‌.ಎನ್‌.ಶ್ರೀನಿವಾಸಯ್ಯ, ಪಳನಿ ವೆಂಕಟೇಶ್, ಡಿ.ಬಿ.ಸುರೇಶ್ ಗೌಡ, ಶಾಂತಮ್ಮ ಇದ್ದರು

ರಾಜ್ಯ ಮಟ್ಟದ ಭಜನೆ ಸ್ಪರ್ಧೆ ಏ.14ರಿಂದ

ಹುಬ್ಬಳ್ಳಿ: ಸಿದ್ಧಾರೂಢ ಸ್ವಾಮೀಜಿ ಜಯಂತ್ಯುತ್ಸವದ ಅಂಗವಾಗಿ, ಏ.14ರಿಂದ 20ರವರೆಗೆ ರಾಜ್ಯಮಟ್ಟದ ಭಜನೆ ಸ್ಪರ್ಧೆಯನ್ನು ಮಠದಲ್ಲಿ ಆಯೋಜಿಸಲಾಗಿದೆ ಎಂದು ಭಜನೆ ಸ್ಪರ್ಧೆ ಸಮಿತಿ ಅಧ್ಯಕ್ಷ ಹಾಗೂ ಮಠದ ಧರ್ಮದರ್ಶಿ ಶಾಮಾನಂದ ಪೂಜೇರಿ ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಪ್ರಥಮ ಸ್ಥಾನ ಪಡೆದವರಿಗೆ ₹90 ಸಾವಿರ ನಗದು, ದ್ವಿತೀಯ ₹70 ಸಾವಿರ, ತೃತೀಯ ₹60 ಸಾವಿರ ಹಾಗೂ ₹8 ಸಾವಿರವನ್ನು ಸಮಾಧಾನಕರ ಬಹುಮಾನವಾಗಿ ಹತ್ತು ತಂಡಗಳಿಗೆ ನೀಡಲಾಗುವುದು.

ಆಸಕ್ತರು ಏ.10ರೊಳಗೆ ಮಠದ ಕಚೇರಿಯನ್ನು ಸಂಪರ್ಕಿಸಿ, ₹300 ಶುಲ್ಕ ಪಾವತಿಸಿ ತಂಡದ ಹೆಸರು ನೋಂದಣಿ ಮಾಡಿಕೊಳ್ಳಬೇಕು. ನೋಂದಣಿ ಹಾಗೂ ಹೆಚ್ಚಿನ ಮಾಹಿತಿಗೆ 9620693060/9880169881 ಸಂಪರ್ಕಿಸಬಹುದು.

‘ಶಾಲೆಗಳಲ್ಲಿ ಮೂಲ ವಿಜ್ಞಾನಕ್ಕೆ ಒತ್ತು: ಕ್ರಮ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಶಾಲಾ ಮಕ್ಕಳಿಗೆ ಮೂಲ ವಿಜ್ಞಾನ ವಿಷಯದಲ್ಲಿ ಆಸಕ್ತಿ ಮೂಡಿಸಲು ಹೊಸ ಕಾರ್ಯಕ್ರಮ ರೂಪಿಸಲು ಚಿಂತನೆ ನಡೆಯುತ್ತಿದೆ’ ಎಂದು ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವ ಎಸ್. ಸುರೇಶ್ ಕುಮಾರ್ ಹೇಳಿದರು.

ಬಿಜೆಪಿಯ ಭಾರತಿ ಶೆಟ್ಟಿ ಅವರ ಪ್ರಶ್ನೆಗೆ ಉತ್ತರಿಸಿದ ಅವರು, ‘ಮೂಲ ವಿಜ್ಞಾನದ ಬಗ್ಗೆ ಆಸಕ್ತಿ ಮೂಡಿಸುವ ಉದ್ದೇಶದಿಂದ ರಾಜ್ಯದ ಐದು ಕಡೆಗಳಲ್ಲಿ ವಿಜ್ಞಾನ ಪ್ರಯೋಗಾಲಯ ಆರಂಭಿಸಿದ್ದೇವೆ. ಅಗಸ್ತ್ಯ ಫೌಂಡೇಷನ್ ಸಂಚಾರಿ ಪ್ರಯೋಗಾಲಯದ ಮೂಲಕ ವಿಜ್ಞಾನದ ಅರಿವು ಮೂಡಿಸುವ ಕಾರ್ಯವೂ ಮಾಡುತ್ತಿದೆ’ ಎಂದರು.

ವಿರೋಧ ಪಕ್ಷದ ನಾಯಕ ಎಸ್.ಆರ್. ಪಾಟೀಲ, ‘ಮೂಲ ವಿಜ್ಞಾನದ ಬಗ್ಗೆ ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸಲು ಸರ್ಕಾರ ಅಗತ್ಯ ಕ್ರಮ ತೆಗೆದುಕೊಳ್ಳಬೇಕು. ಎಲ್ಲರೂ ಎಂಜಿನಿಯರ್, ವೈದ್ಯರು ಆಗಬೇಕು ಎನ್ನುತ್ತಿದ್ದಾರೆ. ವಿಜ್ಞಾನಿಗಳು, ಸಂಶೋಧಕರು ಅಗಬೇಕು. ವಿಜ್ಞಾನಿಗಳನ್ನಾಗಿ ರೂಪಿಸುವ ಉದ್ದೇಶದಿಂದ ಅಗತ್ಯ ಕ್ರಮ ತೆಗೆದುಕೊಳ್ಳಬೇಕು’ ಎಂದು ಆಗ್ರಹಿಸಿದರು.

‘ಮೂಲ ವಿಜ್ಞಾನದ ಅಧ್ಯಯನಕ್ಕೆ ಸಂಬಂಧಿಸಿದಂತೆ ಗುಣಮಟ್ಟದ ಶಿಕ್ಷಣ ನೀಡುವ ಅಗತ್ಯವಿದೆ. ಈ ಬಗ್ಗೆ ಪ್ರಾಥಮಿಕ ಹಂತದಲ್ಲೇ ಮಕ್ಕಳಿಗೆ ಮಾಹಿತಿ ನೀಡಬೇಕು. ಇದಕ್ಕಾಗಿ ಸರ್ಕಾರ ವಿಶೇಷ ಕಾರ್ಯಕ್ರಮ ರೂಪಿಸಬೇಕು. ಗಣಿತ ಹಾಗೂ ವಿಜ್ಞಾನ ಶಿಕ್ಷಕರ ನೇಮಕಕ್ಕೂ ಕ್ರಮ ತೆಗೆದುಕೊಳ್ಳಬೇಕು’ ಎಂದು ಒತ್ತಾಯಿಸಿದರು.

ಗಡಿ ಭಾಗದ ಶಾಲೆಗಳಲ್ಲಿ ಶಿಕ್ಷಕರ ಕೊರತೆ: ‘ರಾಜ್ಯದ ಗಡಿಭಾಗದ ಜಿಲ್ಲೆಗಳ ಸರ್ಕಾರಿ ಶಾಲೆಗಳಲ್ಲಿ ಶೇ 50ರಷ್ಟು ಶಿಕ್ಷಕರ ಕೊರತೆಯಿದೆ. 13,211 ಪ್ರಾಥಮಿಕ ಶಾಲೆ, 1,384 ಪ್ರೌಢಶಾಲೆ ಶಾಲೆಗಳಿವೆ. ಶಿಕ್ಷಕರ ಕೊರತೆಯಿಂದ ಮಕ್ಕಳ ಶೈಕ್ಷಣಿಕ ಅಭಿವೃದ್ಧಿ ಕುಂಠಿತವಾಗುತ್ತಿದೆ. ಈ ಸಮಸ್ಯೆಯನ್ನು ಬಗೆಹರಿಸಬೇಕು ಎಂದು ಬಿಜೆಪಿಯ ಚಿದಾನಂದ ಎಂ.ಗೌಡ ಆಗ್ರಹಿಸಿದರು.

ಅದಕ್ಕೆ ಸುರೇಶ್ ಕುಮಾರ್, ‘ಶಿಕ್ಷಕರ ಕೊರತೆ ಇರುವುದು ನಿಜ. ಆದರೆ, ಗಡಿ ಭಾಗದ ಶಾಲೆಗಳಿಗೆ ಶಿಕ್ಷಕರು ಹೋಗಲು ಹಿಂದೇಟು ಹಾಕುತ್ತಿದ್ದಾರೆ. ಶಿಕ್ಷಕರ ಹುದ್ದೆಗಳನ್ನು ತುಂಬುವ ವೇಳೆ ಈ ಬಗ್ಗೆ ವಿಶೇಷ ಗಮನ ಹರಿಸಲಾಗುವುದು’ ಎಂದರು.

ಉಪವಲಯ ಅರಣ್ಯಾಧಿಕಾರಿಗಳಿಗೆ ಬಡ್ತಿ ತಡೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಉಪವಲಯ ಅರಣ್ಯಾಧಿಕಾರಿಗಳ ರಾಜ್ಯಮಟ್ಟದ ಸಂಯೋಜಿತ ಜೇಷ್ಠತಾ ಪಟ್ಟಿ ಪ್ರಕಟಿಸದೇ ಮುಂಬಡ್ತಿ ನೀಡಿರುವ ಬಗ್ಗೆ ಇಲಾಖೆಯ ಅಧಿಕಾರಿಗಳ ಜೊತೆ ಚರ್ಚಿಸಿ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು’ ಎಂದು ಸಚಿವ ಜಗದೀಶ್ ಶೆಟ್ಟರ್ ಹೇಳಿದರು.

ವಿಧಾನಪರಿಷತ್‌ನಲ್ಲಿ ಜೆಡಿಎಸ್‌ನ ಅಪ್ಪಾಜಿಗೌಡ ಮತ್ತ ಎಸ್‌.ಎಲ್. ಬೋಜೇಗೌಡ ಅವರು ಕೇಳಿದ ಜಂಟಿ ಪ್ರಶ್ನೆಗೆ ಅರಣ್ಯ ಸಚಿವರ ಪರವಾಗಿ ಉತ್ತರಿಸಿದ ಶೆಟ್ಟರ್, ‘ತಾತ್ಕಾಲಿಕ ವ್ಯವಸ್ಥೆಯ ದೃಷ್ಟಿಯಿಂದ ನಿಯಮ 32 ಅಡಿ ತಾತ್ಕಾಲಿವಾಗಿ ಮುಂಬಡ್ತಿ ನೀಡಲಾಗಿದೆ. ಈ ಬಗ್ಗೆ ಅಧಿಕಾರಿಗಳ ಜೊತೆ ಮತ್ತೊಮ್ಮೆ ಚರ್ಚಿಸಿ, ಬಡ್ತಿ ಪಟ್ಟಿಯನ್ನು ಪರಿಶೀಲಿಸಲಾಗುವುದು’ ಎಂದರು.’ ಎಂದರು.

‘ಉಪವಲಯ ಅರಣ್ಯಾಧಿಕಾರಿಗಳ ರಾಜ್ಯ ಮಟ್ಟದ ಸಂಯೋಜಿತ ಜೇಷ್ಠತಾ ಪಟ್ಟಿ ಪ್ರಕಟಿಸದೇ, ವಲಯ ಅರಣ್ಯಾಧಿಕಾರಿ ಹುದ್ದೆಗೆ ಮುಂಬಡ್ತಿ ನೀಡಿರುವುದು ಕಾನೂನು ಬಾಹಿರ ಪ್ರಕ್ರಿಯೆ. ನಿಯಮದಲ್ಲಿ ಅವಕಾಶವಿದ್ದರೆ ಆದೇಶ ಪ್ರತಿ ನೀಡಬೇಕು’ ಎಂದು ಅಪ್ಪಾಜಿಗೌಡ ಒತ್ತಾಯಿಸಿದರು.

ಬೋಜೇಗೌಡ ಮಾತನಾಡಿ, ‘ನಿಯಮಬಾಹಿರವಾಗಿ ಬಡ್ತಿ ನೀಡಲಾಗಿದ್ದು, ಅಕ್ರಮವೂ ನಡೆದಿದೆ. ತಕ್ಷಣವೇ ಬಡ್ತಿ ಪ್ರಕ್ರಿಯೆ ತಡೆಹಿಡಿಯಬೇಕು. ಇಲ್ಲದಿದ್ದರೆ, ಕಾನೂನಿನ ಸಂಕಷ್ಟ ಎದುರಾಗಲಿದೆ’ ಎಂದು ಅವರು ಎಚ್ಚರಿಕೆ ನೀಡಿದರು.

‘ಅಕೇಶಿಯಾ, ನೀಲಗಿರಿ ಕಡಿಯಲು ಅನುಮತಿ ಏಕಿಲ್ಲ?’

ಬೆಂಗಳೂರು: ‘ರಾಜ್ಯದಲ್ಲಿ ನೀಲಗಿರಿ ಹಾಗೂ ಅಕೇಶಿಯಾ ಮರ ಬೆಳೆಸುವುದನ್ನು ನಿಷೇಧಿಸಲಾಗಿದೆ. ಹೀಗಾಗಿ, ಅವುಗಳನ್ನು ಬೆಳೆಸಿರುವ ಕಡೆಗಳಲ್ಲಿ ಕಡಿಯಲು ಅರಣ್ಯ ಇಲಾಖೆಯ ಅನುಮತಿ ಪಡೆಯಬೇಕೇ ಎಂಬ ಬಗ್ಗೆ ಅಧಿಕಾರಿಗಳ ಜೊತೆ ಚರ್ಚಿಸಿ, ತೀರ್ಮಾನ ತೆಗೆದುಕೊಳ್ಳಲಾಗುವುದು’ ಎಂದು ಅರಣ್ಯ ಸಚಿವ ಅರವಿಂದ ಲಿಂಬಾವಳಿ ಪರವಾಗಿ ಸಚಿವ ಜಗದೀಶ ಶೆಟ್ಟರ್ ಹೇಳಿದರು.

ವಿಧಾನ ಪರಿಷತ್‌ನಲ್ಲಿ ವಿಷಯ ಪ್ರಸ್ತಾಪಿಸಿದ ಕಾಂಗ್ರೆಸ್‌ನ ಕೆ.ಸಿ. ಕೊಂಡಯ್ಯ, ‘ಈ ಮರಗಳನ್ನು ಬೆಳೆಸುವುದನ್ನು ನಿಷೇಧಿಸಿರುವಾಗ, ಬೆಳೆಸಿರುವ ಕಡೆಗಳಲ್ಲಿ ಕಡಿಯಲು ಅರಣ್ಯ ಇಲಾಖೆಯ ಅಧಿಕಾರಿಗಳು ಅನುಮತಿ ನೀಡುವುದಿಲ್ಲ ಏಕೆ’ ಎಂದು ಅವರು ಪ್ರಶ್ನಿಸಿದರು.

‘ಅಕೇಶಿಯಾ ಮತ್ತು ನೀಲಗಿರಿ ಮರಗಳನ್ನು ಬೆಳೆಸುವುದನ್ನು ನಿಷೇಧಿಸಿರುವುದಕ್ಕೂ ಮೊದಲೇ ಹಲವೆಡೆಗಳಲ್ಲಿ ಇದರ ತೋಪುಗಳನ್ನು ನಿರ್ಮಿಸಲಾಗಿತ್ತು. ಅಲ್ಲಿ ಬೆಳೆದಿರುವ ಮರಗಳನ್ನು ಕಟಾವು ಮಾಡಲು ಅರಣ್ಯ ಇಲಾಖೆಯ ಅಧಿಕಾರಿಗಳು ಅನುಮತಿ ನೀಡುವುದಿಲ್ಲ. ಅನುಮತಿ ಪಡೆಯಲು ಕಚೇರಿಯಿಂದ ಕಚೇರಿಗೆ ಅಲೆಯಬೇಕಾದ ಸ್ಥಿತಿ ಇದೆ. ಸರ್ಕಾರ ಇದಕ್ಕೆ ಪರಿಹಾರ ಸೂಚಿಸಬೇಕು’ ಎಂದು ಅವರು ಒತ್ತಾಯಿಸಿದರು.

ಆಗ ಶೆಟ್ಟರ್, ‘ಅಕೇಶಿಯಾ ಮತ್ತು ನೀಲಗಿರಿ ನಿಷೇಧಕ್ಕೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಿರುವ ತಡೆಯಾಜ್ಞೆ ತೆರವುಗೊಳಿಸಲು ಪ್ರಕ್ರಿಯೆ ನಡೆಯುತ್ತಿದೆ. ಈ ಎರಡು ಜಾತಿಯ ಮರಗಳನ್ನು ಕಡಿಯಲು ಅನುಮತಿ ಪಡೆಯಬೇಕಾದ ಬಗ್ಗೆ ಅಧಿಕಾರಿಗಳ ಜತೆ ಚರ್ಚಿಸಲಾಗುತ್ತದೆ. ಈ ವಿಷಯವನ್ನು ಅರಣ್ಯ ಸಚಿವರ ಗಮನಕ್ಕೆ ತರಲಾಗುವುದು’ ಎಂದು ಹೇಳಿದರು.

ಮಡುಗಟ್ಟಿದ್ದ ಆಕ್ರೋಶ ಭುಗಿಲೆದ್ದಿತು

ಬೋಗಾದಿ– ಹಿನಕಲ್ ರಿಂಗ್ ರಸ್ತೆಯಲ್ಲಿ ಪೊಲೀಸರನ್ನು ಥಳಿಸಿದ ಉದ್ರಿಕ್ತರು

ಪ್ರಜಾವಾಣಿ ವಾರ್ತೆ

ಮೈಸೂರು: ಸಂಚಾರ ಪೊಲೀಸರ ವಿರುದ್ಧ ಜನರ ಆಕ್ರೋಶ ಇಲ್ಲಿನ ಬೋಗಾದಿ– ಹಿನಕಲ್ ರಿಂಗ್ ರಸ್ತೆಯಲ್ಲಿ ಸೋಮವಾರ ಸಂಜೆ ಭುಗಿಲೆದ್ದಿತು.

ದ್ವಿಚಕ್ರ ವಾಹನದಲ್ಲಿ ಸಂಜೆ 5.30ರ ಸಮಯದಲ್ಲಿ ಬರುತ್ತಿದ್ದ ಸುರೇಶ್ ಎಂಬುವವರು, ರಿಂಗ್ ರಸ್ತೆಯ ಬೋಗಾದಿ ಜಂಕ್ಷನ್ ಹಾಗೂ ಹಿನಕಲ್ ಮಧ್ಯದ ಆರ್‌ಎಂಪಿ ವೃತ್ತದ ಬಳಿ ಸಂಚಾರ ಪೊಲೀಸರ ತಪಾಸಣೆ ಕಂಡು ತಮ್ಮ ವಾಹನವನ್ನು ಹಿಂದಕ್ಕೆ ತಿರುಗಿಸಿದರು. ಈ ಸಂದರ್ಭದಲ್ಲಿ ಹಿಂಬದಿ ಸವಾರ ದೇವರಾಜ್ ಹಿಂದೆ ಬರುತ್ತಿದ್ದ ಲಾರಿ ಚಕ್ರಕ್ಕೆ ಸಿಲುಕಿ ಸ್ಥಳದಲ್ಲೇ ಮೃತಪಟ್ಟರು.

ಸ್ಥಳಕ್ಕೆ ಬಂದ ಪೊಲೀಸರು ಗಾಯಗೊಂಡಿದ್ದ ಸುರೇಶ್ ಅವರನ್ನು ಆಸ್ಪತ್ರೆಗೆ ದಾಖಲಿಸಿ, ದೇವರಾಜ್ ಅವರ ದೇಹವನ್ನು ಶವಾಗಾರಕ್ಕೆ ಸಾಗಿಸಿದರು.

ಕೆಲಹೊತ್ತಿನ ನಂತರ ಸ್ಥಳದಲ್ಲಿ ಗುಂಪುಗೂಡಿದ ಜನರು, ಘಟನೆಗೆ ಸಂಚಾರ ಪೊಲೀಸರ ತಪಾಸಣೆಯೇ ಕಾರಣ ಎಂದು ಆರೋಪಿಸಿ, ವಿ.ವಿಪುರಂ ಸಂಚಾರ ಠಾಣೆಯ ಎಎಸ್‌ಐ ಮಾದೇಗೌಡ ಹಾಗೂ ಸ್ವಾಮಿನಾಯಕ ಸೇರಿದಂತೆ ಮೂವರು ಸಿಬ್ಬಂದಿಯನ್ನು ಅಟ್ಟಾಡಿಸಿ, ಮನಬಂದಂತೆ ಹಲ್ಲೆ ನಡೆಸಿದರು.

ಸ್ಥಳಕ್ಕೆ ಬಂದ ‘ಗರುಡ’ ವಾಹನವನ್ನು ಸಾರ್ವಜನಿಕರು ಕೈಗೆ ಸಿಕ್ಕ ವಸ್ತುಗಳನ್ನು ತೆಗೆದು ಹೊಡೆಯುವ ಮೂಲಕ ಜಖಂಗೊಳಿಸಿದರು. ಬ್ಯಾರಿಕೇಡ್‌ಗಳನ್ನೇ ಎತ್ತಿ ವಾಹನದ ಗಾಜುಗಳನ್ನು ಪುಡಿಗಟ್ಟಿದರು. ಇಷ್ಟಕ್ಕೆ ತಣಿಯದ ಅವರು ವಾಹನವನ್ನು ಮುಗುಚಿ ಆಕ್ರೋಶ ವ್ಯಕ್ತಪಡಿಸಿದರು.

ರಸ್ತೆಯಲ್ಲಿ ಗುಂಪುಗಟ್ಟಿ ನಿಂತ ನೂರಾರು ಮಂದಿ ವಾಹನ ಸಂಚಾರ ತಡೆದಿದ್ದರಿಂದ, ಸಂಚಾರ ವ್ಯವಸ್ಥೆ ಕೆಲಕಾಲ ಅಸ್ತವ್ಯಸ್ತಗೊಂಡಿತು.

ವಿಷಯ ತಿಳಿದು ಹೆಚ್ಚುವರಿ ಸಿಬ್ಬಂದಿಯನ್ನು ಕರೆಸಿಕೊಂಡು ಪೊಲೀಸರು ಲಘು ಲಾಠಿ ಪ್ರಹಾರ ನಡೆಸಿ ಗುಂಪನ್ನು ಚದುರಿಸಿದರು.

ಏನಾಯಿತು?: ಎಚ್‌.ಡಿ.ಕೋಟೆ ತಾಲ್ಲೂಕಿನ ಕನ್ನೇನಹಳ್ಳಿ ಗ್ರಾಮದವರಾದ ದೇವರಾಜ (47), ಇಲ್ಲಿನ ಬೋಗಾದಿ ಬಳಿಯ ಅಮೃತಾ ನಂದಮಯಿ ಶಾಲೆಯ ಸಮೀಪ ವಾಸವಿದ್ದರು. ಇವರು ಕೆಲಸದ ನಿಮಿತ್ತ ತಮ್ಮ ಸ್ನೇಹಿತ ಸುರೇಶ್ ಎಂಬುವವರ ಜತೆ ಬೈಕ್‌ನಲ್ಲಿ ಹಿಂಬದಿ ಕುಳಿತು ಬರುತ್ತಿದ್ದರು. ಸಂಚಾರ ಪೊಲೀಸರ ತಪಾಸಣೆಯನ್ನು ನೋಡಿ ಸುರೇಶ್ ತಮ್ಮ ವಾಹನವನ್ನು ಹಿಂದಕ್ಕೆ ತಿರುಗಿಸಿದರು. ಹಿಂದಿನಿಂದ ವೇಗವಾಗಿ ಬರುತ್ತಿದ್ದ ಮರಳು ತುಂಬಿದ ಲಾರಿ ದೇವರಾಜ ಮೇಲೆ ಹರಿದಿದೆ. ದೇವರಾಜ್ ಸ್ಥಳದಲ್ಲೇ ಮೃತಪಟ್ಟರೆ, ಸುರೇಶ್ ಸಣ್ಣಪುಟ್ಟ ಗಾಯಗಳಿಂದ ಪಾರಾಗಿದ್ದಾರೆ ಎಂದು ಸಂಚಾರ ವಿಭಾಗದ ಎಸಿಪಿ ಸಂದೇಶ್‌ಕುಮಾರ್ ‘ಪ್ರಜಾವಾಣಿ’ಗೆ ತಿಳಿಸಿದರು.



ಸಾರ್ವಜನಿಕರು ವಾಹನ ಸಂಚಾರ ತಡೆದು ಪ್ರತಿಭಟನೆ ನಡೆಸಿದರು

ಪೊಲೀಸರ ವಾದವೇನು?

‘ಸಂಚಾರ ಪೊಲೀಸರು ವಾಹನ ತಪಾಸಣೆ ನಡೆಸುತ್ತಿದ್ದ ದೃಶ್ಯವನ್ನು 200 ಮೀಟರ್ ದೂರದಲ್ಲೇ ನೋಡಿದ ವಾಹನ ಸವಾರ, ತಕ್ಷಣ ವೇಗವನ್ನು ಕಡಿಮೆ ಮಾಡಿ ತನ್ನ ದ್ವಿಚಕ್ರ ವಾಹನವನ್ನು ವಾಪಸ್ ತಿರುಗಿಸಿದ್ದು ಅಪಘಾತಕ್ಕೆ ಕಾರಣ’ ಎಂದು ಸಂಚಾರ ಮತ್ತು ಅಪರಾಧ ವಿಭಾಗದ ಡಿಸಿಪಿ ಗೀತಾ ಪ್ರಸನ್ನ ಹೇಳಿದರು.

ಗಾಯಾಳು ಸುರೇಶ್ ಹೇಳಿದ್ದೇನು?

ಅಪಘಾತದ ನಂತರ ಗಾಯಾಳು ಸುರೇಶ್ ಮಾತನಾಡಿರುವ ವಿಡಿಯೊವನ್ನು ಪೊಲೀಸರು ಬಿಡುಗಡೆ ಮಾಡಿದ್ದಾರೆ. ಇದರಲ್ಲಿ ‘ಅಪಘಾತಕ್ಕೂ, ಪೊಲೀಸರಿಗೂ ಯಾವುದೇ ಸಂಬಂಧ ಇಲ್ಲ’ ಎಂದು ಸುರೇಶ್ ಹೇಳಿಕೆ ನೀಡಿದ್ದಾರೆ.

‘ಪೊಲೀಸರು ನಮ್ಮನ್ನು ತಡೆದಿಲ್ಲ. ನಮ್ಮ ಬಳಿ ಎಲ್ಲ ದಾಖಲಾತಿಗಳು ಇದ್ದವು. ಹೆಲ್ಮೆಟ್ ಧರಿಸಿದ್ದೆವು. ಪೊಲೀಸರನ್ನು ಕಂಡು ವಾಹನ ತಿರುಗಿಸಲು ಪ್ರಯತ್ನಿಸಿಲ್ಲ. ಹಿಂದಿನಿಂದ ಬರುತ್ತಿದ್ದ ಟಿಪ್ಪರ್ ನಮಗೆ ತಗುಲಿದ್ದರಿಂದ ನಾವು ಕೆಳಗೆ ಬಿದ್ದೆವು’ ಎಂದು ವಿಡಿಯೊದಲ್ಲಿ ಹೇಳಿದ್ದಾರೆ.



ಜಖಂಗೊಂಡ ಪೊಲೀಸ್ ವಾಹನ

ಸ್ಥಳೀಯರ ಆರೋಪ ಏನು?

‘ಹೆಲ್ಮೆಟ್ ಧರಿಸಿದ್ದರೂ ಪೊಲೀಸರು ಬೈಕ್‌ನ್ನು ತಡೆಯಲು ಮುಂದಾದರು. ಲಾಠಿಯನ್ನೂ ಬೀಸುವ ಮೂಲಕ ವಾಹನ ಸವಾರರಲ್ಲಿ ಭೀತಿ ಹುಟ್ಟಿಸಿದರು. ಇದರಿಂದ ಗಲಿಬಿಲಿಗೆ ಒಳಗಾದ ಅವರು ಪೊಲೀಸರಿಂದ ತಪ್ಪಿಸಿಕೊಳ್ಳುವಾಗ ಲಾರಿಗೆ ಸಿಲುಕಿದ್ದಾರೆ. ಘಟನೆಗೆ ಸಂಚಾರ ಪೊಲೀಸರ ಬಲವಂತದ ತಪಾಸಣೆಯೇ ಕಾರಣ’ ಎಂದು ಸ್ಥಳೀಯರು ಆರೋಪಿಸಿದ್ದಾರೆ.

ಲೋಕಸಭೆಯಲ್ಲಿ ಕೇಂದ್ರ ಸಚಿವರ ಆರೋಪ

‘ಪ್ರವಾಸೋದ್ಯಮ: ಅನುದಾನ ಬಳಸದ ರಾಜ್ಯ’

ಪ್ರಜಾವಾಣಿ ವಾರ್ತೆ

ನವದೆಹಲಿ: ಹಂಪಿ ಸೇರಿದಂತೆ ಕರ್ನಾಟಕದ ವಿವಿಧೆಡೆ ಇರುವ ಐತಿಹಾಸಿಕ, ಪಾರಂಪರಿಕ ತಾಣಗಳ ಅಭಿವೃದ್ಧಿಗೆ ಮಂಜೂರು ಮಾಡಿರುವ ಅನುದಾನವನ್ನು ರಾಜ್ಯ ಸರ್ಕಾರ ಸಮರ್ಪಕವಾಗಿ ಬಳಕೆ ಮಾಡಿಲ್ಲ ಎಂದು ಕೇಂದ್ರ ಸರ್ಕಾರ ಆರೋಪಿಸಿದೆ.

‘ರಾಜ್ಯದಲ್ಲಿನ ಐತಿಹಾಸಿಕ ಸ್ಮಾರಕಗಳಿರುವ ಪಾರಂಪರಿಕ ತಾಣಗಳನ್ನು ಪ್ರವಾಸಿ ಕ್ಷೇತ್ರಗಳನ್ನಾಗಿ ಅಭಿವೃದ್ಧಿಪಡಿಸಲು ಅನುದಾನ ನೀಡದೆ ಕೇಂದ್ರ ಸರ್ಕಾರ ತಾರತಮ್ಯ ನೀತಿ ಅನುಸರಿಸುತ್ತಿರುವುದು ಏಕೆ’ ಎಂದು ಸೋಮವಾರ ಲೋಕಸಭೆಯ ಪ್ರಶ್ನೋತ್ತರ ವೇಳೆಯಲ್ಲಿ ಹಾಸನದ ಜೆಡಿಎಸ್ ಸದಸ್ಯ ಪ್ರಜ್ವಲ್ ರೇವಣ್ಣ ಕೇಳಿದ ಪ್ರಶ್ನೆಗೆ ಪ್ರವಾಸೋದ್ಯಮ ಖಾತೆ ರಾಜ್ಯ ಸಚಿವ ಪ್ರಹ್ಲಾದ್‌ಸಿಂಗ್ ಪಟೇಲ್ ಉತ್ತರ ನೀಡಿದರು.

‘ರಾಜ್ಯದ ಬೇಲೂರು, ಹಳೇಬೀಡು, ಶ್ರವಣಬೆಳಗೊಳ, ವಿಜಯಪುರ ಮತ್ತಿತರ ಪ್ರಸಿದ್ಧ ಪ್ರವಾಸಿ ತಾಣಗಳ ಅಭಿವೃದ್ಧಿಗೆ ಬಿಡಿಗಾಸನ್ನೂ ನೀಡಲಾಗಿಲ್ಲ. ಹಂಪಿ ಹೊರತುಪಡಿಸಿ ಇತರ ತಾಣಗಳನ್ನು ನಿರ್ಲಕ್ಷಿಸಲಾಗಿದೆ. ಪ್ರವಾಸೋದ್ಯಮ ಅಭಿವೃದ್ಧಿಯಿಂದ ಗ್ರಾಮೀಣ ಕರಕುಶಲ ಕಲೆಗೂ ಪ್ರೋತ್ಸಾಹ ದೊರೆಯಲಿದೆ. ಉದ್ಯೋಗ ಸೃಷ್ಟಿಯೂ ಆಗಲಿದೆ. ಆದರೂ ಕೇಂದ್ರ ಗಮನ ಹರಿಸದಿರುವುದು ಏಕೆ’ ಎಂದು ಪ್ರಜ್ವಲ್ ಪೂರಕ ಪ್ರಶ್ನೆ ಕೇಳಿದರು.

ಅಲ್ಲದೆ, ಇದುವರೆಗೆ ಪ್ರವಾಸೋದ್ಯಮ ತಾಣಗಳಲ್ಲಿ ಉತ್ಸವ, ಪ್ರದರ್ಶನಕ್ಕಾಗಿ ಹಣಕಾಸಿನ ನೆರವು ನೀಡಿರುವ ಕೇಂದ್ರವು ನವೀಕರಣ, ಮೂಲ ಸೌಲಭ್ಯ ಅಭಿವೃದ್ಧಿಗೆ ಆರ್ಥಿಕ ನೆರವು ಒದಗಿಸಿಲ್ಲ ಎಂದೂ ಅವರು ಆರೋಪಿಸಿದರು.

ಪ್ರವಾಸೋದ್ಯಮ ಅಭಿವೃದ್ಧಿಗೆ ಅನುದಾನ ಒದಗಿಸಿಲ್ಲ ಎಂದು ಹೇಳಲಾಗದು. ನೀಡಿದ ಅನುದಾನವನ್ನು ಬಳಸದೆ ವಾಪಸ್ ನೀಡಿರುವುದು ಸರಿಯಲ್ಲ. ಕರ್ನಾಟಕದ ಸಂಸದರು ಮತ್ತಷ್ಟು ನೆರವಿಗೆ ಸಂಬಂಧ ಮನವಿ ಸಲ್ಲಿಸಿದ್ದು, ಕೇಂದ್ರವು ಅಗತ್ಯ ಕ್ರಮ ಕೈಗೊಳ್ಳಲಿದೆ ಎಂದು ಅವರು ಭರವಸೆ ನೀಡಿದರು.

ಕರ್ನಾಟಕದ ಬೀದರ್, ಯಾದಗಿರಿ ಮತ್ತು ಕಲಬುರ್ಗಿ ಭಾಗದಲ್ಲಿರುವ ಪ್ರವಾಸೋದ್ಯಮ ತಾಣಗಳ ಅಭಿವೃದ್ಧಿಗೂ ಕೇಂದ್ರ ಆದ್ಯತೆ ನೀಡಲಿದೆ ಎಂದು ಸಚಿವರು ಸ್ಪಷ್ಟಪಡಿಸಿದರು.

ಈ ಭಾಗದಲ್ಲಿರುವ ಪ್ರವಾಸೋದ್ಯಮ ಅಭಿವೃದ್ಧಿಗೆ ₹ 88.67 ಕೋಟಿ ನೆರವು ಕೋರಿ 2017ರಲ್ಲಿ ಪ್ರಸ್ತಾವನೆ ಸಲ್ಲಿಕೆಯಾಗಿದೆ. ಈ ಸಂಬಂಧ ರಾಜ್ಯ ಸರ್ಕಾರದಿಂದ ವಿವರಣೆ ಕೋರಲಾಗಿದೆ. ವಿವರಣೆ ಲಭಿಸಿದ ಕೂಡಲೇ ಪ್ರಾಥಮಿಕ ಆದ್ಯತೆಯ ಮೇರೆಗೆ ಅನುದಾನ ಒದಗಿಸಲು ಕೇಂದ್ರ ಬದ್ಧವಾಗಿದೆ ಎಂದು ಅವರು ಹೇಳಿದರು.

‘ಉತ್ತರ ಕರ್ನಾಟಕದ ಪ್ರವಾಸೋದ್ಯಮ ಅತ್ಯಂತ ನಿರ್ಲಕ್ಷ್ಯಕ್ಕೆ ಒಳಗಾಗಿದ್ದು, ಕಲಬುರ್ಗಿ ಪಾರಂಪರಿಕ ತಾಣದ ಅಭಿವೃದ್ಧಿಗಾಗಿ ಕ್ರಮ ಕೈಗೊಳ್ಳಬೇಕು. ತೆಲಂಗಾಣ ಗಡಿಯಲ್ಲಿನ ಕೊಂಚಾವರಂ ಬಳಿ ಇರುವ ಯತ್ತಿಪೋತ ಜಲಪಾತದ ಅಭಿವೃದ್ಧಿಗೆ ಅನುದಾನ ಒದಗಿಸಬೇಕು’ ಎಂದು ಕಲಬುರ್ಗಿಯ ಬಿಜೆಪಿ ಸದಸ್ಯ ಡಾ.ಉಮೇಶ ಜಾಧವ್ ಕೋರಿದರು.

ಕಾಯ್ದೆಗೆ ತಿದ್ದುಪಡಿ: ಖಾಸಗಿಯವರ ಕೈಗೆ ಗಣಿಗಾರಿಕೆ – ಕಾಂಗ್ರೆಸ್ ಆರೋಪ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೇಂದ್ರ ಸರ್ಕಾರವು ಗಣಿ ಮತ್ತು ಖನಿಜ ಕಾಯ್ದೆಗೆ ಅನಗತ್ಯವಾಗಿ ಪದೇಪದೇ ತಿದ್ದುಪಡಿ ತರುವ ಮೂಲಕ ಅತ್ಯಮೂಲ್ಯ ನೈಸರ್ಗಿಕ ಸಂಪತ್ತನ್ನು ಖಾಸಗಿಯವರ ಕೈಗೆ ಒಪ್ಪಿಸಿ, ನಿಸರ್ಗದ ಲೂಟಿಗೆ ಕಾರಣವಾಗಿದೆ ಎಂದು ಕಾಂಗ್ರೆಸ್ ದೂರಿದೆ.

ಗಣಿ ಮತ್ತು ಖನಿಜ ಕಾಯ್ದೆ (ತಿದ್ದುಪಡಿ) ವಿಷಯದ ಮೇಲೆ ರಾಜ್ಯಸಭೆಯಲ್ಲಿ ಸೋಮವಾರ ನಡೆದ ಚರ್ಚೆಯಲ್ಲಿ ಪಾಲ್ಗೊಂಡ ಕಾಂಗ್ರೆಸ್‌ನ ಸೈಯ್ಯದ್ ನಾಸಿರ್ ಹುಸೇನ್, ಈ ತಿದ್ದುಪಡಿಯನ್ನು ವಿರೋಧಿಸುವುದಾಗಿ ಹೇಳಿದರು.

ತಿದ್ದುಪಡಿ ಹಿಂದೆ ಬಂಡವಾಳಶಾಹಿ ಶಕ್ತಿಗಳ ಕೈವಾಡವಿದೆ. ಅನೇಕ ಗಣಿಗಳನ್ನು ಖಾಸಗಿ ಗಣಿ ಧಣಿಗಳಿಗೆ ಮರು ಹಂಚಿಕೆ ಮಾಡುವುದಕ್ಕೆ, ಈಗಿರುವ ಸರ್ಕಾರಿ ಗಣಿಗಳನ್ನೂ ಖಾಸಗಿಯವರ ಕೈಗಿಡುವುದಕ್ಕೆ ಇದರಿಂದ ನೆರವಾಗಲಿದೆ ಎಂದರು.

2015ಕ್ಕೆ ಮೊದಲು ಸರ್ಕಾರ ನಡೆಸುತ್ತಿದ್ದವರಿಗೆ ನೀಡಲಾಗುತ್ತಿದ್ದ ಚೀಟಿಯಲ್ಲಿ ಹೆಸರಿದ್ದವರಿಗೇ ಗಣಿ ಗುತ್ತಿಗೆ ನೀಡಲಾಗುತ್ತಿತ್ತು ಎಂದು ಗಣಿ ಸಚಿವರು ಆರೋಪಿಸಿದ್ದಾರೆ. ಆದರೆ, ಯಾವ ಚೀಟಿ, ಯಾರಿಗೆ ಬಂದಿತ್ತು ಎಂಬುದನ್ನು ಸಾಬೀತುಪಡಿಸಲಾಗಿಲ್ಲ ಎಂದು ಸಷ್ಟಪಡಿಸಿದರು.

ಈಗಿನ ಸರ್ಕಾರದಲ್ಲಿ ಅದಾನಿ ಸೇರಿದಂತೆ ಇಬ್ಬರು ಬಂಡವಾಳಶಾಹಿಗಳಿಗೆ ನೆರವು ನೀಡುವ ನಿಟ್ಟಿನಲ್ಲಿ ಕಾಯ್ದೆಗಳಿಗೇ ತಿದ್ದುಪಡಿಗಳನ್ನು ತರಲಾಗುತ್ತಿದೆ. 2015, 2016, 2020 ಮತ್ತು 2021ರಲ್ಲಿ ಗಣಿ ಕಾಯ್ದೆಗೆ ತಿದ್ದುಪಡಿ ತರಲಾಗಿದೆ ಎಂದು ಅವರು ವ್ಯಂಗ್ಯವಾಡಿದರು.

ಅದಿರು ಹರಾಜು ಪ್ರಕ್ರಿಯೆ ಕಾರ್ಯದಲ್ಲಿ ಕೇಂದ್ರದ ಹಸ್ತಕ್ಷೇಪಕ್ಕೆ ಅವಕಾಶ ನೀಡದೆ, ಆಯಾ ರಾಜ್ಯ ಸರ್ಕಾರಕ್ಕೇ ಆದ್ಯತೆ ನೀಡಿ ಲೂಟಿಕೋರರನ್ನು ತಡೆಯಬೇಕು ಎಂದು ಅವರು ಮನವಿ ಮಾಡಿದರು.

ದೇಶದ ಒಟ್ಟು ಬೇಡಿಕೆಯ ಶೇ 25ರಷ್ಟು ಅದಿರನ್ನು ಪೂರೈಸುವ ಕರ್ನಾಟಕದ ಬಳ್ಳಾರಿಯ ಗಣಿಗಳಲ್ಲಿ ನಡೆದ ಅಕ್ರಮ ಗಣಿಗಾರಿಕೆ ಕುರಿತು ಲೋಕಾಯುಕ್ತ ಸಲ್ಲಿಸಿದ ವರದಿಯಿಂದಾಗಿ ಬಿಜೆಪಿಯ ಮುಖ್ಯಮಂತ್ರಿ, ಸಚಿವರು ಮತ್ತು ಶಾಸಕರು 2011ರಲ್ಲಿ ಅಧಿಕಾರ ಕಳೆದುಕೊಂಡು ಜೈಲು ಪಾಲಾಗಿದ್ದರು ಎಂದು ಬಳ್ಳಾರಿ ಮೂಲದ ನಾಸಿರ್ ಹುಸೇನ್ ವಿವರಿಸಿದರು.

ಕಚ್ಚಾಬಾಂಬ್ ಸ್ಫೋಟ ಬಾಲಕ ಸಾವು

ಕೋಲ್ಕತ್ತ(ಪಿಟಿಐ): ಪಶ್ಚಿಮ ಬಂಗಾಳದ ಬರ್ದ್ವಾನ್‌ನಲ್ಲಿ ಸೋಮವಾರ ಕಚ್ಚಾ ಬಾಂಬ್ ಸ್ಫೋಟಗೊಂಡು ಏಳು ವರ್ಷದ ಬಾಲಕನೊಬ್ಬ ಮೃತಪಟ್ಟಿದ್ದು, ಇನ್ನೊಬ್ಬ ಬಾಲಕ ಗಾಯಗೊಂಡಿದ್ದಾನೆ.

ಶೇಖ್ ಅಫ್ರೋಜ್ ಮೃತ ಬಾಲಕ. ‘ಅಫ್ರೋಜ್ ಹಾಗೂ ಇನ್ನೊಬ್ಬ ಬಾಲಕ ಮನೆ ಬಳಿ ಆಟವಾಡುತ್ತಿದ್ದಾಗ ಪೊಟ್ಟಣದಲ್ಲಿ ಸಂಗ್ರಹಿಸಿಟ್ಟಿದ್ದ ಕಚ್ಚಾ ಬಾಂಬ್ ಸ್ಫೋಟಗೊಂಡಿದೆ.

ರೈತರ ಹೋರಾಟ: ಬಸವಕಲ್ಯಾಣದಿಂದ ಆರಂಭವಾದ ಪಾದಯಾತ್ರೆ ಇಂದು ಸಮಾರೋಪ

ದೆಹಲಿ ರೈತ ಸ್ಮಾರಕಕ್ಕೆ ಕರ್ನಾಟಕದ ಮಣ್ಣು!

• ಕೆ.ನರಸಿಂಹಮೂರ್ತಿ

ಬಳ್ಳಾರಿ: ದೆಹಲಿಯ ಮೂರು ಗಡಿಗಳಲ್ಲಿ ಏಪ್ರಿಲ್‌ನಲ್ಲಿ ನಿರ್ಮಾಣವಾಗಲಿರುವ ರೈತ ಸ್ಮಾರಕಗಳಿಗೆ ಕರ್ನಾಟಕದ ರೈತ ಹೋರಾಟಗಳ ನೆನಪಿನ ಮಣ್ಣು ಕೂಡ ಸೇರ್ಪಡೆಯಾಗಲಿದೆ.

ರೈತರ ಹೋರಾಟವನ್ನು ಬೆಂಬಲಿಸಿ ಮಾರ್ಚ್ 5ರಿಂದ ಬಸವ ಕಲ್ಯಾಣದಿಂದ ಆರಂಭವಾಗಿರುವ ರೈತರ ಪಾದಯಾತ್ರೆಯು ಬಳ್ಳಾರಿಯಲ್ಲಿ 23ರಂದು ಸಮಾರೋಪಗೊಳ್ಳಲಿದ್ದು, ಮಾರ್ಗ ಮಧ್ಯದ 26 ಗ್ರಾಮಗಳ ಹೊಲಗಳಿಂದ ಮಣ್ಣನ್ನು ಸಂಗ್ರಹಿಸಲಾಗಿದೆ.

ರೈತ ಸಂಘ, ಚಾಗನೂರು-ಸಿರಿವಾರ ಭೂ ಸಂರಕ್ಷಣಾ ಹೋರಾಟ ಸಮಿತಿಯ ನೇತೃತ್ವದಲ್ಲಿ ನಡೆದಿರುವ ಪಾದಯಾತ್ರೆಯಲ್ಲಿ ಲೇಖಕ ಸ.ರಘುನಾಥ ಪ್ರತಿ ಗ್ರಾಮದಿಂದಲೂ ಒಂದು ಹಿಡಿ ಮಣ್ಣನ್ನು ಸಂಗ್ರಹಿಸಿ ತಂದಿದ್ದಾರೆ. ಬಸವ ಕಲ್ಯಾಣ, ಮುಡಬಿ, ಕಮಲಾಪುರ, ಕಲಬುರ್ಗಿ, ಶಹಾಬಾದ್, ಜೇವರ್ಗಿ, ಹನುಮಂತವಾಡಿ, ಕಲಮನ ತಾಂಡ, ಕೊಲ್ಲೂರು, ಹುಲಿಕಲ್ಲು, ಬಿ.ಗುಡಿ, ಶಹಾಪುರ, ಸುರಪುರ, ದೇವಲಾಪುರ, ಸಂತೆಕಲ್ಲಹಳ್ಳಿ, ಮಸ್ಕಿ, ಲಿಂಗಸುಗೂರು, ತಿಂಥಣಿ, ಸಿಂಧನೂರು, ಸಿರುಗುಪ್ಪ, ಕಪ್ಪಗಲ್ಲು, ಸಿರಿವಾರ, ಚಾಗನೂರು ಗ್ರಾಮಗಳಲ್ಲಿ ಮಣ್ಣು ಸಂಗ್ರಹಿಸಲಾಗಿದೆ. ಆ ಮಣ್ಣಿಗೆ ಪೂಜೆ ಸಲ್ಲಿಸುವ ಮೂಲಕವೇ ಸಮಾರೋಪ ಸಮಾರಂಭ ಉದ್ಘಾಟನೆಗೊಳ್ಳಲಿದೆ. ಹೋರಾಟದ ನೇತೃತ್ವ ವಹಿಸಿರುವ ಮುಖಂಡರಲ್ಲಿ ಒಬ್ಬರಾದ ಬಿ.ಆರ್.ಪಾಟೀಲ ಅವರಿಗೆ ಈ ಮಣ್ಣನ್ನು ಹಸ್ತಾಂತರಿಸಲಾಗುತ್ತದೆ.



ದೆಹಲಿಯಲ್ಲಿ ನಡೆಯುತ್ತಿರುವ ರೈತರ ಹೋರಾಟವನ್ನು ಬೆಂಬಲಿಸಿ ಬಸವಕಲ್ಯಾಣದಿಂದ ನಡೆದಿರುವ ಪಾದಯಾತ್ರೆಯುದ್ದಕ್ಕೂ ಸಂಗ್ರಹಿಸಿದ ಮಣ್ಣಿನೊಂದಿಗೆ ಮುಖಂಡರು ಸೋಮವಾರ ಬಳ್ಳಾರಿ ತಾಲ್ಲೂಕಿನ ಕಕ್ಕಬೇವಿನಹಳ್ಳಿಗೆ ತಲುಪಿದರು

'ನರಗುಂದ ರೈತ ಹೋರಾಟದ ನೆನಪಿಗಾಗಿ ಅಲ್ಲಿನ ಮಣ್ಣು ಹಾಗೂ ಹಾವೇರಿಯಲ್ಲಿ ರೈತರ ಮೇಲೆ ನಡೆದ ಗೋಲಿಬಾರ್‌ನ ದುರಂತದ ನೆನಪಿಗಾಗಿ ಅಲ್ಲಿನ ಮಣ್ಣನ್ನು ಕೂಡ ದೆಹಲಿಯ ರೈತ ಸ್ಮಾರಕಗಳ ನಿರ್ಮಾಣಕ್ಕೆ ನೀಡಲಾಗುವುದು' ಎಂದು ಬಿ.ಆರ್. ಪಾಟೀಲ 'ಪ್ರಜಾವಾಣಿ'ಗೆ ಸೋಮವಾರ ತಿಳಿಸಿದರು.

'ಏಪ್ರಿಲ್ 4ರಿಂದ 6ರವರೆಗೆ ಪಠಾಣನಪುರ, ಟಿಕ್ರಿ ಮತ್ತು ಸಿಂಘು ಗಡಿಯಲ್ಲಿ ರೈತ ಸ್ಮಾರಕವನ್ನು ನಿರ್ಮಿಸಲು ಉದ್ದೇಶಿಸಲಾಗಿದೆ. ಅದಕ್ಕಾಗಿ ಕರ್ನಾಟಕದ ಹೋರಾಟದ ಮಣ್ಣನ್ನು ಕೂಡ ಕೊಡುತ್ತಿದ್ದೇವೆ. ರೈತರ ಮುಷ್ಕರಕ್ಕೆ ನಮ್ಮ ಬೆಂಬಲದ ಸಂಕೇತ ಇದು' ಎಂದು ಹೇಳಿದರು.

ಮಣ್ಣಿಗೆ ಪೂಜೆ: 'ಪಾದಯಾತ್ರೆಯಲ್ಲಿ ಸಂಗ್ರಹಿಸಿರುವ ಮಣ್ಣಿನ ಒಂದು ಹಿಡಿಯನ್ನು ನಾನು ಮನೆಗೆ ತೆಗೆದುಕೊಂಡು ಹೋಗುವೆ. ಇನ್ನು ಮುಂದೆ ಯಾರೇ ಯಾವುದೇ ಕಾರ್ಯಕ್ರಮಕ್ಕೆ ನನ್ನನ್ನು ಆಹ್ವಾನಿಸಿದರೂ ಅವರಿಗೆ ವೇದಿಕೆಯಲ್ಲಿ ಮಣ್ಣನ್ನು ಪೂಜಿಸಲು ಕೇಳಿಕೊಳ್ಳುವೆ. ಅದು ಭೂಮಿಪೂಜೆಯ ಸಂಕೇತ. ಅದಕ್ಕೆ ಒಪ್ಪಿದರೆ ಮಾತ್ರ ಕಾರ್ಯಕ್ರಮಕ್ಕೆ ಹೋಗಬೇಕೆಂದು ನಿರ್ಧರಿಸಿರುವೆ' ಎಂದು ಲೇಖಕ ಸ.ರಘುನಾಥ ತಿಳಿಸಿದರು.

ಪಾದಯಾತ್ರೆಯು ತಾಲ್ಲೂಕಿನ ಕಕ್ಕಬೇವಿನಹಳ್ಳಿಗೆ ತಲುಪಿದ್ದು, ಸಂಜೆ ಚಾಗನೂರಿನಲ್ಲಿ ಮುಖಂಡರು ತಂಗಲಿದ್ದಾರೆ. ಚಾಗನೂರು ಮಲ್ಲಿಕಾರ್ಜುನ ರೆಡ್ಡಿ, ಮಾಧವರೆಡ್ಡಿ, ಎಂ.ಶ್ರೀಹರಿ, ರೈತ ಸಂಘದ ಅಧ್ಯಕ್ಷ ಡಿ.ಜಿ.ಹಳ್ಳಿ ನಾರಾಯಣಸ್ವಾಮಿ, ಬಸವರಾಜಸ್ವಾಮಿ ಪಾದಯಾತ್ರೆ ನೇತೃತ್ವ ವಹಿಸಿದ್ದಾರೆ.

ಎಚ್‌ಕೆಸಿಸಿಐಗೆ ವಿಜಯೇಂದ್ರ ಸಂಬಂಧಿ ಪ್ರಶಾಂತ ಅಧ್ಯಕ್ಷ

ಕಲಬುರ್ಗಿ: ಇಲ್ಲಿನ ಹೈದರಾಬಾದ್ ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ (ಎಚ್‌ಕೆಸಿಸಿಐ)ಯ ಅಧ್ಯಕ್ಷರಾಗಿ ನಗರದ ಉದ್ಯಮಿ ಪ್ರಶಾಂತ ಮಾನಕರ ಗೆಲುವು ಸಾಧಿಸಿದ್ದಾರೆ. ಇವರು, ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರ ಭಾವ.

ಭಾನುವಾರ ನಗರದಲ್ಲಿ ಮತದಾನ ನಡೆದು, ತಡರಾತ್ರಿ ಫಲಿತಾಂಶ ಪ್ರಕಟವಾಯಿತು.

ಪ್ರಶಾಂತ (1,524 ಪಡೆದ ಮತ) ಅವರು ನಿಕಟ ಪೂರ್ವ ಅಧ್ಯಕ್ಷ ಅಮರನಾಥ ಸಿ. ಪಾಟೀಲ ಅವರನ್ನು 878 ಮತಗಳಿಂದ ಪರಾಭವಗೊಳಿಸಿದರು.



ಪ್ರಶಾಂತ

ಪ್ರಶಾಂತ ಅವರ ಬಣದ ಎಲ್ಲ 23 ಸ್ಥಾನಗಳು ವಿಜೇತರಾಗಿದ್ದಾರೆ. ನೂತನ ಆಡಳಿತ ಮಂಡಳಿಯ ಅವಧಿ ಮೂರು ವರ್ಷ.

ಸಿಆರ್‌ಜೆಡ್ ನಿಯಮ ಉಲ್ಲಂಘನೆ: ಕ್ರಮ ಕೈಗೊಂಡ ವರದಿ ಕೇಳಿದ ಹೈಕೋರ್ಟ್

ಬೆಂಗಳೂರು: ಕರಾವಳಿ ನಿಯಂತ್ರಣಾ ವಲಯದ (ಸಿಆರ್‌ಜೆಡ್) ನಿಯಮ ಉಲ್ಲಂಘನೆ ಸಂಬಂಧ ದಕ್ಷಿಣ ಕನ್ನಡ ಜಿಲ್ಲೆಯ ಮೂರು ಮೀನು ಕೈಗಾರಿಕೆಗಳ ವಿರುದ್ಧ ಕೈಗೊಂಡ ಕ್ರಮಗಳ ಬಗ್ಗೆ ದಾಖಲೆ ಒದಗಿಸುವಂತೆ ಕೇಂದ್ರ ಸರ್ಕಾರ ಮತ್ತು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣಾ ಮಂಡಳಿಗೆ (ಕೆಎಸ್‌ಪಿಸಿಬಿ) ಹೈಕೋರ್ಟ್ ನಿರ್ದೇಶನ ನೀಡಿದೆ.

ಪಿ.ಆರ್. ಶೆಟ್ಟಿ ಮತ್ತು ಇತರ ಇಬ್ಬರು ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ ವಿಚಾರಣೆ ನಡೆಸುತ್ತಿದೆ. 'ಮುಕ್ಕಾ ಸೀ ಫುಡ್ ಇಂಡಸ್ಟ್ರೀಸ್ ಪ್ರೈವೇಟ್ ಲಿಮಿಟೆಡ್, ಬಾವಾ ಫಿಶ್ ಮಿಲ್ ಆ್ಯಂಡ್ ಕಂಪನಿ ಮತ್ತು ಎಚ್.ಕೆ.ಎ. ಬಾವಾ ಆ್ಯಂಡ್ ಸನ್ಸ್ ಎಂಬ ಮೂರು ಮೀನು ಸಂಸ್ಕರಣಾ ಘಟಕಗಳು ಮೀನಿನ ಎಣ್ಣೆ, ಮೀನಿನ ಆಹಾರ ಉತ್ಪಾದನೆಯಲ್ಲಿ ತೊಡಗಿವೆ' ಎಂದು ಅರ್ಜಿಯಲ್ಲಿ ತಿಳಿಸಲಾಗಿದೆ.

'ಈ ಕೈಗಾರಿಕೆಗಳು ಅರಬ್ಬಿ ಸಮುದ್ರದಿಂದ 50 ಮೀಟರ್ ದೂರದಲ್ಲಿರುವ ಮತ್ತು ಸಿಆರ್‌ಜೆಡ್ ಒಳಗಿನ ಸುರತ್ಕಲ್‌ನ ಮುಕ್ಕಾ ಬೀಚ್ ರಸ್ತೆಯಲ್ಲಿವೆ. 2011ರ ಸಿಆರ್‌ಜೆಡ್ ಅಧಿಸೂಚನೆ ಉಲ್ಲಂಘಿಸಿ ಕೈಗಾರಿಕೆ ನಡೆಸಲಾಗುತ್ತಿದೆ. ಈ ಕೈಗಾರಿಕೆಗಳಿಂದ ಉತ್ಪತ್ತಿಯಾಗುವ ಮಾಲಿನ್ಯ ನೆರೆಯ ನಿವಾಸಿಗಳ ಮೇಲೆ ಪರಿಣಾಮ ಬೀರುತ್ತಿದೆ. ದುರ್ವಾಸನೆ, ಶಬ್ದ ಮತ್ತು ನೀರಿನ ಮಾಲಿನ್ಯಕ್ಕೂ ಕಾರಣವಾಗಿದೆ. ಸಂವಿಧಾನ ನೀಡಿರುವ ಶುದ್ಧ ವಾತಾವರಣದ ಹಕ್ಕನ್ನೂ ನೇರವಾಗಿ ಉಲ್ಲಂಘಿಸಲಾಗುತ್ತಿದೆ' ಎಂದು ಅರ್ಜಿಯಲ್ಲಿ ಆರೋಪಿಸಲಾಗಿದೆ.

ವಿಚಾರಣೆಯನ್ನು ಪೀಠ ಮಾ.29ಕ್ಕೆ ಮುಂದೂಡಿತು.

ವಿವಿಧೆಡೆ ನಾಟಕ ಪ್ರದರ್ಶನಕ್ಕೆ ಚಿಂತನೆ: ಕೇಂದ್ರಕ್ಕೆ ಮೊರೆ

'ಪರ್ವ': ಹೊರ ರಾಜ್ಯ ಪ್ರವಾಸ

• ಡಿ.ಬಿ.ನಾಗರಾಜ

ಮೈಸೂರು: ಸಾಹಿತಿ ಎಸ್.ಎಲ್. ಭೈರಪ್ಪ ರಚಿತ 'ಪರ್ವ' ಕಾದಂಬರಿಯ ರಂಗ ಪ್ರದರ್ಶನ ಶುರುವಾದ ಬೆನ್ನಿಗೇ, ಹೊರ ರಾಜ್ಯಗಳಲ್ಲಿ 'ಪರ್ವ' ಪ್ರದರ್ಶನಕ್ಕೆ ಮೈಸೂರು ರಂಗಾಯಣ ಚಿಂತನೆ ನಡೆಸಿದೆ.

ಹೊರ ರಾಜ್ಯಗಳಲ್ಲಿರುವ ಕನ್ನಡ ಸಂಘಗಳ ಮೂಲಕ ನಾಟಕ ಪ್ರದರ್ಶನಕ್ಕೆ ರಂಗಾಯಣ ಆಲೋಚಿಸಿದೆ. ಇದಕ್ಕಾಗಿಯೇ ಕೇಂದ್ರ ಸರ್ಕಾರದಿಂದ ₹ 2 ಕೋಟಿ ಅನುದಾನ ಪಡೆಯಲು ಪ್ರಸ್ತಾವ ಸಲ್ಲಿಸಲಿದೆ ಎಂದು ಮೂಲಗಳಿಂದ ಗೊತ್ತಾಗಿದೆ.

'ಹೊರ ರಾಜ್ಯಗಳಲ್ಲೂ ಕನ್ನಡ ಭಾಷೆಯಲ್ಲಿ 'ಪರ್ವ' ನಾಟಕ ಪ್ರದರ್ಶಿಸುವ ಆಶಯ ಮೈಸೂರು ರಂಗಾಯಣದ್ದು. ಇದಕ್ಕಾಗಿ ಪ್ರಕ್ರಿಯೆ ಆರಂಭಿಸಿದ್ದೇವೆ. ಕೇಂದ್ರದ ಅನುದಾನ ದೊರೆತರೆ ಅಕ್ಟೋಬರ್ ನಂತರ ಪ್ರವಾಸ ಕೈಗೊಳ್ಳಲಿದ್ದೇವೆ. ಅದಕ್ಕೆ ಬೇಕಿರುವ ಸಿದ್ಧತೆಯನ್ನು ಮಾಡಿಕೊಳ್ಳುತ್ತೇವೆ' ಎಂದು ರಂಗಾಯಣ ನಿರ್ದೇಶಕ ಅಡ್ಡಂಡ ಕಾರ್ಯಪ್ಪ 'ಪ್ರಜಾವಾಣಿ'ಗೆ ತಿಳಿಸಿದರು.

ಮುಖ್ಯಾಂಶಗಳು

- 50 ಜನರ ತಂಡ ಪರ್ವ ಪರ್ಯಟನೆಗೆ
- ಪ್ರದರ್ಶನಕ್ಕಾಗಿ ₹ 1 ಕೋಟಿ ಅನುದಾನ
- ₹ 2 ಕೋಟಿ ಅನುದಾನಕ್ಕಾಗಿ ಕೇಂದ್ರಕ್ಕೆ ಪ್ರಸ್ತಾವ

ಪ್ರಜಾವಾಣಿ ವಿಶೇಷ

> ಪರ್ವ ಪರ್ಯಟನೆಗೂ ಮುನ್ನ ನಾಟಕ ಪ್ರದರ್ಶನಕ್ಕೆ ಯಾವ ರಂಗಮಂದಿರ ಸೂಕ್ತ ಎಂಬುದನ್ನು ಪರಿಶೀಲಿಸಲು ತಂತ್ರಜ್ಞರೊಬ್ಬರ ಜೊತೆ ರಾಜ್ಯ ಪ್ರವಾಸ ನಡೆಸುವೆ
> **ಅಡ್ಡಂಡ ಕಾರ್ಯಪ್ಪ,** ನಿರ್ದೇಶಕ, ಮೈಸೂರು ರಂಗಾಯಣ

'ಹೊರ ರಾಜ್ಯದಲ್ಲಿ 'ಪರ್ವ' ಕನ್ನಡ ಭಾಷೆಯಲ್ಲೇ ಪ್ರದರ್ಶನಗೊಳ್ಳುವಾಗ, ಆ ದೃಶ್ಯಕ್ಕೆ ಸಂಬಂಧಿಸಿದ ಸಾರಾಂಶ 90 ಡಿಗ್ರಿ ಕಣ್ಣಳತೆಯ ಸ್ಕ್ರೀನ್‌ನಲ್ಲಿ ಪ್ರೇಕ್ಷಕರಿಗೆ ಇಂಗ್ಲಿಷ್ ಭಾಷೆಯಲ್ಲಿ ಗೋಚರಿಸಲಿದೆ. ಇದಕ್ಕೆ ಬೇಕಾಗಿರುವ ಸಿದ್ಧತೆಯೂ ನಡೆದಿದೆ' ಎಂದರು.

'ಪರ್ವ' ಪರ್ಯಟನೆ: 'ಪರ್ವ' ನಾಟಕ ಪ್ರದರ್ಶನಕ್ಕಾಗಿಯೇ ರಾಜ್ಯ ಸರ್ಕಾರ ಬಜೆಟ್‌ನಲ್ಲಿ ₹ 1 ಕೋಟಿ ಅನುದಾನ ಮೀಸಲಿಟ್ಟಿದೆ. ರಾಜ್ಯದ ಎಲ್ಲೆಡೆ ಪ್ರವಾಸ ಮಾಡಿ ನಾಟಕ ಪ್ರದರ್ಶಿಸಬೇಕು ಎಂಬುದನ್ನು ಸ್ಪಷ್ಟವಾಗಿ ಉಲ್ಲೇಖಿಸಿದೆ. ಇದರಂತೆ ಜೂನ್ ಅಂತ್ಯದಿಂದ ಮೈಸೂರು ರಂಗಾಯಣ 'ಪರ್ವ ಪರ್ಯಟನೆ' ನಡೆಸಲಿದೆ ಎಂದು ಹೇಳಿದರು.

'ಮೈಸೂರಿನ ರಂಗಾಯಣದ ಆವರಣದಲ್ಲೇ ಕನಿಷ್ಠ 20 ಪ್ರದರ್ಶನ ನಡೆಯಲಿದೆ. ರಾಜ್ಯದ ವಿವಿಧೆಡೆ 30 ಪ್ರದರ್ಶನ ನೀಡುವ ಆಲೋಚನೆಯಿದೆ. ಒಂದೊಂದು ಕಡೆ ಮೂರು ದಿನ ಕ್ಯಾಂಪ್ ಮಾಡಲಿದ್ದು, ಎರಡು ಪ್ರದರ್ಶನ ನಡೆಸಲಿದ್ದೇವೆ. 50 ಜನರನ್ನೊಳಗೊಂಡ ತಂಡ ಪರ್ವ ಪರ್ಯಟನೆ ಕೈಗೊಳ್ಳಲಿದೆ' ಎಂದು ತಿಳಿಸಿದರು.

ಅವಧಿ ಮುಗಿದ ಸ್ಥಳೀಯ ಸಂಸ್ಥೆಗಳ ಪಟ್ಟಿ ನೀಡಲು ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅವಧಿ ಮುಗಿದರೂ ಚುನಾವಣೆ ನಡೆಯದಿರುವ ನಗರ ಸ್ಥಳೀಯ ಸಂಸ್ಥೆಗಳ ಪಟ್ಟಿ ಸಲ್ಲಿಸುವಂತೆ ರಾಜ್ಯ ಚುನಾವಣಾ ಆಯೋಗಕ್ಕೆ ಹೈಕೋರ್ಟ್ ನಿರ್ದೇಶನ ನೀಡಿದೆ.

ಈ ಸಂಬಂಧ ಸ್ವಯಂ ಪ್ರೇರಿತ ಅರ್ಜಿ ದಾಖಲಿಸಿಕೊಂಡಿರುವ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ, ಚುನಾವಣೆಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟ್ ಮುಂದೆ ಬಾಕಿ ಇರುವ ಪ್ರಕರಣಗಳ ಬಗ್ಗೆಯೂ ಸ್ಪಷ್ಟಪಡಿಸುವಂತೆ ತಿಳಿಸಿತು.

4 ಮಹಾನಗರ ಪಾಲಿಕೆ, 10 ನಗರಸಭೆ, 6 ಪುರಸಭೆ ಮತ್ತು 2 ಪಟ್ಟಣ ಪಂಚಾಯಿತಿಗಳ ಅವಧಿ ಮುಗಿದಿರುವ ಅಂಶವನ್ನು ಗಮನದಲ್ಲಿಟ್ಟುಕೊಂಡು ಸ್ವಯಂ ಪ್ರೇರಿತ ಅರ್ಜಿಯನ್ನು ಪೀಠ ದಾಖಲಿಸಿಕೊಂಡಿದೆ.

'ಸಂವಿಧಾನದ ಪ್ರಕಾರ ಅವಧಿ ಮುಗಿಯುವ ಮೊದಲೇ ಕ್ಷೇತ್ರ ಮರು ವಿಂಗಡಣೆ ಪ್ರಕ್ರಿಯೆಗಳನ್ನು ಮಾಡಿಕೊಳ್ಳಬೇಕು. ಅವಧಿ ಮುಗಿದ ಬಳಿಕ ಈ ಪ್ರಕ್ರಿಯೆ ಆರಂಭಿಸುವುದು ಸಂವಿಧಾನದ ಆಶಯಕ್ಕೆ ವಿರುದ್ಧ' ಎಂದು ಪೀಠ ಅಭಿಪ್ರಾಯಪಟ್ಟಿದೆ.

ಕೋವಿಡ್ ನಿಯಮ ಉಲ್ಲಂಘನೆ: ನೋಟಿಸ್ ಜಾರಿ

ಮಸ್ಕಿ (ರಾಯಚೂರು ಜಿಲ್ಲೆ): ಪಟ್ಟಣದಲ್ಲಿ ಈಚೆಗೆ ನಡೆದ ಬಿಜೆಪಿ ಸಮಾವೇಶದಲ್ಲಿ ಹೆಚ್ಚು ಜನರನ್ನು ಸೇರಿಸಿ ಕೋವಿಡ್ ನಿಯಮ ಉಲ್ಲಂಘಿಸಿದ ಆರೋಪದ ಮೇಲೆ ಬಿಜೆಪಿ ತಾಲ್ಲೂಕು ಘಟಕದ ಅಧ್ಯಕ್ಷ ಶಿವಪುತ್ರಪ್ಪ ಅರಳಹಳ್ಳಿ ಅವರಿಗೆ ಕಾರಣ ಕೇಳಿ ನೋಟಿಸ್ ನೀಡಲಾಗಿದೆ ಎಂದು ಚುನಾವಣಾಧಿಕಾರಿ ರಾಜಶೇಖರ ಡಂಬಳ ತಿಳಿಸಿದ್ದಾರೆ.

ಮಾರ್ಚ್ 20ರಂದು ಪಟ್ಟಣದಲ್ಲಿ ಏರ್ಪಡಿಸಿದ್ದ ಸಮಾವೇಶದಲ್ಲಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಭಾಗವಹಿಸಿದ್ದರು.

ನಿಧನ ವಾರ್ತೆ

ಮಾಜಿ ಸಚಿವ ಬಿ.ಡಿ. ಬಸವರಾಜು

ಸಕಲೇಶಪುರ: ಮಾಜಿ ಸಚಿವ ಬಿ.ಡಿ. ಬಸವರಾಜು (85) ಅನಾರೋಗ್ಯದಿಂದ ಸೋಮವಾರ ಬೆಳಿಗ್ಗೆ ಬೆಂಗಳೂರಿನ ಆಸ್ಪತ್ರೆಯಲ್ಲಿ ನಿಧನರಾದರು.



ಅವರಿಗೆ ಪತ್ನಿ ಸುಮಂಗಲಾ, ಪುತ್ರ, ಇಬ್ಬರು ಪುತ್ರಿಯರು ಇದ್ದಾರೆ. ಹುಟ್ಟೂರು ಬಾಳ್ಳುಪೇಟೆಯಲ್ಲಿ ಅಂತ್ಯಕ್ರಿಯೆ ನೆರವೇರಿತು.

ಸಕಲೇಶಪುರ ತಾಲ್ಲೂಕಿನ ಬಾಳ್ಳುಪೇಟೆ ಗ್ರಾಮದ ಬಸವರಾಜು, ಎಸ್.ಆರ್.ಬೊಮ್ಮಾಯಿ ಸಚಿವ ಸಂಪುಟದಲ್ಲಿ ಕೇವಲ ಎರಡು ದಿನ ಉನ್ನತ ಶಿಕ್ಷಣ ಸಚಿವರಾಗಿದ್ದರು. ಸಕಲೇಶಪುರಕ್ಕೆ ಬಿ.ಇಡಿ ಕಾಲೇಜು ಹಾಗೂ ಪ್ರಥಮ ದರ್ಜೆ ಕಾಲೇಜು ಮಂಜೂರು ಮಾಡಿಸಿದ ಕೀರ್ತಿಗೆ ಪಾತ್ರರಾಗಿದ್ದರು.

ಜನತಾ ಪಕ್ಷದಿಂದ ಸ್ಪರ್ಧೆ ಮಾಡಿ 1985 ರಿಂದ 1989ರ ವರೆಗೆ ಸಕಲೇಶಪುರ–ಆಲೂರು ವಿಧಾನಸಭಾ ಕ್ಷೇತ್ರದ ಶಾಸಕರಾಗಿದ್ದರು. 1989, 1994ರಲ್ಲಿ ಜನತಾ ದಳದಿಂದ ಹಾಗೂ 2004ರಲ್ಲಿ ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸಿ ಸೋಲುಂಡರು. 1999 ರಲ್ಲಿ ಬಿಜೆಪಿ ಅಭ್ಯರ್ಥಿಯಾಗಿ ಹಾಸನ ಲೋಕಸಭಾ ಚುನಾವಣೆಗೆ ಸ್ಪರ್ಧಿಸಿ ಪರಾಭವಗೊಂಡಿದ್ದರು.



ಮಾನಸಿಕ ಒತ್ತಡ ಉದ್ವೇಗ ಮತ್ತು ಆರೋಗ್ಯ

ಡಾ. ಕಿರಣ್ ವಿ. ಎಸ್.

ಒತ್ತಡ ಬಾಧಿಸುವ ಸಮಯದಲ್ಲಿ ಬಹುಮಟ್ಟಿಗೆ ನಮಗೆ ಅದು ತಿಳಿಯುವುದೇ ಇಲ್ಲ. ನಮ್ಮ ದೈಹಿಕ ಚಟುವಟಿಕೆಗಳಲ್ಲಿ ಮತ್ತು ಮಾನಸಿಕತೆಯಲ್ಲಿ ಸೂಕ್ತವಾದ ಬದಲಾವಣೆಗಳನ್ನು ಮಾಡಿಕೊಂಡು ವೈಯಕ್ತಿಕವಾಗಿ ಒತ್ತಡವನ್ನು ನಿರ್ವಹಿಸಬಹುದು.

ಆಧುನಿಕ ಜೀವನಶೈಲಿ ಪ್ರಸಾದಿಸಿರುವ ಒಂದು ಪದ: 'ಟೆನ್ಶನ್'!

ಕೆಲವು ವರ್ಷಗಳ ಹಿಂದೆ ಸಹಜವಾಗಿ ನಡೆಯುತ್ತಿದ್ದ ಎಷ್ಟೋ ಸರಳ ಕ್ರಿಯೆಗಳು ಇಂದು ಉದ್ವೇಗಕಾರಕಗಳಾಗಿವೆ. ಮಾನಸಿಕ ಒತ್ತಡ ಮತ್ತು ಉದ್ವೇಗಗಳು ಶರೀರದ ಕ್ರಿಯೆಗಳ ಮೇಲೆ, ಮನಸ್ಸಿನ ವ್ಯವಹಾರಗಳ ಮೇಲೆ ಮತ್ತು ದಿನನಿತ್ಯದ ವರ್ತನೆಗಳ ಮೇಲೆ ಮಹತ್ತರ ಪರಿಣಾಮಗಳನ್ನು ಬೀರುತ್ತವೆ. ಸಮಸ್ಯೆಯೆಂದರೆ, ಒತ್ತಡ ಬಾಧಿಸುವ ಸಮಯದಲ್ಲಿ ಬಹುಮಟ್ಟಿಗೆ ನಮಗೆ ಅದು ತಿಳಿಯುವುದೇ ಇಲ್ಲ. ಕೆಲಕಾಲದ ನಂತರ 'ಆ ಸಮಯದಲ್ಲಿ ಒತ್ತಡ ಹೆಚ್ಚಾಗಿತ್ತು' ಎನ್ನುವ ಅರಿವು ಮೂಡಬಹುದು. ಆದರೆ, ಆ ವೇಳೆಗೆ ಉದ್ವೇಗ ತನ್ನ ಪರಿಣಾಮವನ್ನು ತೋರಿಸಿರುತ್ತದೆ.

'ಒತ್ತಡ ಇದ್ದಾಗ ಮಾತ್ರ ನಾನು ಕೆಲಸ ಮಾಡಬಲ್ಲೆ. ನನ್ನ ಅತ್ಯುತ್ತಮ ಕೆಲಸಗಳು ಒತ್ತಡದ ಸಮಯದಲ್ಲಿ ಬಂದವು' ಎಂದು ಹೇಳುವವರಿದ್ದಾರೆ. ತಕ್ಕಮಟ್ಟಿಗೆ ಈ ಮಾತಿನಲ್ಲಿ ತಥ್ಯವಿದೆ. ಮಾನಸಿಕ ಒತ್ತಡವನ್ನು ನಮ್ಮ ಮಿದುಳು 'ಅಸ್ತಿತ್ವಕ್ಕೆ ಒದಗಿದ ಸಂಕಟ' ಎಂದೇ ಭಾವಿಸುತ್ತದೆ. ಅದಕ್ಕೆ ತಕ್ಕಂತೆ ಕೆಲವು ರಕ್ಷಕ ಚೋದಕಗಳನ್ನು ಸ್ರವಿಸುತ್ತದೆ. ಈ ಚೋದಕಗಳ ಪರಿಣಾಮದಿಂದ ಶರೀರದ ಕ್ರಿಯೆಗಳು ಚುರುಕಾಗುತ್ತವೆ. ಈ ಪರಿಣಾಮ ತಾತ್ಕಾಲಿಕವಾದರೂ, ಅದರ ಪ್ರಚೋದನೆಯ ಪ್ರಭಾವದಿಂದ ಕೆಲಸಗಳನ್ನು ಮಾಡಬಲ್ಲವರಿದ್ದಾರೆ. ಆದರೆ, ಇದು ಒಳ್ಳೆಯ ಅಭ್ಯಾಸವೂ ಅಲ್ಲ; ಅನುಕರಣೀಯವೂ ಅಲ್ಲ. ಈ ರೀತಿಯ ಚೋದಕಗಳನ್ನು ಆಪದ್ಧನದಂತೆ ಬಳಸಿಕೊಳ್ಳಬೇಕೇ ಹೊರತು, ದಿನನಿತ್ಯದ ಖರ್ಚುಗಳಿಗೆ ಅಲ್ಲ! ಜೊತೆಗೆ ಇಂತಹ ರಕ್ಷಕ ಚೋದಕಗಳ ನಿರಂತರ ಸ್ರವಿಕೆಯಿಂದ ಶರೀರದ ರಕ್ಷಣೆಯ ಸಾಮರ್ಥ್ಯ ಕುಂದುತ್ತದೆ; ರಕ್ತದೊತ್ತಡ ಏರುತ್ತದೆ; ಅಕಾರಣವಾಗಿ ತಲೆನೋವು ಕಾಡುತ್ತದೆ; ಸುಸ್ತಾಗುತ್ತದೆ; ಹಸಿವೆಯಲ್ಲಿ ಏರುಪೇರಾಗುತ್ತದೆ; ಖಿನ್ನತೆ ಉಂಟಾಗಬಹುದು; ಹೃದ್ರೋಗಕ್ಕೂ ಮೂಲವಾಗಬಹುದು. ಅತಿ ಒತ್ತಡದ ಕಾರ್ಯಗಳನ್ನು ನಿರ್ವಹಿಸುವ ಅನೇಕ ಮಂದಿ ಸಣ್ಣ ಪ್ರಾಯದಲ್ಲೇ ಹೃದಯಾಘಾತಕ್ಕೆ ತುತ್ತಾಗುವ ಪ್ರಸಂಗಗಳನ್ನು ಕೇಳಿರುತ್ತೇವೆ.

ಹಾಗೆಂದ ಮಾತ್ರಕ್ಕೆ ಮಾನಸಿಕ ಒತ್ತಡ ಇರಲೇಬಾರದೇ? ಸಾಮಾನ್ಯ ಜೀವನ ನಡೆಸುವವರಿಗೆ ಒತ್ತಡರಹಿತವಾಗಿರಲು ಸಾಧ್ಯವೇ ಇಲ್ಲ! ನಮ್ಮ ದಿನನಿತ್ಯದ ಪ್ರಸಂಗಗಳು ಎಷ್ಟೊಂದು ಸಂಕೀರ್ಣ ಎಂದರೆ, ಊಹಿಸಲೂ ಆಗದ ದಿಕ್ಕುಗಳಿಂದಲೂ ಒತ್ತಡಗಳು ಚಿಮ್ಮಬಲ್ಲವು! 'ಸುಡುವ ಬಿಸಿಲಿನಿಂದ ರಕ್ಷಿಸಿಕೊಳ್ಳಲು ಎರಡು ದಾರಿಗಳಿವೆ. ಒಂದು, ಇಡೀ ಜಗತ್ತಿಗೆ ಛಾವಣಿ ಹಾಕುವುದು. ಎರಡು, ನಮ್ಮ ಕಾಲಿಗೆ ಚಪ್ಪಲಿ ಮೆಟ್ಟಿಕೊಂಡು, ತಲೆಯ ಮೇಲೆ ಒಂದು ಕೊಡೆ ಹಿಡಿದು ನಡೆಯುವುದು' ಎನ್ನುವ ಅನುಭವದ ಮಾತಿದೆ. ಮಾನಸಿಕ ಉದ್ವೇಗದ ವಿಷಯದಲ್ಲೂ ಇದು ಪ್ರಸ್ತುತ. ದಶದಿಕ್ಕುಗಳಿಂದ ನುಗ್ಗಿ ಬರುವ ಒತ್ತಡಗಳನ್ನು ಮೂಲದಲ್ಲೇ ನಿಗ್ರಹಿಸಲು ಸಾಧ್ಯವಿಲ್ಲ. ಆದರೆ, ನಮ್ಮ ದೈಹಿಕ ಚಟುವಟಿಕೆಗಳಲ್ಲಿ ಮತ್ತು ಮಾನಸಿಕತೆಯಲ್ಲಿ ಸೂಕ್ತವಾದ ಬದಲಾವಣೆಗಳನ್ನು ಮಾಡಿಕೊಂಡು ವೈಯಕ್ತಿಕವಾಗಿ ಒತ್ತಡಗಳನ್ನು ನಿರ್ವಹಿಸಬಹುದು.

ಮೊದಲನೆಯದಾಗಿ, ಒತ್ತಡದ ಅಸ್ತಿತ್ವವನ್ನು ಗುರುತಿಸಬೇಕು. ದಿನವಹಿ ಮಾಡುವ ಕೆಲಸಗಳ ಲಯ ತಪ್ಪುವುದು, ಸಣ್ಣ ವಿಷಯಗಳನ್ನು ಮರೆಯುವುದು, ಮಾಡುವ ಕೆಲಸಗಳಲ್ಲಿ ಮಗ್ನತೆ ಇಲ್ಲದಿರುವುದು, ಸಿಡುಕು, ನಿದ್ರಾಹೀನತೆ – ಇವುಗಳು ಕಾಡುತ್ತಿದ್ದರೆ ಮಾನಸಿಕ ಉದ್ವೇಗವಿರಲು ಸಾಧ್ಯ. ನಮ್ಮ ಬಾಧೆಯ ಕಾರಣ ಅರಿಯಲು ಆತ್ಮಾವಲೋಕನ ಬೇಕಾಗುತ್ತದೆ. ಕೆಲವೊಮ್ಮೆ ತೀರಾ ನಗಣ್ಯ ಎನಿಸುವ ಸಂಗತಿಗಳು ಅಕಾರಣವಾಗಿ ಮಾನಸಿಕ ಒತ್ತಡಕ್ಕೆ ಕಾರಣವಾಗಿರುತ್ತವೆ. ಅವುಗಳನ್ನು ಗುರುತಿಸಿ, ನಿವಾರಿಸಿಕೊಳ್ಳುವುದು ಸೂಕ್ತವಾದ ಮಾರ್ಗ.

ಎರಡನೆಯದಾಗಿ, ಒತ್ತಡಕ್ಕೆ ಕಾರಣವಾಗುವ ಅಂಶಗಳನ್ನು ಗುರುತಿಸಬೇಕು. ಕೆಲವು ಕೆಲಸಗಳ ಬಗ್ಗೆ ಯೋಚಿಸಿದರೂ ಒತ್ತಡ ಆರಂಭವಾಗುತ್ತದೆ. ಇಂತಹ ಸಂದರ್ಭಗಳನ್ನು ಗುರುತಿಸಿ, ಪರಿಹಾರಗಳನ್ನು ಕಂಡುಕೊಳ್ಳಬೇಕು. ವಾಹನ ಚಾಲನೆ ಮಾಡುವುದು ಮಾನಸಿಕ ಉದ್ವೇಗಕ್ಕೆ ಕಾರಣ ಎನ್ನುವುದಾದರೆ, ಸಾಮಾನ್ಯಕ್ಕಿಂತ ಇಪ್ಪತ್ತು ನಿಮಿಷ ಮೊದಲೇ ಪ್ರಯಾಣವನ್ನು ಆರಂಭಿಸುವುದು; ಸಭೆಯಲ್ಲಿ ಮಾತನಾಡುವುದು ಉದ್ವೇಗ ನೀಡುವುದಾದರೆ, ಆ ಭಾಷಣವನ್ನು ಹಲವಾರು ಬಾರಿ ಅಭಿನಯಿಸಿ, ಅಭ್ಯಾಸ ಮಾಡುವುದು – ಈ ರೀತಿಯ ಪ್ರಯೋಗಗಳು ಸಾಕಷ್ಟು ಪ್ರಭಾವಶಾಲಿ.

ಮೂರನೆಯದು, ನಿರಂತರ ವ್ಯಾಯಾಮ ಮತ್ತು ಉಸಿರಾಟದ ಲಯದ ನಿರ್ವಹಣೆ. ಸ್ವಸ್ಥ ಶರೀರವೆಂಬುದು ಸ್ವಸ್ಥ ಮಿದುಳಿಗೆ ಬಹಳ ಮುಖ್ಯ. ವ್ಯಾಯಾಮ ನಮ್ಮ ಶರೀರದ ರಕ್ಷಕ ಚೋದಕಗಳನ್ನು ನಿಯಂತ್ರಣದಲ್ಲಿ ಇಡುತ್ತದೆ. ಉಸಿರಿನ ಲಯ ಮಿದುಳಿನ ಚಿಂತನೆಯನ್ನು ಸ್ತಿಮಿತದಲ್ಲಿ ಇಡಬಲ್ಲದು. ಮಾನಸಿಕ ಒತ್ತಡದಲ್ಲಿ ನಮಗೆ ಅರಿವಿಲ್ಲದಂತೆ ಶರೀರದ ಸ್ನಾಯುಗಳು ಬಿಗಿದುಕೊಳ್ಳುತ್ತವೆ. ಆಗ ಮಿದುಳಿನ ಲಕ್ಷ್ಯ ಈ ಸ್ನಾಯುಗಳತ್ತ ಹರಿದು, ಒತ್ತಡದ ಸಮಸ್ಯೆಯನ್ನು ನಿರ್ವಹಿಸಲು ಹೆಚ್ಚು ಕಾಲ ತೆಗೆದುಕೊಳ್ಳುತ್ತದೆ. ಉಸಿರಿನ ಲಯ ಸಮನಾಗಿದ್ದು, ಸ್ನಾಯುಗಳು ಸಡಿಲವಾಗಿದ್ದಾರೆ ಒತ್ತಡದ ನಿರ್ವಹಣೆ ಸುಲಭ.

ನಾಲ್ಕನೆಯದು, ವಾಸ್ತವವನ್ನು ಗ್ರಹಿಸುವುದು ಮತ್ತು ಅತಿ ನಿರೀಕ್ಷೆಯಿಂದ ದೂರವಿರುವುದು. ಒಳ್ಳೆಯ ಸ್ನೇಹಿತರು, ಉತ್ತಮವಾದ ಹವ್ಯಾಸ, ಕುಟುಂಬದ ಪ್ರೀತಿ – ಮಾನಸಿಕ ಒತ್ತಡದ ನಿರ್ವಹಣೆಯಲ್ಲಿ ಇವುಗಳ ಪಾತ್ರ ಬಹಳ ಹಿರಿದು. ನಮ್ಮ ಆಗತ್ಯಗಳ ಮಿತಿಯಲ್ಲಿ ಚಂದವಾಗಿ ಬದುಕುವುದರ ಮಹತ್ವವನ್ನು ಜೀವನದಲ್ಲಿ ಬೇಗನೆ ಗ್ರಹಿಸಿದಷ್ಟೂ ಮಾನಸಿಕ ಉದ್ವೇಗಗಳ ಪರಿಣಾಮ ಅಷ್ಟೇ ಕಡಿಮೆಯಾಗುತ್ತದೆ.

(ಲೇಖಕರು ವೈದ್ಯರು)



ಥಂಡಾ ಥಂಡಾ ಕೂಲ್ ಕೂಲ್

ಡಾ. ವಿಜಯಲಕ್ಷ್ಮಿ ಪಿ.

ಬೇಸಗೆ ಬಂತು, ಇನ್ನು ಐಸ್ ಕ್ರೀಂ ಅಂಗಡಿಗಳಿಗೆ ಸುಗ್ಗಿಯೋ ಸುಗ್ಗಿ. ಹಗಲು ರಾತ್ರಿಗಳ ವ್ಯತ್ಯಾಸವಿಲ್ಲದೆ ತಂಪು ಪದಾರ್ಥಗಳ ಮೊರೆ ಹೋಗುವ ಕಾಲವಿದು. ಬೇಸಗೆಯಲ್ಲಿ ತಂಪು ಹಿತವಾದರೂ ಅರಿತು ಸೇವಿಸಿದರೆ ಸ್ವಾಸ್ಥ್ಯ, ಇಲ್ಲವಾದರೆ ಅಸ್ವಾಸ್ಥ್ಯ. ಅದರಲ್ಲೂ ಈ ಕೊರೊನಾಯುಗದಲ್ಲಿ ಎಷ್ಟು ಅರಿತರೂ ಕಡಿಮೆಯೇ.

ಶರೀರ ತಂಪಾಗಿದ್ದರೆ ಮನಸ್ಸಿಗೆ ಆನಂದ. ಅಂತರಿಕವಾಗಿ ಶರೀರವನ್ನು ತಂಪು ಮಾಡುವ ಪದಾರ್ಥಗಳ ಉಪಯೋಗ ಈ ಕಾಲಕ್ಕೆ ಸೂಕ್ತ. ಸಾಮಾನ್ಯವಾಗಿ ಎಲ್ಲರಿಗೂ ತಿಳಿದಿರುವಂತೆ ತಂಪು ಅಥವಾ ನೀರು ಬೆಂಕಿಯನ್ನು ನಂದಿಸುತ್ತದೆ. ಇದು ಬೇಸಗೆಯಲ್ಲಾದರೂ, ಯಾವ ಕಾಲದಲ್ಲಾದರೂ ಒಂದೇ. ಆದರೆ ನಾವು ಸೇವಿಸುವ ತಂಪು ಪದಾರ್ಥ ದೇಹದ ಅಂತರಗ್ನಿಯ ಶಕ್ತಿಯನ್ನು ಕುಗ್ಗಿಸಬಾರದು. ಶಿಶಿರದಲ್ಲಿ ಘನವಾದ ಹಿಮ ಬೇಸಿಗೆಯಲ್ಲಿ ಕರಗುವಂತೆ ಧೃಢವಾದ ಶರೀರ ಧಾತುಗಳೂ ಬೇಸಗೆಯಲ್ಲಿ ತಮ್ಮ ಶಕ್ತಿಯನ್ನು ಕಳೆದುಕೊಳ್ಳುತ್ತವೆ. ದ್ರವದ ಅವಶ್ಯಕತೆ ಇದ್ದರೂ ಸ್ವಾಸ್ಥ್ಯ, ದಾರ್ಢ್ಯ ಕೆಡದಂತೆ ಶರೀರವನ್ನು ಕಾಪಾಡಿಕೊಳ್ಳುವ ಜಾಣತನ ಬೇಸಗೆಯಲ್ಲಿ ಅವಶ್ಯಕ

ಬಾಹ್ಯ ಲೇಪನಗಳು, ತಂಪಾದ ಗಾಳಿ – ಇವುಗಳ ಸೇವನೆಯಿಂದ ಚರ್ಮವನ್ನು ತಂಪಾಗಿರಿಸಿ ದೇಹವನ್ನು ತಂಪಾಗಿರಿಸುವುದು ಒಂದು ವಿಧಾನವಾದರೆ, ತಂಪಾಗಿರುವ ಪದಾರ್ಥಗಳನ್ನು ಸೇವಿಸುವ ಮೂಲಕ ಶರೀರವನ್ನು ತಂಪಾಗಿಸುವುದು ಇನ್ನೊಂದು ವಿಧಾನ.

ಸುಗಂಧದ್ರವ್ಯಗಳಾದ ಶ್ರೀಗಂಧ, ರಕ್ತಚಂದನ, ಲಾವಂಚ, ಇವುಗಳ ಚೂರ್ಣವನ್ನು ಗುಲಾಬಿ ಅರ್ಕ(Rose Water)ದಲ್ಲಿ ಕಲಸಿ ಮುಖ ಕೈಕಾಲುಗಳಿಗೆ ಲೇಪಿಸಿ ಒಣಗಿದ ನಂತರ ತೊಳೆದುಕೊಳ್ಳಬೇಕು; ಅಥವಾ ಇವುಗಳಿಂದ ಮೈಯನ್ನು ತಿಕ್ಕಿ ಸ್ನಾನ ಮಾಡುವುದು. ಈ ರೀತಿ ದಿನಾ ಅಥವಾ ಎರಡು ದಿನಕ್ಕೊಮ್ಮೆ ಮಾಡುವುದರಿಂದ ಮೈ ಕಾಂತಿ ಹೆಚ್ಚುತ್ತದೆ ಮತ್ತು ಚರ್ಮವ್ಯಾಧಿಗಳು ಬರುವುದಿಲ್ಲ. ದಾಸವಾಳ, ಅಂಟುವಾಳ, ಗೋರಂಟಿ ಇವುಗಳನ್ನು ತಲೆಗೆ ಹಚ್ಚುವುದರಿಂದಲೂ ತಲೆ ತಂಪಾಗುತ್ತದೆ. ಅಲರ್ಜಿಗಳಿದ್ದು ಚರ್ಮರೋಗ ಹೆಚ್ಚಾಗುವ ಸಾಧ್ಯತೆ ಇರುವವರು ಹೊಂಗೆ, ಬೇವು ಇವುಗಳ ಚೂರ್ಣಗಳನ್ನು ಮೈ ಕೈಗೇ ತಿಕ್ಕಿಕೊಂಡು ಸ್ನಾನ ಮಾಡುವುದೊಳಿತು ಅಥವಾ ಹೊಂಗೆ ಎಣ್ಣೆ, ಬೇವಿನ ಎಣ್ಣೆ, ಇವುಗಳನ್ನು ಹಚ್ಚಿ ಸ್ನಾನ ಮಾಡಬಹುದು. ಹಾಗೆಯೇ ಲಾವಂಚದ ಚಾಪೆಗಳನ್ನು ಕಿಟಕಿ, ಬಾಗಿಲುಗಳಿಗೆ ಹಾಕುವುದರಿಂದ ಅದರ ಮೂಲಕ ಬರುವ ಗಾಳಿಯು ಮೈಯನ್ನು ತಂಪಾಗಿಸುತ್ತದೆ. ಎಸಿ ಬಳಸುವವರು 25 ಡಿಗ್ರಿ ಉಷ್ಣಾಂಶಕ್ಕಿಂತ ಕಡಿಮೆ ಬಳಸಬಾರದು. ಇದು ಚರ್ಮ ಒಣಗದಂತೆ ಕಾಪಾಡುತ್ತದೆ. ಉಷ್ಣಾಂಶ ಕಡಿಮೆ ಆದಷ್ಟೂ, ಮೈ ತಂಪಾದರೂ ಚರ್ಮ ಒಣಗಿ ಚರ್ಮರೋಗ, ಉಬ್ಬಸ, ಮೂತ್ರಪಿಂಡಕ್ಕೆ ಸಂಬಂಧಿಸಿದ ರೋಗಗಳು ಹೆಚ್ಚಾಗುತ್ತವೆ.

ಬೇಸಗೆಯಲ್ಲಿ ತಂಪು ಹಿತವಾದರೂ ಅರಿತು ಸೇವಿಸಿದರೆ ಸ್ವಾಸ್ಥ್ಯ ಇಲ್ಲವಾದರೆ ಅಸ್ವಾಸ್ಥ್ಯ



ತಂಪು ಪೆಟ್ಟಿಗೆಯಲ್ಲಿಟ್ಟಿರುವ ಪಾನೀಯಗಳನ್ನು ಸೇವಿಸಿದರೆ ಕೆಮ್ಮು, ನೆಗಡಿ, ತಲೆನೋವು, ಹಸಿವು ಕಡಿಮೆಯಾಗುವುದು, ಆಮ್ಲಪಿತ್ತ ಮೊದಲಾದ ರೋಗಗಳನ್ನು ಆಹ್ವಾನಿಸಿದಂತೆ. ಅದೇ ಸೊಗದೆ ಬೇರು, ಲಾವಂಚ, ಗುಲಾಬಿ, ಏಲಕ್ಕಿ ಇವುಗಳಿಂದ ತಯಾರಿಸಿದ ನೀರು, ಅಥವಾ ಹಾಲು ಕಷಾಯ ಇವುಗಳ ಸೇವನೆ ಉಷ್ಣ ಮತ್ತು ಪಿತ್ತ ಎರಡನ್ನೂ ಕಡಿಮೆಮಾಡಿ, ಜೀರ್ಣಶಕ್ತಿ ಹಾಳಾಗದಂತೆ ಕಾಪಾಡುತ್ತದೆ. ಕೊನ್ನಾರಿ ಗಡ್ಡೆ ಹಾಕಿ ಕುದಿಸಿರುವ ನೀರು ಬೇಸಿಗೆಯ ಬೇದಿಗೆ ರಾಮಬಾಣ. ಒಂದೆಲಗ, ಮೆಂತೆ, ಉದ್ದು, ಬಸಳೆ, ವಿಟಮಿನ್ ಸೊಪ್ಪು, ಪಲಾಕು, ಜೀರಿಗೆ, ಓಮ ಇವುಗಳಲ್ಲಿ ಯಾವುದಾದರೂ ಒಂದು ದ್ರವ್ಯದ ತಂಬುಳಿ (ಮಜ್ಜಿಗೆಯಿಂದ ತಯಾರಿಸುವ ಪದಾರ್ಥ) ನಿತ್ಯ ಉಪಯೋಗಿಸುವುದರಿಂದ ಬೇಸಗೆಯ ಬೇಗೆಯನ್ನು ತಡೆಯಬಹುದು. ಈ ಕಾಲದಲ್ಲಿ ಅಡುಗೆಗೆ ಹೆಸರು ಬೇಳೆ, ಹೆಸರುಕಾಳುಗಳನ್ನು ಬಳಸಿದರೆ ಶರೀರ ತಂಪಾಗಿರುತ್ತದೆ, ಅನಾರೋಗ್ಯವೂ ಉಂಟಾಗುವುದಿಲ್ಲ. ಹೆಸರುಕಾಳನ್ನು ನೆನೆಸಿ, ರುಬ್ಬಿ ತೆಗೆದ ಹಾಲಿಗೆ ಬೆಲ್ಲ ಸೇರಿಸಿ ಸೇವಿಸುವುದು, ಆರಾರೋಟ್ ಗಂಜಿಗೆ ಹಾಲು ಸೇರಿಸಿ ಸೇವಿಸುವುದು ಮೈಯನ್ನು ತಂಪಾಗಿರಿಸುತ್ತದೆ. ಅರಳಿನ ಗಂಜಿ, ಹುರಿಹಿಟ್ಟು, ಹಣ್ಣಿನೊಡನೆ, ಬೆಲ್ಲದೊಡನೆ ಪಾನೀಯ ತಯಾರಿಸಿ ಕುಡಿಯುವುದು, ಕಲ್ಲಂಗಡಿಹಣ್ಣಿನೊಡನೆ ಅಧಿಕ ನೀರು ಸೇರಿಸಿ ಸೇವನೆ ಆರೋಗ್ಯಕರ.

ಕುದಿಸಿ ತಣಿಸಿರುವ ನೀರಿಗೆ, ಕರಿಬೇವಿನ ಪುಡಿ, ಇಂಗು ಅಲ್ಪ ಪ್ರಮಾಣದಲ್ಲಿ ಶುಂಠಿರಸ ಇವುಗಳನ್ನು ಸೇರಿಸಿ ತಯಾರಿಸಿದ ನೀರು ಮಜ್ಜಿಗೆ ಶ್ರೇಯಸ್ಕರ. ಆದರೆ ಇದನ್ನು ತಂಪುಪೆಟ್ಟಿಗೆಯಲ್ಲಿಟ್ಟರೆ ಅನಾರೋಗ್ಯವನ್ನು ಆಹ್ವಾನಿಸಿದಂತೆ

(ಲೇಖಕಿ ಆಯುರ್ವೇದವೈದ್ಯೆ)


ಮಿಲ್ಕ್ ಶೇಕ್ ಬೇಡ

ಯಾವ ಕಾರಣಕ್ಕೂ ಯಾವುದೇ ಹಣ್ಣನ್ನು ಹಾಲಿನ ಜತೆ ಬೆರೆಸಿ (ಮಿಲ್ಕ್ ಶೇಕ್, ಹಣ್ಣು ಮತ್ತು ಹಾಲು ಬೆರೆಸಿ ಸಲಾಡ್) ಸೇವಿಸಬಾರದು. ಐಸ್ ಕ್ರೀಂ ಮತ್ತು ಹಣ್ಣು, ಹುಳಿ ಎಂದು ಹಾಲು ಮಜ್ಜಿಗೆ ಬೆರೆಸುವುದು, ಸರ್ವದಾ ನಿಷಿದ್ಧ. ಇವು ಬಾಯಿಗೆ ರುಚಿಯಾದರೂ ನಿರಂತರ ಸೇವನೆಯಿಂದ ಅಂತರಿಕ ಅಂಗಾಂಗಗಳ ಕೆಲಸದಲ್ಲಿರುವ ಹೊಂದಾಣಿಕೆಯನ್ನು ಹಾಳುಮಾಡಿ, ದೀರ್ಘಕಾಲೀನ ಕಾಯಿಲೆಗಳನ್ನು ಉಂಟು ಮಾಡುತ್ತದೆ.

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

Grandma Climbs a Tree

Ruskin Bond (contd..)



Grandma Climbs a Tree

ಇಂಗ್ಲಿಷ್

ಎಸ್ಸೆಸ್ಸೆಲ್ಸಿ

A sequel to the sensible war of emotions between the elderly passion and the young ones love and affection towards the latter, the poet now narrates the way his granny came out with a strong conclusion with a win – win situation as an outcome in the lines 25 & 26 of the poem. This comes as a result of the silent battle grandma passed through for a few days confined to her room and staying away from her desires which had kept her happiness alive for ages and finally unable to bear the agony for a much longer time she now makes another eccentric decision which every person of her age would raise eyebrows for as to not to stay anymore in the cosy room just the feel of this made her confidence sit-up at once.

With the new energy, she calls poet's father and boldly without a hint of hesitation (explained here with the word 'undaunted') announces what was her actual need. She wanted to lead the rest of her life in a house in a treetop (Tree-house). The announcement would have taken almost everyone in the family by shock. The poet doesn't forget to express the invaluable bond of love again and explains the way his father responded to his unconventional wish of his mother by stating it simply as 'His father new his duties' which means to say that we as young ones cannot say a NO or answer negatively to any of the wishes made by the elders and have no right to make them feel dejected.

(to be continued)

ಪ್ರಜಾವಾಣಿ ನೋಡಿಯೊ

ಹತ್ತನೇ ತರಗತಿಯ ಇಂಗ್ಲಿಷ್ ಮಾಧ್ಯಮ ಭೌತಶಾಸ್ತ್ರ ವಿಭಾಗದ 'ಎಲೆಕ್ಟ್ರೋ ಮ್ಯಾಗ್ನೆಟಿಕ್ ಇಂಡಕ್ಷನ್_ಇಎಂಐ' ಪಾಠವನ್ನು ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.


https://bit.ly/3c981z9

ದ್ಯುತಿ ವಿದ್ಯುತ್‌ನ ಮೇಲೆ ಪರಿಣಾಮ ಬೀರುವ ಅಂಶಗಳು

ಭೌತಶಾಸ್ತ್ರ

ದ್ವಿತೀಯ ಪಿಯುಸಿ

ವಿಕಿರಣ ತೀವ್ರತೆ



ಸಂಗ್ರಾಹಕ ತಟ್ಟೆ A ಯನ್ನು C ತಟ್ಟೆಗೆ ಸಂಬಂಧಿಸಿದಂತೆ ಧನ ವಿಭವದಲ್ಲಿಟ್ಟಾಗ, ತಟ್ಟೆಯಿಂದ ಹೊರಬಂದ ಎಲೆಕ್ಟ್ರಾನ್‌ಗಳು A ತಟ್ಟೆಯೆಡೆಗೆ ಆಕರ್ಷಿತಗೊಳ್ಳುತ್ತವೆ. ದ್ಯುತಿ ವಿದ್ಯುತ್ ವಿಕಿರಣ ತೀವ್ರತೆಯೊಂದಿಗೆ ನೇರ ಅನುಪಾತದಲ್ಲಿದ್ದು, ವಿಕಿರಣ ತೀವ್ರತೆಯನ್ನು ಬದಲಾಯಿಸಿದಾಗ ಪ್ರವಹಿಸುವ ದ್ಯುತಿ ವಿದ್ಯುತ್ ಕೂಡ ಅನುಕ್ರಮವಾಗಿ ಬದಲಾಗುತ್ತದೆ.


ವಿಭವದ ಪರಿಣಾಮ

ತಟ್ಟೆ C ಗೆ ಸಂಬಂಧಿಸಿದಂತೆ ತಟ್ಟೆ A ಯನ್ನು ಧನ ವೇಗವರ್ಧಕ ವಿಭವದಲ್ಲಿಟ್ಟು C ತಟ್ಟೆಯ ಮೇಲೆ ಸ್ಥಿರ ಆವೃತ್ತಿ ಮತ್ತು ಸ್ಥಿರ ತೀವ್ರತೆ ಇರುವ ಬೆಳಕನ್ನು ಹಾಯಿಸಿದಾಗ, A ತಟ್ಟೆಯ ವಿಭವವನ್ನು ಹೆಚ್ಚಿಸಿದಂತೆ ದ್ಯುತಿ ವಿದ್ಯುತ್ ನೇರಾನುಪಾತದಲ್ಲಿ ಹೆಚ್ಚುತ್ತದೆ. ಒಂದು ನಿರ್ದಿಷ್ಟ ಹಂತದಲ್ಲಿ ಎಲ್ಲಾ ಉತ್ಸರ್ಜಿತ ಎಲೆಕ್ಟ್ರಾನ್‌ಗಳು A ತಟ್ಟೆಯಲ್ಲಿ ಸಂಗ್ರಹವಾಗಿ ನಂತರ ಯಾವುದೇ ಹೆಚ್ಚಳವಿರುವುದಿಲ್ಲ. ಈ ಗರಿಷ್ಠ ವಿದ್ಯುತ್ ಅನ್ನು ಪರ್ಯಾಪ್ತ ವಿದ್ಯುತ್ ಎನ್ನಲಾಗುತ್ತದೆ.


ಅದೇ ರೀತಿ C ತಟ್ಟೆಗೆ ಸಂಬಂಧಿಸಿದಂತೆ A ತಟ್ಟೆ ಋಣ ವಿಭವವನ್ನು ಅನ್ವಯಿಸಿ ಸ್ಥಿರ ಆವೃತ್ತಿಯ ಬೆಳಕನ್ನು ಹಾಯಿಸಿದಾಗ ಎಲೆಕ್ಟ್ರಾನ್‌ಗಳು ವಿಕರ್ಷಣೆ ಹೊಂದಿ ಕೇವಲ ಹೆಚ್ಚಿನ ಶಕ್ತಿ ಇರುವ ಎಲೆಕ್ಟ್ರಾನ್‌ಗಳು ಮಾತ್ರ A ತಟ್ಟೆಗೆ ತಲುಪುತ್ತವೆ.

ಒಂದು ನಿರ್ದಿಷ್ಟವಾದ ನಿರ್ಣಾಯಕವಾದ A ತಟ್ಟೆ ಋಣ ವಿಭವ V_0 ಗೆ ತಲುಪಿ ತಕ್ಷಣ ದ್ಯುತಿ ವಿದ್ಯುತ್ ಪ್ರವಾಹ ಶೂನ್ಯವಾಗುತ್ತದೆ. ಈ ವಿಭವವನ್ನು ನಿಲುಗಡೆ ವಿಭವ ಎನ್ನುತ್ತಾರೆ. ದ್ಯುತಿ ಎಲೆಕ್ಟ್ರಾನ್‌ಗಳ ಚಲನಶಕ್ತಿಯ $K_{max} = eV_o$

ಉತ್ಸರ್ಜಿತ-ಎಲೆಕ್ಟ್ರಾನ್‌ಗಳು ವಿಕಿರಣ ತೀವ್ರತೆಯೊಂದಿಗೆ ಹೆಚ್ಚಾಗುತ್ತವೆ. ಆದರೆ ನಿಲುಗಡೆ ವಿಭವವು ತೀವ್ರತೆಯೊಂದಿಗೆ ಸ್ವತಂತ್ರವಾಗಿದೆ.



ನಿಲುಗಡೆ ವಿಭವದ ಮೇಲೆ ಪತನ ಕಿರಣ ಆವೃತ್ತಿಯ ಪರಿಣಾಮ



- ಕೊಟ್ಟಿರುವದ್ಯುತಿಸೂಕ್ಷ್ಮವಸ್ತುವಿಗೆ, ನಿಲುಗಡೆ ವಿಭವವು (V_0) ವಿಕಿರಣ ಆವೃತ್ತಿಯೊಂದಿಗೆ ನೇರ ಅನುಪಾತದಲ್ಲಿರುತ್ತದೆ.
- ಒಂದು ನಿರ್ದಿಷ್ಟವಾದ, ಕನಿಷ್ಠ ನಿರ್ಣಾಯಕ ಆವೃತ್ತಿಗೆ V_0 ಗೆ ನಿಲುಗಡೆ ವಿಭವವು ಶೂನ್ಯವಾಗಿರುತ್ತದೆ.
- ದ್ಯುತಿ ಎಲೆಕ್ಟ್ರಾನ್‌ನ ಚಲನಶಕ್ತಿಯು ಪತನ ಕಿರಣ ಆವೃತ್ತಿಯೊಂದಿಗೆ ನೇರ ಅನುಪಾತದಲ್ಲಿದ್ದು ಅದು ತೀವ್ರತೆಯೊಂದಿಗೆ ಸ್ವತಂತ್ರವಾಗಿರುತ್ತದೆ.
- ಪತನ ಕಿರಣ ಆವೃತ್ತಿಯು (V) ನಿರ್ಣಾಯಕ ಆವೃತ್ತಿ V_0 ಗಿಂತ ಕಡಿಮೆ ಇದ್ದರೆ ಅದರ ತೀವ್ರತೆಯು ಅದೆಷ್ಟೇ ಹೆಚ್ಚಿದ್ದರೂ ದ್ಯುತಿ ವಿದ್ಯುತ್ ಪರಿಣಾಮ ಸಾಧ್ಯವಾಗದು.

ಪ್ರಜಾವಾಣಿ ನೋಡಿಯೊ

ದ್ವಿತೀಯ ಪಿಯುಸಿ ಭೌತಶಾಸ್ತ್ರ ವಿಭಾಗದ 'ನ್ಯೂಕ್ಲಿ_ನ್ಯೂಕ್ಲಿಯರ್ ಫೋರ್ಸ್' ಪಾಠವನ್ನು ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.

https://bit.ly/390sBj2



ಸುಭಾಷಿತ

ನಮ್ಮನ್ನು ದ್ವೇಷಿಸುವವರು ಸಾಗರದಲ್ಲಿನ ಒಂದು ಹನಿಯಂತೆ. ಉಳಿದಂತೆ ಆ ಕಡಲಲ್ಲಿ ಅಷ್ಟೊಂದು ಪ್ರೀತಿ ಇರುತ್ತದೆ.

-ಐಶ್ವರ್ಯಾ ರೈ ಬಚ್ಚನ್

ತೀರಥ್ ಸಿಂಗ್ ಹೇಳಿಕೆ ಪಾಳೆಗಾರಿಕೆಯ ಪ್ರತಿಬಿಂಬ

ಉತ್ತರಾಖಂಡದ ಮುಖ್ಯಮಂತ್ರಿ ತೀರಥ್ ಸಿಂಗ್ ರಾವತ್ ಅವರು ಹೆಣ್ಣುಮಕ್ಕಳ ಕುರಿತು ವಿವಾದಾಸ್ಪದ ಹೇಳಿಕೆಗಳನ್ನು ನೀಡುತ್ತಿರುವುದು ಮೇಲ್ನೋಟಕ್ಕೆ ತಮಾಷೆಯಾಗಿ ಕಾಣಿಸಬಹುದು. ಆದರೆ, ಇಂತಹ ಹೇಳಿಕೆಗಳನ್ನು ಪ್ರಜ್ಞಾವಂತರು ಗಂಭೀರವಾಗಿ ಪರಿಗಣಿಸಬೇಕಾದ ಅಗತ್ಯವಿದೆ. ಸಮಾಜದಲ್ಲಿ ಮಹಿಳೆಯರ ಕುರಿತು ಇರುವ ಪೂರ್ವಗ್ರಹ ಮತ್ತು ಸಂಕುಚಿತ ಮನೋಭಾವವನ್ನು ರಾವತ್ ಅವರ ಹೇಳಿಕೆಗಳು ಪ್ರತಿಬಿಂಬಿಸುತ್ತವೆ ಮತ್ತು ಮುಖ್ಯಮಂತ್ರಿಯವರೇ ಅವುಗಳನ್ನು ಸಮರ್ಥಿಸಿದಂತೆ ಕಾಣಿಸುತ್ತಿದೆ. 'ಹರಿದ ಜೀನ್ಸ್ ತೊಡುವ ಪರಿಪಾಟ ಮಹಿಳೆಯರಲ್ಲಿ ಹೆಚ್ಚುತ್ತಿದೆ. ಇದು ನಮ್ಮ ಸಂಸ್ಕೃತಿಯೇ? ಇಂತಹ ಬಟ್ಟೆ ಧರಿಸುವ ಪೋಷಕರಿಂದ ಮಕ್ಕಳು ಯಾವ ರೀತಿಯ ಸಂಸ್ಕೃತಿ ಕಲಿಯಬಲ್ಲರು? ಇದರಿಂದ ಸಮಾಜಕ್ಕೆ ಎಂತಹ ಸಂದೇಶ ರವಾನೆಯಾಗುತ್ತದೆ?' ಎಂಬರ್ಥದಲ್ಲಿ ಕೆಲವು ದಿನಗಳ ಹಿಂದೆ ಅವರು ನೀಡಿದ ಹೇಳಿಕೆ ವಿವಾದದ ಕಿಡಿ ಹೊತ್ತಿಸಿತ್ತು. ಈ ಹೇಳಿಕೆಗೆ ಸಮಾಜದ ವಿವಿಧ ಸ್ತರಗಳಿಂದ ತೀವ್ರ ಆಕ್ರೋಶವೂ ವ್ಯಕ್ತವಾಯಿತು. ಅದು ತಣ್ಣಗಾಗುವ ಮೊದಲೇ ಮತ್ತೊಂದು ವಿವಾದಾತ್ಮಕ ಹೇಳಿಕೆಯು ಅವರಿಂದ ಹೊರಬಿದ್ದಿದೆ. 'ಕೋವಿಡ್ ಪಿಡುಗಿನ ಈ ಸಮಯದಲ್ಲಿ ಹೆಚ್ಚು ಪಡಿತರ ಪಡೆಯುವ ಸಲುವಾಗಿ ಜನರು ಹೆಚ್ಚು ಮಕ್ಕಳನ್ನು ಹೆರಬೇಕಿತ್ತು...' ಎಂದಿದ್ದಾರೆ. ಈ ಮಾತು ರವಾನಿಸುವಂತಹ ಸಂದೇಶ ಎಂತಹುದು?



ಮಹಿಳೆಯರಿಗೆ ಸಂಬಂಧಿಸಿದ ವಿಷಯಗಳಲ್ಲಿ ಉತ್ತರಾಖಂಡದ ಮುಖ್ಯಮಂತ್ರಿ ಇನ್ನಾದರೂ ತಮ್ಮ ಬಾಯಿಬಡುಕತನವನ್ನು ನಿಲ್ಲಿಸುವುದು ಒಳ್ಳೆಯದು

ಮುಖ್ಯಮಂತ್ರಿ ರಾವತ್ ನೀಡಿರುವ ಎರಡೂ ಹೇಳಿಕೆಗಳು ಮಹಿಳಾವಿರೋಧಿ ಮಾತ್ರವಲ್ಲ, ಮುಖ್ಯಮಂತ್ರಿ ಹುದ್ದೆಯ ಘನತೆಗೂ ಚ್ಯುತಿ ತರುವಂತಿವೆ. ಕೆಲವು ಗುಂಪುಗಳು ಅನೈತಿಕ ಪೊಲೀಸ್‌ಗಿರಿ ಪ್ರದರ್ಶಿಸುವ ಮೂಲಕ ಸಮಾಜದಲ್ಲಿ ಅಶಾಂತಿಗೆ ಕಾರಣವಾಗುತ್ತಿರುವ ಘಟನೆಗಳು ಇತ್ತೀಚೆಗೆ ಉತ್ತರಾಖಂಡದಲ್ಲಿ ಹೆಚ್ಚಾಗಿವೆ. ಅಂತಹ ಕೃತ್ಯಗಳಿಗೆ ಕುಮ್ಮಕ್ಕು ಕೊಡುವಂತೆ ಮುಖ್ಯಮಂತ್ರಿಯವರೇ ಹೇಳಿಕೆಗಳನ್ನು ನೀಡುತ್ತಿರುವುದು ಎಷ್ಟು ಸರಿ? ಮಹಿಳೆಯರು ಯಾವ ರೀತಿಯ ಬಟ್ಟೆಗಳನ್ನು ಎಷ್ಟು ಮತ್ತು ಹೇಗೆ ತೊಡಬೇಕು ಎನ್ನುವುದರ ಕುರಿತು ಸರ್ಕಾರ ಮುನ್ನಡೆಸುವ ಮುಖ್ಯಸ್ಥರೇ ಹೇಳಿಕೆ ನೀಡುವುದನ್ನು ಎಳ್ಳಷ್ಟೂ ಒಪ್ಪಲು ಸಾಧ್ಯವಿಲ್ಲ. ಯಾವುದೇ ಪರಿಸ್ಥಿತಿಯಲ್ಲಿ ಎಲ್ಲ ಮಹಿಳೆಯರಿಗೂ ಸುರಕ್ಷಿತವೆನ್ನಿಸುವಂತಹ ಸಾಮಾಜಿಕ ವಾತಾವರಣವನ್ನು ಉಂಟು ಮಾಡುವುದು ಸರ್ಕಾರದ ಸಂವಿಧಾನಬದ್ಧ ಕರ್ತವ್ಯ. ಆ ಕರ್ತವ್ಯವನ್ನು ಸಮರ್ಪಕವಾಗಿ ನಿರ್ವಹಿಸುವುದನ್ನು ಬಿಟ್ಟು ಮುಖ್ಯಮಂತ್ರಿಯವರೇ ಬೇಕಾಬಿಟ್ಟಿ ಹೇಳಿಕೆಗಳನ್ನು ಕೊಡುವುದರಿಂದ, ಮಹಿಳೆಯರ ವಿರುದ್ಧ ಅಪರಾಧ ಪ್ರಕರಣಗಳು ಹೆಚ್ಚಲು ಪೂರಕ ವಾತಾವರಣ ಸೃಷ್ಟಿಯಾಗುವ ಅಪಾಯವಿದೆ. 'ಹೆಚ್ಚು ಪಡಿತರ ಪಡೆಯುವ ಸಲುವಾಗಿ ಹೆಚ್ಚು ಮಕ್ಕಳನ್ನು ಹೆರಬೇಕಾಗಿತ್ತು. ನೀವ್ಯಾಕೆ 20 ಮಕ್ಕಳನ್ನು ಹೆರಲಿಲ್ಲ?' ಎನ್ನುವ ಅವರ ಹೇಳಿಕೆಯು ಪಾಳೆಗಾರಿಕೆ ಮನೋಭಾವದ ದ್ಯೋತಕವಾಗಿದೆ. ಮಹಿಳೆಯರು ಮಕ್ಕಳನ್ನು ಹೆರುವ ಯಂತ್ರ ಎನ್ನುವ ರೂಢಿಗತ ಅನಿಸಿಕೆಯನ್ನು ರಾವತ್ ಸಮರ್ಥಿಸಿದ್ದಾರೆ. ಅಲ್ಲದೆ, ಪಡಿತರ ವಿತರಣಾ ವ್ಯವಸ್ಥೆಗೆ ಇರುವ ಸಾಮಾಜಿಕ ಘನತೆಯನ್ನೂ ಲೇವಡಿ ಮಾಡಿದ್ದಾರೆ. ಸರ್ಕಾರದ ಪಡಿತರ ನೀತಿಯ ಔಚಿತ್ಯದ ಬಗ್ಗೆಯೇ ಅವರಿಗೆ ವಿಶ್ವಾಸ ಇಲ್ಲ ಎನ್ನುವಂತಿದೆ ಈ ಹೇಳಿಕೆ. ಜೊತೆಗೆ ಕುಟುಂಬ ಯೋಜನೆಗೆ ಸಂಬಂಧಿಸಿ ಸರ್ಕಾರದ ನೀತಿ-ನಿಲುವಿನ ಬಗ್ಗೆಯೂ ಅವರು ಅವಿಶ್ವಾಸ ಪ್ರಕಟಿಸಿದಂತೆ ಆಗುತ್ತದೆ. ರಾಜ್ಯವೊಂದರ ಮುಖ್ಯಮಂತ್ರಿ ಹುದ್ದೆಯನ್ನು ನಿರ್ವಹಿಸುವವರು ಇಂತಹ ಅಪಕ್ವ, ಅಸಂಬದ್ಧ ಹೇಳಿಕೆಗಳನ್ನು ನೀಡಬಾರದು. ಕೋವಿಡ್‌ನಿಂದಾಗಿ ಅರ್ಥವ್ಯವಸ್ಥೆ ಹಳಿ ತಪ್ಪಿದೆ. ಅದನ್ನು ಸರಿಪಡಿಸುವುದು ಆಳುವವರ ಆದ್ಯತೆಯಾಗಬೇಕು. ರಾಜ್ಯದ ಜನರ ಬದುಕಿನ ಪ್ರಶ್ನೆಗಳ ಕುರಿತು ಚಿಂತಿಸಲಿ. ಅದಕ್ಕೆ ಸಂಬಂಧಿಸಿದ ಪರಿಹಾರ ಕ್ರಮಗಳನ್ನು ಜಾರಿಗೊಳಿಸಲಿ. ಮಹಿಳೆಯರ ಉಡುಗೆ-ತೊಡುಗೆ ಹೇಗಿರಬೇಕು, ಯಾರು ಎಷ್ಟು ಮಕ್ಕಳನ್ನು ಹೆರಬೇಕು ಎಂಬಂತಹ ವಿಷಯಗಳ ಕುರಿತ ಬಾಯಿಬಡುಕತನವನ್ನು ಇನ್ನಾದರೂ ನಿಲ್ಲಿಸುವುದು ಒಳ್ಳೆಯದು.

ದಿನದ ಟ್ವೀಟ್

ಉಳಿಸಿ, ಗಳಿಸಿ



ಭೂಮಿಯ ಮೇಲಿನ ಶೇ 3ರಷ್ಟು ನೀರು ಮಾತ್ರ ಶುದ್ಧವಾದುದು. ಇದರಲ್ಲಿ ಶೇ 2.5ರಷ್ಟು ನೀರು ಹಿಮನದಿಗಳು, ಮಂಜುಗಡ್ಡೆಗಳು ಹಾಗೂ ಮಣ್ಣಿನಲ್ಲಿ ಸೇರಿಹೋಗಿದೆ ಅಥವಾ ಅತಿಯಾಗಿ ಕಲುಷಿತಗೊಂಡಿದೆ. ಹೀಗಾಗಿ, ನಮ್ಮ ಬಳಿ ಉಳಿದಿರುವುದು ಶೇ 0.5ರಷ್ಟು ನೀರು ಮಾತ್ರ! 2030ರ ಹೊತ್ತಿಗೆ, ಭಾರತದ ನೀರಿನ ಬೇಡಿಕೆಯು ಲಭ್ಯವಿರುವ ಪೂರೈಕೆಯ ಎರಡು ಪಟ್ಟು ಹೆಚ್ಚಾಗಲಿದೆ. ಪ್ರತಿಯೊಂದು ಹನಿಯೂ ಅಮೂಲ್ಯ.
#WorldWaterDay #CatchTheRain

ಚಾರು ಪ್ರಗ್ಯಾ, ವಕೀಲೆ

25 ವರ್ಷಗಳ ಹಿಂದೆ

ಶನಿವಾರ, 23-3-1996

- **ರಾಷ್ಟ್ರೀಯ ರಂಗ ಇನ್ನೂ ಅಸ್ಪಷ್ಟ ರಾಜ್ಯದಲ್ಲಿ ಕಾಂಗ್ರೆ- ಕೆಸಿಪಿ ಮೈತ್ರಿ**

ನವದೆಹಲಿ, ಮಾರ್ಚ್ 22- ಲೋಕಸಭೆಗೆ ಚುನಾವಣೆ ಘೋಷಣೆ ಆದ ಮೇಲೆ ರಾಜಧಾನಿಯಲ್ಲಿ ರಾಜಕೀಯ ಪಕ್ಷಗಳಲ್ಲಿ ಬಿರುಸಿನ ಚಟುವಟಿಕೆ ಆರಂಭವಾಗಿದೆ. ಬಿಜೆಪಿ ಬಿಟ್ಟರೆ ಎಲ್ಲ ಪಕ್ಷಗಳೂ ಈಗ 'ಅನುಕೂಲಸಿಂಧು ಮೈತ್ರಿ'ಗೆ ರಾಜಕೀಯ ಕಸರತ್ತು ನಡೆಸಿವೆ.

ಈ ಚುನಾವಣೆ ಹೊಂದಾಣಿಕೆಯನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ಎಲ್ಲ ಪಕ್ಷಗಳ ನಾಯಕರು ವ್ಯಾಖ್ಯಾನಿಸುತ್ತಿದ್ದಾರೆ. ಕಳೆದ ವಾರ ಹೆಚ್ಚು ಕಡಿಮೆ ಮಾಜಿ ಪ್ರಧಾನಿ ಚಂದ್ರಶೇಖರ್ ನೇತೃತ್ವದ ಸಮಾಜವಾದಿ ಜನತಾ ಪಕ್ಷ ಮತ್ತು ಜಾರ್ಜ್ ಫರ್ನಾಂಡಿಸ್ ನೇತೃತ್ವದ ಸಮತಾ ಪಕ್ಷದ ನಡುವೆ ಮೈತ್ರಿ ಏರ್ಪಟ್ಟಿದೆ.

- **ಗಾಂಧೀಜಿ ಚಿತಾಭಸ್ಮಕ್ಕಾಗಿ ಪರದಾಟ**

ಕಟಕ್, ಮಾರ್ಚ್ 22 (ಯುಎನ್ಐ) - ಇಲ್ಲಿನ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಶಾಖೆಯ ಸುರಕ್ಷಿತ ಲಾಕರ್‌ನಲ್ಲಿ ಕಳೆದ 46 ವರ್ಷಗಳಿಂದ ಇರುವ ಮಹಾತ್ಮ ಗಾಂಧಿ ಅವರ ಚಿತಾಭಸ್ಮವನ್ನು ಪಡೆಯಲು ಬಾಪೂಜಿ ಅವರ ಮರಿ ಮೊಮ್ಮಗ ತುಷಾರ್ ಅರುಣ್ ಗಾಂಧಿ ಭಗೀರಥ ಯತ್ನವನ್ನೇ ನಡೆಸಿದ್ದಾರೆ. ಇಂದು ಅವರು ಬ್ಯಾಂಕಿಗೆ ತೆರಳಿ ಚಿತಾಭಸ್ಮವನ್ನು ನೋಡುವ ಯತ್ನ ನಡೆಸಿದರಾದರೂ ಅದು ಸಾಧ್ಯವಾಗಲಿಲ್ಲ.

ತುಷಾರ್ ಗಾಂಧಿ ಅವರು ನಿನ್ನೆ ಒರಿಸ್ಸಾ ಮುಖ್ಯಮಂತ್ರಿ ಜೆ.ಬಿ.ಪಟ್ನಾಯಕ್ ಅವರನ್ನು ಭೇಟಿ ಮಾಡಿ ಚಿತಾಭಸ್ಮವನ್ನು ಒಪ್ಪಿಸಬೇಕೆಂದು ಮನವಿ ಮಾಡಿಕೊಂಡರು. ಚಿತಾಭಸ್ಮವನ್ನು ಸಮುದ್ರದಲ್ಲಿ ವಿಸರ್ಜಿಸಿ ಹಲವಾರು ವರ್ಷಗಳಿಂದ ಈ ಕುರಿತಂತೆ ನಡೆಯುತ್ತಿರುವ ವಿವಾದಗಳಿಗೆ ತೆರೆ ಎಳೆಯುವ ಆಶಯ ವ್ಯಕ್ತಪಡಿಸಿದರು. ಆದರೆ ಪಟ್ನಾಯಕ್ ಈ ಬಗ್ಗೆ ಯಾವುದೇ ಸ್ಪಷ್ಟ ಭರವಸೆಯನ್ನು ನೀಡಲಿಲ್ಲ. ಈ ಬಗ್ಗೆ ತಾವು ತೆಗೆದುಕೊಳ್ಳುವ ನಿರ್ಧಾರವನ್ನು ನಂತರ ತಿಳಿಸುವುದಾಗಿ ಗಾಂಧಿ ಅವರಿಗೆ ಹೇಳಿದರು.

ಚಿತಾಭಸ್ಮವನ್ನು ಮರದ ಪೆಟ್ಟಿಗೆಯಲ್ಲಿ ಇಲ್ಲಿನ ಎಸ್‌ಬಿಐ ಶಾಖೆಯಲ್ಲಿರಿಸಲಾಗಿದೆ. ಅಲ್ಲಿಗೆ ಇಂದು ಬೆಳಿಗ್ಗೆ ತೆರಳಿದ ಗಾಂಧಿ ಅವರಿಗೆ ಚಿತಾಭಸ್ಮವನ್ನು ತೋರಿಸಲು ಬ್ಯಾಂಕ್ ಅಧಿಕಾರಿಗಳು ನಿರಾಕರಿಸಿದರು. ಭಸ್ಮವನ್ನು ಇರಿಸಲಾದ ಕೋಣೆಗೆ ಪ್ರವೇಶಿಸಲು ಅವರಿಗೆ ಅವಕಾಶ ನೀಡಲಿಲ್ಲ. ಇದಕ್ಕೆ ಸಂಬಂಧಿಸಿದ ದಾಖಲೆಗಳನ್ನು ತೋರಿಸಲು ನಿರಾಕರಿಸಿದರು.

50 ವರ್ಷಗಳ ಹಿಂದೆ

ಮಂಗಳವಾರ, 23-3-1971

- **ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ ವಿತರಣೆ**

ನವದೆಹಲಿ, ಮಾರ್ಚ್ 22- ಸಂಗೀತ, ನೃತ್ಯ ಮತ್ತು ನಾಟಕ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿರುವ 12 ಖ್ಯಾತ ಕಲಾವಿದರಿಗೆ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿಗಳನ್ನು ರಾಷ್ಟ್ರಪತಿ ವಿ.ವಿ.ಗಿರಿಯವರು ಇಂದು ವಿತರಣೆ ಮಾಡಿದರು.

ಪ್ರಶಸ್ತಿ ಪಡೆದವರಲ್ಲಿ ಶ್ರೀ ದೊರೆಸ್ವಾಮಿ ಅಯ್ಯಂಗಾರ್ (ವೀಣೆ), ಶ್ರೀಮತಿ ಶಾಂತಾರಾವ್ (ಭರತನಾಟ್ಯ), ಶ್ರೀ ಕೆರೆಮನೆ ಶಿವರಾಂ ಹೆಗಡೆ (ಯಕ್ಷಗಾನ), ಶ್ರೀಮತಿ ವಸಂತ ಕುಮಾರಿ (ಕರ್ನಾಟಕ ಸಂಗೀತ) ಮತ್ತು ಶ್ರೀಮತಿ ಮೃಣಾಲಿನಿ ಸಾರಾಭಾಯಿ (ಪ್ರಯೋಗಶೀಲ ನೃತ್ಯ) ಇದ್ದಾರೆ.

- **ಯೋಜನಾ ಆಯೋಗದ ಪುನರ್‌ರಚನೆ**

ನವದೆಹಲಿ, ಮಾರ್ಚ್ 22- ರಾಷ್ಟ್ರದ ಯೋಜನೆಯ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಪ್ರಮುಖ ಪಾತ್ರ ವಹಿಸಲು ಸಾಧ್ಯವಾಗುವಂತೆ ಯೋಜನಾ ಆಯೋಗವನ್ನು ಪುನರ್‌ರಚಿಸಿ ಪುನರ್ ವ್ಯವಸ್ಥೆಗೊಳಿಸಲಾಗುತ್ತಿದೆ.

ಪುನರ್‌ರಚಿತ ಆಯೋಗದಲ್ಲಿ ಡಾ. ಡಿ.ಆರ್.ಗಾಡ್ಗೀಳರ ಸ್ಥಾನದಲ್ಲಿ ಬೇರೊಬ್ಬ ಉಪಾಧ್ಯಕ್ಷರು ಮತ್ತು ಕನಿಷ್ಠ ಇಬ್ಬರು ಹೊಸ ಸದಸ್ಯರು ಇರುವ ಸಂಭವವಿದೆ.

ರೂಢಿಗತ ಚೌಕಟ್ಟಿನಿಂದ ಆಚೆಗೆ ಕನ್ನಡದ ಕಾಯಕವನ್ನು ಕೈಗೆತ್ತಿಕೊಳ್ಳುವ ದಿಸೆಯಲ್ಲಿ ಸರ್ಕಾರ ಆಲೋಚಿಸಬೇಕಾಗಿದೆ

'ಕಾಯಕ ವರ್ಷ' ಮತ್ತು ಕನ್ನಡ ಪ್ರಜ್ಞೆ



ವಿಶ್ಲೇಷಣೆ

ಟಿ.ಎನ್.ವಾಸುದೇವಮೂರ್ತಿ

ಜೀವವೈವಿಧ್ಯದ ನಾಶದಿಂದ ಪ್ರಕೃತಿಯಲ್ಲಿ ಹೇಗೆ ಅಸಮತೋಲನ ಉಂಟಾಗುತ್ತದೋ ಹಾಗೆಯೇ ಭಾಷಾ ವೈವಿಧ್ಯದ ನಾಶವೂ ಮಾನವ ಬದುಕಿನಲ್ಲಿ ಕೊರತೆ, ಅಸಮತೋಲನಗಳನ್ನು ಉಂಟು ಮಾಡುತ್ತದೆ. ಒಂದು ಭಾಷೆಯ ಅವಸಾನದಿಂದ ಒಂದು ಜನಾಂಗದ ಅನಾದಿಕಾಲದ ಸಂಚಿತ ವಿವೇಕ, ವೈಚಾರಿಕತೆಗಳೂ ಅವಸಾನವಾಗುತ್ತವೆ.

ಒಂದು ಅಂದಾಜಿನ ಪ್ರಕಾರ, ಕಳೆದ ಶತಮಾನದಲ್ಲಿ ಜಗತ್ತಿನಾದ್ಯಂತ ಸುಮಾರು 400 ಭಾಷೆಗಳು ನಿರ್ನಾಮವಾಗಿ ಹೋಗಿವೆ. ಇಂದು ಜಗತ್ತಿನಲ್ಲಿ ಸುಮಾರು 6,500 ಭಾಷೆಗಳಿದ್ದು, ಈ ಶತಮಾನದ ಅಂತ್ಯದ ವೇಳೆಗೆ ಶೇಕಡ 50ರಷ್ಟು ಜನಭಾಷೆಗಳು ನಿರ್ನಾಮವಾಗಲಿವೆ ಮತ್ತು ಶೇಕಡ 90ಕ್ಕೂ ಹೆಚ್ಚು ಭಾಷೆಗಳು ಸಾವಿನಂಚಿಗೆ ತಲುಪಲಿವೆ ಎಂದು ಭಾಷಾವಿಜ್ಞಾನಿಗಳು ಅಂದಾಜಿಸಿದ್ದಾರೆ. ಅಲಾಸ್ಕಾದಲ್ಲಿ ಎಯಾಕ್ ಎಂಬ ಸ್ಥಳೀಯ ಭಾಷೆಯು ಮೇರಿ ಸ್ಮಿತ್ ಜೋನ್ಸ್ ಎಂಬ ಏಕೈಕ ವ್ಯಕ್ತಿಯ ನಾಲಗೆಯ ಮೇಲೆ ಜೀವಂತವಾಗಿತ್ತು. 2008ರಲ್ಲಿ ಆಕೆಯ ಸಾವಿನೊಂದಿಗೆ ಆ ಭಾಷೆಯೂ ಸತ್ತಿತು.

ಅಲಾಸ್ಕಾದಷ್ಟು ದೂರವೇಕೆ ಹೋಗಬೇಕು, ನಮ್ಮ ನೆರೆ ರಾಜ್ಯವಾದ ಆಂಧ್ರಪ್ರದೇಶದ ವಿದ್ಯಮಾನವನ್ನೇ ಗಮನಿಸೋಣ. ಅಲ್ಲಿನ ಸರ್ಕಾರಕ್ಕೆ ಶಾಲೆಗಳಲ್ಲಿ ತೆಲುಗು ಮಾಧ್ಯಮ ಬೇಡವಾಗಿದೆ. ಎಲ್ಲ ಸರ್ಕಾರಿ ಶಾಲೆಗಳಲ್ಲೂ ಒಂದನೇ ತರಗತಿಯಿಂದಲೇ ಇಂಗ್ಲಿಷ್ ಮಾಧ್ಯಮವನ್ನು ಜಾರಿಗೊಳಿಸುವ ನಿರ್ಧಾರ ಮಾಡಿದೆ. ತೆಲುಗನ್ನು ಒಂದು ವಿಷಯವನ್ನಾಗಿ ಮಾತ್ರ ಓದಲು ಅವಕಾಶ ನೀಡಿದೆ. ಭಾರತದ ಬಹುತೇಕ ಎಲ್ಲ ರಾಜ್ಯಭಾಷೆಗಳ ಸ್ಥಿತಿಯೂ ಹೀಗೆಯೇ ಅತಂತ್ರವಾಗಿದೆ.

ಭಾಷೆಯೊಂದು ಸಹಜವಾಗಿ ಲುಪ್ತವಾದರೆ ಅದು ಬೇರೆ ಮಾತು. ಆದರೆ ಇಂದು ಭಾರತದ ಸ್ಥಳೀಯ ಭಾಷೆಗಳಿಗೆ ಒದಗಿ ಬಂದಿರುವುದು ಸಹಜ ಸಾವಲ್ಲ. ರಾಷ್ಟ್ರೀಯತೆ ಮತ್ತು ಜಾಗತೀಕರಣವು ಭಾಷಿಕ, ಜನಾಂಗೀಯ ಮತ್ತು ಸಾಂಸ್ಕೃತಿಕ ವೈವಿಧ್ಯವನ್ನು ಎಂದಿಗೂ ಶತ್ರುವಿನಂತೆ ನೋಡುತ್ತವೆ. ಏಕಭಾಷೆ, ಏಕ ಜನಾಂಗ, ಏಕ ಸಂಸ್ಕೃತಿಗಳನ್ನು ಸ್ಥಾಪಿಸಲು ವೈವಿಧ್ಯವನ್ನು ಬಲಿಕೊಡಲೂ ಅವು ಹಿಂಜರಿಯುವುದಿಲ್ಲ.

ಈ ವರ್ಷದ ಜನವರಿ ತಿಂಗಳಲ್ಲಿ ಭದ್ರಾವತಿಯಲ್ಲಿ ಕ್ಷಿಪ್ರ ಕಾರ್ಯಪಡೆ ಘಟಕದ ಕಟ್ಟಡ ನಿರ್ಮಾಣ ಕಾಮಗಾರಿಯ ಭೂಮಿಪೂಜೆ ಸಮಾರಂಭದಲ್ಲಿ ಕನ್ನಡ ಕಡೆಗಣನೆಗೆ ಒಳಗಾಗಿತ್ತು. ಫಲಕಗಳಲ್ಲಿ ಹಿಂದಿ ಮತ್ತು ಇಂಗ್ಲಿಷ್‌ಗೆ ಮಾತ್ರ ಸ್ಥಾನ ದೊರೆತಿದ್ದುದು ವ್ಯಾಪಕ ಟೀಕೆಗೆ ಗುರಿಯಾಯಿತು. ಇದು ಪ್ರಜ್ಞಾಪೂರ್ವಕ ನಿರ್ಲಕ್ಷ್ಯವಲ್ಲ, ಏನೋ ಕಣ್ತಪ್ಪಿನಿಂದಾಗಿದೆ ಎಂದು ಆಡಳಿತಾರೂಢ ಪಕ್ಷದ ಬೆಂಬಲಿಗರು ಸಮಜಾಯಿಷಿ ನೀಡಬಹುದು. ಆದರೆ ವೈವಿಧ್ಯಗಳನ್ನು ಇಲ್ಲವಾಗಿಸಿ ಏಕರೂಪತೆಯನ್ನು ಸ್ಥಾಪಿಸಲೆಳಸುವ ಶಕ್ತಿಗಳ ಉದ್ದೇಶ ಎಂದಿಗೂ ಕಣ್ಣಿಗೆ ಕಾಣಿಸುವಂತೆ ವ್ಯಕ್ತವಾಗುವುದಿಲ್ಲ. ಅವು ಎಂದಿಗೂ ಅಪ್ರಜ್ಞಾ ನೆಲೆಯಲ್ಲೇ ಕೆಲಸ ಮಾಡುವುದು.

ಆಳುವ ಸರ್ಕಾರಗಳು ಯಾವ ಕಾಲದಲ್ಲೂ ಭಾಷೆ, ಸಾಹಿತ್ಯ, ಸಂಸ್ಕೃತಿಗಳ ಪ್ರವರ್ಧನೆಯನ್ನು ತಮ್ಮ ಆದ್ಯತೆಯ ವಲಯವೆಂದು ಪರಿಗಣಿಸಿಲ್ಲ. ಸರ್ಕಾರದ ಈ ಉದಾಸೀನ ಧೋರಣೆ ಖಂಡನೀಯ ಸರಿ. ಆದರೆ ಜನಭಾಷೆಗಳು ಜನಸಾಮಾನ್ಯರ ಕಾಳಜಿ-ಕಳಕಳಿಯಿಂದ ದೂರವಾಗುತ್ತಿರುವುದು ಅದಕ್ಕಿಂತಲೂ ಮಿಗಿಲಿನ ದುರಂತವಾಗಿದೆ. ಕಳೆದ ರಾಜ್ಯೋತ್ಸವದಂದು ನಮ್ಮ ಮುಖ್ಯಮಂತ್ರಿ ಇಡೀ ವರ್ಷವನ್ನು 'ಕನ್ನಡ ಕಾಯಕ ವರ್ಷ'ವನ್ನಾಗಿ ಆಚರಿಸೋಣವೆಂದು ಕರೆ ನೀಡಿದ್ದರು. ಆದರೆ ಈ ಸಲದ ಬಜೆಟ್‌ನಲ್ಲಿ ಕನ್ನಡದ ಪ್ರವರ್ಧನೆಗೆ, ಅಂದರೆ ಕನ್ನಡ ಅಭಿವೃದ್ಧಿ ಪ್ರಾಧಿಕಾರವೇ ಮುಂತಾದ ಸಾಹಿತ್ಯಿಕ, ಸಾಂಸ್ಕೃತಿಕ ಸಂಸ್ಥೆಗಳಿಗೆ ತೀರಾ ನಿರಾಶಾದಾಯಕವಾದ ಅನುದಾನದ ಮೊತ್ತವನ್ನು ತೆಗೆದಿರಿಸಿದ್ದಾರೆ. ಈ ಬಗ್ಗೆ ಕೆಲವು ಸಾಹಿತ್ಯ ಜೀವಿಗಳು, ಸರ್ಕಾರಿ ಅನುದಾನದ ಫಲಾನುಭವಿಗಳಾದ ಕವಿ-ಕಲಾವಿದರು ಹಾಗೂ ಸಾಹಿತ್ಯಿಕ, ಸಾಂಸ್ಕೃತಿಕ ಸಂಸ್ಥೆಗಳ ಅಧಿಕಾರಸ್ಥಾನದಲ್ಲಿರುವ ಕೆಲವು ಪದಾಧಿಕಾರಿಗಳು ಆಕ್ಷೇಪವನ್ನು -ಅದೂ ಬಹಳ ಮೃದುವಾಗಿ- ವ್ಯಕ್ತಪಡಿಸಿರುವರೇ ವಿನಾ ಜನಸಾಮಾನ್ಯರಾರೂ ಸರ್ಕಾರದ ಈ ನಿರ್ಲಕ್ಷ್ಯ ಧೋರಣೆಯ ಬಗ್ಗೆ ತಲೆಕೆಡಿಸಿಕೊಂಡಂತಿಲ್ಲ.


ಏಕೀಕರಣದ ನಂತರ ನಡೆದ ಬಹುತೇಕ ಚಳವಳಿಗಳು ಜನಸಾಮಾನ್ಯರಿಂದಲೇ ನಡೆದ ಚಳವಳಿಗಳಾಗಿದ್ದವು. ಕೇಂದ್ರ ಸರ್ಕಾರದ ಸೇವೆಗಳ ಕೆಲವು ನೇಮಕಾತಿ ಪರೀಕ್ಷೆಗಳಲ್ಲಿ ಸ್ಥಳೀಯ ಭಾಷೆ ಉಳಿದಿದೆ ಎಂದರೆ ಅದಕ್ಕೆ ಜನಸಾಮಾನ್ಯರ ಪ್ರಾದೇಶಿಕ ಭಾಷಾಪರ ಕಾಳಜಿ ಮತ್ತು ಹೋರಾಟಗಳೇ ಕಾರಣ. ಎಂಬತ್ತರ ದಶಕದಲ್ಲಿ ಕನ್ನಡದ ಉಳಿವಿಗಾಗಿ ನಡೆದ ಗೋಕಾಕ್ ಚಳವಳಿಯಂತೂ ರಾಜ್ಯದಾದ್ಯಂತ ಸಂಚಲನವನ್ನೇ ಸೃಷ್ಟಿಸಿತ್ತು. ನಾಡಿನ ಮೂಲೆಮೂಲೆಯಲ್ಲೂ ಕನ್ನಡ ಪ್ರಜ್ಞೆ ಜಾಗೃತವಾಗಿತ್ತು. ಆದರೆ ಇಂದು ಕನ್ನಡ ಸಾಯುತ್ತಿದೆ ಎಂದು ಕೂಗಿ ಹೇಳಿದರೂ ಕೇಳಿಸಿಕೊಳ್ಳುವವರು ಇಲ್ಲವೆಂಬಂತಹ ಪರಿಸ್ಥಿತಿ ನಿರ್ಮಾಣವಾಗಿದೆ.

ಕನ್ನಡಿಗರು ಅಭಿಮಾನಶೂನ್ಯರಾಗಿದ್ದಾರೆ ಎಂದು ತೀರ್ಮಾನಿಸಿದರೆ ಅದು ಸಿನಿಕತನವಾಗುತ್ತದೆ. ಸರ್ಕಾರವು ಮುತುವರ್ಜಿಯಿಂದ ಕನ್ನಡವನ್ನು ಕಟ್ಟುವ ಕೆಲಸ ಮಾಡಲು ಮುಂದಾದರೆ ಅದಕ್ಕೆ ಯಾರೂ ಆಕ್ಷೇಪಿಸುವುದಿಲ್ಲ. ಆದರೆ ಹಾಗೆ ಬೆಳೆಸುವ ಮಾರ್ಗೋಪಾಯಗಳನ್ನು ಶೋಧಿಸುವ ಕೆಲಸವನ್ನು ನಾವಿಂದು ಪ್ರಾರಂಭಿಸಬೇಕಾಗಿದೆ. ಕನ್ನಡವನ್ನು ಅನ್ನದ ಭಾಷೆಯನ್ನಾಗಿ ರೂಪಿಸಬೇಕೆಂದು ಭಾಷಣ ಮಾಡುತ್ತೇವೆ. ಆದರೆ, ಈ ದಿಸೆಯಲ್ಲಿ ಪ್ರಯತ್ನ ಮಾಡುವುದನ್ನೇ ಮರೆತಿದ್ದೇವೆ. ಕನ್ನಡಿಗರಿಗೆ ಅನ್ನದ ದಾರಿಯನ್ನು ಸೃಷ್ಟಿಸಬೇಕಾಗಿದೆ. ಕನ್ನಡ ಪ್ರೇಮ ಬರಿದೇ ಘೋಷಣೆ, ಪ್ರಚಾರ, ಪ್ರದರ್ಶನಗಳಿಗೆ ಸೀಮಿತವಾದರೆ ಸಹಜವಾಗಿಯೇ ಜನಸಾಮಾನ್ಯರು ಕನ್ನಡ ಕಾಯಕದ ವಿಷಯದಲ್ಲಿ ಉತ್ಸಾಹಶೂನ್ಯರಾಗುತ್ತಾರೆ. ನಾಡು-ನುಡಿ, ಸಂಸ್ಕೃತಿ ಪೋಷಣೆಗೆ ಸರ್ಕಾರವು ಅನುದಾನ ಕಡಿತ ಮಾಡುವುದು ಸರ್ವಥಾ ಸಮರ್ಥನೀಯವಲ್ಲ. ಆದರೆ ಈ ಬಗ್ಗೆ ಜನಸಾಮಾನ್ಯರು, ನಿಜವಾದ ಕನ್ನಡ ಪ್ರೀತಿಯುಳ್ಳವರು ಏಕೆ ಸೊಲ್ಲೆತ್ತುತ್ತಿಲ್ಲ ಎಂಬುದರ ಕುರಿತು ಸಹ ನಾವು ವಿವೇಚಿಸಬೇಕಾಗಿದೆ.


ಕನ್ನಡದ ಪ್ರವರ್ಧನೆಗೆ ಸರ್ಕಾರದಿಂದ ಪ್ರಾಯೋಜಿತವಾಗುವ ಕಾರ್ಯಕ್ರಮಗಳಲ್ಲಿ ಪಾರದರ್ಶಕತೆ ಅಳವಡಿಸಿಕೊಳ್ಳಬೇಕು. ನೀಡುವ ಅನುದಾನವು ಸದ್ಬಳಕೆಯಾಗಬೇಕು. ಕೊಡಮಾಡುವ ಪ್ರಶಸ್ತಿ- ಪುರಸ್ಕಾರಗಳು ನ್ಯಾಯೋಚಿತವಾಗಿರಬೇಕು. ರಾಜಕಾರಣಿಗಳಿಗೆ ಮಣೆ ಹಾಕುವ, ಅಧಿಕಾರಸ್ಥರಿಗೆ ಡೊಗ್ಗು ಸಲಾಮು ಹೊಡೆಯುವ ಸಾಹಿತಿಗಳು ಸುಲಭ ಮಾರ್ಗದಲ್ಲಿ ಸಮ್ಮೇಳನ, ಪ್ರಾಧಿಕಾರ, ಅಕಾಡೆಮಿ ಮುಂತಾದವುಗಳ ಅಧ್ಯಕ್ಷ ಸ್ಥಾನ ಅಲಂಕರಿಸುವುದನ್ನು ನಾವು ಕಾಣುತ್ತಾ ಬಂದಿದ್ದೇವೆ. ಇಂದು ಕುರಿತೋದದೆಯೂ ಸಾಹಿತ್ಯ ರಚನೆ ಮಾಡುವ ಪ್ರಭಾವಿಗಳು ತಮ್ಮ ಸಾಹಿತ್ಯ ಸಾಧನೆಯ ಕುರಿತು ವಿಶ್ವವಿದ್ಯಾಲಯಗಳಲ್ಲಿ ಸೆಮಿನಾರುಗಳನ್ನು ಆಯೋಜಿಸಬಲ್ಲರು, ತಮ್ಮ ಸಾಹಿತ್ಯಕೃತಿಗಳಿಗೆ ಪ್ರಶಸ್ತಿ ಗಿಟ್ಟಿಸಿಕೊಂಡು ತಮ್ಮ ಪ್ರಭಾವಳಿಯನ್ನು ಹೆಚ್ಚಿಸಿಕೊಳ್ಳಬಲ್ಲರು. ಇಂತಹ ಬೆಳವಣಿಗೆಗಳನ್ನು ಪ್ರತಿರೋಧಿಸಬೇಕಾದ, ತಡೆಗಟ್ಟಬೇಕಾದ ವಿಮರ್ಶಕರು ಮತ್ತು ಬುದ್ಧಿಜೀವಿಗಳು ತಮ್ಮ ಕರಣೇಂದ್ರಿಯಗಳ ಸಂವೇದನೆಯನ್ನೇ ಕಳೆದುಕೊಂಡಂತೆ ಜಾಣ ಮರೆವಿಗೆ ಜಾರಿದ್ದಾರೆ.

ಇಪ್ಪತ್ತನೆಯ ಶತಮಾನದ ಪ್ರಾರಂಭದಲ್ಲಿ ಕುವೆಂಪು, ಕಾರಂತ, ಬಿಎಂಶ್ರೀ ಮುಂತಾದ ಆ ಕಾಲದ ಸಾಹಿತಿಗಳು ಕನ್ನಡವನ್ನು ಕಟ್ಟಿ ಬೆಳೆಸಿದರು. ಜನಮನದಲ್ಲಿ ಕನ್ನಡ ಪ್ರೇಮವನ್ನು ಬಿತ್ತಿದರು. ಇಂದು ಈ ಕಾಲದ ಸಾಹಿತಿಗಳು ಅಂದಿನವರ ಕಾಯಕಕ್ಕೆ ವ್ಯತಿರಿಕ್ತವಾದ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಿದ್ದಾರೆ. ಯಾವ ಸಾಹಿತಿಗಳ ಶ್ರಮದ ಫಲವಾಗಿ ಹಿಂದೆ ಕನ್ನಡಿಗರಲ್ಲಿ ಸಾಹಿತ್ಯಾಭಿಮಾನ ಮತ್ತು ಭಾಷಾಪ್ರೇಮ ಮೂಡಿತ್ತೋ, ಇಂದು ಅದೇ ಸಾಹಿತಿಗಳ, ಬುದ್ಧಿಜೀವಿಗಳ, ಸಂಸ್ಕೃತಿ ಪ್ರತಿನಿಧಿಗಳೆನಿಸಿಕೊಂಡವರ ಮೇಲಾಟದಿಂದ ಕನ್ನಡಿಗರಲ್ಲಿ ಸಾಹಿತ್ಯ ವಲಯದ ಬಗ್ಗೆ ಜುಗುಪ್ಸೆ ಮೂಡುತ್ತಿದೆ.

ಸಾಹಿತಿಗಳಿಗೆ ಪ್ರಶಸ್ತಿ ಅಥವಾ ಅಧಿಕಾರಗಳನ್ನು ನೀಡುವುದರಿಂದ ಕನ್ನಡದ ಕಾಯಕಲ್ಪವಾಗುವುದಿಲ್ಲ. ಸರ್ಕಾರಗಳು ಪ್ರಶಸ್ತಿ, ಅನುದಾನ, ಪುರಸ್ಕಾರಗಳನ್ನು ಕೊಡುವುದರ ಆಚೆಗೆ ಕನ್ನಡದ ಕಾಯಕವನ್ನು ಕೈಗೆತ್ತಿಕೊಳ್ಳುವ ದಿಸೆಯಲ್ಲಿ ಆಲೋಚಿಸಬೇಕಾಗಿದೆ. ಇಲ್ಲಿ ವಾಸಿಸುವ ಜನ ತಮ್ಮ ದೈನಂದಿನ ಬದುಕಿನಲ್ಲಿ ಎಲ್ಲ ಹಂತಗಳಲ್ಲೂ ಕನ್ನಡವನ್ನು ಪ್ರೀತಿಸುವ, ಕಲಿಯುವ ಮತ್ತು ಕನ್ನಡವನ್ನು ಬಳಸುವ ಅವಕಾಶವನ್ನು ಸೃಷ್ಟಿಸಿ ಕೊಡಬೇಕಾಗಿದೆ. ಪ್ರಭುತ್ವಕ್ಕೆ ಇಚ್ಛಾಶಕ್ತಿಯಿದ್ದರೆ ಇವೆಲ್ಲ ಅಸಾಧ್ಯದ ಕೆಲಸಗಳೇನಲ್ಲ.



ಚುರುಮುರಿ



ಗುಜರಿ ನೀತಿ

• ಲಿಂಗರಾಜು ಡಿ.ಎಸ್.

'ಸಾ, ಹಳೇವೆಲ್ಲಾ ಮಾರಿ ಮಸಾಲೆದೋಸೆ ತಿನ್ನಬುಡಿ, ಲಾಭ ಜಾಸ್ತಿ ಆಯ್ತದೆ ಅಂತ ಗುಜರಿ ನೀತಿ ಹೊಂಡಿಸವ್ರೆ ಗಡ್ಕರಿ ಸಯಾಬ್ರು!' ಅಂತ ಮಾತುಕತೆ ಶುರುವಾಯ್ತು.

'ಇವರೇಳಿದ್ರು ಅಂತ ನಾವು ಗುಜರಿಗೆ ಕೊಟ್ಟುಬುಡಬೇಕಾ? ಹಳೇವೆಲ್ಲಾ ಮಾರಬೇಕು ಅಂದ್ರೆ ನಮ್ಮಪ್ಪ-ನಮ್ಮವ್ವನ್ನೂ ಮಾರಬೇಕಾಯ್ತದೆ' ತುರೇಮಣೆ ವಾದ ಹೂಡಿದರು.

'ನನ್ನ ಮೊದಲನೇ ಸಂಬಳದಲ್ಲಿ ತಕಂದಿದ್ದ ರ್‍ಯಾಲಿ ಸೈಕಲ್ಲೂ ಮಾರಬೇಕಾ?' ರವಷ್ಟು ಆತಂಕದಲ್ಲಿ ಯಂಟಪ್ಪಣ್ಣ ಕೇಳಿತು.

'ಯಂಟಪ್ಪಣ್ಣ, 50 ವರ್ಷದ ನಿಮ್ಮ ಓಬೀರಾಯನ ಕಾಲದ ಓಲ್ಡ್ ಬ್ರಿಟಿಷ್ ರಾಯಲ್ ಸೈಕಲ್ಲಿಗೆ ಡೆತ್ ಸರ್ಟಿಫಿಕೇಟಾಗಿ ಯಾವ ಕಾಲಾಯ್ತು! ಅದುನ್ನ ಗುಜರಿಯೋರು ತಕ್ಕೋಗಕಿಲ್ಲ!' ಅಂತ ಚಂದ್ರು ಕಿಚಾಯಿಸಿದ.

'ನೋಡ್ಲಾ, ನನ್ನ ಕಾರ ತಕ್ಕೋಗಿ ಮಠಕ್ಕೆ ಅನುದಾನ ಅಂತ ಕೊಟ್ಬುಟ್ಟೇನು, ಆದರೆ ಬಿಲ್ಕುಲ್ ಗುಜರಿಗೆ ಕೊಡಕ್ಕಿಲ್ಲ' ಅಂತ ಖಡಕ್ಕಾಗಿ ತುರೇಮಣೆ ಪಟ್ಟು ಹಾಕಿದರು.

'ಅದ್ಯಾಕ್ಸಾ ಹಂಗೆ ಕಪ್ಪರಶೆಟ್ಟಿ ಹುಳದ ಥರಾ ಸುರುಟಗ್ಯಂತೀರಿ. ಅದೇನು ಕಾರಿನ ಮ್ಯಾಲೆ ಅಷ್ಟು ಮಮಕಾರ?' ಅಂದೆ.

'ಕಾರ್ ಇತಿಹಾಸ ನಿಂಗೊತ್ತಿಲ್ಲವುಲಾ? ಸಾರೀ ದುನಿಯಾ ಏಕ್ ತರಫ್, ಸಸುರ್‍ಕಾ ಕಾರ್ ಏಕ್ ತರಫ್!' ಅಂತ ವಡಪು ಹೇಳಿತು ಯಂಟಪ್ಪಣ್ಣ.

'ಯಂಟಪ್ಪಣ್ಣ ಚಾಡಿ ಹೇಳಬ್ಯಾಡಿ' ತುರೇಮಣೆ ಮಾತು ಕೇಳದೆ ಯಂಟಪ್ಪಣ್ಣ ಮುಂದುವರಿಸಿತು.

'ನೋಡ್ರೋ, ತುರೇಮಣೆಗೆ ಅವರ ಮಾವ 40 ವರ್ಷದ ಹಿಂದೆ ಕಪಾಲಿ ಉಂಗುರ, ಎಚ್‌ಎಂಟಿ ವಾಚಿನ ಜೊತೆಗೆ ಕೊಡಿಸಿದ ಹಳೇ ಮಾಡಲ್ಲು ಮಾರುತಿ ಕಾರು ಅದು. ಮಾವನ ಸೆಂಟಿಮೆಂಟಿಗೋಸ್ಕರ ಮಾರಕ್ಕೆ ಸುತರಾಂ ಒಪ್ಪಿಲ್ಲ. ಅದರ ರಿಪೇರಿಗೆ ಖರ್ಚು ಮಾಡಿದ ದುಡ್ಡಿಗೆ ವಸಾ ಅಡಾವುಡಿ ಕಾರ್ ಬಂದಿರದು'.

ತುರೇಮಣೆ ಆಗ್ಲೇ ಹಳ ಬಟ್ಟೆ ತಕಂದು ಕಾರ್ ಒರಸಕ್ಕೆ ಸುರು ಮಾಡಿದ್ರು. ಇಂತಾ ಇಂಡಿಯನ್ ಸೆಂಟಿಮೆಂಟ್ ಸೂಕ್ಷ್ಮಗಳೆಲ್ಲಾ ಗಡ್ಕರಿಗೆ ಗೊತ್ತಾಗಕುಲ್ಲ, ಮೋದಿಗೆ ತಿಳಿಯಕುಲ್ಲ!

ಸಂಗತ

ಶುಲ್ಕ ನೀತಿ ಕಲಿಸಿದ ಪಾಠ

ಪ್ರಾಥಮಿಕ ಶಿಕ್ಷಣದ ಶುಲ್ಕಕ್ಕೆ ಸಂಬಂಧಿಸಿ ಸರ್ಕಾರ ಇತ್ತೀಚೆಗೆ ಕೈಗೊಂಡಿದ್ದ ನಿರ್ಧಾರ, ಕೆಲವು ಮಹತ್ವದ ಪ್ರಶ್ನೆಗಳನ್ನು ಎತ್ತುವಂತೆ ಮಾಡಿದೆ

• ಪ್ರೊ. ಶಿವಲಿಂಗಸ್ವಾಮಿ ಎಚ್.ಕೆ.

ಖಾಸಗಿ ಶಾಲೆಗಳಲ್ಲಿ ಪ್ರಾಥಮಿಕ ಶಿಕ್ಷಣದ ಶುಲ್ಕಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಇತ್ತೀಚೆಗೆ ಅತ್ಯಂತ ಜನಪರವಾದ ನಿರ್ಧಾರವನ್ನು ಕೈಗೊಂಡಿತ್ತು. ಆದರೆ ಹೈಕೋರ್ಟ್ ತಡೆಯಾಜ್ಞೆಯಿಂದ ಅಷ್ಟೇ ಭರದಲ್ಲಿ ಆ ನಿರ್ಧಾರವನ್ನು ಕೈ ಬಿಡಬೇಕಾದ ಪರಿಸ್ಥಿತಿ ನಿರ್ಮಾಣವಾಯಿತು. ಸರ್ಕಾರ ಕಡ್ಡಾಯಗೊಳಿಸಲಿದ್ದ ಏಕರೂಪ ಶುಲ್ಕದ ನೀತಿಯನ್ನು ಬಹಳಷ್ಟು ಮಂದಿ ಸ್ವಾಗತಿಸಿದ್ದರು. ಸಾಮಾಜಿಕ ಜಾಲತಾಣಗಳಲ್ಲಿ ಬಹಳಷ್ಟು ಚರ್ಚೆಗಳು ನಡೆದು, ಅದು ಜಾರಿಗೆ ಬರಲೇಬೇಕು ಎಂಬ ಒತ್ತಾಯವೂ ಕೇಳಿಬಂದಿತ್ತು.

ಇದನ್ನು ಗಮನಿಸಿದಾಗ, ಇಂತಹ ನೀತಿಯಿಂದ ಒಳಿತುಗಳನ್ನು ಮಾತ್ರ ನಿರೀಕ್ಷಿಸಬಹುದೇ, ಶುಲ್ಕದ ಪ್ರಮಾಣ ನಿಗದಿಗೊಳಿಸುವ ನಿರ್ಧಾರ ತೆಗೆದುಕೊಳ್ಳುವ ಮುನ್ನ ಎಲ್ಲ ಶಾಲೆಗಳ ಸ್ಥಿತಿಗತಿಯನ್ನು ಸರ್ಕಾರವು ವೈಜ್ಞಾನಿಕವಾಗಿ ಪರಿಶೀಲಿಸಿತ್ತೇ ಎಂಬ ಪ್ರಶ್ನೆಗಳು ಎದುರಾಗುತ್ತವೆ.

ಸರ್ಕಾರದ ಆಶಯ ಮೇಲ್ನೋಟಕ್ಕೆ ಬೆಂಬಲಾರ್ಹ ಎನಿಸುವುದು ನಿಜ. ಆದರೆ ಕೆಲವು ಖಾಸಗಿ ಶಾಲೆಗಳಲ್ಲಿ ಮಕ್ಕಳಿಗೆ ಸೀಟು ಸಿಕ್ಕಲು ಏಕೆ ಕಷ್ಟವಾಗುತ್ತದೆ ಮತ್ತು ಪೋಷಕರು ಅಂತಹ ಶಾಲೆಗಳಲ್ಲಿಯೇ ತಮ್ಮ ಮಕ್ಕಳಿಗೆ ಸೀಟು ಅರಸಿ ರಾತ್ರಿಯೆಲ್ಲ ಸರದಿ ಸಾಲಲ್ಲಿ ಏಕೆ ನಿಲ್ಲುತ್ತಾರೆ ಎಂಬ ಪ್ರಶ್ನೆಗಳಿಗೆ ಸರ್ಕಾರವೇ ಉತ್ತರ ಹುಡುಕಿಕೊಳ್ಳಬೇಕಿದೆ. ಕೆಲವು ಖಾಸಗಿ ಶಾಲೆಗಳ ಬಂಡವಾಳಶಾಹಿತನವನ್ನು ಬದಿಗೊತ್ತಿ, ಅಲ್ಲಿ ಲಭ್ಯವಿರುವ ಮೂಲಭೂತ ಸೌಕರ್ಯಗಳು, ಕಲಿಕಾ ಕ್ರಮಗಳು ಮುಂತಾದ ಅಂಶಗಳನ್ನು ಪರಿಗಣಿಸಿದರೆ, ಪೋಷಕರು ತೆರುವ ಹಣಕ್ಕೆ ನ್ಯಾಯ ದೊರಕುವ ಎಲ್ಲ ಸಾಧ್ಯತೆಗಳೂ ಇವೆ ಎಂಬುದು ಸಾಬೀತಾಗುತ್ತದೆ.

ರಾಜ್ಯದಲ್ಲಿರುವ ಎಲ್ಲ ಖಾಸಗಿ ಶಾಲೆಗಳು ಸಮಪ್ರಮಾಣದಲ್ಲಿ ತಮ್ಮ ಮಕ್ಕಳಿಗೆ ಎಲ್ಲ ಸೌಲಭ್ಯಗಳನ್ನೂ ಒದಗಿಸುತ್ತಿಲ್ಲ. ಹೀಗಾಗಿ ಈ ಶಾಲೆಗಳ ನಡುವೆ ಶುಲ್ಕದ ವಿಚಾರದಲ್ಲಿ ಬಹಳಷ್ಟು ಅಂತರವಿರುತ್ತದೆ. ಕೆಲವು ಖಾಸಗಿ ಶಾಲೆಗಳು ಗುಣಮಟ್ಟ ಕಾಪಾಡಿಕೊಳ್ಳುವ ಸಲುವಾಗಿ, ತಮ್ಮಲ್ಲಿರುವ ಅನುಭವಸ್ಥ ಬೋಧಕ ಸಿಬ್ಬಂದಿಯನ್ನು ಅವರು ಕೇಳಿದಷ್ಟು ಸಂಬಳ ಕೊಟ್ಟು ಉಳಿಸಿಕೊಂಡಿರುತ್ತವೆ. ಇಷ್ಟೆಲ್ಲಾ ಮಾಡುವ ಕೆಲವು ಖಾಸಗಿ ಶಾಲೆಗಳನ್ನು ಉಳಿದ ಶಾಲೆಗಳೊಂದಿಗೆ ತಾಳೆ ಮಾಡಿ, ಏಕರೂಪ ಶುಲ್ಕವನ್ನು ಜಾರಿಗೆ ತಂದರೆ ಅದರ ಬಿಸಿಯು ಹೆಚ್ಚಾಗಿ ಯಾರನ್ನು ತಟ್ಟಬಹುದು ಎಂಬುದು ನಮ್ಮ ಮುಂದಿರುವ ಪ್ರಶ್ನೆ.

ಏಕರೂಪ ಶುಲ್ಕ ಪ್ರಸ್ತಾಪದ ಬೆನ್ನಲ್ಲಿಯೇ ಶುರುವಾದ ಖಾಸಗಿ ಶಾಲೆಗಳ ಪ್ರತಿಭಟನೆ ಮತ್ತು ಮೊರೆಗೆ ಹೈಕೋರ್ಟ್ ಓಗೊಡದೇ ಇದ್ದಿದ್ದರೆ ಈ ಶುಲ್ಕ ನೀತಿಯು ಹೆಚ್ಚಾಗಿ ಅನನುಕೂಲ ಉಂಟುಮಾಡುತ್ತಿದ್ದುದು ಖಾಸಗಿ ಶಾಲೆಗಳ ಶಿಕ್ಷಕರಿಗೆ. ಶಿಕ್ಷಕರ ಸಂಬಳ ಶಾಲೆಗಳಲ್ಲಿ ಸಂಗ್ರಹವಾಗುವ ಶುಲ್ಕದ ಮೇಲೆ ಅವಲಂಬಿತವಾಗಿರುತ್ತದೆ ಮತ್ತು ಕೋವಿಡ್ ಮೊದಲನೇ ಅಲೆಯ ಸಮಯದಲ್ಲಿ ಶುಲ್ಕವನ್ನು ಪೂರ್ಣಪ್ರಮಾಣದಲ್ಲಿ ಸಂಗ್ರಹಿಸಲಾಗದ ಕಾರಣದಿಂದ ಶಿಕ್ಷಕರ ಸಂಬಳ ಕಡಿತವಾದ ಹಲವಾರು ಪ್ರಕರಣಗಳಿಗೆ ನಾವೆಲ್ಲರೂ ಸಾಕ್ಷಿಯಾಗಿದ್ದೆವು.

ಏಕರೂಪದ ಶುಲ್ಕ ನೀತಿಯಿಂದ ಪೋಷಕರಿಗೆ ಆರ್ಥಿಕವಾಗಿ ಸಹಾಯವಾಗಲಿ ಮತ್ತು ಶಿಕ್ಷಣದ ಪಾವಿತ್ರ್ಯವನ್ನು ಶಿಕ್ಷಣ ಸಂಸ್ಥೆಗಳು ಮರೆಯದೇ ಇರಲಿ ಎಂಬ ಸರ್ಕಾರದ ಆಶಯಕ್ಕೆ ಪೂರಕವಾಗಿ ಹಲವು ಅಂಶಗಳನ್ನು ಸೇರಿಸಬೇಕಿದೆ. ಕೆಲವು ಖಾಸಗಿ ಶಾಲೆಗಳ ಇಂದಿನ ಅಭೂತಪೂರ್ವ ಯಶಸ್ಸಿಗೆ ಪ್ರಮುಖ ಕಾರಣಗಳು ಅವುಗಳ ಮೂಲ ಸೌಕರ್ಯ, ಸಮಕಾಲೀನ ಸಮಾಜಕ್ಕೆ ಅನ್ವಯಿಸುವಂತಹ ಕಲಿಕಾ ಮಾಧ್ಯಮ ಮತ್ತು ಮಕ್ಕಳ ಸಮಗ್ರ ಬೆಳವಣಿಗೆಗೆ ಬೇಕಿರುವ ಕಲಿಕಾ ಕ್ರಮ. ಇವುಗಳನ್ನು ಗಮನದಲ್ಲಿಟ್ಟುಕೊಂಡು ಪೋಷಕರು ತಮ್ಮ ಮಕ್ಕಳ ಉಜ್ವಲ ಭವಿಷ್ಯಕ್ಕಾಗಿ ಈ ಶಾಲೆಗಳ ಬಾಗಿಲುಗಳನ್ನು ತಟ್ಟುತ್ತಾರೆ, ಪ್ರವೇಶಕ್ಕಾಗಿ ಪ್ರಭಾವಿ ವ್ಯಕ್ತಿಗಳ ಶಿಫಾರಸುಗಳನ್ನು ತರುತ್ತಾರೆ ಮತ್ತು ಶಾಲೆಗಳ ಅವಶ್ಯಕತೆಗಳಿಗೆ ತಕ್ಕಂತೆ ಸಜ್ಜಾಗುತ್ತಾರೆ. ಈ ಶಾಲೆಗಳಿಗೆ ಇಷ್ಟು ಬೇಡಿಕೆ ಹೇಗಿದೆ ಮತ್ತು ಅವುಗಳನ್ನು ಮೀರಿಸುವ ಅಥವಾ ಸರಿಸಾಟಿಯಾಗುವ ಸರ್ಕಾರಿ ಶಾಲೆಗಳ ಸೃಷ್ಟಿ ಏಕೆ ಸಾಧ್ಯವಾಗಿಲ್ಲ ಎಂದು ನಮ್ಮನ್ನು ನಾವು ಕೇಳಿಕೊಳ್ಳಬೇಕಿದೆ.



ಸ್ವಾತಂತ್ರ್ಯ ಬಂದಾಗಿನಿಂದ ಭಾರತದಲ್ಲಿ ಪ್ರಾಥಮಿಕ ಶಿಕ್ಷಣಕ್ಕೆ ಆದ್ಯತೆ ಇದ್ದೇ ಇದೆ. ಸಹಸ್ರಾರು ಕೋಟಿಗಳನ್ನು ಶಿಕ್ಷಕರ ನೇಮಕಾತಿಯಿಂದ ಹಿಡಿದು ಶಾಲಾ ಕಟ್ಟಡಗಳ ನಿರ್ಮಾಣದವರೆಗಿನ ಖರ್ಚುಗಳಿಗಾಗಿ ಮೀಸಲಿಡಲಾಗುತ್ತದೆ. ಪ್ರಾಥಮಿಕ ಶಿಕ್ಷಕರ ನೇಮಕಾತಿಯು ಖಾಸಗಿ ಶಾಲೆಗಳಿಗಿಂತಲೂ ಕ್ರಮಬದ್ಧವಾಗಿ ಆಗುತ್ತದೆ. ಆದರೂ ನಮ್ಮ ಸರ್ಕಾರಿ ಶಾಲೆಗಳು ಪೋಷಕರಿಗೆ ಬೇಡವಾಗುತ್ತಿರುವುದು ಏಕೆ?

ಶುಲ್ಕ ನೀತಿಗೆ ಸಂಬಂಧಿಸಿದ ಇಡೀ ಪ್ರಕರಣದಲ್ಲಿ ನಮಗೆ ಪಾಠವಾಗಿ ಲಭಿಸಿದ ವಿಚಾರವೆಂದರೆ, ಖಾಸಗಿ ಶಾಲೆಗಳ ಶುಲ್ಕವನ್ನು ನಿಯಂತ್ರಿಸುವ ಬದಲಿಗೆ ಸರ್ಕಾರಿ ಶಾಲೆಗಳ ಮೂಲ ಸೌಕರ್ಯಗಳ ಉನ್ನತೀಕರಣ ಆಗಬೇಕು. ಸರ್ಕಾರಿ ಶಾಲೆಗಳ ಕಟ್ಟಡಗಳು ಖಾಸಗಿ ಶಾಲೆಗಳಿಗೆ ಸವಾಲೊಡ್ಡುವಂತೆ ಇದ್ದರೆ ಪೋಷಕರ ಚಿತ್ತ ಖಾಸಗಿ ಶಾಲೆಗಳತ್ತ ಹರಿಯುವುದು ಕಡಿಮೆಯಾದೀತು ಎಂಬುದು.

ಇಂದು ನಮಗೆ ತುರ್ತಾಗಿ ಬೇಕಿರುವ ಪರಿಹಾರವೆಂದರೆ, ಸರ್ಕಾರ ಪ್ರಾಥಮಿಕ ಶಿಕ್ಷಣಕ್ಕಾಗಿ ಮೀಸಲಿಡುವ ಕೋಟ್ಯಂತರ ರೂಪಾಯಿ ಪೋಲಾಗದಂತೆ ಸರ್ಕಾರಿ ಶಾಲೆಗಳ ಅಭಿವೃದ್ಧಿಗಾಗಿ ಹರಿಯಬೇಕು. ಆಗ ಖಾಸಗಿ ಶಾಲೆಗಳು ಕ್ರಮೇಣ ಸರ್ಕಾರಿ ಶಾಲೆಗಳ ಪೈಪೋಟಿಯನ್ನು ಎದುರಿಸುವ ಸಲುವಾಗಿ ತಮ್ಮ ಶುಲ್ಕವನ್ನು ತಗ್ಗಿಸಲೂಬಹುದು.

ವಾಚಕರ ವಾಣಿ

ಕಂದನಿಗೆ ಸಿಗದ ನ್ಯಾಯ

ಕೊರಟಗೆರೆ ಸಮೀಪದ ಜಂಪೇನಹಳ್ಳಿ ಕ್ರಾಸ್ ಬಳಿ ಕಲ್ಲುಬಂಡೆ ಸಿಡಿಸಿದ ಶಬ್ದಕ್ಕೆ, ಮಲಗಿದ್ದ ಮೂರು ತಿಂಗಳ ಮಗು ಬೆಚ್ಚಿಬಿದ್ದು ಸಾವನ್ನಪ್ಪಿದ ಹಾಗೂ ಸ್ಮಶಾನದಲ್ಲಿ ಅದರ ಅಂತ್ಯಸಂಸ್ಕಾರಕ್ಕೆ, ಸ್ಮಶಾನದ ಪಕ್ಕದ ಜಾಗ ಖರೀದಿಸಿರುವ ಗಾರ್ಮೆಂಟ್ಸ್ ಕಂಪನಿಯ ಕಾವಲುಗಾರ ಅಡ್ಡಿಪಡಿಸಿದ ಸುದ್ದಿಯನ್ನು (ಪ್ರ.ವಾ., ಮಾರ್ಚ್ 22) ಓದಿ ಬೆಚ್ಚಿಬೀಳುವಂತಾಯಿತು. ಧಾರ್ಮಿಕ ವಿಧಿ ವಿಧಾನಗಳನ್ನೆಲ್ಲ ಮುಗಿಸಿ ಮಗುವನ್ನು ಗುಂಡಿಯಲ್ಲಿಟ್ಟು ಮಣ್ಣು ಮುಚ್ಚಬೇಕು ಎನ್ನುವಷ್ಟರಲ್ಲಿ ಇಂತಹ ಘಟನೆ ನಡೆದಿರುವುದು ನಾಗರಿಕ ಸಮಾಜ ತಲೆ ತಗ್ಗಿಸಬೇಕಾದ ವಿಚಾರ.

ಕಡೆಗೆ ರಾಜಕಾಲುವೆಯ ಮರಳಲ್ಲಿ ಮಗುವಿನ ಅಂತ್ಯಸಂಸ್ಕಾರ ನಡೆದಿರುವುದು ದುರದೃಷ್ಟಕರ. ತನ್ನದಲ್ಲದ ತಪ್ಪಿಗೆ ಉಸಿರು ಕಳೆದುಕೊಂಡ ಮಗುವಿನ ಅಂತ್ಯಸಂಸ್ಕಾರ ನ್ಯಾಯಯುತವಾಗಿ ನಡೆಯದಿರುವುದು ಬಡ ಕುಟುಂಬಕ್ಕೆ ಮಾಡಿದ ಅವಮಾನವೇ ಸರಿ. ಇಂತಹ ಅಪಸವ್ಯಗಳಿಗೆಲ್ಲ ಅಂತ್ಯ ಯಾವಾಗ?

ಕುಮಾರ ಚಲವಾದಿ, ಹಾಸನ

ಶಾಲೆಗಳಲ್ಲಿ ನೀಗಲಿ ನೀರಿನ ಕೊರತೆ

ಕಲ್ಯಾಣ ಕರ್ನಾಟಕದ ಸರ್ಕಾರಿ ಶಾಲೆಗಳಲ್ಲಿ ಮೂಲ ಸೌಲಭ್ಯದ ಕಡೆಗಣನೆ ಸ್ಪಷ್ಟವಾಗಿ ಎದ್ದು ಕಾಣುತ್ತದೆ. ವಿದ್ಯಾರ್ಥಿನಿಯರು ನೀರಿನ ಬಾಟಲಿಯನ್ನು ಮನೆಯಿಂದ ತಂದರೂ ಇಡೀ ದಿನದಲ್ಲಿ ಕುಡಿಯುವುದು ಕಾಲು ಭಾಗವನ್ನು ಮಾತ್ರ. ಕಾರಣ, ಸ್ವಲ್ಪ ಹೆಚ್ಚು ನೀರು ಕುಡಿದರೆ ಮೂತ್ರಾಲಯದ ಸಮಸ್ಯೆ.

ಇನ್ನು ಕೊರೊನಾ ಸೋಂಕು ನಿಯಂತ್ರಣಕ್ಕಾಗಿ ಆಗಾಗ ಕೈ ತೊಳೆಯುತ್ತಿರಬೇಕು ಎಂದು ಆರೋಗ್ಯ ಇಲಾಖೆ ಸೂಚನೆ ನೀಡಿದೆ. ಆದರೆ ಶಾಲೆಗಳಲ್ಲಿ ಇರುವ ನೀರಿನ ಸಮಸ್ಯೆಯಲ್ಲಿ ಇದನ್ನು ಕಾರ್ಯರೂಪಕ್ಕೆ ತರಲು ಹೇಗೆ ಸಾಧ್ಯ? ಸರಿಯಾಗಿ ಪರಿಶೀಲನೆ ಮಾಡಿದರೆ ಸರ್ಕಾರಿ ಶಾಲೆಯಷ್ಟೇ ಅಲ್ಲ ಖಾಸಗಿ ಶಾಲೆಗಳಲ್ಲೂ ವಿದ್ಯಾರ್ಥಿಗಳ ಸಂಖ್ಯೆಗನುಗುಣವಾಗಿ ಶೌಚಾಲಯದ ವ್ಯವಸ್ಥೆ ಇಲ್ಲದಿರುವುದು ತಿಳಿಯುತ್ತದೆ.

ಮಂಜುನಾಥ್ ಜಿ., ಹಗರಿಬೊಮ್ಮನಹಳ್ಳಿ

ಸವಾಲಿನ ಕ್ರೀಡೆಗಳಿಂದ ಮಾನಸಿಕ ಸದೃಢತೆ

ಕಂಬಳದಲ್ಲಿ ಶ್ರೀನಿವಾಸ ಗೌಡ ಅವರು ಹೊಸ ದಾಖಲೆ ಬರೆದಿರುವುದು (ಪ್ರ.ವಾ., ಮಾರ್ಚ್ 21) ಬಹಳ ಸಂತೋಷದ ವಿಷಯ. ಕೊರೊನಾ ಕಾಲಘಟ್ಟದಲ್ಲಿ ಇಂತಹ ಸವಾಲಿನ ಕ್ರೀಡೆಗಳು ಮನಸ್ಸನ್ನು ಉಲ್ಲಸಿತಗೊಳಿಸಿ ಸಮತೋಲನದಲ್ಲಿ ಇಡುತ್ತವೆ. ಅದರಲ್ಲೂ ಭಾರತೀಯ ಆಟಗಳು ಹೆಚ್ಚು ರಂಜನೆಯ ಜೊತೆಗೆ ಮಾನಸಿಕ ಸದೃಢತೆಯನ್ನೂ ನೀಡುತ್ತವೆ. ಮಲ್ಲಕಂಬ, ಕಬಡ್ಡಿ, ದೋಣಿ ರೇಸ್‌ನಂತಹ ಕ್ರೀಡೆಗಳು ಪತ್ರಿಕೆಗಳ ಕೊನೆಪುಟ ಸೇರದೆ ಮುಖಪುಟದಲ್ಲಿದ್ದರೆ, ಓದುಗರಿಗೆ ಮುಂಜಾನೆ ಲವಲವಿಕೆ, ಹೊಸ ಹುರುಪು ಲಭಿಸಿ, ಸಕಾರಾತ್ಮಕ ಭಾವನೆಗಳನ್ನು ದಿನಪೂರ ಹೊಂದಲು ಸಾಧ್ಯ.

ಬಿ.ಆರ್.ಅಣ್ಣಾಸಾಗರ, ಸೇಡಂ

ನ್ಯಾಯಾಂಗ ಮತ್ತು ಬಹಿರಂಗ ಚರ್ಚೆ

ರಾಜ್ಯ ವಿಧಾನಸಭೆಯಲ್ಲಿ ಇತ್ತೀಚೆಗೆ ನ್ಯಾಯಾಂಗದ ಕಾರ್ಯವೈಖರಿಯ ಬಗ್ಗೆ ಚರ್ಚೆ ನಡೆದಿದೆ. ಚರ್ಚೆಯಲ್ಲಿ ಭಾಗವಹಿಸಿದ ಸದಸ್ಯರಲ್ಲಿ ಕೆಲವರು ನ್ಯಾಯಾಂಗದಲ್ಲಿದೆ ಎನ್ನಲಾದ ಕೆಲವು ಲೋಪ ದೋಷಗಳ ಬಗ್ಗೆ ಬೆಳಕು ಚೆಲ್ಲಿದ್ದಾರೆ. ಸಾಮಾನ್ಯವಾಗಿ ನ್ಯಾಯಾಂಗದ ಬಗ್ಗೆ ಯಾರೂ ಬಹಿರಂಗ ಚರ್ಚೆ ನಡೆಸುವುದಿಲ್ಲ. ಆಡುವ ಮಾತುಗಳಲ್ಲಿ ಸ್ವಲ್ಪ ಹೆಚ್ಚು ಕಡಿಮೆಯಾದರೂ ನ್ಯಾಯಾಂಗದ ನಿಂದನೆಯಾಗಬಹುದು. ಆದರೆ ಶಾಸನಸಭೆಗಳ ಸದಸ್ಯರಿಗೆ ರಕ್ಷಣೆ ಇರುತ್ತದೆ.

ನ್ಯಾಯಾಂಗವು ಪ್ರಜಾಪ್ರಭುತ್ವದ ಮೂರು ಅಂಗಗಳ ಪೈಕಿ ವಿಶೇಷವಾದ ಸ್ಥಾನವನ್ನು ಗಳಿಸಿದೆ. ನ್ಯಾಯಾಂಗದ ಬಗ್ಗೆ ಮಾತನಾಡುವವರು ಅತ್ಯಂತ ಸೂಕ್ಷ್ಮವಾಗಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಬೇಕು. ಇದೊಂದು ರೀತಿಯ ಕತ್ತಿಯ ಅಲಗಿನ ಮೇಲಿನ ನಡಿಗೆ ಇದ್ದಂತೆ. ಶಾಸಕಾಂಗ ಮತ್ತು ಕಾರ್ಯಾಂಗ ಹಳಿ ತಪ್ಪಿದಾಗ ಅವುಗಳನ್ನು ಸರಿಯಾದ ದಾರಿಗೆ ತರುವ ಮಹತ್ವದ ಜವಾಬ್ದಾರಿ ನ್ಯಾಯಾಂಗಕ್ಕೆ ಇದೆ. ದೇಶದ ಸಂವಿಧಾನವನ್ನು ಕಾಪಾಡುವ ಮಹತ್ವದ ಜವಾಬ್ದಾರಿ ಕೂಡ ನ್ಯಾಯಾಂಗಕ್ಕೆ ಇದೆ. ಕಳೆದ ಐವತ್ತು ವರ್ಷಗಳ ಸುದೀರ್ಘ ಅವಧಿಯಲ್ಲಿ ನ್ಯಾಯಾಂಗ ತನ್ನ ಕ್ರಿಯಾಶೀಲತೆಯನ್ನು ಪದೇ ಪದೇ ಪ್ರದರ್ಶಿಸುತ್ತಲೇ ಬಂದಿದೆ. ನ್ಯಾಯಾಂಗದ ಮೇಲೆ ನಮ್ಮ ಜನರ ವಿಶ್ವಾಸ ಕೂಡ ಅದೇ ರೀತಿಯಲ್ಲಿದೆ. ಅದರ ಜೊತೆಗೆ ದೇಶದ ಪ್ರತಿಯೊಬ್ಬ ಪ್ರಜೆ ದೇಶದ ಕಾನೂನಿಗೆ ತಲೆ ಬಾಗಲೇಬೇಕು. ಸುಪ್ರೀಂ ಕೋರ್ಟ್ ಹಾಗೂ ಹೈಕೋರ್ಟ್‌ಗಳು ನೀಡಿರುವ ಕೆಲವು ಮಹತ್ವದ ತೀರ್ಪುಗಳು ಐತಿಹಾಸಿಕ ಎನ್ನಬಹುದು. ಸದೃಢವಾದ, ಆರೋಗ್ಯಕರ ಸಮಾಜದ ನಿರ್ಮಾಣಕ್ಕೂ ನ್ಯಾಯಾಂಗ ತನ್ನದೇ ಆದ ಕೊಡುಗೆ ನೀಡುತ್ತಿದೆ. ಆದರೆ ಒಂದು ವೇಳೆ ನ್ಯಾಯಾಂಗವೇ ಹಳಿ ತಪ್ಪಿದರೆ ಯಾರು ಸರಿಪಡಿಸಬೇಕು ಎಂಬ ಜಿಜ್ಞಾಸೆಗೆ ನಾವಿನ್ನೂ ಉತ್ತರ ಕಂಡುಕೊಳ್ಳಬೇಕಿದೆ.

ಕೆ.ವಿ.ವಾಸು, ಮೈಸೂರು

ಅಬ್ಬರ!

ಮತ್ತೆ
ಅಬ್ಬರಿಸಿ ಹಬ್ಬುತ್ತಿದೆಯಂತೆ
'ಅಲೆ ಅಲೆ'ಯಾಗಿ,
ಸಾವಿನ ಬಲೆಯಾಗಿ,
ಕೋವಿಡ್ ಕಾಯಿಲೆ!
ಹಾಕಿಕೊಳ್ಳಬೇಕು ಮುಸುಕು
ಕಪಿ ಮುಸುಡಿಯಂತೆ,
ಹಾಕಿಸಿಕೊಳ್ಳಬೇಕು ಲಸಿಕೆ:
'BE FEAR-LESS!
(ಏಕೆ ಹೆದರಿಕೆ?)

ಸಿ.ಪಿ.ಕೆ., ಮೈಸೂರು

ಕೃಷ್ಣ ಕ್ರಿಕೆಟ್ ಆಟ ಕಳೆಗಟ್ಟಲಿ

ಭಾರತ ಕ್ರಿಕೆಟ್ ತಂಡದ ಯಶಸ್ಸಿನ ಪಯಣದಲ್ಲಿ ಕರ್ನಾಟಕದ ಪ್ರತಿಭಾವಂತ ಆಟಗಾರರಾಗಿದ್ದ ವೆಂಕಟೇಶ್ ಪ್ರಸಾದ್, ಜಾವಗಲ್ ಶ್ರೀನಾಥ್, ಅನಿಲ್ ಕುಂಬ್ಳೆ ಹಾಗೂ ಇತರರ ಕೊಡುಗೆ ಅಪಾರ. ತಮ್ಮ ಸ್ಥಿರ ಆಟದ ಮುಖಾಂತರ ಭಾರತ ತಂಡದಲ್ಲಿ ಸುದೀರ್ಘ ಕಾಲ ಆಡಿದ ಅವರ ಸಾಧನೆಯು ಅಭಿಮಾನಿಗಳು ಎಂದಿಗೂ ಮರೆಯಲಾಗದಂಥದ್ದು. ಪ್ರಸ್ತುತ ಭಾರತದ ಕ್ರಿಕೆಟ್ ತಂಡಕ್ಕೆ ಆಯ್ಕೆಯಾಗಿರುವ ಕರ್ನಾಟಕದ ಪ್ರಸಿದ್ಧ ಕೃಷ್ಣ ತಮ್ಮ ಹೆಸರಿನಲ್ಲೇ ಅಡಕವಾಗಿರುವಂತೆ ಪ್ರಸಿದ್ಧರಾಗಲಿ. ಉತ್ತಮ ಆಟದ ಮುಖಾಂತರ ತಂಡದ ಅವಿಭಾಜ್ಯ ಅಂಗವಾಗಿ ಎತ್ತರಕ್ಕೆ ಬೆಳೆಯುವಂತಾಗಲಿ ಎಂದು ರಾಜ್ಯದ ಕ್ರಿಕೆಟ್ ಅಭಿಮಾನಿಗಳ ಪರವಾಗಿ ತುಂಬು ಹೃದಯದಿಂದ ಹಾರೈಸುತ್ತೇನೆ.

ಪಟ್ಟಡಿ ಎ.ಬಸವರಾಜ್, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

'ಎರಡನೇ ಎತ್ತಿನ ಹೊಳೆ'ಯಾಗುವ ಅನುಮಾನ: ಶಿರಸಿಯಲ್ಲಿ ನಾಳೆ ವಿಶೇಷ ಕಾರ್ಯಾಗಾರ

ಕರಾವಳಿ ಮೇಲೆ ಬೇಡ್ತಿ–ವರದಾ ಜೋಡಣೆಯ ಕಾರ್ಮೋಡ

• ಸದಾಶಿವ ಎಂ.ಎಸ್

ಕಾರವಾರ: 'ಬೇಡ್ತಿ– ವರದಾ ನದಿ ಜೋಡಣೆ' ಪ್ರಸ್ತಾವ ಈಗ ಉತ್ತರ ಕನ್ನಡದ ಮಲೆನಾಡು ಮತ್ತು ಕರಾವಳಿಯಲ್ಲಿ ಚರ್ಚೆಯ ವಿಷಯವಾಗಿದೆ. 'ಬೇಸಿಗೆಯಲ್ಲಿ ಬತ್ತಿ ಹೋಗುವ ನದಿಗಳಿಂದ ನೀರೆತ್ತುವ ಯೋಜನೆ ಹೇಗೆ ಕಾರ್ಯ ಸಾಧು' ಎಂಬ ಪ್ರಶ್ನೆ ಎರಡೂ ಭಾಗದ ಜನರದ್ದಾಗಿದೆ.

ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಈಚೆಗೆ ಮಂಡಿಸಿದ ರಾಜ್ಯ ಬಜೆಟ್‌ನಲ್ಲಿ ಈ ಯೋಜನೆಯನ್ನು ಪ್ರಸ್ತಾಪಿಸಿದ್ದರು. ವಿಸ್ತೃತ ಯೋಜನಾ ವರದಿ (ಡಿ.ಪಿ.ಆರ್) ಸಿದ್ಧಪಡಿಸಲು 'ರಾಷ್ಟ್ರೀಯ ಜಲಮೂಲ ಅಭಿವೃದ್ಧಿ ಏಜೆನ್ಸಿ'ಗೆ (ಎನ್.ಡಬ್ಲ್ಯು.ಡಿ.ಎ) ಮನವಿ ಮಾಡುವುದಾಗಿ ಹೇಳಿದ್ದರು.

ಯೋಜನೆಯ ಸಾಧಕ– ಬಾಧಕಗಳ ಬಗ್ಗೆ ಚರ್ಚಿಸಲು ಮಾರ್ಚ್ 24ರಂದು ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ ಶಿರಸಿಯಲ್ಲಿ ವಿಶೇಷ ಕಾರ್ಯಾಗಾರ ಮತ್ತು ಸಮಾವೇಶ ಆಯೋಜಿಸಲಾಗಿದೆ. ಸೋಂದಾ ಸ್ವರ್ಣವಲ್ಲೀ ಮಠ, ಬೇಡ್ತಿ ಮತ್ತು ಅಘನಾಶಿನಿ ಕೊಳ್ಳ ಸಂರಕ್ಷಣಾ ಸಮಿತಿ ಆಶ್ರಯದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಹಲವು ಮಂದಿ ವಿಷಯ ತಜ್ಞರು ಭಾಗವಹಿಸಿ ವಿಚಾರ ಮಂಡಿಸಲಿದ್ದಾರೆ.

ಏನಿದು ಯೋಜನೆ?

ಬೇಡ್ತಿ ಮತ್ತು ವರದಾ ನದಿಗಳಲ್ಲಿ ಹರಿದು ಸಮುದ್ರ ಸೇರುವ 22 ಟಿ.ಎಂ.ಸಿ. ಅಡಿಗಳಷ್ಟು ನೀರನ್ನು ಹಾವೇರಿ, ಗದಗ, ಕೊಪ್ಪಳ, ಸಿಂಧನೂರು, ರಾಯಚೂರು ಪ್ರದೇಶಗಳಿಗೆ ಕೊಂಡೊಯ್ಯುವುದು ಯೋಜನೆಯ ಉದ್ದೇಶವಾಗಿದೆ.



ಯಲ್ಲಾಪುರ ತಾಲ್ಲೂಕಿನಲ್ಲಿ ಹರಿಯುವ ಬೇಡ್ತಿ ನದಿಯ ಸ್ಥಿತಿ ಸದ್ಯ ಹೀಗಿದೆ

ಯೋಜನೆಯ ನಿಖರವಾದ ಸ್ವರೂಪದ ಬಗ್ಗೆ ವಿವರವಾದ ವರದಿ ಸಲ್ಲಿಕೆಯಾದ ಬಳಿಕ ಗೊತ್ತಾಗಲಿದೆ. ಪ್ರಾಥಮಿಕ ಮಾಹಿತಿಗಳ ಪ್ರಕಾರ, ನೀರನ್ನು ಸಂಗ್ರಹಿಸಿಡಲು ಮೂರು ಜಲಾಶಯಗಳು, ಆಳವಾದ ಬಾವಿಗಳನ್ನು (ಸುರಂಗ ಮಾದರಿ) ನಿರ್ಮಿಸಲಾಗುತ್ತದೆ.

ಶಿರಸಿ ತಾಲ್ಲೂಕಿನಲ್ಲಿ ಪಟ್ಟಣದ ಹೊಳೆ, ಶಾಲ್ಮಲಾ ನದಿ ಹಾಗೂ ಯಲ್ಲಾಪುರ ತಾಲ್ಲೂಕಿನಲ್ಲಿ ಬೇಡ್ತಿ ನದಿಗೆ ದೊಡ್ಡ ಜಲಾಶಯಗಳನ್ನು ನಿರ್ಮಿಸಲಾಗುತ್ತದೆ. ಅವುಗಳಿಂದ ಬೃಹತ್ ಪಂಪ್‌ಗಳ ಮೂಲಕ ನೀರನ್ನು ಮೇಲೆತ್ತಿ, ಭಾರಿ ಗಾತ್ರದ ಪೈಪ್‌ಲೈನ್‌ಗಳಲ್ಲಿ ಹರಿಸಲಾಗುತ್ತದೆ.

ಆತಂಕದ ಛಾಯೆ...

'ಕುಡಿಯುವ ನೀರಿಗೆ ಪ್ರಾಮಾಣಿಕವಾಗಿ ಜಾರಿಯಾಗುವ ಯೋಜನೆಗಳಿಗೆ ಯಾರದ್ದೂ ತಕರಾರಿಲ್ಲ. ಆದರೆ, ಕಾಮಗಾರಿಯನ್ನು ಬೃಹತ್ ನೀರಾವರಿ ಇಲಾಖೆ ಜಾರಿ ಮಾಡುತ್ತಿರುವುದು ಹಲವು ಪ್ರಶ್ನೆಗಳನ್ನು ಹುಟ್ಟುಹಾಕಿದೆ. ಕುಡಿಯುವ ನೀರಿನ ಯೋಜನೆಯ ನೆಪದಲ್ಲಿ ನೀರಾವರಿ ಯೋಜನೆ ಸಿದ್ಧವಾಗುತ್ತಿದೆ. ಈ ಮೂಲಕ ಇದು ಪಶ್ಚಿಮ ಘಟ್ಟದ 'ಎರಡನೇ ಎತ್ತಿನಹೊಳೆ' ಯೋಜನೆಯಾಗಲಿದೆ ಎಂಬುದು ಹಲವರ ಕಳವಳವಾಗಿದೆ.

ವಿರೋಧವೇಕೆ?

ಪಶ್ಚಿಮ ಘಟ್ಟದಿಂದ ಇಳಿದು ಅರಬ್ಬಿ ಸಮುದ್ರದತ್ತ ಹರಿಯುವ ನೀರು 'ವ್ಯರ್ಥ'ವಾಗುತ್ತಿದೆ ಎಂದು ಮೇಲ್ನೋಟಕ್ಕೆ ಕಂಡರೂ ಪರಿಸರ ಸಮತೋಲನ ಕಾಯ್ದುಕೊಳ್ಳಲು ಅದರ ಅಗತ್ಯವಿದೆ ಎನ್ನುವುದು ತಜ್ಞರ ಪ್ರತಿಪಾದನೆಯಾಗಿದೆ.

ಉತ್ತರ ಕನ್ನಡದ ಕಾರವಾರದಿಂದ ಭಟ್ಕಳದವರೆಗೂ ಉಪ್ಪು ನೀರಿನ ಸಮಸ್ಯೆಯಿದೆ. ಕಡಲಕಿನಾರೆಯಿಂದ ಹತ್ತಾರು ಕಿಲೋಮೀಟರ್ ದೂರದವರೆಗೂ ನೀರು ಸವಳಾಗುತ್ತದೆ. ಬೇಸಿಗೆಯಲ್ಲಿ ಇಲ್ಲಿನ ಬಾವಿ, ನದಿ, ಕಾಲುವೆಗಳಲ್ಲಿ ಸಮುದ್ರದ ನೀರು ಸೇರಿಕೊಳ್ಳುತ್ತದೆ. ಇದರಿಂದಾಗಿ ಈ ಭಾಗದ ಜನರಿಗೆ ಕಣ್ಣೆದುರೇ ಜಲರಾಶಿ ಇದ್ದರೂ ಕುಡಿಯಲು ಸಾಧ್ಯವಾಗುವುದಿಲ್ಲ.

ಮಲೆನಾಡಿನ ಸೆರಗಿನಲ್ಲಿರುವ ಯಲ್ಲಾಪುರಕ್ಕೆ ಬೇಡ್ತಿ ಹೊಳೆಯಿಂದ ಕುಡಿಯುವ ನೀರು ಪೂರೈಸುವ ಸುಮಾರು ₹ 23 ಕೋಟಿ ವೆಚ್ಚದ ಕಾಮಗಾರಿಯನ್ನು 10 ವರ್ಷಗಳ ಹಿಂದೆ ಮಾಡಲಾಗಿತ್ತು. ಆದರೆ, ಅದು ವಿಫಲವಾಯಿತು. ಮಳೆಗಾಲದಲ್ಲಿ ಪ್ರವಾಹ ತರುವ ಬೇಡ್ತಿ, ಬೇಸಿಗೆಯಲ್ಲಿ ಸಂಪೂರ್ಣವಾಗಿ ಸೊರಗುತ್ತದೆ. ಮುಂಡಗೋಡ ಹಾಗೂ ಅಂಕೋಲಾ ತಾಲ್ಲೂಕುಗಳ ಹತ್ತಾರು ಗ್ರಾಮಗಳು ಮಾರ್ಚ್ ಕೊನೆಯ ನಂತರ ಹನಿ ನೀರಿಗೂ ಪರದಾಡುವಂತಾಗುತ್ತದೆ.

ಉತ್ತರ ಕನ್ನಡದಲ್ಲಿ ಯಾವುದೇ ನೀರಾವರಿ ಯೋಜನೆಗಳಿಲ್ಲ. ನದಿಗಳಲ್ಲಿ ಹರಿಯುವ ನೀರನ್ನೇ ಪಂಪ್‌ಸೆಟ್ ಮೂಲಕ ಜಮೀನಿಗೆ ಹಾಯಿಸಿ ಕೃಷಿ ಮಾಡುತ್ತ ಸಾವಿರಾರು ಮಂದಿ ಬದುಕು ಕಟ್ಟಿಕೊಂಡಿದ್ದಾರೆ. ಸರ್ಕಾರ ಇದಕ್ಕೇನೂ ಖರ್ಚು ಮಾಡುತ್ತಿಲ್ಲ. ಇಂತಹ ಬೃಹತ್ ಯೋಜನೆ ಜಾರಿಯಾದರೆ ನೀರಿನ ಕೊರತೆ ಉಂಟಾದರೆ ಈ ಭಾಗದ ಜನರೆಲ್ಲಿಗೆ ಹೋಗಬೇಕು ಎಂಬ ಪ್ರಶ್ನೆಗೂ ಸರ್ಕಾರ ಉತ್ತರಿಸಬೇಕಿದೆ.

ಎತ್ತಿನಹೊಳೆ ಯೋಜನೆಯ ವೆಚ್ಚ ಈಗ ₹ 24,982 ಕೋಟಿಗೇರಿದೆ. ನದಿ ಜೋಡಣೆ ಬಗ್ಗೆ 2003– 04ರಲ್ಲಿ ಸಿವಿಲ್ ಎಂಜಿನಿಯರ್ ಎನ್.ಶಂಕರಪ್ಪ ತೋರಣಗಲ್ಲು ಅವರು ಸಮೀಕ್ಷೆ ನಡೆಸಿದ ಪ್ರಕಾರ ಬೇಡ್ತಿ– ವರದಾ ನದಿ ಜೋಡಣೆಗೆ ಆಗಿನ ಕಾಲದಲ್ಲೇ ₹ 622 ಕೋಟಿ ಬೇಕು ಎಂದು ಅಂದಾಜಿಸಲಾಗಿತ್ತು. ಈಗ ಈ ಮೊತ್ತ ಎರಡು, ಮೂರು ಪಟ್ಟು ಏರಿಕೆಯಾಗಿರಬಹುದು. ಈ ರೀತಿ ಕೋಟ್ಯಂತರ ರೂಪಾಯಿ ವ್ಯಯಿಸುವ ಬದಲು ಆ ಮೊತ್ತದಲ್ಲೇ ಪರ್ಯಾಯ ಯೋಜನೆಗಳನ್ನು ರೂಪಿಸಬಹುದು ಎಂಬುದು ಯೋಜನೆ ವಿರೋಧಿಸುತ್ತಿರುವವರ ಅಭಿಮತವಾಗಿದೆ.

ನದಿಗಳ ಜೋಡಣೆ ಪ್ರಸ್ತಾವ ಸ್ವಾಗತಾರ್ಹ




ಎತ್ತಿನ ಹೊಳೆ ಮಾದರಿಯಲ್ಲಿ ಬೇಡ್ತಿ ಮತ್ತು ವರದಾ ನದಿ ಜೋಡಣೆಯ ಯೋಜನೆಯನ್ನು ಅನುಷ್ಠಾನಗೊಳಿಸಿದರೆ ಸದಾ ಬರಗಾಲದಿಂದ ತತ್ತರಿಸುತ್ತಿರುವ ಗದಗ, ರಾಯಚೂರು ಮತ್ತು ಕೊಪ್ಪಳ ಜಿಲ್ಲೆಗಳ ಸಮಗ್ರ ಅಭಿವೃದ್ಧಿ ಸಾಧ್ಯವಾಗುತ್ತದೆ. ಈ ನಿಟ್ಟಿನಲ್ಲಿ ಸರ್ಕಾರ ಮಂಡಿಸಿರುವ ಪ್ರಸ್ತಾವ ಸ್ವಾಗತಾರ್ಹ.

ನದಿ ಜೋಡಣೆಯಿಂದ ಉತ್ತರ ಕರ್ನಾಟಕ ಮತ್ತು ಬಯಲು ಸೀಮೆಗಳ ಹಲವಾರು ಸಮಸ್ಯೆಗಳಿಗೆ ಶಾಶ್ವತ ಪರಿಹಾರ ದೊರಕಲಿದೆ. ಇದನ್ನು ಅನವಶ್ಯಕವಾಗಿ ವಿರೋಧಿಸುವ ಬದಲಾಗಿ ವ್ಯರ್ಥವಾಗಿ ಹರಿಯುವ ನೀರನ್ನು ಸದ್ಬಳಕೆ ಮಾಡಿಕೊಳ್ಳಬಹುದಾಗಿದೆ.

ವೈ.ಎನ್.ಗೌಡರ
ಪರಿಸರವಾದಿ, ಮುಂಡರಗಿ



ಬೇಡ್ತಿ– ವರದಾ ನದಿಗಳ ಜೋಡಣೆಯ ಯೋಜನೆ ಅವೈಜ್ಞಾನಿಕ ಮತ್ತು ಸುಸ್ಥಿರವಲ್ಲದ್ದು. ಹಾಗಾಗಿ ಯೋಜನೆ ಸಂಬಂಧ ಡಿ.ಪಿ.ಆರ್.ಗೆ ಸಮೀಕ್ಷೆ ಮಾಡುವುದೇ ಬೇಡ
ಡಾ.ಕೇಶವ ಎಚ್.ಕೊರ್ಸೆ, ಸಂರಕ್ಷಣಾ ಜೀವವಿಜ್ಞಾನಿ



ಉತ್ತರ ಕನ್ನಡದ ಕರಾವಳಿಯಲ್ಲಿ ಉಪ್ಪು ನೀರಿನ ಸಮಸ್ಯೆ ನಿವಾರಣೆಗೆ ಬಜೆಟ್‌ನಲ್ಲಿ ₹ 300 ಕೋಟಿ ನೀಡಲಾಗಿದೆ. ಈ ಉದ್ದೇಶಕ್ಕೆ ಅನುದಾನ ಘೋಷಿಸಿದ್ದು ಇದೇ ಮೊದಲು
ಶಿವರಾಮ ಹೆಬ್ಬಾರ
ಜಿಲ್ಲಾ ಉಸ್ತುವಾರಿ ಸಚಿವ

'ಅಧ್ಯಯನ ಮಾಡಿ ಪ್ರತಿಕ್ರಿಯಿಸುವೆ'

'ಬೇಡ್ತಿ–ವರದಾ ನದಿ ಜೋಡಣೆ ಬಗ್ಗೆ ಡಿ.ಪಿ.ಆರ್ ಮಾಡಲು ಸರ್ಕಾರದ ಆದೇಶಿಸಿದೆ. ಯೋಜನೆಯ ಸಾಧಕ, ಬಾಧಕಗಳ ಬಗ್ಗೆ ನನಗೂ ಪರಿಕಲ್ಪನೆಯಿಲ್ಲ. ಈ ವಿಷಯದ ಬಗ್ಗೆ ಅಧ್ಯಯನ ಮಾಡಿ ನಂತರ ಪ್ರತಿಕ್ರಿಯಿಸುತ್ತೇನೆ. ಅಲ್ಲದೇ ವಿಧಾನಸಭೆ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅವರೊಂದಿಗೆ ಚರ್ಚಿಸುತ್ತೇನೆ' ಎಂದು ಜಿಲ್ಲಾ ಉಸ್ತುವಾರಿ ಸಚಿವ ಶಿವರಾಮ ಹೆಬ್ಬಾರ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ್ದಾರೆ.

'ಕಾಳಿ, ಬೇಡ್ತಿ, ವರದಾ, ಅಘನಾಶಿನಿ ಹಾಗೂ ಶರಾವತಿ ನದಿಗಳು ಉತ್ತರ ಕನ್ನಡದಲ್ಲಿ ಹರಿಯುತ್ತವೆ. ಈ ನದಿಗಳಿಂದ 400 ಟಿ.ಎಂ.ಸಿ ಅಡಿ ನೀರು ಸಮುದ್ರ ಪಾಲಾಗುತ್ತಿದೆ. ಮತ್ತೊಂದೆಡೆ 70 ಟ್ಯಾಂಕರ್‌ಗಳಲ್ಲಿ ನೀರು ಕೊಡ್ತಿದ್ದೇವೆ. ಇದು ವಿಪರ್ಯಾಸ. ಅವುಗಳ ನೀರಿನ ಸದುಪಯೋಗದ ಕಾಮಗಾರಿಯು ಇಚ್ಛಾಶಕ್ತಿಯ ಕೊರತೆಯಿಂದ ನಮ್ಮಲ್ಲಿ ಆಗಿಲ್ಲ. ಇದಕ್ಕಾಗಿ ಯಾರನ್ನೂ ನಾನು ದೂಷಿಸುವುದಿಲ್ಲ' ಎಂದಿದ್ದಾರೆ.



'ಕರಾವಳಿಗೆ ದೊಡ್ಡ ಹೊಡೆತ'

'ಬೇಡ್ತಿ– ವರದಾ ನದಿಯ ಜೋಡಣೆಯಿಂದ ಜಿಲ್ಲೆಯ ಕರಾವಳಿಯ ಮೇಲೆ ಬಹುದೊಡ್ಡ ಪರಿಣಾಮ ಆಗಲಿದೆ. ಸಮುದ್ರದ ಉಪ್ಪು ನೀರು ನದಿಗೆ ನುಗ್ಗುವುದನ್ನು ತಡೆಯಲು ಸಿಹಿನೀರಿನ ಹರಿವು ಅತ್ಯಗತ್ಯ' ಎನ್ನುತ್ತಾರೆ ಸಂರಕ್ಷಣಾ ಜೀವವಿಜ್ಞಾನಿ ಡಾ. ಕೇಶವ ಎಚ್. ಕೊರ್ಸೆ.

'ಸಿಹಿನೀರು ಹರಿಯದಿದ್ದರೆ ಮತ್ಸ್ಯಕ್ಷಾಮ ಮತ್ತಷ್ಟು ಗಂಭೀರ ಸ್ಥಿತಿಗೆ ತಲುಪಲಿದೆ. ಮೀನಿನ ಸಂತಾನಾಭಿವೃದ್ಧಿಗೆ ಸಿಹಿನೀರು ಸಮುದ್ರಕ್ಕೆ ಸೇರುವುದು ಅತ್ಯಗತ್ಯ. ಮೀನಿನ ಕೊರತೆಯಿಂದ ಅದೆಷ್ಟೋ ದೋಣಿಗಳು ಸಮುದ್ರಕ್ಕಿಳಿಯದೇ ತಿಂಗಳಾದವು. ನದಿಯ ಸಹಜ ಹರಿವಿಗೆ ತಡೆ ಉಂಟಾದರೆ, ಮೀನುಗಾರರು ತಮ್ಮ ವೃತ್ತಿಯನ್ನೇ ಮರೆಯಬೇಕಾದೀತು' ಎಂದು ಅವರು ಎಚ್ಚರಿಕೆ ನೀಡುತ್ತಾರೆ.

'ಬೇಡ್ತಿ ನದಿಗೆ ಹುಬ್ಬಳ್ಳಿಯ ಕೊಳಚೆ ನೀರು ಹರಿಯುತ್ತದೆ. ಹಾಗಾಗಿ ನದಿಯ ನೀರು ಸೇವನೆಗೆ ಯೋಗ್ಯವಲ್ಲ ಎಂಬ ವೈಜ್ಞಾನಿಕ ವರದಿಗಳಿವೆ. ಹಾಗಾಗಿ ಅದನ್ನು ಕುಡಿಯಲು ಬಳಸುವುದು ಎಷ್ಟು ಸರಿ' ಎಂದೂ ಪ್ರಶ್ನಿಸುತ್ತಾರೆ.

'ಬೇಡ್ತಿ– ವರದಾ ಜೋಡಣೆಯು, ನದಿ ಜೋಡಣೆ ಯೋಜನೆಯಲ್ಲೇ ಇತ್ತು. ಈಗ ಡಿ.ಪಿ.ಆರ್ ಮಾಡಲು ಸೂಚಿಸಿರುವುದು ಅದರ ಮುಂದುವರಿದ ಭಾಗವಾಗಿದೆ. ಕುಡಿಯುವ ನೀರಿನ ಕಾಮಗಾರಿ ಎಂದು ಉಲ್ಲೇಖಿಸಿದ ಕಾರಣ ಯಾವುದೇ ಪರಿಸರ ಕಾನೂನುಗಳು ಅಡ್ಡಿಯಾಗುವುದಿಲ್ಲ. ಸರ್ಕಾರಗಳೇ ಈ ರೀತಿ ಕಾನೂನಿನ ಒಳ ನುಸುಳುವ ಕಾರ್ಯ ಮಾಡುತ್ತಿವೆ. ಎತ್ತಿನಹೊಳೆ ಯೋಜನೆ ಇಂಥದ್ದಕ್ಕೆ ಒಂದು ಮಾದರಿಯಾಯಿತು' ಎಂದು ಬೇಸರ ವ್ಯಕ್ತಪಡಿಸುತ್ತಾರೆ.

ಕಾಳಿ ತಟದಲ್ಲೂ ಅನುಮಾನ

ದಾಂಡೇಲಿಯಲ್ಲಿ ಕಾಳಿ ನದಿಯಿಂದ ಅಳ್ನಾವರಕ್ಕೆ ನೀರು ಸಾಗಿಸುವ ಕಾಮಗಾರಿ ಬಹುತೇಕ ಮುಕ್ತಾಯದ ಹಂತದಲ್ಲಿದೆ. ಅದನ್ನು ವಿರೋಧಿಸಿ ದಾಂಡೇಲಿ ಸಮಗ್ರ ಹೋರಾಟ ಸಮಿತಿ ಸೇರಿದಂತೆ ವಿವಿಧ ಸಂಘಟನೆಗಳ ಪ್ರಮುಖರು 40 ದಿನಗಳಿಂದ ಧರಣಿ ನಡೆಸುತ್ತಿದ್ದಾರೆ. ಕುಡಿಯುವ ನೀರಿನ ಯೋಜನೆಗೆ ಭಾರಿ ಗಾತ್ರದ ಪೈಪ್‌ಗಳನ್ನು ಅಳವಡಿಸಿದ್ದು ಯಾಕೆ ಎಂಬುದು ಅವರ ಪ್ರಶ್ನೆಯಾಗಿದೆ. ಸಾರ್ವಜನಿಕ ಅಹವಾಲು ಸಭೆ ನಡೆಸಬೇಕು ಎಂದೂ ಪಟ್ಟುಹಿಡಿದಿದ್ದಾರೆ.

ಈ ಬಗ್ಗೆ ಪ್ರಶ್ನಿಸಿದಾಗ ಸಚಿವ ಶಿವರಾಮ ಹೆಬ್ಬಾರ, 'ದಾಂಡೇಲಿಗೆ ಕುಡಿಯುವ ನೀರು ಪೂರೈಸುವ ಯೋಜನೆ ಮಾಡಿಸುತ್ತೇವೆ. ಈ ಹಿಂದೆ ಅಳ್ನಾವರಕ್ಕೆ ನೀರು ಹರಿಸುವ ಯೋಜನೆ ಜಾರಿ ಸಂದರ್ಭದಲ್ಲಿ ಆಗಿನ ಸಚಿವ ಆರ್.ವಿ. ದೇಶಪಾಂಡೆ ಯಾಕೆ ಬಿಟ್ಟರು ಎಂದು ಗೊತ್ತಿಲ್ಲ. ದಾಂಡೇಲಿಯವರು ಕುಡಿಯುವ ನೀರು ಕೇಳುತ್ತಿರುವ ಬೇಡಿಕೆ ನ್ಯಾಯಯುತವಾಗಿದೆ' ಎಂದರು.



ಶಾಲ್ಮಲಾ ನದಿಯಲ್ಲಿ ನೀರಿನ ಹರಿವು ಗಣನೀಯವಾಗಿ ಕಡಿಮೆಯಾಗಿದೆ



ಕರಾವಳಿಯಲ್ಲಿ ಉಪ್ಪು ನೀರಿನ ಸಮಸ್ಯೆಯಿದೆ. ಅಘನಾಶಿನಿಯ ನೀರನ್ನು ಬೇರೆ ಜಿಲ್ಲೆಗೆ ಸಾಗಿಸಲು ಮುಂದಾದರೆ ಖಂಡಿತ ವಿರೋಧಿಸಲಾಗುವುದು. ಯಾವುದೇ ತ್ಯಾಗಕ್ಕೂ ಸಿದ್ಧವಿದ್ದೇನೆ
ದಿನಕರ ಶೆಟ್ಟಿ, ಶಾಸಕ



ಬೃಹತ್ ಯೋಜನೆಗಳಿಂದ ಪಶ್ಚಿಮ ಘಟ್ಟದ ಸಮತೋಲನ ಬದಲಾಗಬಹುದು. ಯೋಜನೆಯನ್ನು ಮರು ಪರಿಶೀಲಿಸಲು ಮನವಿ ಮಾಡುತ್ತೇನೆ
ಅನಂತ ಹೆಗಡೆ ಅಶೀಸರ
ರಾಜ್ಯ ಜೀವ ವೈವಿಧ್ಯ ಮಂಡಳಿ ಅಧ್ಯಕ್ಷ

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

'70 ವರ್ಷಗಳಲ್ಲಿ ಕಾಂಗ್ರೆಸ್ ಏನನ್ನೂ ಮಾಡಿಲ್ಲ' ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಒಪ್ಪಿಕೊಂಡಿದ್ದಾರೆ ಎಂಬ ಬರಹ ಇರುವ ಪೋಸ್ಟ್‌ಗಳು ಟ್ವಿಟರ್ ಮತ್ತು ಫೇಸ್‌ಬುಕ್‌ನಲ್ಲಿ ವೈರಲ್ ಆಗಿವೆ. ಈ ಪೋಸ್ಟ್‌ಗಳ ಜತೆ ರಾಹುಲ್ ಗಾಂಧಿ ಅವರ ವಿಡಿಯೊ ಸಹ ಪೋಸ್ಟ್ ಆಗಿದೆ. ವಿಡಿಯೊದಲ್ಲಿ ರಾಹುಲ್ ಗಾಂಧಿ ಅವರು, '70 ವರ್ಷದಲ್ಲಿ ಕಾಂಗ್ರೆಸ್ ಏನನ್ನೂ ಮಾಡಿಲ್ಲ. ದೇಶದ ಎಲ್ಲಾ ವ್ಯವಸ್ಥೆ ಹಾಳಾಗಿದೆ' ಎಂದು ಹೇಳುತ್ತಿರುವುದು ದಾಖಲಾಗಿದೆ. ಕಾಂಗ್ರೆಸ್‌ನ ವೈಫಲ್ಯವನ್ನು ಪಕ್ಷದ ನಾಯಕರೇ ಒಪ್ಪಿಕೊಳ್ಳುತ್ತಿದ್ದಾರೆ ಎಂದು ಈ ಪೋಸ್ಟ್‌ಗಳಲ್ಲಿ ಬರೆಯಲಾಗಿದೆ. ಫೇಸ್‌ಬುಕ್‌ನಲ್ಲಿ ನಮೋ ಹೆಸರಿನ ಪುಟದಲ್ಲಿ ಮೊದಲು ಈ ವಿಡಿಯೊ ಹಂಚಿಕೊಳ್ಳಲಾಗಿದೆ. ಆನಂತರ ನೂರಾರು ಜನರು ಈ ವಿಡಿಯೊವನ್ನು ಹಂಚಿಕೊಂಡಿದ್ದಾರೆ.

ಆದರೆ, ಇದು ತಿರುಚಿದ ವಿಡಿಯೊ ಎಂದು ದಿ ಲಾಜಿಕಲ್ ಇಂಡಿಯನ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ. 2019ರ ಅಕ್ಟೋಬರ್ 13ರಂದು ರಾಹುಲ್ ಗಾಂಧಿ ಅವರು ಮುಂಬೈನ ಧಾರಾವಿಯಲ್ಲಿ ಮಾಡಿದ ಭಾಷಣದ ವಿಡಿಯೊವನ್ನು ತಿರುಚಿ, ಈ ವಿಡಿಯೊವನ್ನು ಸಿದ್ಧಪಡಿಸಲಾಗಿದೆ. ಮೂಲ ವಿಡಿಯೊದಲ್ಲಿ ರಾಹುಲ್ ಅವರು, '70 ವರ್ಷಗಳಲ್ಲಿ ಕಾಂಗ್ರೆಸ್ ಏನೂ ಮಾಡಿಲ್ಲ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳುತ್ತಿರುತ್ತಾರೆ' ಎಂದು ಹೇಳಿದ್ದರು. ಈ ವಾಕ್ಯವನ್ನು ತುಂಡರಿಸಿ, '70 ವರ್ಷಗಳಲ್ಲಿ ಕಾಂಗ್ರೆಸ್ ಏನನ್ನೂ ಮಾಡಿಲ್ಲ' ಎಂಬ ವಾಕ್ಯವನ್ನಷ್ಟೇ ಉಳಿಸಿಕೊಳ್ಳಲಾಗಿದೆ. '70 ವರ್ಷದಲ್ಲಿ ಆಗದೇ ಇದ್ದ ಕೆಲಸ ಈಗ ಆಗಿದೆ. ದೇಶದ ಎಲ್ಲಾ ವ್ಯವಸ್ಥೆ ಹಾಳಾಗಿದೆ' ಎಂಬ ವಾಕ್ಯದಲ್ಲಿ, 'ದೇಶದ ಎಲ್ಲಾ ವ್ಯವಸ್ಥೆ ಹಾಳಾಗಿದೆ' ಎಂಬುದನ್ನಷ್ಟೇ ಉಳಿಸಿಕೊಳ್ಳಲಾಗಿದೆ. ತಪ್ಪು ಅರ್ಥ ಬರುವಂತೆ ವಿಡಿಯೊವನ್ನು ಎಡಿಟ್ ಮಾಡಲಾಗಿದೆ ಎಂದು ಲಾಜಿಕಲ್ ಇಂಡಿಯನ್ ಹೇಳಿದೆ.

ಬೆರಗಿನ ಬೆಳಕು

ಗುರುರಾಜ ಕರಜಗಿ

ಬದುಕಿನ ಶ್ರೀಮಂತಿಕೆ

ಇರುವನ್ನಮೀ ಬಾಳು ದಿಟವದರ ವಿವರಣೆಯು |
ಹೊರೆ ನಮ್ಮ ಮೇಲಿಲ್ಲ ನಾವದರ ಸಿರಿಯ |
ಪಿರಿದಾಗಿಸಲು ನಿಂತು ಯುಕ್ತಿಯಿಂ ದುಡಿಯುವುದೆ |
ಪುರಷಾರ್ಥ ಸಾದನೆಯೊ – ಮಂಕುತಿಮ್ಮ ||398||

ಪದ-ಅರ್ಥ: ಇರುವನ್ನಮೀ = ಇರುವನ್ನ (ಇರುವ ತನಕ) + ಈ, ದಿಟವದರ = ದಿಟ (ಸತ್ಯ) + ಅದರ, ಪಿರಿದಾಗಿಸಲು = ಹಿರಿದಾಗಿಸಲು.

ವಾಚ್ಯಾರ್ಥ: ಇರುವವರೆಗೆ ಈ ಬಾಳು ಸತ್ಯ. ಅದರ ವಿವರಣೆಯ ಜವಾಬ್ದಾರಿ ನಮ್ಮದಲ್ಲ. ಅದರ ಶ್ರೀಮಂತಿಕೆಯನ್ನು ಹೆಚ್ಚು ಮಾಡಲು ಯುಕ್ತಿಯಿಂದ ದುಡಿಯುತ್ತ ಪುರುಷಾರ್ಥ ಸಾಧನೆಯನ್ನು ಮಾಡಬೇಕು.

ವಿವರಣೆ: ನಾವು ಯಾರೂ ಅರ್ಜಿ ಹಾಕಿಕೊಂಡು ಭೂಮಿಗೆ ಬಂದವರಲ್ಲ. ನಮಗೆ ತಂದೆ-ತಾಯಿಯರ ಆಯ್ಕೆ ಇರಲಿಲ್ಲ. ನಾವು ಹುಟ್ಟು ಜಾತಿ, ಸಾಮಾಜಿಕ ಸ್ಥಿತಿ, ಆರ್ಥಿಕ ಪರಿಸ್ಥಿತಿ ಯಾವುದೂ ನಮ್ಮ ಆಯ್ಕೆ ಆಗಿರಲಿಲ್ಲ. ಹುಟ್ಟಿ ಬೆಳೆದ ಸ್ಥಳ ಕೂಡ ನಮ್ಮ ಇಚ್ಛೆಯಂತಲ್ಲ. ಹುಟ್ಟಿ ಬಂದ ಮೇಲೆ ಬದುಕಿರುವವರೆಗೆ ಹೇಗೆ ಬದುಕುತ್ತೇವೆ ಎಂಬುದು ಮಾತ್ರ ನಮ್ಮ ಆಯ್ಕೆ. ಬದುಕಿ ಇರುವ ಅವಧಿ ಸಣ್ಣದು. ನಮಗೆ ಎರಡು ದಾರಿಗಳಿವೆ. ಒಂದು, ಇರುವ ಬದುಕನ್ನು, ಇರುವ ಅವಕಾಶಗಳನ್ನು ಬಳಸಿಕೊಂಡು ಸಂತೋಷಿಸುತ್ತ ಬೆಳೆಯುವುದು. ಮತ್ತೊಂದು, ಪ್ರತಿಯೊಂದರ, ಪ್ರತಿಯೊಬ್ಬರ ಬಗ್ಗೆ ಗೊಣಗುತ್ತ, ಕೊರಗುತ್ತ ಸವೆಯುವುದು. ನಮ್ಮ ಕೆ.ಎಸ್. ನರಸಿಂಹಸ್ವಾಮಿಯವರ ಕವನ 'ಇಕ್ಕಳ' ಗೊಣಗುಭಟ್ಟರ ಮನಃಸ್ಥಿತಿಯನ್ನು ಚೆನ್ನಾಗಿ ತಿಳಿಸುತ್ತದೆ. ಚಳಿಗಾಲ ಬಂದಾಗ 'ಎಷ್ಟು ಚಳಿ' ಎಂದರು, ಬಂತಲ್ಲ ಬೇಸಿಗೆ 'ಕೆಟ್ಟ ಬಿಸಿಲು' ಎಂದರು, ಮಳೆ ಬಿತ್ತೊ, 'ಬಿಡದಲ್ಲ ಶನಿ' ಎಂಬ ಟೀಕೆ, ಇವರು ಮೆಚ್ಚುವ ವಸ್ತು ಇಲ್ಲಿಲ್ಲ ಜೋಕೆ!- ಚಿಗುರ ಚಿನ್ನದ ನಡುವೆ ಹೂವ ಬಯಸುವರು, ಹೂಗಳ ಕಾಲದಲ್ಲಿ ಹಣ್ಣ ಹೊಗಳುವರು, 'ಹಣ್ಣಿನ ಗಾತ್ರ ಪೀಚು' ಎಂದಿವರ ಟೀಕೆ, ಇವರು ಮೆಚ್ಚುವ ವಸ್ತು ಇಲ್ಲಿಲ್ಲ ಜೋಕೆ.

ಈ ಬದುಕು ಸತ್ಯ. ಅದರ ವಿವರಣೆಯನ್ನು ನೀಡುವ ಜವಾಬ್ದಾರಿ ನಮ್ಮದಲ್ಲ. ನಮ್ಮ ಜವಾಬ್ದಾರಿ ಏನಿದ್ದರೂ ಅದು ಈ ಬದುಕನ್ನು ಮತ್ತಷ್ಟು ಶ್ರೀಮಂತಗೊಳಿಸುವುದು. ಯುಕ್ತಿಯಿಂದ, ಎಚ್ಚರಿಕೆಯಿಂದ, ಪ್ರೀತಿಯಿಂದ ನಮ್ಮ ಪುರುಷಾರ್ಥಗಳ ಸಾಧನೆಯನ್ನು ಮಾಡಿಕೊಳ್ಳುವುದು. ಹೀಗೆ ಸಂಭ್ರಮದ ಬದುಕಿಗೆ ಮೂಲಸಾಮಗ್ರಿ ಧನಾತ್ಮಕ ಚಿಂತನೆ. ಪ್ರಪಂಚದಲ್ಲಿ ಒಳ್ಳೆಯದು, ಕೆಟ್ಟದ್ದು ಎರಡೂ ಇವೆ. ಯಾವುದನ್ನು ಆರಿಸಿಕೊಳ್ಳಬೇಕೆಂಬುದು ನಮಗೆ ಬಿಟ್ಟದ್ದು. ದಾಸರು ಹೇಳಿದರು, 'ನೀರ ಮೇಲಣ ಗುಳ್ಳೆ ನಿಜವಲ್ಲೊ ಹರಿಯೆ', 'ಯಾಕೆನ್ನ ಈ ರಾಜ್ಯಕೆಳೆತಂದೆ ಹರಿಯೆ, ಸಾಕಲಾರದೆ ಎನ್ನ ಯಾಕೆ ಪುಟ್ಟಿಸಿದೆ', 'ಅಲ್ಲಿದೆ ನಮ್ಮನೆ, ಇಲ್ಲಿರುವುದು ಸುಮ್ಮನೆ'. ಇವೆಲ್ಲ ನಮ್ಮ ಬದುಕು ಅಶಾಶ್ವತ, ಇದನ್ನು ನಂಬಿ ಕೆಡಬೇಡ ಎಂಬ ಋಣಾತ್ಮಕತೆಯನ್ನು ಹೇಳಿದಂತೆನ್ನಿಸಿದರೂ ಅದೇ ದಾಸರು, 'ತಲ್ಲಣಿಸದಿರು ಕಂಡ್ಯ ತಾಳು ಮನವೆ'. 'ಮಾನವ ಜನ್ಮ ದೊಡ್ಡದು, ಅದ ಹಾನಿಮಾಡಲು ಬೇಡಿ ಹುಚ್ಚಪ್ಪಗಳಿರಾ' 'ಈಸಬೇಕು, ಇದ್ದು ಜೈಸಬೇಕು' ಎಂದೂ ಧನಾತ್ಮಕತೆಯನ್ನು ಬೋಧಿಸಿದರು. ನಾವಿರುವಲ್ಲಿ ಕಸದ ಗುಂಡಿಯೂ ಇದೆ, ಗುಲಾಬಿ ತೋಟವೂ ಇದೆ. ಯಾಕೆ ಕಸದ ಗುಂಡಿಯ ಪಕ್ಕದಲ್ಲಿ ನಿಂತು ಕೊಳಕು ವಾಸನೆ ಎಂದು ಗೊಣಗಬೇಕು? ಎದ್ದು ಗುಲಾಬಿ ತೋಟಕ್ಕೆ ಹೋಗಿ ಹೂಗುಚ್ಛ ಮಾಡಿಕೊಂಡು ಸಂಭ್ರಮ ಪಡೋಣ. ❖

ಗುಂಡಣ್ಣ



ದಿನ ಭವಿಷ್ಯ

ಮಂಗಳವಾರ 23 ಮಾರ್ಚ್ 2021

ಶಾರ್ವರಿ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ಫಾಲ್ಗುಣ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ಉತ್ತರಭಾದ್ರ ದಶಮೀ ಗಂ. 58-4 (ಬೆ.ಘ್ರಾ. 5-43) ಮಂಗಳವಾರ ನಿತ್ಯ ನಕ್ಷತ್ರ ಪುನರ್ವಸು ಗಂ. 29-56 (ಸಾ. 6-27) ಶೋಭನ ನಾಮ ಯೋಗ ಗಂ. 5-52 ತೈತಲ ಕರಣ ಗಂ. 27-28 ವಿಷ ಶೇಷ ಗಂ 2-42 ವಿಷ ಗಂ. 50-42 ಅಮೃತ ಗಂ. 22-46 : ರಾಹುಕಾಲ: ಮ. ಗಂ. 3-00 ರಿಂದ 4-30 ಗುಳಿಕ ಕಾಲ ಮ. ಗಂ 12-00 ರಿಂದ 1-30 ಯಮಗಂಡ ಕಾಲ ಬೆ. ಗಂ 9-00 ರಿಂದ 10-30 ಸೂರ್ಯೋದಯ: 6-27 ಸೂರ್ಯಾಸ್ತ: 6-27 ಅದೃಷ್ಟ ಸಂಖ್ಯೆ 1

ಮೇಷ: ನಿರಾಯಾಸವಾಗಿ ಕೆಲಸ ಕಾರ್ಯಗಳನ್ನು ಸಾಧಿಸಲಿದ್ದೀರಿ. ಸಂಘ ಸಂಸ್ಥೆಗಳ ಸಹಕಾರವು ದೊರೆತು ಕಾರ್ಯಾನುಕೂಲ. ಅಧ್ಯಯನಶೀಲರು ಮುನ್ನಡೆ ಕಂಡುಕೊಳ್ಳುವಿರಿ. ಮಾನಸಿಕ ಶಾಂತಿ, ನೆಮ್ಮದಿ ದೊರಕಲಿದೆ.

ವೃಷಭ: ವ್ಯಾಪಾರದಲ್ಲಿ ವಿಶೇಷ ಲಾಭ. ಪ್ರೀತಿಪಾತ್ರರ ಭೇಟಿಯಿಂದ ಮನಸ್ಸಿನಲ್ಲಿ ಉಂಟಾದ ಆತಂಕಗಳು ಶಮನ. ಉದ್ಯೋಗದಲ್ಲಿರುವವರಿಗೆ ಸ್ವಲ್ಪಮಟ್ಟಿನ ಕಿರಿಕಿರಿ ಸಾಧ್ಯತೆ.

ಮಿಥುನ: ವ್ಯವಹಾರದಲ್ಲಿರುವವರಿಗೆ ಸ್ವಲ್ಪಮಟ್ಟಿನ ಹಿನ್ನಡೆ. ವಿನಾಕಾರಣ ಮನೆ ಮಂದಿಯೊಂದಿಗಿನ ದುಡುಕಿನಿಂದಾಗಿ ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮ. ಸಂಗಾತಿಯ ಸಮಾಧಾನದಿಂದ ಅನುಕೂಲಕರ ವಾತಾವರಣ.

ಕರ್ಕಾಟಕ: ನಿರೀಕ್ಷೆಯಂತೆ ನಿತ್ಯದ ಕೆಲಸ ಕಾರ್ಯಗಳು ಸಾಗಿ ಜೀವನಾಧಾರ ಮೂಡಿಸಲಿದೆ. ಕ್ರೀಡಾಪಟುಗಳಿಗೆ ಯಶಸ್ಸಿನ ದಿನವಾಗಲಿದೆ. ವಿದ್ಯಾರ್ಥಿಗಳಿಗೆ ಉತ್ತಮ ಸಾಧನೆಗೆ ಅನುಕೂಲ. ಆರೋಗ್ಯದಲ್ಲಿ ಸುಧಾರಣೆ.

ಸಿಂಹ: ಹೊಸ ವಾಹನವೊಂದರ ಖರೀದಿ ಮಾಡುವ ಸಲುವಾಗಿ ಮಿತ್ರರೊಂದಿಗೆ ಚರ್ಚೆ. ಜಮೀನು ಅಥವಾ ನಿವೇಶನ ಖರೀದಿ ಮಾಡುವ ಆಲೋಚನೆ ಕೈಗೂಡುವ ಸಾಧ್ಯತೆ. ಅಲ್ಪ ಪ್ರಮಾಣದ ಕಿರಿಕಿರಿ ಉಂಟಾದೀತು.

ಕನ್ಯಾ: ಬಹುದಿನಗಳಿಂದ ನಡೆಯುತ್ತಿದ್ದ ತಂಟೆ ತಕರಾರುಗಳು ಬಗೆಹರಿದು ನಿಶ್ಚಿಂತರಾಗಲಿದ್ದೀರಿ. ಕೋಪ ತಾಪಗಳಿಂದಾಗಿ ವ್ಯವಹಾರದಲ್ಲಿ ಹಿನ್ನಡೆ. ಅಹಿತಕರ ಘಟನೆಗಳಿಗೆ ಆಸ್ಪದವಾಗದಂತೆ ಎಚ್ಚರಿಕೆ ವಹಿಸಿ.

ತುಲಾ: ಉದ್ಯೋಗದಲ್ಲಿ ಒತ್ತಡದ ವಾತಾವರಣದಿಂದಾಗಿ ಮಾನಸಿಕ ಚಂಚಲತೆ. ಲೇವಾದೇವಿ ವ್ಯವಹಾರಸ್ಥರಿಗೆ ಹಿನ್ನಡೆ. ಮಕ್ಕಳೊಂದಿಗೆ ವೃಥಾ ವಾಗ್ವಾದ ಸಲ್ಲದು. ಆರೋಗ್ಯದ ಕಡೆ ಗಮನ ವಹಿಸುವುದು ಅಗತ್ಯ.

ವೃಶ್ಚಿಕ: ಧೈರ್ಯದ ನಡೆಯಿಂದಾಗಿ ಕಾರ್ಯ ಕಲಾಪಗಳು ಸರಾಗವಾಗಿ ಸಾಗಲಿವೆ. ವ್ಯಾಪಾರದಲ್ಲಿ ತೊಡಗಿರುವವರ ಲಾಭದಲ್ಲಿ ವೃದ್ಧಿ. ಆತ್ಮೀಯರೊಂದಿಗೆ ಸಮಾಲೋಚನೆಯಲ್ಲಿ ಭಾಗವಹಿಸಲಿದ್ದೀರಿ.

ಧನು: ಹೊಸ ಹೊಸ ವಿಚಾರಗಳ ಬಗ್ಗೆ ಹಿರಿಯರೊಂದಿಗೆ ಚರ್ಚಿಸಿ ಮುಂದುವರೆಯುವುದರಿಂದ ಯಶಸ್ಸು. ಸಂತೋಷದ ಸುದ್ದಿಯೊಂದನ್ನು ಕೇಳಲಿದ್ದೀರಿ. ಸಾಮಾಜಿಕ ಗೌರವಾದರಗಳು ಪ್ರಾಪ್ತಿ.

ಮಕರ: ನಿರ್ಧಾರಗಳನ್ನು ತೆಗೆದುಕೊಳ್ಳುವಲ್ಲಿ ಆಸಲ್ಯ ಮನೋಭಾವ ಸಲ್ಲದು. ಕೆಲಸ ಕಾರ್ಯಗಳಲ್ಲಿ ಸ್ವಲ್ಪಮಟ್ಟಿನ ಅಡಚಣೆ ಸಾಧ್ಯತೆ. ನಿಮ್ಮ ತಪ್ಪುಗಳು ಅರಿವಾಗುವುದರಿಂದ ಹಳೆಯ ವೈಷಮ್ಯಗಳು ದೂರ.

ಕುಂಭ: ಉದ್ಯೋಗದಲ್ಲಿ ಪ್ರಗತಿ. ಆರೋಗ್ಯದಲ್ಲಿ ವ್ಯತ್ಯಯ. ಪ್ರೀತಿಪಾತ್ರರೊಬ್ಬ ಭೇಟಿಯಿಂದಾಗಿ ಮಾನಸಿಕ ನೆಮ್ಮದಿ. ಲೇವಾದೇವಿ ವ್ಯವಹಾರಸ್ಥರಿಗೆ ಉತ್ತಮ ಲಾಭ ತರುವ ದಿನವಾಗಿದೆ.


ಮೀನ: ದೃಢ ನಿರ್ಧಾರವೊಂದನ್ನು ತೆಗೆದುಕೊಳ್ಳಲಿದ್ದೀರಿ. ಉದ್ಯೋಗಸ್ಥರಿಗೆ ಬಡ್ತಿ ಅಥವಾ ಉನ್ನತಿಯನ್ನು ನಿರೀಕ್ಷಿಸಬಹುದು. ವ್ಯಾಪಾರದಲ್ಲಿ ಮುನ್ನಡೆ ಸಾಧಿಸಲಿದ್ದೀರಿ. ಹಿತೈಷಿಗಳೊಬ್ಬರ ಆಗಮನ ಸಾಧ್ಯತೆ.

ನಿಮ್ಮ ಜನ್ಮದಿನ 23-ಮಾರ್ಚ್ ಈ ದಿನವು ಅತ್ಯಂತ ಶುಭಕರವಾಗಿದ್ದು, ಸಮಾರಂಭಗಳಲ್ಲಿ ಗಣ್ಯವ್ಯಕ್ತಿಗಳಾಗಿ ವಿಜೃಂಭಿಸುವ ಅವಕಾಶಗಳು ಒದಗಿಬರಲಿವೆ. ವ್ಯಾವಹಾರಿಕ ಹಿನ್ನಡೆ ಉಂಟಾಗುವ ಸಾಧ್ಯತೆ. ಮಕ್ಕಳ ಪ್ರಗತಿಯಿಂದಾಗಿ ನೆಮ್ಮದಿಯನ್ನು ಕಾಣುವಿರಿ. ಆದಾಯದಲ್ಲಿ ಹೆಚ್ಚಳವನ್ನು ನಿರೀಕ್ಷಿಸಬಹುದು. ಷೇರುಪೇಟೆಯಲ್ಲಿ ಹೂಡಿದ ಹಣಕ್ಕೆ ಅತ್ಯಧಿಕ ಲಾಭ ದೊರಕಲಿದೆ.

ಪದಬಂಧ 4545 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಈತ ಸುತ್ತಾಡುವ ಸ್ವಭಾವದವನು (4)
3.ಹೀಗೆ ವಾಸನೆ ನೋಡು! (4)
5.ಜನನಿ ನುಡಿದಿರುವ ಸತ್ಯ (2)
7.ಈತ ತಿರುಪೆ ಬೇಡುವವನು (3)
8.ಹಂತಕನೇರಿದ ಮೆಟ್ಟಿಲು (2)
9.ಜಾಲಂಧ್ರದ ಹತ್ತಿರವಿರಿಸಿದ ಬಲೆ (2)
10.ಸುರನ ಬಳಿಯಿರುವ ರಾಕ್ಷಸ (3)
12.ಕರ್ತಾರನ ಕೈಯಿದು (2)
14.ಮನುಷ್ಯನ ಆಕಾರ (4)
15.ಒಬ್ಬೊಬ್ಬರಿಗೆ ಸಂಬಂಧಪಟ್ಟದ್ದು (4)

ಮೇಲಿಂದ ಕೆಳಕ್ಕೆ
1.ಸ್ಮರಣ ಶಕ್ತಿ ಚನ್ನಾಗಿರುವವ (4)
2.ಕನ್ನಡಿಗ ಪಡೆದುಕೊಂಡ ರಿಬೇಟ್ (4)
3.ಪರಲೋಕಕ್ಕೆ ಸಂಬಂಧಿಸಿದ್ದು (4)
4.ಚನ್ನಾಗಿ ಕಾಪಾಡಿದುದು (4)
6.ಜಲದಲ್ಲಿ ಸಂಕೀರ್ಣ (3)
8.ಆತಂಕ ಹುಟ್ಟಿಸಿದ ಕೊಲೆಗಾರ (3)
9.ಬುದ್ಧಿವಂತಿಕೆಯಿದು! (4)
10.ಬುದ್ಧಿ ಇಟ್ಟುಕೊಂಡೇ ನೀಡಿದ ಒಪ್ಪಿಗೆ! (4)
11.ರಾತ್ರಿಯ ಒಡೆಯನಿವನು (4)
13.ಬೆಲೆಯುಳ್ಳ ಮಣಿಗಳನ್ನೊಳಗೊಂಡಿರುವ ಸಮುದ್ರ (4)



4544ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 2.ಮಾರ್ಗದರ್ಶಕ 4.ಅಧಮ 5.ಪಿಶಾಚಿ 9.ಯತ್ನ 10.ದಬ್ಬಣ 11.ಕೂಪ 12.ನನಸು 14.ಕಾದಾಟ 15.ಮರ್ಮಭೇದಕ

ಮೇಲಿಂದ ಕೆಳಕ್ಕೆ: 1.ಕಂದ 2.ಮಾಮ 3.ಕಪಿ 4.ಅಭಯದಾನ 6.ಚಿತ್ತಪಲ್ಲಟ 7.ಕುಂದಣ 8.ಬಾಣಸಿ 13.ಸುಮ 14.ಕಾಕ 16.ಭೇಟಿ

ಸುಡೊಕು 4931

	1		3		8		2	
8		6		2		5		3
	5		4		6		7	
5			1		2		4	
	2	9						
6			8		9	2		5
	8		6		1		9	
7		2		8		3		1
	6		2		3		5	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

4930 ಸುಡೊಕು

2	9	4	1	5	6	7	8	3
6	1	7	3	8	4	5	2	9
8	5	3	7	2	9	4	1	6
3	2	9	5	4	1	6	7	8
7	6	8	2	9	3	1	4	5
5	4	1	6	7	8	9	3	2
1	7	6	8	3	5	2	9	4
4	3	5	9	1	2	8	6	7
9	8	2	4	6	7	3	5	1

ಕೋವಿಡ್ ಎರಡನೇ ಅಲೆ: ಲಸಿಕೆ ಅಭಿಯಾನ ಚುರುಕು– ಸೋಂಕು ವ್ಯಾಪಕವಾಗದಂತೆ ಕ್ರಮ

ಆತಂಕ ಬೇಕಿಲ್ಲ; ಎಚ್ಚರ ತಪ್ಪಂಗಿಲ್ಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಎರಡನೇ ಅಲೆ ಪ್ರಾರಂಭವಾಗಿದೆ. ಆದರೆ ಸಾರ್ವಜನಿಕರು ಅಗತ್ಯ ಮುನ್ನೆಚ್ಚರಿಕೆ ವಹಿಸಿದರೆ ಆತಂಕ ಪಡುವ ಅಗತ್ಯವಿಲ್ಲ ಎಂದು ಜಯದೇವ ಹೃದ್ರೋಗ ಸಂಸ್ಥೆ ನಿರ್ದೇಶಕ ಡಾ.ಸಿ.ಎನ್. ಮಂಜುನಾಥ್ ಅಭಯ ನೀಡಿದರೆ, ಸೋಂಕು ವ್ಯಾಪಕವಾಗಿ ಹರಡದಂತೆ ಸರ್ಕಾರ ಎಲ್ಲ ಕ್ರಮಗಳನ್ನು ಕೈಗೊಂಡಿದೆ. ಲಸಿಕೆ ಅಭಿಯಾನವನ್ನು ಮತ್ತಷ್ಟು ಚುರುಕುಗೊಳಿಸಲಾಗಿದೆ ಎಂದು ಆರೋಗ್ಯ ಇಲಾಖೆ ಆಯುಕ್ತ ಡಾ. ಕೆ.ವಿ. ತ್ರಿಲೋಕ್ ಚಂದ್ರ ತಿಳಿಸಿದರು.

‘ಪ್ರಜಾವಾಣಿ’ ವತಿಯಿಂದ ಸೋಮವಾರ ಏರ್ಪಡಿಸಿದ್ದ ಫೇಸ್‌ಬುಕ್ ಸಂವಾದದಲ್ಲಿ ಈ ಇಬ್ಬರು ತಜ್ಞರು ಕೋವಿಡ್ ಕುರಿತು ಅಮೂಲ್ಯ ಸಲಹೆಗಳನ್ನು ಹಂಚಿಕೊಂಡರು.


‘ವಾರದಲ್ಲಿ 12 ಲಕ್ಷ ಡೋಸ್ ಪೂರೈಕೆ’

‘ಎರಡನೇ ಅಲೆ ತೀವ್ರಗೊಳ್ಳದಂತೆ ಎಲ್ಲ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಲಾಗುತ್ತದೆ. ಈವರೆಗೆ 25 ಲಕ್ಷ ಜನರಿಗೆ ಕೋವಿಡ್ ಲಸಿಕೆ ವಿತರಿಸಿದ್ದು, ಈಗ ದಿನಕ್ಕೆ 2 ಲಕ್ಷ ಜನ ಲಸಿಕೆ ಪಡೆಯುತ್ತಿದ್ದಾರೆ. ಒಂದು ವಾರದಲ್ಲಿ 12 ಲಕ್ಷ ಡೋಸ್ ಪೂರೈಕೆಯಾಗಲಿದೆ’ ಎಂದು ತ್ರಿಲೋಕ್‌ಚಂದ್ರ ಹೇಳಿದರು.

‘ನೆರೆಯ ಮಹಾರಾಷ್ಟ್ರದಲ್ಲಿ ದಿನಕ್ಕೆ 10 ಸಾವಿರ, ಕೇರಳದಲ್ಲಿ 3 ಸಾವಿರ ಪ್ರಕರಣಗಳು ವರದಿಯಾಗುತ್ತಿವೆ. ಈ ನಿಟ್ಟಿನಲ್ಲಿ ಹೊರರಾಜ್ಯದಿಂದ ಬರುವವರಿಗೆ ಕೋವಿಡ್ ನೆಗೆಟಿವ್ ವರದಿ ಪ್ರದರ್ಶಿಸುವುದು ಕಡ್ಡಾಯ ಮಾಡಲಾಗಿದೆ. ಗಡಿ ಪ್ರದೇಶಗಳಲ್ಲಿ ಆರ್‌ಟಿ–ಪಿಸಿಆರ್ ಪರೀಕ್ಷೆ ನಡೆಸುವುದು ತೀವ್ರಗೊಳಿಸಲಾಗಿದೆ’ ಎಂದರು.

‘ಪ್ರತಿ ದಿನ ಒಂದು ಲಕ್ಷ ಕೋವಿಡ್ ಪರೀಕ್ಷೆ ಮಾಡಲಾಗುತ್ತಿದೆ. ಕೋವಿಡ್ ರೋಗಿಗಳ ಚಿಕಿತ್ಸೆಗಾಗಿ ಆಸ್ಪತ್ರೆಗಳಲ್ಲಿ ಹೆಚ್ಚಿನ ಹಾಸಿಗೆಗಳನ್ನು ಮೀಸಲಿಡಲಾಗುತ್ತಿದೆ. ಎಲ್ಲ ಸರ್ಕಾರಿ ಆಸ್ಪತ್ರೆಗಳಲ್ಲಿಯೂ ತೀವ್ರ ನಿಗಾ ಘಟಕಗಳ ವ್ಯವಸ್ಥೆ ಮಾಡಲಾಗುತ್ತಿದೆ’ ಎಂದರು.

‘ಕೊರೊನಾ ಪಾಸಿಟಿವ್ ಇದ್ದವರೂ ಸಾರ್ವಜನಿಕ ಸ್ಥಳಗಳಲ್ಲಿ ಓಡಾಡುತ್ತಿರುವುದು ಸಮಸ್ಯೆಯನ್ನು ಉಂಟು ಮಾಡುತ್ತಿದೆ. ಇಂಥವರ ವಿರುದ್ಧ ಸಾಂಕ್ರಾಮಿಕ ರೋಗ ತಡೆ ಕಾಯ್ದೆಯಡಿ ಕಠಿಣ ಕ್ರಮ ಕೈಗೊಳ್ಳಲಾಗುತ್ತದೆ’ ಎಂದು ತಿಳಿಸಿದರು.



ಡಾ.ಕೆ.ವಿ. ತ್ರಿಲೋಕ ಚಂದ್ರ

‘ಯಾವುದೇ ಸೋಂಕಿನ ಲಕ್ಷಣ ಇರದವರಲ್ಲಿ ಕೋವಿಡ್ ದೃಢಪಟ್ಟಿದ್ದರೆ ಅವರು ಹೆಚ್ಚು ಅಪಾಯಕಾರಿ. ಸೋಂಕು ತಗುಲಿರುವ ಬಗ್ಗೆ ಸಣ್ಣ ಅನುಮಾನ ಬಂದರೂ ಪರೀಕ್ಷೆಗೆ ಒಳಗಾಗಬೇಕು. ಈಗ ಸರ್ಕಾರಿ ಆಸ್ಪತ್ರೆಗಳಲ್ಲಿ ಅಥವಾ ಲಸಿಕೆ ವಿತರಿಸುವ ನಿರ್ದಿಷ್ಟ ಆಸ್ಪತ್ರೆಗಳಿಗೆ ನೇರವಾಗಿ ಹೋಗಿ ಲಸಿಕೆ ಪಡೆಯಬಹುದಾಗಿದೆ. ಆನ್‌ಲೈನ್ ನೋಂದಣಿ ಮಾಡಿಸಿಕೊಳ್ಳುವ ಅವಶ್ಯಕತೆಯೂ ಇಲ್ಲ. ಆಧಾರ್ ಕಾರ್ಡ್ ತೆಗೆದುಕೊಂಡು ಹೋಗಿ ತೋರಿಸಿದರೆ ಆ ಕ್ಷಣದಲ್ಲಿಯೇ ಲಸಿಕೆ ಹಾಕಲಾಗುತ್ತಿದೆ’ ಎಂದು ಮಾಹಿತಿ ನೀಡಿದರು.

‘ಚಿತ್ರಮಂದಿರಗಳ ಪ್ರವೇಶಕ್ಕೆ ನಿರ್ಬಂಧ ವಿಧಿಸಬೇಕೇ ಬೇಡವೇ ಎಂಬ ಬಗ್ಗೆ ಚರ್ಚೆ ನಡೆದಿದೆ. ಎರಡು ಮೂರು ದಿನಗಳಲ್ಲಿ ಸರ್ಕಾರ ಅಂತಿಮ ತೀರ್ಮಾನ ಕೈಗೊಳ್ಳಲಿದೆ’ ಎಂದೂ ಅವರು ಹೇಳಿದರು.

‘ಸಾಮಾಜಿಕ ಜವಾಬ್ದಾರಿ ತೋರುವ ಸಮಯ’

ತೀವ್ರಗತಿಯಲ್ಲಿ ಏರುತ್ತಿದ್ದ ಕೋವಿಡ್ ಪ್ರಕರಣಗಳು ಕಡಿಮೆಯಾಗಿ, ಮತ್ತೆ ಹೆಚ್ಚಾಗುವುದಕ್ಕೆ ಅಲೆ ಎನ್ನುತ್ತಾರೆ. ನಾಲ್ಕು ತಿಂಗಳಲ್ಲಿ ಕಡಿಮೆಯಾಗಿದ್ದು, ಈಗಜಾಸ್ತಿಯಾಗಿರುವ ಕಾರಣ ಎರಡನೇ ಅಲೆ ಪ್ರಾರಂಭವಾಗಿದೆ ಎನ್ನಬಹುದು. ವಿವಾಹದಂತಹ ಸಾಮಾಜಿಕ ಕಾರ್ಯಕ್ರಮಗಳನ್ನು, ಜಾತ್ರೆಗಳನ್ನು, ರಂಜಾನ್ ಸಂದರ್ಭದಲ್ಲಿ ಸಾಮೂಹಿಕ ಪ್ರಾರ್ಥನೆಯನ್ನು ನಿರ್ಬಂಧಿಸುವ ಅವಶ್ಯಕತೆ ಈಗ ಹೆಚ್ಚಿದೆ’ ಎಂದು ಮಂಜುನಾಥ್ ಹೇಳಿದರು.

‘ಯಾವುದೇ ವೈರಸ್ ಆರು ತಿಂಗಳು ಅಥವಾ 9 ತಿಂಗಳಲ್ಲಿ ರೂಪಾಂತರ ಹೊಂದುತ್ತಿರುತ್ತದೆ. ಒಂದು ವರ್ಷದಲ್ಲಿ ಹಲವು ಪಾಠ ಕಲಿತಿದ್ದೇವೆ. ನಮ್ಮ ಆರೋಗ್ಯದ ಜೊತೆಗೆ ಸಮಾಜದ ಆರೋಗ್ಯವನ್ನೂ ರಕ್ಷಿಸಬೇಕಾದ ಸಮಯ ಈಗ ಬಂದಿದೆ. ಮೊದಲು ನಗರ ಪ್ರದೇಶದಲ್ಲಿ ಪ್ರಕರಣಗಳ ಸಂಖ್ಯೆ ಹೆಚ್ಚುತ್ತದೆ. ಒಂದೂವರೆ ತಿಂಗಳಲ್ಲಿ ಹಳ್ಳಿಗಳನ್ನೂ ಸೋಂಕು ಹೆಚ್ಚು ಬಾಧಿಸಲಿದೆ. ಇನ್ನು ಎರಡು–ಮೂರು ವಾರಗಳಲ್ಲಿ ಇದು ಯಾವ ಹಂತಕ್ಕೆ ಹೋಗುತ್ತದೆ ಎಂಬುದು ತಿಳಿಯಲಿದೆ’ ಎಂದರು.

‘ಲಂಡನ್, ಪ್ಯಾರಿಸ್‌ನಂತಹ ಮಹಾನಗರಗಳಲ್ಲಿ ತೀವ್ರ ನಿಗಾ ಘಟಕಗಳೆಲ್ಲ ಈಗಾಗಲೇ ಭರ್ತಿಯಾಗಿವೆ. ಅಲ್ಲಿ ಮೂರನೇ ಹಂತದ ಲಾಕ್‌ಡೌನ್ ಘೋಷಿಸಲಾಗಿದೆ. ಗುಂಪು–ಗುಂಪಾಗಿ ಸೇರಬಾರದು ಮತ್ತು ಕಡ್ಡಾಯವಾಗಿ ಮಾಸ್ಕ್ ಧರಿಸುವಂತಹ ಕ್ರಮಗಳಿಂದ ಈ ಸ್ಥಿತಿಯನ್ನು ರಾಜ್ಯದಲ್ಲಿ ನಿಯಂತ್ರಿಸಬಹುದಾಗಿದೆ’ ಎಂದರು.

‘ಕೋವಿಶೀಲ್ಡ್ ಅಥವಾ ಕೋವ್ಯಾಕ್ಸಿನ್ ತೆಗೆದುಕೊಂಡರೆ ಯಾವುದೇ ಅಡ್ಡ ಪರಿಣಾಮ ಆಗುವುದಿಲ್ಲ. ಆ ಕ್ಷಣಕ್ಕೆ ಸುಸ್ತು ಅಥವಾ ತಲೆನೋವು ಕಾಣಿಸಿಕೊಂಡರೆ ಅದು ಪರಿಣಾಮವೇ ಹೊರತು ಅಡ್ಡಪರಿಣಾಮವಲ್ಲ. ಯಾವುದೇ ಲಸಿಕೆ ತೆಗೆದುಕೊಂಡರೂ ಈ ರೀತಿಯ ಲಕ್ಷಣಗಳು ಕಾಣಿಸಿಕೊಳ್ಳುತ್ತವೆ. ಲಸಿಕೆ ತೆಗೆದುಕೊಂಡಾಗ ದಿಢೀರ್ ಸಾವು ಸಂಭವಿಸಿದರೆ ಅದಕ್ಕೆ ಅಡ್ಡಪರಿಣಾಮ ಎನ್ನಬಹುದು’ ಎಂದು ವಿವರಿಸಿದರು.

‘ಕೋವಿಶೀಲ್ಡ್ ಲಸಿಕೆ ತೆಗೆದುಕೊಂಡಾಗ 13ಕ್ಕೂ ಹೆಚ್ಚು ಜನರು ಸಾವಿಗೀಡಾದರು ಎಂಬ ಕಾರಣ ನೀಡಿ 17 ದೇಶಗಳಲ್ಲಿ ಈ ಲಸಿಕೆಯನ್ನು ಹಿಂತೆಗೆದುಕೊಳ್ಳಲಾಯಿತು. ಆದರೆ, ಸುಮಾರು 10 ಲಕ್ಷ ಜನ ಲಸಿಕೆ ಪಡೆದಾಗ ಹೃದಯಸಂಬಂಧಿ ಕಾಯಿಲೆ, ಪಾರ್ಶ್ವವಾಯು ಅಥವಾ ರಕ್ತನಾಳಗಳಲ್ಲಿ ರಕ್ತ ಹೆಪ್ಪುಗಟ್ಟುವಂತಹ ಸಮಸ್ಯೆ ಇರುವವರು ಸಾವಿಗೀಡಾಗಿರಬಹುದು. ಸಾಮಾನ್ಯ ದಿನಗಳಲ್ಲಿನ ಅಂಕಿ–ಅಂಶ ಪರಿಗಣಿಸಿದಾಗಲೂ ಇಂತಹ ಸಮಸ್ಯೆಗಳಿಂದ ನಿರ್ದಿಷ್ಟ ಸಂಖ್ಯೆ ಜನ ಸಾವಿಗೀಡಾಗಿರುತ್ತಾರೆ. ಆದರೆ, ಅದಕ್ಕೆ ಕೋವಿಡ್ ಲಸಿಕೆ ಕಾರಣ ಎಂದು ಹೇಳುವುದು ಸರಿಯಲ್ಲ’ ಎಂದರು.

‘ಲಾಕ್‌ಡೌನ್‌ನಂತಹ ಕ್ರಮಗಳನ್ನು ತೆಗೆದುಕೊಂಡರೆ ಕೋವಿಡ್‌ಗಿಂತ ಹಸಿವಿನಿಂದ ಸಾಯುವವರ ಸಂಖ್ಯೆಯೇ ಹೆಚ್ಚಾಗಬಹುದು. ಇಂತಹ ಪರಿಸ್ಥಿತಿ ಬರಬಾರದು ಎಂದರೆ ಜನರಲ್ಲಿ ಸಾಮಾಜಿಕ ಜವಾಬ್ದಾರಿ ಮೂಡುವುದು ಅಗತ್ಯ’ ಎಂದು ಅವರು ಪುನರುಚ್ಚರಿಸಿದರು.

ಸಂವಾದ ವೀಕ್ಷಿಸಲು–
https://www.facebook.com/prajavani.net

‘ರಕ್ತಹೆಪ್ಪುಗಟ್ಟುವಿಕೆ ನಿಯಂತ್ರಕ ಮಾತ್ರೆ ತೆಗೆದುಕೊಳ್ಳಬಹುದು’

‘ಹೃದಯ ಸಂಬಂಧಿ ಕಾಯಿಲೆ ಹೊಂದಿರುವವರು ಆಸ್ಪಿರಿನ್ ಅಥವಾ ಡಿಸ್ಪ್ರಿನ್‌ನಂತಹ ರಕ್ತಹೆಪ್ಪುಗಟ್ಟುವಿಕೆ ನಿಯಂತ್ರಿಸುವ ಮಾತ್ರೆಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಕೋವಿಡ್ ಲಸಿಕೆ ಹಾಕಿಸಿಕೊಳ್ಳುವವರು ಈ ಮಾತ್ರೆಗಳನ್ನು ತೆಗೆದುಕೊಂಡರೆ ಅಪಾಯ ಎಂಬ ತಪ್ಪು ಕಲ್ಪನೆ ಹಬ್ಬಿದೆ. ಲಸಿಕೆ ಹಾಕಿಸಿಕೊಳ್ಳುವುದಕ್ಕೂ ಈ ಮಾತ್ರೆಗೂ ಯಾವುದೇ ಸಂಬಂಧವಿಲ್ಲ. ಧಾರಾಳವಾಗಿ ಈ ಮಾತ್ರೆಗಳನ್ನು ತೆಗೆದುಕೊಳ್ಳಬಹುದು’ ಎಂದು ಡಾ. ಮಂಜುನಾಥ್ ಹೇಳಿದರು.

‘ಕೋವಿಡ್ ಲಸಿಕೆಯನ್ನು ಗರ್ಭಿಣಿಯರು ಮತ್ತು ಬಾಣಂತಿಯರ ಮೇಲೆ ಪ್ರಯೋಗ ಮಾಡಿಲ್ಲವಾದ ಕಾರಣ ಈ ಮಹಿಳೆಯರಿಗೆ ಲಸಿಕೆ ನೀಡಲಾಗುತ್ತಿಲ್ಲ’ ಎಂದು ತಿಳಿಸಿದರು.



ಡಾ.ಸಿ.ಎನ್. ಮಂಜುನಾಥ್

ಶಿಕ್ಷಣ ಸಚಿವ ಎಸ್. ಸುರೇಶ್ ಕುಮಾರ್

‘ಆನ್‌ಲೈನ್ ಶಿಕ್ಷಣ ನಿಯಮಬಾಹಿರವಾಗಿ ನಡೆಯುತ್ತಿರುವ ಬಗ್ಗೆ ಕ್ರಮಕ್ಕೆ ಮುಂದಾದರೆ, ಖಾಸಗಿ ಶಾಲೆಗಳು ಹೈಕೋರ್ಟ್‌ನಿಂದ ತಡೆಯಾಜ್ಞೆ ತರುವ ಸಾಧ್ಯತೆಗಳಿವೆ’ ಎಂದರು.

‘ಆನ್‌ಲೈನ್ ಶಿಕ್ಷಣದಿಂದ ಮಕ್ಕಳ ಕಣ್ಣಿನ ಮೇಲೆ ಪರಿಣಾಮ’

ಬೆಂಗಳೂರು: ‘ಆನ್‌ಲೈನ್ ಶಿಕ್ಷಣದಿಂದ ಮಕ್ಕಳ ಕಣ್ಣಿನ ಮೇಲೆ ಪರಿಣಾಮ ಬೀರುತ್ತಿರುವ ವಿಷಯ ಗಮನಕ್ಕೆ ಬಂದಿದೆ. ಈ ಬಗ್ಗೆ ಆರೋಗ್ಯ ಸಚಿವರ ಜತೆ ಚರ್ಚಿಸಿ ಪರಿಹಾರ ಕಂಡುಕೊಳ್ಳಲಾಗುವುದು’ ಎಂದು ಶಿಕ್ಷಣ ಸಚಿವ ಎಸ್. ಸುರೇಶ್ ಕುಮಾರ್ ಹೇಳಿದರು.

ವಿಧಾನ ಪರಿಷತ್‌ನಲ್ಲಿ ಕಾಂಗ್ರೆಸ್ಸಿನ ಯು.ಬಿ. ವೆಂಕಟೇಶ್ ಅವರ ಪ್ರಶ್ನೆಗೆ ಉತ್ತರಿಸಿದ ಅವರು, ‘ಖಾಸಗಿ ಶಾಲೆಗಳು ಎಲ್‌ಕೆಜಿ, ಯುಕೆಜಿ ಮಕ್ಕಳಿಗೂ ಆನ್‌ಲೈನ್ ಶಿಕ್ಷಣ ಆರಂಭಿಸಿವೆ. ಆನ್‌ಲೈನ್ ಶಿಕ್ಷಣದಿಂದ ಮಕ್ಕಳ ಮೇಲೆ ಪರಿಣಾಮ ಬೀರುತ್ತಿರುವ ಬಗ್ಗೆ ಪೋಷಕರಿಂದ ದೂರುಗಳು ಬರುತ್ತಿವೆ’ ಎಂದರು.



‘ಆನ್‌ಲೈನ್ ಶಿಕ್ಷಣದಿಂದಾಗಿ ಮಕ್ಕಳು ಕಣ್ಣು ಮಿಟುಕಿಸಲೂ ಆಗದಂಥ ಸ್ಥಿತಿ ಬಂದಿದೆ. ಹಲವು ಪೋಷಕರು ತಮ್ಮ ಮಕ್ಕಳ ಕಣ್ಣಿನ ಪರೀಕ್ಷೆ ಮಾಡಿಸುತ್ತಿದ್ದಾರೆ. ಆನ್‌ಲೈನ್ ಶಿಕ್ಷಣ ವ್ಯವಸ್ಥೆಯ ಜೊತೆಗೆ ಮಕ್ಕಳ ಕಣ್ಣಿನ ಕಡೆಗೂ ಸರ್ಕಾರ ಗಮನ ನೀಡಲಿ. ತಾಲ್ಲೂಕು ಮಟ್ಟದಲ್ಲಿ ಕಣ್ಣಿನ ಪರೀಕ್ಷೆಗೆ ಬೇಕಾದ ವ್ಯವಸ್ಥೆ ಮಾಡಬೇಕು’ ಎಂದು ವೆಂಕಟೇಶ್ ಸಲಹೆ ನೀಡಿದರು.

‘ಆನ್‌ಲೈನ್ ಶಿಕ್ಷಣ ಮಕ್ಕಳ ಹಕ್ಕು ಎಂದು ಹೈಕೋರ್ಟ್ ಹೇಳಿದ್ದರಿಂದ ಸರ್ಕಾರ, ತಜ್ಞರ ಸಮಿತಿ ನೇಮಿಸಿತ್ತು. ಆ ಸಮಿತಿಯ ಶಿಫಾರಸಿನಂತೆ ಆನ್‌ಲೈನ್ ಶಿಕ್ಷಣಕ್ಕೆ ಸರ್ಕಾರ ಸಮಯ ನಿಗದಿ ಮಾಡಿದೆ. ಆದರೆ ಕೆಲವು ಶಿಕ್ಷಣ ಸಂಸ್ಥೆಗಳು ಅದನ್ನು ಮೀರಿ ಆನ್‌ಲೈನ್ ಶಿಕ್ಷಣ ನೀಡುತ್ತಿವೆ. ಇದರಿಂದ ಮಕ್ಕಳ ಕಣ್ಣಿನ ಮೇಲೆ ಪರಿಣಾಮ ಬೀರುತ್ತಿದೆ’ ಎಂದು ಸುರೇಶ್ ಕುಮಾರ್ ಹೇಳಿದರು.



ನರ್ಸಿಂಗ್ ಕಾಲೇಜುಗಳಲ್ಲಿ ನಡೆದ ಅಕ್ರಮಗಳ ತನಿಖೆ ನಡೆಸುವಂತೆ ಒತ್ತಾಯಿಸಿ ವಿಧಾನ ಪರಿಷತ್‌ನಲ್ಲಿ ಜೆಡಿಎಸ್ ಸದಸ್ಯರು ಸೋಮವಾರ ಪ್ರತಿಭಟನೆ ನಡೆಸಿದರು –ಪ್ರಜಾವಾಣಿ ವಾರ್ತೆ

‘ಅನುಕಂಪದ ಆಧಾರದಲ್ಲಿ ಹುದ್ದೆ: ನಿಯಮ ಬದಲಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಖಾಸಗಿ ಅನುದಾನಿತ ಪದವಿ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವಾಗಲೇ ಮರಣ ಹೊಂದಿದವರ ಕುಟುಂಬದವರಿಗೆ ಅನುಕಂಪದ ಆಧಾರದಲ್ಲಿ ಉದ್ಯೋಗ ಕೊಡಲು ನಿಯಮ ಬದಲು ಸೇರಿದಂತೆ ಅಗತ್ಯ ಕ್ರಮ ತೆಗೆದುಕೊಳ್ಳಬೇಕು’ ಎಂದು ಉನ್ನತ ಶಿಕ್ಷಣ ಸಚಿವ ಡಾ. ಸಿ.ಎನ್. ಅಶ್ವತ್ಥನಾರಾಯಣ ಅವರಿಗೆ ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಸೂಚಿಸಿದರು.

ಬಿಜೆಪಿಯ ಅರುಣ ಶಹಾಪುರ ಅವರ ಪ್ರಶ್ನೆಗೆ ಉತ್ತರಿಸಿದ ಅಶ್ವತ್ಥನಾರಾಯಣ, ‘ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ಕರ್ತವ್ಯದಲ್ಲಿರುವಾಗ ಮರಣ ಹೊಂದಿದ ನೌಕರನ ಅವಲಂಬಿತರಿಗೆ ಅನುಕಂಪದ ಆಧಾರದಲ್ಲಿ ನೇಮಕಾತಿ ಮಾಡಲು ಕಾನೂನಿನಲ್ಲಿ ಅವಕಾಶ ಇಲ್ಲ’ ಎಂದರು.



ಬಸವರಾಜ ಹೊರಟ್ಟಿ

‘ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ 2001ರ ಮಾರ್ಚ್ 1 ನಂತರ ತೆರವಾಗುವ ಬೋಧಕೇತರ ಹುದ್ದೆಗಳು ಶಾಶ್ವತವಾಗಿ ಅನುದಾನರಹಿತವೆಂದು ಪರಿಗಣಿಸಲಾಗುತ್ತಿದೆ. ಹೀಗಾಗಿ, ಅನುಕಂಪ ಆಧಾರದಲ್ಲಿ ನೇಮಕಾತಿ ಮಾಡಿಕೊಳ್ಳಲು ನಿಯಮದಲ್ಲಿ ಅವಕಾಶ ಇಲ್ಲ’ ಎಂದು ಸ್ಪಷ್ಟಪಡಿಸಿದರು.

ಆಗ ಶಹಾಪುರ ಅವರ ಪರವಾಗಿ ಮಾತನಾಡಿದ ಹೊರಟ್ಟಿ, ‘ಇತರ ಎಲ್ಲ ಇಲಾಖೆಗಳಲ್ಲಿ ಅನುಕಂಪದ ಆಧಾರದಲ್ಲಿ ಹುದ್ದೆ ಭರ್ತಿ ಮಾಡಲು ಅವಕಾಶ ಇರುವಾಗ ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ಏಕಿಲ್ಲ. ಈ ಬಗ್ಗೆ ನಿಯಮ ಬದಲಿಸಲು ಕ್ರಮ ತೆಗೆದುಕೊಳ್ಳಿ’ ಎಂದು ಸಲಹೆ ನೀಡಿದರು.

ಮೀಸಲಾತಿ ನಿಗದಿಯಲ್ಲೂ ಗೊಂದಲ: ಅಸಮಾಧಾನ

ಕ್ಷೇತ್ರ ಪುನರ್‌ವಿಂಗಡಣೆ ಅವೈಜ್ಞಾನಿಕ: ಆಕ್ಷೇಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಿಲ್ಲಾ ಪಂಚಾಯಿತಿ ಹಾಗೂ ತಾಲ್ಲೂಕು ಪಂಚಾಯಿತಿ ಕ್ಷೇತ್ರಗಳ ಪುನರ್‌ವಿಂಗಡಣೆ ಹಾಗೂ ಮೀಸಲಾತಿ ನಿಗದಿ ಅವೈಜ್ಞಾನಿಕವಾಗಿದೆ ಎಂದು ಶಾಸಕರು ಆಕ್ಷೇಪ ವ್ಯಕ್ತಪಡಿಸಿದರು.

ವಿಧಾನಸಭೆಯಲ್ಲಿ ಸೋಮವಾರ ಶೂನ್ಯವೇಳೆಯಲ್ಲಿ ವಿಷಯ ಪ್ರಸ್ತಾಪಿಸಿದ ಬಿಜೆಪಿಯ ವಿ.ಸುನಿಲ್ ಕುಮಾರ್, ‘ಜನಸಂಖ್ಯೆಗೆ ಅನುಗುಣವಾಗಿ ಕ್ಷೇತ್ರಗಳ ಮರುವಿಂಗಡಣೆ ಮಾಡಲಾಗುತ್ತಿದೆ. ಇದರಿಂದಾಗಿ ಕೆಲವು ಕಡೆಗಳಲ್ಲಿ ತಾಲ್ಲೂಕು ಪಂಚಾಯಿತಿ ಕ್ಷೇತ್ರಗಳ ಸಂಖ್ಯೆ ಜಾಸ್ತಿ ಆಗುತ್ತದೆ. ಕೆಲವು ಕಡೆಗಳಲ್ಲಿ ಕ್ಷೇತ್ರಗಳು ಕಡಿಮೆ ಆಗುತ್ತವೆ. ಮಲೆನಾಡಿನಲ್ಲಿ ಮತ್ತಷ್ಟು ಸಮಸ್ಯೆ ಆಗುತ್ತಿದೆ’ ಎಂದು ಗಮನ ಸೆಳೆದರು.



ವಿಧಾನ ಮಂಡಲದಲ್ಲಿ

ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ, ‘ಕೆಲವು ಕಡೆಗಳಲ್ಲಿ ಕ್ಷೇತ್ರಗಳ ಸಂಖ್ಯೆ 13ರಿಂದ 11ಕ್ಕೆ ಇಳಿದಿದೆ. ಭೌಗೋಳಿಕ ವಿಂಗಡಣೆ ವೇಳೆ ಬಹಳ ಸಮಸ್ಯೆ ಸೃಷ್ಟಿಯಾಗಿದೆ. ಮೀಸಲಾತಿ ನಿಗದಿಯಲ್ಲೂ ಗೊಂದಲ ಉಂಟಾಗಿದೆ’ ಎಂದರು.

ಕಾನೂನು ಸಚಿವ ಬಸವರಾಜ ಬೊಮ್ಮಾಯಿ, ‘ಈ ವಿಚಾರದಲ್ಲಿ ಗೊಂದಲ ಆಗಿರುವುದು ನಿಜ. ಹಲವು ಶಾಸಕರು ಈ ವಿಷಯವನ್ನು ಗಮನಕ್ಕೆ ತಂದಿದ್ದಾರೆ. ಈ ಬಗ್ಗೆ ಚುನಾವಣಾ ಆಯೋಗದ ಜತೆಗೆ ಎರಡು ಸಲ ಚರ್ಚಿಸಲಾಗಿದೆ. ಸದಸ್ಯರ ಜತೆಗೆ ಸುದೀರ್ಘ ಸಮಾಲೋಚನೆ ನಡೆಸಿ ಚುನಾವಣಾ ಆಯೋಗದ ಗಮನಕ್ಕೆ ತಂದು ಲೋಪ ಸರಿಪಡಿಸಲಾಗುವುದು’ ಎಂದರು.

ಕಾಂಗ್ರೆಸ್‌ನ ಎಚ್.ಕೆ.ಪಾಟೀಲ, ’ಜಿಲ್ಲಾಧಿಕಾರಿಗಳು ನಿಯಮಗಳನ್ನು ಗಾಳಿಗೆ ತೂರಿ ಪುನರ್‌ವಿಂಗಡಣೆ ಕಾರ್ಯ ಮಾಡುತ್ತಿದ್ದಾರೆ. ಸರ್ಕಾರವು ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡಬೇಕು. ರಾಜ್ಯ ಸರ್ಕಾರ ಚುನಾವಣೆ ಮುಂದೂಡಲು ಆಸಕ್ತಿ ತೋರಿದಂತೆ ಕಾಣುತ್ತದೆ. ಮೀಸಲಾತಿ ಹಾಗೂಕ್ಷೇತ್ರ ಪುನರ್ ವಿಂಗಡಣೆ ಬಗ್ಗೆ ಚುನಾವಣಾ ಆಯೋಗದ ಜತೆಗೆ ಸರ್ಕಾರ ಸಮಾಲೋಚನೆ ನಡೆಸಿದರೆ ಕಾನೂನು ಉಲ್ಲಂಘನೆ ಆಗುತ್ತದೆ. ಪ್ರಕ್ರಿಯೆಯಲ್ಲಿ ಹಸ್ತಕ್ಷೇಪ ಮಾಡಿದಂತೆ ಆಗುತ್ತದೆ’ ಎಂದು ಅವರು ಗಮನ ಸೆಳೆದರು.

ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ‘ಇಡೀ ಪ್ರಕ್ರಿಯೆಯೇ ಅವೈಜ್ಞಾನಿಕವಾಗಿದೆ. ಲೋಪ ಸರಿಪಡಿಸಬೇಕು. ಸರ್ಕಾರ ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡಬಹುದೇ ಹೊರತು ಚುನಾವಣಾ ಆಯೋಗಕ್ಕೆ ಅಲ್ಲ’ ಎಂದು ಅವರು ಹೇಳಿದರು.

ಬಸವರಾಜ ಬೊಮ್ಮಾಯಿ, ‘ಆಯೋಗದ ಕಾರ್ಯದಲ್ಲಿ ಸರ್ಕಾರ ಹಸ್ತಕ್ಷೇಪ ಮಾಡುವುದಿಲ್ಲ. ಮಾರ್ಗ ಸೂಚಿ ಬಗ್ಗೆ ಚರ್ಚೆ ನಡೆಸುತ್ತೇವೆ ಅಷ್ಟೇ. ಜತೆಗೆ, ಇದೇ ಗುರುವಾರ ಹಿರಿಯ ಸದಸ್ಯರ ಜತೆಗೆ ಸಮಾಲೋಚನೆ ನಡೆಸಿ ಪರಿಷ್ಕೃತ ಮಾರ್ಗಸೂಚಿಯನ್ನು ಚುನಾವಣಾ ಆಯೋಗಕ್ಕೆ ಕಳುಹಿಸುತ್ತೇವೆ’ ಎಂದರು.

ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್.ಈಶ್ವರಪ್ಪ, ‘ಚುನಾವಣೆ ಮುಂದೂಡುವ ಪ್ರಸ್ತಾವ ಸರ್ಕಾರದ ಮುಂದೆ ಇಲ್ಲ. ಸಕಾಲಕ್ಕೆ ಚುನಾವಣೆ ನಡೆಸುತ್ತೇವೆ’ ಎಂದು ಸ್ಪಷ್ಟಪಡಿಸಿದರು.

ಅತ್ಯಾಚಾರ ಪ್ರಕರಣ ದಾಖಲಿಸಿ

ಒಂದನೇ ಪುಟದಿಂದ...

‘ಸರ್ಕಾರ ಇಲ್ಲಿಯವರೆಗೆ ಷಡ್ಯಂತ್ರದ ಬಗ್ಗೆ, ಅದರ ಹಿಂದೆ ಯಾರೆಲ್ಲ ಇದ್ದಾರೆ ಎಂಬ ಕುರಿತು ಮಾತನಾಡುತ್ತಲೇ ಬಂದಿದೆಯೇ ಹೊರತು, ಒಬ್ಬ ಹೆಣ್ಣು ಮಗಳಿಗೆ ಅನ್ಯಾಯ ಆಗಿರುವ ಬಗ್ಗೆ ಮಾತನಾಡಿಲ್ಲ. ಇದು ತಾರತಮ್ಯ ಅಲ್ಲವೇನು? ಇಡೀ ರಾಜ್ಯದ ಮುಂದೆ ಅವಮಾನಿತಳಾಗಿ ನಿಂತಿದ್ದಾಳೆ ಅವಳಿಗೆ ನ್ಯಾಯವಿಲ್ಲವೇನು’ ಎಂದು ಸಿದ್ದರಾಮಯ್ಯ ಪ್ರಶ್ನಿಸಿದರು.

ರಮೇಶ ಜಾರಕಿಹೊಳಿ ಸಿ.ಡಿ ಪ್ರಕರಣ ಹೊರ ಬರುತ್ತಿದ್ದಂತೆ ಆರು ಸಚಿವರು ಇದ್ದಕ್ಕಿದ್ದಂತೆ ಸಿವಿಲ್ ನ್ಯಾಯಾಲಯದಿಂದ ಪ್ರತಿಬಂಧಕಾಜ್ಞೆ ತಂದರು. ತಪ್ಪು ಮಾಡಿಲ್ಲ ಎಂದರೆ ನ್ಯಾಯಾಲಯದ ಮೆಟ್ಟಿಲು ಹತ್ತುವ ಅಗತ್ಯ ಏನಿತ್ತು ಎಂದೂ ಸಿದ್ದರಾಮಯ್ಯ ಕುಟುಕಿದರು.

ತಿರುವು ಕೊಟ್ಟ ರಮೇಶ್ ಕುಮಾರ್: ಸಿದ್ದರಾಮಯ್ಯ ಪಕ್ಷದ ನಿಲುವು ಪ್ರತಿಪಾದಿಸುತ್ತಿದ್ದಾಗ ಅವರ ವಾದದ ಸರಣಿಗೆ ಭಿನ್ನ ತಿರುವು ನೀಡಿದ್ದು ಹಿರಿಯ ಸದಸ್ಯ ಕೆ.ಆರ್.ರಮೇಶ್ ಕುಮಾರ್.

ಲೈಂಗಿಕ ದೌರ್ಜನ್ಯ ಆಗಿದೆ ಎಂದ ಸಂತ್ರಸ್ತೆ ಹೇಳಿದ್ದಾರೆ ಎಂದು ಸಿದ್ದರಾಮಯ್ಯ ಹೇಳಿದರು. ಆಗ ಆಕ್ಷೇಪ ವ್ಯಕ್ತಪಡಿಸಿದ ಕೈಗಾರಿಕಾ ಸಚಿವ ಜಗದೀಶ ಶೆಟ್ಟರ್ ‘ಆಕೆ ಎಲ್ಲೂ ಅದನ್ನು ಉಲ್ಲೇಖಿಸಿಲ್ಲ’ ಎಂದರು.

‘ಬಳಸಿಕೊಳ್ಳಲಾಗಿತ್ತು’ ಎಂಬ ಪದವೇ ಅತ್ಯಾಚಾರಕ್ಕೆ ಸಮ ಎಂಬುದನ್ನು ವಾದಿಸುವಂತೆ ರಮೇಶ್‌ಕುಮಾರ್ ಪುಟ್ಟ ಚೀಟಿಯಲ್ಲಿ ಸಿದ್ದರಾಮಯ್ಯ ಅವರಿಗೆ ಬರೆದುಕೊಟ್ಟರು. ಅದನ್ನು ಬಲವಾಗಿ ಪ್ರತಿಪಾದಿಸುವ ಮೂಲಕ ಆಡಳಿತ ಪಕ್ಷವನ್ನು ಇಕ್ಕಟ್ಟಿಗೆ ಸಿಲುಕಿಸಿದರು.

ರಮೇಶ ಜಾರಕಿಹೊಳಿ ಮತ್ತು ಆರು ಸಚಿವರ ರಕ್ಷಣೆಗೆ ಮುಖ್ಯಮಂತ್ರಿ ಯಡಿಯೂರಪ್ಪ ಅವರಾಗಲಿ ಇತರ ಸದಸ್ಯರಾಗಲಿ ಬರಲಿಲ್ಲ. ಸಚಿವ ಬಸವರಾಜ ಬೊಮ್ಮಾಯಿ ಮತ್ತು ಒಂದೆರಡು ಬಾರಿ ಸಚಿವ ಜಗದೀಶ ಶೆಟ್ಟರ್ ಅವರಷ್ಟೇ ಆರು ಸಚಿವರ ನೆರವಿಗೆ ಧಾವಿಸಿದರು.

ವಿಶೇಷ ಮಕ್ಕಳ ಶಾಲಾ ಶಿಕ್ಷಕರಿಗೆ ಪಿಂಚಣಿ: ಶೀಘ್ರ ನಿರ್ಧಾರದ ಭರವಸೆ

ಬೆಂಗಳೂರು: ರಾಜ್ಯದಲ್ಲಿರುವ ವಿಶೇಷ ಮಕ್ಕಳ ಅನುದಾನಿತ ಶಾಲೆಗಳ ಶಿಕ್ಷಕರಿಗೆ ಪಿಂಚಣಿ ಸೌಲಭ್ಯ ಒದಗಿಸುವ ಕುರಿತು ಶೀಘ್ರದಲ್ಲಿ ನಿರ್ಧಾರ ಕೈಗೊಳ್ಳಲಾಗುವುದು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಶಶಿಕಲಾ ಜೊಲ್ಲೆ ಭರವಸೆ ನೀಡಿದರು.

ವಿಧಾನ ಪರಿಷತ್‌ನಲ್ಲಿ ಸೋಮವಾರ ಜೆಡಿಎಸ್‌ನ ಮರಿತಿಬ್ಬೇಗೌಡ ನಿಯಮ 330ರ ಅಡಿಯಲ್ಲಿ ವಿಷಯ ಪ್ರಸ್ತಾಪಿಸಿದರು. ಬಳಿಕ ನಡೆದ ಚರ್ಚೆಗೆ ಉತ್ತರಿಸಿದ ಸಚಿವೆ, ‘ಹಣಕಾಸು ಇಲಾಖೆಯು 2019ರ ಜುಲೈ 17ರಂದು ಹೊರಡಿಸಿರುವ ಆದೇಶದಲ್ಲಿ ಕೆಲವು ತೊಡಕುಗಳಿವೆ. ಅವುಗಳನ್ನು ನಿವಾರಿಸಲು ಮುಂದಿನ ಎರಡು ಸಂಪುಟ ಸಭೆಗಳ ಒಳಗಾಗಿ ಸೂಕ್ತ ನಿರ್ಣಯ ಅಂಗೀಕರಿಸಲಾಗುವುದು’ ಎಂದರು.

ಸಭೆ: ಅನುದಾನಿತ ಶಾಲೆಗಳು ಒಂದು ಕಟ್ಟಡದಿಂದ ಮತ್ತೊಂದು ಕಟ್ಟಡಕ್ಕೆ ಸ್ಥಳಾಂತರಗೊಳ್ಳಲು ತ್ವರಿತವಾಗಿ ಅನುಮತಿ ನೀಡುವುದಕ್ಕೆ ಪೂರಕವಾಗಿ ಶೀಘ್ರದಲ್ಲಿ ವಿಧಾನ ಪರಿಷತ್‌ನ ಶಿಕ್ಷಕರ ಕ್ಷೇತ್ರದ ಸದಸ್ಯರ ಜತೆ ಸಭೆ ನಡೆಸಲಾಗುವುದು ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಎಸ್. ಸುರೇಶ್ ಕುಮಾರ್ ಭರವಸೆ ನೀಡಿದರು.

ಬಿಜೆಪಿಯ ಶಶಿಲ್ ಜಿ. ನಮೋಶಿ, ಜೆಡಿಎಸ್‌ನ ಮರಿತಿಬ್ಬೇಗೌಡ, ಕೆ.ಟಿ. ಶ್ರೀಕಂಠೇಗೌಡ ಸೇರಿದಂತೆ ಹಲವು ಸದಸ್ಯರು, ‘ಅನುದಾನಿತ ಶಾಲೆಗಳು ಒಂದು ಕಟ್ಟಡದಿಂದ ಮತ್ತೊಂದು ಕಟ್ಟಡಕ್ಕೆ ಸ್ಥಳಾಂತರ ಹೊಂದಲು ಅನುಮತಿ ನೀಡುವಾಗ ಶಿಕ್ಷಣ ಇಲಾಖೆ ಅಧಿಕಾರಿಗಳು ಕಿರುಕುಳ ನೀಡುತ್ತಿದ್ದಾರೆ’ ಎಂದು ಆರೋಪಿಸಿದರು.

ಶ್ರೀಶೈಲ ಪಾದಯಾತ್ರೆ: ಭಕ್ತರಿಗೆ ಸೂಚನೆ

ವಿಜಯಪುರ: ಕೋವಿಡ್ ಹಿನ್ನೆಲೆಯಲ್ಲಿ ಆಂಧ್ರಪ್ರದೇಶದ ಶ್ರೀಶೈಲ ಮಲ್ಲಿಕಾರ್ಜುನ ದೇವಸ್ಥಾನದಲ್ಲಿ ಸ್ಪರ್ಶ ದರ್ಶನಕ್ಕೆ ಈ ವರ್ಷ ಕೂಡ ನಿರ್ಬಂಧಿಸಲಾಗಿದೆ ಹಾಗೂ ಪಾತಾಳ ಗಂಗೆಯಲ್ಲಿ ಸ್ನಾನ ಮಾಡಲು ಅವಕಾಶವಿಲ್ಲ ಎಂದು ಶ್ರೀಶೈಲ ಪೀಠದ ಚನ್ನಸಿದ್ಧರಾಮ ಶಿವಾಚಾರ್ಯ ಪಂಡಿತಾರಾಧ್ಯ ಸ್ವಾಮೀಜಿ ತಿಳಿಸಿದರು.

ನಗರದ ಎ.ಪಿ.ಎಂ.ಸಿ ಕಲ್ಯಾಣ ಮಂಟಪದಲ್ಲಿ ಸೋಮವಾರ ಪಾದಯಾತ್ರಿಗಳು ಮತ್ತು ಸಾರ್ವಜನಿಕ ಸಂಘ ಸಂಸ್ಥೆಗಳ ಪದಾಧಿಕಾರಿಗಳೊಂದಿಗೆ ನಡೆದ ಸಮನ್ವಯ ಸಭೆಯಲ್ಲಿ ಅವರು ಮಾತನಾಡಿದರು.

ನೈತಿಕತೆ ಪಾಠ ಹೇಳುವವರು ಬಚಾವ್ ಆಗ್ತಾರೆ: ಬೊಮ್ಮಾಯಿ

ಹನಿ ತಿಂದವರು ಯಾರು: ಡಿಕೆಶಿ ಪ್ರಶ್ನೆ


ಪ್ರಜಾವಾಣಿ ವಾರ್ತೆ

ಬೆಂಗಳೂರು:‘ಹನಿ ಟ್ರ್ಯಾಪ್(ರಮೇಶ ಜಾರಕಿಹೊಳಿ) ಎಂದಿದ್ದಾರೆ, ಇಲ್ಲಿ ಹನಿ ತಿಂದವರು ಯಾರು? ತಿಂದು ಟ್ರ್ಯಾಪ್ ಆದವರು ಯಾರು’– ಇದು ಕಾಂಗ್ರೆಸ್‌ನ ಡಿ.ಕೆ.ಶಿವಕುಮಾರ್ ಅವರ ಪ್ರಶ್ನೆ.

‘ಚಮತ್ಕಾರಿ ಮಾತುಗಳನ್ನು ಆಡುತ್ತಲೇ ಬದ್ಮಾಶ್ ಕೆಲಸ ಮಾಡುತ್ತಾರೆ? ಅಂತಹ ಬದ್ಮಾಶ್‌ಗಳು ಯಾರೆಂಬುದು ಗೊತ್ತಾಗುವುದಿಲ್ಲವೆ’ ಎಂದು ಕಾಂಗ್ರೆಸ್‌ನ ಕೆ.ಆರ್. ರಮೇಶ್‌ಕುಮಾರ್ ಮಾತಿನ ಬಾಣ ಬಿಟ್ಟಿದ್ದು ಯಾರಿಗೆ ಎಂಬುದು ವಿಧಾನ ಸಭೆಯಲ್ಲಿ ದೊಡ್ಡ ನಗುವಿನ ಅಲೆಗೆ ಕಾರಣವಾಯಿತು.

ರಮೇಶ ಜಾರಕಿಹೊಳಿ ಸಿ.ಡಿ ಕುರಿತ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿದ ಶಿವಕುಮಾರ್, ‘ಈಗ ಯಾರೂ ರಾಜಕಾರಣಿಗಳನ್ನು ಮನೆಗೆ ಕರೆದು ಊಟ ಹಾಕುವ ಸ್ಥಿತಿಯಲ್ಲಿ ಇಲ್ಲ. ಹಿಂದೆ ಕಳ್ಳರು, ಸುಳ್ಳರು ಎನ್ನುತ್ತಿದ್ದರು. ಈಗ ರಾಜಕಾರಣಿಗಳನ್ನು ನೋಡಿ ಹೆಣ್ಣು ಮಕ್ಕಳು ಅಸಹ್ಯಪಟ್ಟುಕೊಳ್ಳುತ್ತಾರೆ. ರಾಜಕಾರಣದ ಕುಟುಂಬಕ್ಕೇ ಕಪ್ಪು ಚುಕ್ಕೆ’ ಎಂದು ಹೇಳಿದರು.

‘ಕೆಲವರು ₹100 ಕೋಟಿ ಎಂದೂ, ಇನ್ನು ಕೆಲವರು ₹40 ಕೋಟಿ, ಇನ್ನೂ ಕೆಲವರು ₹5 ಕೋಟಿ ಡೀಲ್ ಆಗಿದೆ ಎನ್ನುತ್ತಾರೆ. ಇದು ಆರ್ಥಿಕ ಅಪರಾಧ ಅಲ್ಲವೇನು? ಇಡಿ, ಐಟಿ ಏನು ಮಾಡುತ್ತಿವೆ. ಇದನ್ನು ತನಿಖೆಗೆ ಒಪ್ಪಿಸಬೇಕು. ಎಚ್.ಡಿ.ಕುಮಾರಸ್ವಾಮಿ ಐದು ಕೋಟಿ ಡೀಲ್ ಆಗಿದೆ ಎಂದಿದ್ದಾರೆ. ಆ ಬಗ್ಗೆ ಮಾಹಿತಿ ಪಡೆದು ವಿಚಾರಣೆ ನಡೆಸಬೇಕು’ ಎಂದು ಹೇಳಿದರು.



ಡಿ.ಕೆ.ಶಿವಕುಮಾರ್

‘ಮುಖ್ಯಮಂತ್ರಿಯವರ ಬಗ್ಗೆ ಸಿಡಿ ಇದೆ ಎಂದು ಶಾಸಕರಾದ ಬಸನಗೌಡ ಪಾಟೀಲ ಯತ್ನಾಳ ಮತ್ತು ಎಚ್. ವಿಶ್ವನಾಥ್ ಹೇಳಿದ್ದಾರೆ. ಸಿಡಿ ಇದೆ ಎಂದು ಬ್ಲಾಕ್‌ಮೇಲ್ ಮಾಡುವವರಿಗೆ ಅನುದಾನ ಹೆಚ್ಚು ಕೊಡ್ತಿದ್ದೀರಿ ಎಂದು ಆರೋಪ ಮಾಡಿದ್ದಾರೆ. ಸಿದ್ದರಾಮಯ್ಯ, ಕೆ.ಜೆ.ಜಾರ್ಜ್ ಅವರಿಗೆಲ್ಲ ಹೆಚ್ಚು ಅನುದಾನ ನೀಡಿದ್ದೀರಂತೆ... ಏನ್ರೀ ಜಾರ್ಜ್ ಎಷ್ಟು ಅನುದಾನ ಸಿಕ್ಕಿದೆಯೇನ್ರಿ...’ ಎಂದು ಶಿವಕುಮಾರ್ ನಾಟಕೀಯವಾಗಿ ಪ್ರಶ್ನಿಸಿದರು.

‘ಕೊಡಬೇಕಾಗಿದ್ದೇ ಕೊಟ್ಟಿಲ್ಲ’ ಎಂದು ಜಾರ್ಜ್ ಉಸುರಿದರು.

ಮತ್ತೆ ತಮ್ಮ ಮಾತಿನ ಪ್ರಹಾರವನ್ನು ರಮೇಶಜಾರಕಿಹೊಳಿ ಅವರತ್ತ ತಿರುಗಿಸಿದ ಶಿವಕುಮಾರ್, ‘ಅದು ಅವರ ಖಾಸಗಿ ಸಂಬಂಧ. ನಾವು ಅವರಿಗೆ ಜಿಪ್ ಬಿಚ್ಚಿ, ಬಟನ್ ತೆಗಿರೀ ಅಂತ ಹೇಳಿದ್ದೀವಾ? ಕನ್ನಡದ ವಿರುದ್ಧ ಮಾತನಾಡಿ, ಮುಖ್ಯಮಂತ್ರಿಯವರ ಭ್ರಷ್ಟಾಚಾರದ ಬಗ್ಗೆ ಮಾತನಾಡಿ, ಸಿದ್ದರಾಮಯ್ಯ ಒಳ್ಳೆಯವರು ಅಂತ ಹೇಳಿ ಎಂದು ಹೇಳಿಕೊಟ್ಟಿದ್ದೀವಾ’ ಎಂದು ಪ್ರಶ್ನಿಸಿದರು.

‘ಸಿದ್ದರಾಮಯ್ಯ ಕ್ಲೋಸ್ ಅಂತೆ... ಅವರನ್ನು ಎರಡು ದಿನಗಳಿಗೊಮ್ಮೆ ಭೇಟಿ ಮಾಡ್ತಾರಂತೆ ಪಾಪ’ ಎಂದೂ ವ್ಯಂಗ್ಯವಾಡಿದರು. ಈ ಮಾತು ಹೇಳಿದ್ದಾಗ ಸಿದ್ದರಾಮಯ್ಯ ಇರಲಿಲ್ಲ. ಕೆ.ಆರ್. ರಮೇಶ್‌ಕುಮಾರ್ ಇದು ಕಿರಿಕಿರಿ ಎನಿಸಿತು.

ತಕ್ಷಣ ರಮೇಶ್‌ಕುಮಾರ್, ‘ಮುಖ್ಯಮಂತ್ರಿಯವರೇ ಡಿ.ಕೆ.ಯವರು ನಿಮ್ಮ ಸಹಾಯಕ್ಕೆ ನಿಂತಿದ್ದಾರೆ. ನೀವು ಬಚಾವಾದಿರಿ’ ಎಂದು ವ್ಯಂಗ್ಯದ ಬಾಣ ಬಿಟ್ಟರು.

ರಮೇಶ್ ಕುಮಾರ್ ವ್ಯಂಗ್ಯಕ್ಕೆ ಡಿ.ಕೆ. ಶಿವಕುಮಾರ್ ನಗುವೇ ಉತ್ತರವಾಗಿತ್ತು.

‘ಮಂಚದಲ್ಲಿ ಇದ್ದಾಗ ಮಂಚದ ಕೆಲಸ ಮಾಡಬೇಕು. ಅದನ್ನು ಬಿಟ್ಟು ಬೇರೆ ವಿಚಾರ ಯಾಕೆ ಮಾತನಾಡಬೇಕು. ಅಲ್ಲಿರೋದು ನಾನಲ್ಲ ಎಂದ್ರೆ ಅದಕ್ಕಿಂತ ನಾಚಿಕೆಗೇಡು ಇನ್ನೇನಿದೆ ಸ್ವಾಮಿ’ ಎಂದು ಶಿವಕುಮಾರ್ ಕುಟುಕಿದರು.

ಆಗ ಮಧ್ಯ ಪ್ರವೇಶಿಸಿದ ಸಚಿವ ಬಸವರಾಜ ಬೊಮ್ಮಾಯಿ, ‘ಕಳ್ಳ ಸಿಕ್ಕಿದ ಎಂದು ಹಾದಿ ಬೀದಿಯಲ್ಲಿ ಹೋಗುವವರೆಲ್ಲ ಕಲ್ಲು ಹೊಡಿತಾರೆ. ಸಂಬಂಧ ಇದ್ದವರು ಇಲ್ಲದವರು ತಮ್ಮದೊಂದು ಇರಲಿ ಎಂದು ಕಲ್ಲು ಹೊಡಿತಾರೆ. ಕೆಲವರು ನೈತಿಕತೆ ಪಾಠ ಹೇಳುವುದರಲ್ಲಿ ಎಕ್ಸ್‌ಪರ್ಟ್‌ಗಳು. ಆದರೆ ಕೆಲವೇ ಮಂದಿ ಮಾತ್ರ ಎಕ್ಸ್‌ಪೋಸ್ ಆಗ್ತಾರೆ. ನೈತಿಕ ಪಾಠ ಹೇಳುವವರು ಬಚಾವ್ ಆಗ್ತಾರೆ’ ಎಂದು ಡಿ.ಕೆ ಅವರ ಕಾಲೆಳೆದರು.

‘ಕೆಲವರು ಚಮತ್ಕಾರಿ ಮಾತುಗಳನ್ನು ಆಡುತ್ತಾ ಬದ್ಮಾಶ್ ಕೆಲಸ ಮಾಡುತ್ತಾರೆ. ಅಂತಹ ಬದ್ಮಾಶ್‌ಗಳು ಯಾರು ಎಂಬುದು ಎಲ್ಲರಿಗೂ ಗೊತ್ತು’ ಎಂದು ರಮೇಶ್ ಕುಮಾರ್ ಹೇಳಿದರು.

ಇದಕ್ಕೆ ಸಹಮತ ವ್ಯಕ್ತಪಡಿಸಿದ ಬೊಮ್ಮಾಯಿ, ‘ಬದ್ಮಾಶ್ ಯಾರು? ಆತ್ಮಾವಲೋಕನ ಮಾಡಿಕೊಳ್ಳಬೇಕು. ತಾವು ಮಾತ್ರ ಸತ್ಯಹರಿಶ್ಚಂದ್ರರು ಉಳಿದವರು ಕಳ್ಳರು ಎಂಬಂತೆ ಮಾತನಾಡುತ್ತಾರೆ. ಇಷ್ಟೆಲ್ಲ ಮಾತನಾಡುವ ನೀವು ಮಾಡಿದ್ದೆಲ್ಲಾ ಸಾಚನಾ?ನಮ್ಮ ಸಾಚಾತನ ಜನರ ಮನಸ್ಸಿನಲ್ಲಿ ಬರಬೇಕು’ ಎಂದು ಶಿವಕುಮಾರ್ ಅತ್ತ ತಿರುಗಿ ಹೇಳಿದರು.

ಅಸ್ಸಾಂ ಕಣದಲ್ಲಿ ಬಿಜೆಪಿ ಕಾಂಗ್ರೆಸ್ ವಾಕ್ಸಮರ

ವಲಸಿಗರು, ಪ್ರವಾಹದಿಂದ ಅಸ್ಸಾಂ ರಕ್ಷಿಸುತ್ತೇವೆ: ಶಾ

ಮಾಜುಲಿ/ಜೊನಾಯಿ (ಪಿಟಿಐ): 'ಕಾಂಗ್ರೆಸ್ ಆಳ್ವಿಕೆಯಲ್ಲಿ ಅಸ್ಸಾಂನ ನೆಲವನ್ನು ಅಕ್ರಮ ವಲಸಿಗರು ಒತ್ತುವರಿ ಮಾಡಿಕೊಂಡಿದ್ದರು. ಆ ಒತ್ತುವರಿಯನ್ನು ಬಿಜೆಪಿ ತೆರವು ಮಾಡಿದೆ. ಒಳನುಸುಳುವಿಕೆ ಮತ್ತು ಪ್ರವಾಹದ ಅಪಾಯಗಳಿಂದ ಅಸ್ಸಾಂ ಅನ್ನು ಬಿಜೆಪಿ ಮಾತ್ರವೇ ಕಾಪಾಡಬಲ್ಲದು' ಎಂದು ಕೇಂದ್ರ ಗೃಹಸಚಿವ ಅಮಿತ್ ಶಾ ಹೇಳಿದ್ದಾರೆ.


ಇಲ್ಲಿ ನಡೆದ ಚುನಾವಣಾ ಪ್ರಚಾರ ಸಭೆಯಲ್ಲಿ ಅವರು ಕಾಂಗ್ರೆಸ್ ವಿರುದ್ಧ ಹರಿಹಾಯ್ದರು. 'ನನ್ನ ಹೆಲಿಕಾಪ್ಟರ್ ಇಂದು ಬೊರ್ದೂವಾದಲ್ಲಿ ಲ್ಯಾಂಡ್ ಆಗಿದೆ. ಲ್ಯಾಂಡ್ ಆಗುವ ಮುನ್ನ ನಮ್ಮ ಅಧಿಕಾರಿಗಳನ್ನು, ಹೆಲಿಪ್ಯಾಡ್ ಎಲ್ಲಿದೆ ಎಂದು ಕೇಳಿದ್ದೆ. ಅವರು, ಈ ಹಿಂದೆ ಒತ್ತುವರಿಯಾಗಿದ್ದ ಜಾಗದಲ್ಲಿ ಈಗ ಹೆಲಿಪ್ಯಾಡ್ ಇದೆ ಎಂದು ಹೇಳಿದರು. ಬಿಜೆಪಿ ಅಧಿಕಾರಕ್ಕೆ ಬಂದ ನಂತರವೇ ಈ ಒತ್ತುವರಿಗಳನ್ನು ತೆರವು ಮಾಡಲಾಗಿದೆ ಎಂದು ಶಾ ಹೇಳಿದ್ದಾರೆ.

'ಕಾಜೀರಂಗ ಅಭಯಾರಣ್ಯದಲ್ಲಿ ನುಸುಳುಕೋರರು ಮತ್ತು ಅಕ್ರಮ ವಲಸಿಗರು ನೆಲವನ್ನು ಒತ್ತುವರಿ ಮಾಡಿಕೊಳ್ಳಲು ಕಾಂಗ್ರೆಸ್ ಮತ್ತು ಎಐಯುಡಿಎಫ್ ಅವಕಾಶ ಮಾಡಿಕೊಟ್ಟಿದ್ದವು. ನಾವು ಅದನ್ನು ತೆರವು ಮಾಡಿದ್ದೇವೆ. ಕಾಂಗ್ರೆಸ್ ಅಧಿಕಾರದ ಅವಧಿಯಲ್ಲಿ ರಾಜ್ಯದ ಎಲ್ಲೆಡೆ ಉಗ್ರರ ದಾಳಿ, ಗಲಭೆ, ಸಂಘರ್ಷ ನಡೆಯುತ್ತಿತ್ತು. ಇವೆಲ್ಲವನ್ನು ನಿಲ್ಲಿಸುತ್ತೇವೆ ಎಂದು 2016ರ ಚುನಾವಣೆ ಸಂದರ್ಭದಲ್ಲಿ ಹೇಳಿದ್ದೆ. ಈಗ ಅಸ್ಸಾಂ ಉಗ್ರರ ದಾಳಿ, ಗಲಭೆ ಮತ್ತು ಸಂಘರ್ಷಗಳಿಂದ ಮುಕ್ತವಾಗಿದೆ. ರಾಜ್ಯವು ಅಭಿವೃದ್ಧಿಯ ಹಾದಿಯಲ್ಲಿ ಸಾಗುತ್ತಿದೆ ಎಂದು ಅವರು ಹೇಳಿದ್ದಾರೆ.

'ಅಸ್ಸಾಂ ಅನ್ನು ಪ್ರವಾಹಮುಕ್ತ ರಾಜ್ಯವನ್ನಾಗಿ ಮಾಡುವ ಯೋಜನೆ ಪ್ರಗತಿಯಲ್ಲಿ ಇದೆ. ಅಸ್ಸಾಂನ ನೀರಿನ ಮೂಲಗಳ ಉಪಗ್ರಹ ನಕ್ಷೆಗಳನ್ನು ತಯಾರಿಸುತ್ತಿದ್ದೇವೆ. ಪ್ರವಾಹದ ನೀರನ್ನು ಸಂಗ್ರಹಿಸುತ್ತೇವೆ. ಆ ಮೂಲಕ ಅಸ್ಸಾಂ ಅನ್ನು ಪ್ರವಾಹ ಮುಕ್ತ ರಾಜ್ಯವನ್ನಾಗಿ ಮಾಡುತ್ತೇವೆ' ಎಂದು ಅಮಿತ್ ಶಾ ಹೇಳಿದ್ದಾರೆ.


ಮಜೂಲಿಯಲ್ಲಿ ನಡೆದ ಪ್ರಚಾರ ಸಭೆಯಲ್ಲಿ ಬಿಜೆಪಿ ಅಸ್ಸಾಂ ಘಟಕದ ಅಧ್ಯಕ್ಷ ರಂಜಿತ್ ಕುಮಾರ್ ದಾಸ್, ಕೇಂದ್ರ ಸಚಿವ ಅಮಿತ್ ಶಾ ಮತ್ತು ಮುಖ್ಯಮಂತ್ರಿ ಸರ್ಬಾನಂದ ಸೋನೊವಾಲ್ ಪಿಟಿಐ ಚಿತ್ರ

'ಬಿಜೆಪಿ ಧೃತರಾಷ್ಟ್ರ ಮತ್ತು ಶಕುನಿ'



'ಅಸ್ಸಾಂನ ಬಿಜೆಪಿ ನಾಯಕರು ಮಹಾಭಾರತದ ಧೃತರಾಷ್ಟ್ರ ಮತ್ತು ಶಕುನಿಯಂತೆ ಕೆಲಸ ಮಾಡುತ್ತಿದ್ದಾರೆ. ಜನರ ನಾಯಕ ಎಂದು ಹೆಸರಾಗಿರುವ ಬಿಜೆಪಿಯ ನಾಯಕರೊಬ್ಬರು ಧೃತರಾಷ್ಟ್ರನಂತೆ ವರ್ತಿಸುತ್ತಿದ್ದಾರೆ. ಹಿಂದಿನ ಚುನಾವಣೆಯ ವೇಳೆ ಅವರು ರಾಜ್ಯದ ಆರು ಸಮುದಾಯಗಳಿಗೆ ಪರಿಶಿಷ್ಟ ಪಂಗಡದ ಸ್ಥಾನ ನೀಡುವುದಾಗಿ ಹೇಳಿದ್ದರು. ಆದರೆ ಅವರ ಸರ್ಕಾರ ಬಂದು ಅದರ ಅವಧಿ ಮುಗಿದರೂ, ಆ ಸಮುದಾಯಗಳಿಗೆ ಪರಿಶಿಷ್ಟ ಪಂಗಡದ ಸ್ಥಾನ ನೀಡಿಲ್ಲ. ಅವರು ಜನರನ್ನು ವಂಚಿಸುತ್ತಿದ್ದಾರೆ' ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಟೀಕಿಸಿದ್ದಾರೆ.

'ಬಿಜೆಪಿಯ ಮತ್ತೊಬ್ಬ ನಾಯಕ ಶಕುನಿಯಂತೆ ಸರ್ಕಾರವನ್ನು ನಡೆಸುತ್ತಿದ್ದಾರೆ. ಅವರ ಸರ್ಕಾರವು ಭ್ರಷ್ಟ ಆಡಳಿತ ನಡೆಸುತ್ತಿದ್ದು, ಜನರನ್ನು ವಂಚಿಸುತ್ತಿವೆ' ಎಂದು ಅವರು ಆರೋಪಿಸಿದ್ದಾರೆ.

'ಅಸ್ಸಾಂ ಚುನಾವಣೆಯಲ್ಲಿ ತಮ್ಮ ಮುಖ್ಯಮಂತ್ರಿ ಅಭ್ಯರ್ಥಿ ಯಾರು ಎಂಬುದನ್ನು ನಿರ್ಧಾರ ಮಾಡಲು ಬಿಜೆಪಿಗೆ ಸಾಧ್ಯವಾಗಿಲ್ಲ. ಅವರಿಗೆ ತಮ್ಮದೇ ಮುಖ್ಯಮಂತ್ರಿಯ ನಂಬಿಕೆ ಇಲ್ಲ. ಹೀಗಾಗಿಯೇ ಅವರೇ ಮತ್ತೆ ಮುಖ್ಯಮಂತ್ರಿಯ ಅಭ್ಯರ್ಥಿಯಾಗುತ್ತಾರೆ ಎಂದು ಹೇಳುತ್ತಿಲ್ಲ. ಅವರ ಪಕ್ಷದಲ್ಲೇ ಒಗ್ಗಟ್ಟು ಮತ್ತು ಸ್ಥಿರತೆ ಇಲ್ಲ. ಹೀಗಿದ್ದ ಮೇಲೆ ಅಸ್ಸಾಂನಲ್ಲಿ ಬಿಜೆಪಿಯು ಸ್ಥಿರ ಸರ್ಕಾರವನ್ನು ಹೇಗೆ ತರುತ್ತದೆ? ರಾಜ್ಯದಲ್ಲಿ ಸ್ಥಿರತೆ ಹೇಗೆ ತರುತ್ತದೆ' ಎಂದು ಪ್ರಿಯಾಂಕಾ ಪ್ರಶ್ನಿಸಿದ್ದಾರೆ.

'ಸಿಎಎ ನಂತರ ಅಸ್ಸಾಂ ಬದಲಾಗಿದೆ': 'ಪೌರತ್ವ ತಿದ್ದುಪಡಿ ಕಾಯ್ದೆಯ ನಂತರ ಅಸ್ಸಾಂ ಸಿಎಎ ಪರ ಮತ್ತು ಸಿಎಎ ವಿರುದ್ಧ ಎಂದು ವಿಭಜನೆಯಾಗಿದೆ. ಸಿಎಎ ವಿರುದ್ಧ ಇರುವವರೆಲ್ಲರೂ ಈಗ ಒಗ್ಗಟ್ಟಾಗಿದ್ದಾರೆ' ಎಂದು ಕಾಂಗ್ರೆಸ್ ಸಂಸದ ಗೌರವ್ ಗೊಗೊಯಿ ಹೇಳಿದ್ದಾರೆ. 'ನಮ್ಮ ತಂದೆ ತರುಣ್ ಗೊಗೊಯಿ ಅವರು ಎಐಯುಡಿಎಫ್ ಜತೆ ಮೈತ್ರಿ ಮಾಡಿಕೊಂಡಿರಲಿಲ್ಲ. ಆದರೆ, ಈಗ ಸ್ಥಿತಿ ಬದಲಾಗಿದೆ. ಸಿಎಎ ವಿರುದ್ಧದ ಪಕ್ಷಗಳೆಲ್ಲವೂ ಒಂದಾಗಬೇಕು ಎಂದು ಮೊದಲು ಹೇಳಿದವನು ನಾನೇ. ಈ ಕಾರಣದಿಂದಲೇ ಕಾಂಗ್ರೆಸ್ ಎಐಯುಡಿಎಫ್ ಜತೆ ಕೈಜೋಡಿಸಿದೆ' ಎಂದರು.

'ಕಾಂಗ್ರೆಸ್ ಅವಕಾಶವಾದಿ ಪಕ್ಷ'



ಟಿಂಗ್‌ಕಾಂಗ್ (ಅಸ್ಸಾಂ) (ಪಿಟಿಐ): 'ಕಾಂಗ್ರೆಸ್ ಆನೆಯಂತೆ, ಅದಕ್ಕೆ ತೋರಿಸಲು ಮತ್ತು ಜಗಿಯಲು ಪ್ರತ್ಯೇಕ ಹಲ್ಲುಗಳಿವೆ. ಅದು ಒಂದು ವಿಚಾರವನ್ನು ಹೇಳುತ್ತದೆ, ಅದಕ್ಕೆ ವಿರುದ್ಧವಾದುದನ್ನು ಮಾಡುತ್ತದೆ' ಎಂದು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಆರೋಪಿಸಿದ್ದಾರೆ.

ಇಲ್ಲಿ ಬಿಜೆಪಿಯ ಚುನಾವಣಾ ಪ್ರಚಾರ ಸಭೆಯನ್ನು ಉದ್ದೇಶಿಸಿ ಅವರು ಮಾತನಾಡಿದ್ದಾರೆ. 'ಕಾಂಗ್ರೆಸ್‌ನದ್ದು ಅವಕಾಶವಾದಿ ರಾಜಕಾರಣ. ಕೇರಳದಲ್ಲಿ ಎಡಪಕ್ಷಗ ವಿರುದ್ಧ ಸ್ಪರ್ಧಿಸುತ್ತಿದೆ. ಪಶ್ಚಿಮ ಬಂಗಾಳ ಮತ್ತು ಅಸ್ಸಾಂನಲ್ಲಿ ಎಡಪಕ್ಷಗಳ ಜತೆ ಕೈಜೋಡಿಸಿದೆ' ಎಂದು ಆರೋಪಿಸಿದರು.

'ಕಾಂಗ್ರೆಸ್‌ನ ನಾಯಕಿಯೊಬ್ಬರು ಈಚೆಗೆ ಟ್ವಿಟರ್‌ನಲ್ಲಿ ಚಹಾ ಎಲೆ ಬಿಡಿಸುವ ಚಿತ್ರ ಹಾಕಿಕೊಂಡಿದ್ದರು. ಅಸ್ಸಾಂನಲ್ಲಿ ಏಪ್ರಿಲ್ ನಂತರವೇ ಚಹಾ ಎಲೆಗಳನ್ನು ಬಿಡಿಸಲಾಗುತ್ತದೆ. ಹಾಗಿದ್ದರೆ, ಕಾಂಗ್ರೆಸ್ ನಾಯಕಿಯು ಫೋಟೊಶೂಟ್‌ಗಾಗಿ ಚಹಾ ಎಲೆ ಬಿಡಿಸುವ ಗಿಮಿಕ್ ಮಾಡಿದರೆ? ಈ ಮೂಲಕ ಅವರು ಜನರನ್ನು ವಂಚಿಸುತ್ತಿದ್ದಾರೆ' ಎಂದರು.

ಶಬರಿಮಲೆ ಪ್ರವೇಶ: ಸಿಪಿಎಂ ನಿಲುವಿಗೆ ಬಿಜೆಪಿ, ಕಾಂಗ್ರೆಸ್ ತರಾಟೆ

ತಿರುವನಂತಪುರ (ಕೇರಳ) (ಪಿಟಿಐ): ಶಬರಿಮಲೆ ದೇವಸ್ಥಾನಕ್ಕೆ ಮಹಿಳೆಯರ ಪ್ರವೇಶ ಕುರಿತಂತೆ ಸುಪ್ರೀಂಕೋರ್ಟ್‌ಗೆ ತಾನು ಸಲ್ಲಿಸಿರುವ ಪ್ರಮಾಣಪತ್ರಕ್ಕೆ ಬದ್ಧ ಇರುವುದಾಗಿ ಸಿಪಿಎಂ ಸೋಮವಾರ ಸ್ಪಷ್ಟಪಡಿಸಿದೆ. ಇದಕ್ಕೆ ಬಿಜೆಪಿ ಹಾಗೂ ಕಾಂಗ್ರೆಸ್ ತೀಕ್ಷ್ಣ ಪ್ರತಿಕ್ರಿಯೆ ನೀಡಿವೆ.

'ಈ ವಿಷಯದ ಬಗ್ಗೆ ಎಲ್‌ಡಿಎಫ್ ಸರ್ಕಾರ ತನ್ನ ಮೂಲ ಅರ್ಜಿಯಲ್ಲಿ ತೆಗೆದುಕೊಂಡಿರುವ ನಿಲುವಿಗೆ ಬದ್ಧವಾಗಿದ್ದು, ಅದನ್ನು ಮುಂದುವರಿಸಲಾಗುವುದು' ಎಂದು ಸಿಪಿಎಂ ರಾಜ್ಯ ಕಾರ್ಯದರ್ಶಿ ಕಾನಂ ರಾಜೇಂದ್ರನ್ ತಿಳಿಸಿದ್ದಾರೆ.

ಮತ್ತೊಂದೆಡೆ, ಚುನಾವಣಾ ಸಮಯದಲ್ಲಿ ಶಬರಿಮಲೆ ಘಟನೆಯನ್ನು ಚರ್ಚೆಯ ವಿಷಯವನ್ನಾಗಿ ಮಾಡಲು ಕೆಲವರು ಉದ್ದೇಶಪೂರ್ವಕ ಪ್ರಯತ್ನಿಸಿದ್ದಾರೆ ಎಂದು ಸಿಪಿಎಂ ಹೇಳಿದೆ.

ಸರ್ಕಾರದ ಪ್ರಮಾಣಪತ್ರದಲ್ಲಿ ಯಾವುದೇ ಬದಲಾವಣೆ ಇಲ್ಲ ಎಂದಿರುವ ರಾಜೇಂದ್ರನ್ ಅವರ ನಿಲುವಿಗೆ ಬಿಜೆಪಿ ತೀಕ್ಷ್ಣ ಪ್ರತಿಕ್ರಿಯೆ ನೀಡಿದೆ. 'ಪವಿತ್ರ ಭೂಮಿಯನ್ನು ಮತ್ತೆ ಗಲಭೆಯ ಸ್ಥಳವನ್ನಾಗಿ ಸರ್ಕಾರ ಮಾಡಲಿದೆ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಕೆ. ಸುರೇಂದ್ರನ್ ಹೇಳಿದ್ದಾರೆ.

'ರಾಜೇಂದ್ರನ್ ಅವರ ಹೇಳಿಕೆಯು ಮಾರ್ಕ್ಸ್‌ವಾದಿ ಸರ್ಕಾರದ ಅಪ್ರಾಮಾಣಿಕ ನಡೆಯನ್ನು ಬಹಿರಂಗಪಡಿಸಿದೆ' ಎಂದು ಕಾಂಗ್ರೆಸ್ ಹಿರಿಯ ಮುಖಂಡ ಕೆ.ಮುರಳೀಧರನ್ ಅವರು ಹೇಳಿದರು. ಸರ್ಕಾರಕ್ಕೆ ಭಕ್ತರ ಮತಗಳು ಬೇಕೇ ಹೊರತು ತನ್ನ ನಿರ್ಧಾರದಲ್ಲಿ ಬದಲಾವಣೆ ಮಾಡಲು ಅದು ಸಿದ್ಧವಿಲ್ಲ ಎಂದು ಆರೋಪಿಸಿದ್ದಾರೆ.

ನಾಮಪತ್ರ ತಿರಸ್ಕೃತ, ಮೇಲ್ಮನವಿಯೂ ತಿರಸ್ಕೃತ

ಕೊಚ್ಚಿ: ತಮ್ಮ ನಾಮಪತ್ರಗಳನ್ನು ತಿರಸ್ಕರಿಸುವುದನ್ನು ಪ್ರಶ್ನಿಸಿ ಹೈಕೋರ್ಟ್ ಮೆಟ್ಟಿಲೇರಿದ್ದ ಮೂವರು ಎನ್‌ಡಿಎ ಅಭ್ಯರ್ಥಿಗಳಿಗೆ ನಿರಾಸೆಯಾಗಿದೆ. ಅಭ್ಯರ್ಥಿಗಳ ಮನವಿಯನ್ನು ಕೇರಳ ಹೈಕೋರ್ಟ್ ಸೋಮವಾರ ತಿರಸ್ಕರಿಸಿದೆ.

ಚುನಾವಣೆಗೆ ಅಧಿಸೂಚನೆ ಹೊರಡಿಸಿದ ನಂತರ ನ್ಯಾಯಾಲಯವು ಮಧ್ಯಪ್ರವೇಶಿಸಲು ಸಾಧ್ಯವಿಲ್ಲ ಎಂಬ ಚುನಾವಣಾ ಆಯೋಗದ ವಾದವನ್ನು ನ್ಯಾಯಮೂರ್ತಿ ಎನ್. ನಾಗರೇಶ್ ಒಪ್ಪಿಕೊಂಡರು.

ಬಿಜೆಪಿಯ ಎನ್. ಹರಿದಾಸ್ ಮತ್ತು ನಿವೇದಿತಾ ಸುಬ್ರಮಣಿಯನ್ ಹಾಗೂ ಎಐಎಡಿಎಂಕೆ ಅಭ್ಯರ್ಥಿ ಆರ್.ಎಂ. ಧನಲಕ್ಷ್ಮಿ ಅವರು ಕೋರ್ಟ್ ಮೊರೆ ಹೋಗಿದ್ದರು. ಅಭ್ಯರ್ಥಿಗಳು ಸಲ್ಲಿಸಿದ್ದ ಪ್ರಮಾಣಪತ್ರಗಳು ಅಪೂರ್ಣವಾಗಿವೆ ಎಂಬ ಕಾರಣಕ್ಕೆ ನಾಮಪತ್ರಗಳನ್ನು ತಿರಸ್ಕರಿಸಲಾಗಿತ್ತು.

ಹರಿದಾಸ್ ಅವರು ತಲಶೇರಿಯಿಂದ, ನಿವೇದಿತಾ ಅವರು ಗುರುವಾಯೂರಿನಿಂದ, ಧನಲಕ್ಷ್ಮಿ ಅವರು ಇಡುಕ್ಕಿ ಜಿಲ್ಲೆಯ ದೇವಿಕುಳಂನಿಂದ ಸ್ಪರ್ಧೆ ಬಯಸಿದ್ದರು.

ರೋಸಾಕುಟ್ಟಿ ರಾಜೀನಾಮೆ

ವಯನಾಡ್: ಕೇರಳ ಕಾಂಗ್ರೆಸ್ ಘಟಕಕ್ಕೆ ಸೋಮವಾರ ಮತ್ತೊಂದು ಆಘಾತ ಎದುರಾಗಿದೆ. ಹಿರಿಯ ನಾಯಕಿ ಹಾಗೂ ಎಐಸಿಸಿ ಸದಸ್ಯೆ ಕೆ.ಸಿ. ರೋಸಾಕುಟ್ಟಿ ಅವರು ಪಕ್ಷಕ್ಕೆ ರಾಜೀನಾಮೆ ನೀಡಿದ್ದಾರೆ. ಪಕ್ಷದ ಪ್ರಾಥಮಿಕ ಸದಸ್ಯತ್ವವನ್ನು ತೊರೆದಿರುವ ಅವರು, ಸಿಪಿಎಂ ನೇತೃತ್ವದ ಎಲ್‌ಡಿಎಫ್ ಜೊತೆ ಕೆಲಸ ಮಾಡಲು ನಿರ್ಧರಿಸಿದ್ದಾರೆ.

'ಸುದೀರ್ಘ ಚರ್ಚೆಗಳ ನಂತರ ನಾನು ಈ ನಿರ್ಧಾರವನ್ನು ತೆಗೆದುಕೊಂಡಿದ್ದೇನೆ. ಪಕ್ಷದಲ್ಲಿನ ಬಣಗಳ ಕಿತ್ತಾಟದಿಂದ ನಾನು ಬೇಸರಗೊಂಡಿದ್ದೇನೆ. ಹೀಗಾಗಿ ರಾಜೀನಾಮೆ ನೀಡಲು ನಿರ್ಧರಿಸಿದ್ದೇನೆ' ಎಂದು ರೋಸಾಕುಟ್ಟಿ ಹೇಳಿದ್ದಾರೆ. ಕಾಂಗ್ರೆಸ್ ಜತೆಗಿನ 37 ವರ್ಷಗಳ ಒಡನಾಟವನ್ನು ಅವರು ಕೊನೆಗೊಳಿಸಿದ್ದಾರೆ.

'ಪಕ್ಷವು ಮಹಿಳೆಯರನ್ನು ಕಡೆಗಣಿಸುವುದನ್ನು ಒಪ್ಪಿಕೊಳ್ಳಲಾಗುವುದಿಲ್ಲ. ಬಿಂದು ಕೃಷ್ಣಾ ಅವರು ಕೊಲ್ಲಂನಿಂದ ಅಭ್ಯರ್ಥಿಯಾಗಿ ಘೋಷಣೆಯಾಗುವುದಕ್ಕೂ ಮುನ್ನ ಮಾಧ್ಯಮಗಳ ಎದುರು ಕಣ್ಣೀರಿಡಬೇಕಾಯಿತು. ವಿವಿಧ ವಿಷಯಗಳ ಬಗ್ಗೆ ಪಕ್ಷವು ತೆಗೆದುಕೊಂಡ ನಿಲುವಿನಿಂದ ನಿರಾಸೆಯಾಗಿದೆ ಎಂದು ರೋಸಾಕುಟ್ಟಿ ಹೇಳಿದ್ದಾರೆ.

ದೇವಸ್ಥಾನಗಳ ಆಡಳಿತ ಭಕ್ತರಿಗೆ ಹಸ್ತಾಂತರ: ಡಿವಿಎಸ್

ತಿರುವನಂತಪುರ (ಪಿಟಿಐ): ಕೇರಳ ರಾಜ್ಯವು ರಾಷ್ಟ್ರವಿರೋಧಿ ಚಟುವಟಿಕೆಗಳ ತಾಣವಾಗಿದೆ ಎಂದು ಕೇಂದ್ರ ಸಚಿವ ಡಿ.ವಿ. ಸದಾನಂದ ಗೌಡ ಅವರು ಸೋಮವಾರ ಆರೋಪಿಸಿದ್ದಾರೆ. ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದರೆ, ಉತ್ತರ ಪ್ರದೇಶ ಮಾದರಿಯಲ್ಲಿ ಲವ್ ಜಿಹಾದ್ ಕಾನೂನು ಜಾರಿ ಮಾಡಲಾಗುವುದು ಎಂದರು ಹೇಳಿದರು.

ಪಕ್ಷದ ಪರವಾಗಿ ಪ್ರಚಾರಕ್ಕಾಗಿ ರಾಜ್ಯಕ್ಕೆ ಬಂದಿರುವ ಅವರು, ರಾಜ್ಯದ ದೇವಾಲಯಗಳನ್ನು ನಿರ್ವಹಿಸುವ ದೇವಸ್ವಂ ಮಂಡಳಿಗಳನ್ನು ರದ್ದುಪಡಿಸಿ ಭಕ್ತರಿಗೆ ಹಸ್ತಾಂತರಿಸಲಾಗುವುದು ಎಂದು ಹೇಳಿದರು. 'ದೇವಸ್ವಂ ಮಂಡಳಿಗಳು ಸಿಪಿಎಂ ಪಕ್ಷದ ಚಟುವಟಿಕೆಯ ಕೇಂದ್ರಗಳಾಗಿದ್ದು, ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದರೆ ಅವುಗಳನ್ನು ರದ್ದುಗೊಳಿಸಲಾಗುವುದು ಎಂದು ಭರವಸೆ ನೀಡಿದರು.


ಕೇಂದ್ರ ಸಚಿವ ಡಿ.ವಿ. ಸದಾನಂದಗೌಡ ಅವರು ತಿರುವನಂತಪುರದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು —ಪಿಟಿಐ ಚಿತ್ರ

ಇತಿಹಾಸ ಬದಲಿಸಲು ಬಿಜೆಪಿ ಹೊರಟಿದೆ: ಮಮತಾ ಬ್ಯಾನರ್ಜಿ ಆರೋಪ



ಪಶ್ಚಿಮ ಬಂಗಾಳದ ಹೌರಾ ಜಿಲ್ಲೆಯ ಶಿವಪುರ ಕ್ಷೇತ್ರದ ಟಿಎಂಸಿ ಅಭ್ಯರ್ಥಿ ಮನೋಜ್ ತಿವಾರಿ ಅವರು ಪ್ರಚಾರದ ವೇಳೆ ಜನರೊಂದಿಗೆ ಮಾತನಾಡಿದರು ಪಿಟಿಐ ಚಿತ್ರ

ಕೋತಲ್ಪುರ (ಪಶ್ಚಿಮ ಬಂಗಾಳ) (ಪಿಟಿಐ): 'ಡಾ. ಬಿ.ಆರ್.ಅಂಬೇಡ್ಕರ್, ರವೀಂದ್ರನಾಥ ಟ್ಯಾಗೋರ್ ಅವರ ಗಿಂತಲೂ ಪ್ರಧಾನಿ ನರೇಂದ್ರ ಮೋದಿ ಅವರೇ ದೊಡ್ಡವರು ಎಂದು ಬಿಂಬಿಸಲು ಬಿಜೆಪಿ ಹೊರಟಿದೆ' ಎಂದು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಆರೋಪಿಸಿದ್ದಾರೆ.

'ಭಾರತದ ಇತಿಹಾಸ ಮತ್ತು ಭೌಗೋಳಿಕ ನಕ್ಷೆಯನ್ನು ತನಗೆ ಬೇಕಾದಂತೆ ಬದಲಿಸಲು ಬಿಜೆಪಿ ಹೊರಟಿದೆ. ಸರ್ದಾರ್ ಪಟೇಲ್ ಕ್ರೀಡಾಂಗಣಕ್ಕೆ ಮೋದಿ ಅವರ ಹೆಸರಿಡಲಾಗಿದೆ. ಮುಂದೊಂದು ದಿನ ಅವರು ಭಾರತಕ್ಕೂ ಮೋದಿಯ ಹೆಸರನ್ನೇ ಇಡುವ ಅಪಾಯವಿದೆ ಎಂದು ಅವರು ಇಲ್ಲಿ ನಡೆದ ಪ್ರಚಾರ ಸಭೆಯಲ್ಲಿ ಟೀಕಿಸಿದ್ದಾರೆ.

'ಮತದಾರರನ್ನು ಬೆದರಿಸಲು ಬಿಜೆಪಿಯು ಬೇರೆ ರಾಜ್ಯಗಳಿಂದ ಗೂಂಡಾಗಳನ್ನು ಕರೆಯಿಸಿಕೊಂಡಿದೆ. ಈ ಗೂಂಡಾಗಳು ನಿಮ್ಮ ಮನೆಗೆ ಬಂದು ಮತ ಕೇಳುತ್ತಾರೆ. ನೀವು ನಿರಾಕರಿಸಿದರೆ, ಬೆದರಿಸುತ್ತಾರೆ. ಅವರ ಬೆದರಿಕೆಗೆ ನೀವು ಸೊಪ್ಪುಹಾಕಬೇಕಿಲ್ಲ. ನಿಮ್ಮ ಮನೆಯಲ್ಲಿನ ಪಾತ್ರೆಗಳಿಂದ ಅವರನ್ನು ಅಟ್ಟಾಡಿಸಿ ಓಡಿಸಿ' ಎಂದು ಅವರು ಕರೆ ನೀಡಿದ್ದಾರೆ.

'ಬಿಜೆಪಿಯವರು ನಿಮ್ಮ ಮತಗಳನ್ನು ಸೆಳೆಯಲು ಉಡುಗೊರೆ ನೀಡುತ್ತಿದ್ದಾರೆ. ಉಡುಗೊರೆ ಪಡೆದುಕೊಳ್ಳಬೇಡಿ ಎಂದು ನಾನು ಹೇಳುವುದಿಲ್ಲ. ಆದರೆ, ಬಿಜೆಪಿಗೆ ಮತ ನೀಡಬೇಡಿ' ಎಂದು ಮಮತಾ ಹೇಳಿದ್ದಾರೆ.


ಹೊನ್ನಾಟ
ಚಿಕ್ಕೋಡಿ ತಾಲ್ಲೂಕಿನ ಕೇರೂರ ಗ್ರಾಮದ ಅರಣ್ಯಸಿದ್ದೇಶ್ವರ ಜಾತ್ರೆಯ ಕೊನೆಯ ದಿನವಾದ ಸೋಮವಾರ ದೇವವಾಣಿ ಆಲಿಸಲು ನೆರೆದ ಭಕ್ತಸಮೂಹ
ಚಿತ್ರ: ಸುಜಿತ್ ತೋರಸೆ, ಕೇರೂರ

'ಲಾಕ್‌ಡೌನ್–ಸೆಮಿ ಲಾಕ್‌ಡೌನ್ ಇಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೋವಿಡ್ ಎರಡನೇ ಅಲೆಯನ್ನು ತಡೆಯಲು ಕಟ್ಟುನಿಟ್ಟಿನ ಕ್ರಮ ವಹಿಸಲಾಗಿದೆ. ಸೆಮಿ ಲಾಕ್‌ಡೌನ್ ಅಥವಾ ಲಾಕ್‌ಡೌನ್ ಇಂದಿನ ಪರಿಸ್ಥಿತಿಗೆ ಅನ್ವಯವಾಗುವುದಿಲ್ಲ' ಎಂದು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ.ಸುಧಾಕರ್ ತಿಳಿಸಿದರು.


ಸಚಿವ ಡಾ.ಕೆ. ಸುಧಾಕರ್

ಸುದ್ದಿಗಾರರೊಂದಿಗೆ ಸೋಮವಾರ ಮಾತನಾಡಿದ ಅವರು, 'ಮಹಾರಾಷ್ಟ್ರ, ಕೇರಳ ಗಡಿಭಾಗಗಳಿಂದ ಬರುವ ಜನರ ಮೇಲೆ ತೀವ್ರ ನಿಗಾ ಇರಿಸುವುದು' ಎಂದರು.

'ಗಡಿಭಾಗಗಳಲ್ಲಿ ಕ್ರಮ ವಹಿಸಲು ಗೃಹ ಇಲಾಖೆಯ ಸಹಯೋಗ ಬೇಕಿದೆ. ಇದಕ್ಕಾಗಿ ಮುಖ್ಯಮಂತ್ರಿ ಅವರು ಈಗಾಗಲೇ ಸಭೆ ನಡೆಸಿದ್ದಾರೆ' ಎಂದರು.

ಉಪ ಚುನಾವಣೆಗೆ ಅಧಿಸೂಚನೆ ಪ್ರಕಟ ಇಂದು

ಅಭ್ಯರ್ಥಿ ಆಯ್ಕೆ ಕಗ್ಗಂಟು; ರಂಗೇರದ ಕಣ

• ಎಂ. ಮಹೇಶ

ಬೆಳಗಾವಿ: ಬೆಳಗಾವಿ ಲೋಕಸಭಾ ಕ್ಷೇತ್ರದ ಉಪ ಚುನಾವಣೆ ದಿನಾಂಕ ಘೋಷಣೆಯಾಗಿ (ಮಾರ್ಚ್ 16ರಂದು) ವಾರವೇ ಕಳೆದಿದೆ. ಮಂಗಳವಾರ (ಮಾರ್ಚ್ 23ರಂದು) ಅಧಿಸೂಚನೆ ಕೂಡ ಹೊರಬೀಳಲಿದ್ದು, ನಾಮಪತ್ರ ಸಲ್ಲಿಸಲು ಅಂದಿನಿಂದಲೇ ಅವಕಾಶವಿದೆ. ಆದರೆ, ಪ್ರಮುಖ ರಾಜಕೀಯ ಪಕ್ಷಗಳಾದ ಬಿಜೆಪಿ ಮತ್ತು ಕಾಂಗ್ರೆಸ್‌ನಿಂದ ಅಭ್ಯರ್ಥಿಗಳ ಆಯ್ಕೆ ಕಸರತ್ತು ಇನ್ನೂ ಪೂರ್ಣಗೊಂಡಿಲ್ಲ.

ನಾಮಪತ್ರ ಸಲ್ಲಿಕೆಗೆ ಮಾರ್ಚ್ 30 ಕೊನೆಯ ದಿನವಾಗಿದ್ದು, ಏ.17ರಂದು ಮತದಾನ ನಡೆಯಲಿದೆ. ಅಭ್ಯರ್ಥಿಗಳ ಘೋಷಣೆ ಆಗದೆ ಉಭಯ ಪಕ್ಷಗಳ ಕಾರ್ಯಕರ್ತರಲ್ಲೂ ಹುಮ್ಮಸ್ಸು ಕಂಡುಬರುತ್ತಿಲ್ಲ.

ಆಕಾಂಕ್ಷಿಗಳ ಸಂಖ್ಯೆ ಹೆಚ್ಚಿರುವುದು ಬಿಜೆಪಿಗೆ ಗೊಂದಲ ಉಂಟು ಮಾಡಿದ್ದರೆ, ಪ್ರಬಲ ಅಭ್ಯರ್ಥಿಗಳೇ ಇಲ್ಲದಿರುವುದು ಕಾಂಗ್ರೆಸ್ ಪಕ್ಷಕ್ಕೆ ತಲೆನೋವಾಗಿ ಪರಿಣಮಿಸಿದೆ ಎಂದು ವಿಶ್ಲೇಷಿಸಲಾಗುತ್ತಿದೆ.


ಉಪ ಚುನಾವಣೆಗೆ ಬೇಕಾದ ಸಿದ್ಧತೆ ಮಾಡಿಕೊಂಡಿದ್ದೇವೆ. ಮಾರ್ಚ್ 25 ಅಥವಾ 26ರಂದು ಅಭ್ಯರ್ಥಿ ಹೆಸರು ಘೋಷಣೆಯಾಗಲಿದೆ ಪ್ರಚಾರಕ್ಕೆ ಸಾಕಷ್ಟು ಸಮಯ ಸಿಗಲಿದೆ
ಸತೀಶ ಜಾರಕಿಹೊಳಿ, ಕಾರ್ಯಾಧ್ಯಕ್ಷರು, ಕೆಪಿಸಿಸಿ


ಟಿಕೆಟ್ ಹಂಚಿಕೆ ವಿಚಾರದಲ್ಲಿ ಈಗಾಗಲೇ ಸಮಾಲೋಚನೆ ನಡೆದಿದೆ. ಶೀಘ್ರವೇ ಘೋಷಣೆಯಾಗುವ ಸಾಧ್ಯತೆ ಇದೆ. ಬಳಿಕ ಪ್ರಚಾರ ಕಾರ್ಯ ಚುರುಕು ಪಡೆಯಲಿದೆ
ಎಂ.ಬಿ. ಝಿರಲಿ ವಕ್ತಾರರು, ಬಿಜೆಪಿ ರಾಜ್ಯ ಘಟಕ

ರೈಲ್ವೆ ಖಾತೆ ರಾಜ್ಯ ಸಚಿವರಾಗಿದ್ದ ಸುರೇಶ ಅಂಗಡಿ ಅಕಾಲಿಕ ನಿಧನದಿಂದ ಎದುರಾಗಿರುವ ಈ ಚುನಾವಣೆಯಲ್ಲಿ ಅವರ ಕುಟುಂಬದವರಿಗೆ ಟಿಕೆಟ್ ನೀಡಬೇಕು ಎಂಬ ಒತ್ತಾಯ ಆ ಪಕ್ಷದಲ್ಲಿದೆ. ಅಂಗಡಿ ಪುತ್ರಿಯೂ ಮತ್ತು ಸಚಿವ ಜಗದೀಶ ಶೆಟ್ಟರ್ ಸೊಸೆ ಶ್ರದ್ಧಾ ಶೆಟ್ಟರ್ ಹೆಸರನ್ನು ರಾಜ್ಯ ಘಟಕದಿಂದ ಅಂತಿಮಗೊಳಿಸಿ ಶಿಫಾರಸು ಮಾಡಲಾಗಿದೆ ಎಂದು ತಿಳಿದುಬಂದಿದೆ. ಇನ್ನೊಂದೆಡೆ, ಕೆಎಲ್‌ಇ ಸಂಸ್ಥೆ ಕಾರ್ಯಾಧ್ಯಕ್ಷ ಡಾ.ಪ್ರಭಾಕರ ಕೋರೆ, ವಿಧಾನ ಪರಿಷತ್ ಮುಖ್ಯಸಚೇತಕ ಮಹಾಂತೇಶ ಕವಟಗಿಮಠ ಅವರ ಹೆಸರುಗಳೂ ಕೇಳಿ ಬರುತ್ತಿವೆ.

'ಚುನಾವಣೆಗೆ ಎಲ್ಲ ರೀತಿಯ ಸಿದ್ಧತೆ ಮಾಡಿಕೊಂಡಿದ್ದೇವೆ. ದಿನಾಂಕ ಘೋಷಣೆ ಆಗುತ್ತಿದ್ದಂತೆಯೇ ಅಭ್ಯರ್ಥಿಯ ಹೆಸರು ಪ್ರಕಟಿಸಲಾಗುವುದು' ಎಂದು ಎರಡೂ ಪಕ್ಷಗಳ ವರಿಷ್ಠರು, ಘೋಷಣೆಗೂ ಮುನ್ನವೇ ತಿಳಿಸಿದ್ದರು. ಆದರೆ, ಯಾರಿಗೆ ಟಿಕೆಟ್ ನೀಡಬೇಕು ಎನ್ನುವುದನ್ನು ನಿರ್ಧರಿಸಲು ಆ ಪಕ್ಷಗಳ ಹೈಕಮಾಂಡ್‌ಗಳಿಗೆ ಈವರೆಗೂ ಸಾಧ್ಯವಾಗಿಲ್ಲ. ಅಭ್ಯರ್ಥಿಗಳ ಆಯ್ಕೆ ಕಗ್ಗಂಟಾಗಿ ಪರಿಣಮಿಸಿರುವುದು ವಿಳಂಬಕ್ಕೆ ಕಾರಣವಾಗಿದೆ.

ಆಡಳಿತ ಪಕ್ಷದಿಂದ ಅಭ್ಯರ್ಥಿ ಘೋಷಣೆ ಬಳಿಕ ತನ್ನ ಕಾರ್ಯತಂತ್ರ ಹೆಣೆಯಲು ಕಾಂಗ್ರೆಸ್ ಯೋಜಿಸಿದೆ. ಹೀಗಾಗಿಯೇ ಕಾದು ನೋಡುವ ತಂತ್ರ ಅನುಸರಿಸುತ್ತಿದೆ ಎನ್ನಲಾಗುತ್ತಿದೆ. ಕೆಪಿಸಿಸಿ ಕಾರ್ಯಾಧ್ಯಕ್ಷ ಸತೀಶ ಜಾರಕಿಹೊಳಿ ಹೆಸರು ಬಲವಾಗಿ ಕೇಳಿಬಂದಿದೆ. ಆದರೆ, ಅವರು ನವದೆಹಲಿಗೆ ತೆರಳಿ ಹೈಕಮಾಂಡ್ ಜೊತೆ ಚರ್ಚಿಸಿದ ನಂತರ ಅಭಿಪ್ರಾಯ ತಿಳಿಸುವುದಾಗಿ ಹೇಳಿದ್ದಾರೆ. ಇದೆಲ್ಲವನ್ನೂ ಗಮನಿಸಿದರೆ, ಕಾಂಗ್ರೆಸ್ ಅಭ್ಯರ್ಥಿ ಘೋಷಣೆಗೆ ಇನ್ನೂ ಕೆಲವು ದಿನಗಳು ಬೇಕಾಗಬಹುದು ಎನ್ನಲಾಗುತ್ತಿದೆ.

ಗ್ರಾಮ ಪಂಚಾಯಿತಿ ಅಧ್ಯಕ್ಷ ಜೊನ್ನಿಕೆರೆ ಅವರೊಂದಿಗೆ ವಿಡಿಯೊ ಸಂವಾದ

ಗ್ರಾ.ಪಂ ಕಾರ್ಯಕ್ಕೆ ಪ್ರಧಾನಿ ಮೆಚ್ಚುಗೆ

ಪ್ರಜಾವಾಣಿ ವಾರ್ತೆ

ಬೀದರ್: ಕೆರೆ ಪುನರುಜ್ಜೀವನಗೊಳಿಸಿ ಗ್ರಾಮದ ಜನರ ಕುಡಿಯುವ ನೀರಿನ ಸಮಸ್ಯೆ ನಿವಾರಿಸಿದ ಹಾಗೂ ಅಂತರ್ಜಲ ಮಟ್ಟ ಹೆಚ್ಚಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ ಔರಾದ್ ತಾಲ್ಲೂಕಿನ ಧೂಪತ್‌ಮಹಾಗಾಂವ ಗ್ರಾಮ ಪಂಚಾಯಿತಿಯ ಕಾರ್ಯಕ್ಕೆ ಪ್ರಧಾನಿ ನರೇಂದ್ರ ಮೋದಿ ಮೆಚ್ಚುಗೆ ವ್ಯಕ್ತಪಡಿಸಿದರು.

ಪ್ರಧಾನಿ ಅವರು ಗ್ರಾಮ ಪಂಚಾಯಿತಿಗಳ ಅಧ್ಯಕ್ಷರೊಂದಿಗೆ ಸೋಮವಾರ ನಡೆಸಿದ ವಿಡಿಯೊ ಸಂವಾದದಲ್ಲಿ ಈ ಗ್ರಾಮ ಪಂಚಾಯಿತಿ ಅಧ್ಯಕ್ಷ ಶ್ರೀನಿವಾಸ ಜೊನ್ನಿಕೆರೆ ಭಾಗವಹಿಸಿದ್ದರು.

'ನಮ್ಮ ಗ್ರಾಮದಲ್ಲಿರುವ 12ನೇ ಶತಮಾನದ ಗೊಗ್ಗವೆ ಕೆರೆ ಎರಡು ವರ್ಷಗಳ ಹಿಂದೆ ಬತ್ತಿ ಹೋಗಿತ್ತು. ಲಾಕ್‌ಡೌನ್ ಅವಧಿಯಲ್ಲಿ ಗ್ರಾಮ ಸಭೆ ನಡೆಸಿ ನರೇಗಾ ಯೋಜನೆಯಲ್ಲಿ 120 ಜನ ಸೇರಿಕೊಂಡು ಕೆರೆ ಹೂಳೆತ್ತಿದೆವು. ಈಗ ಕೆರೆಯಲ್ಲಿ ನೀರು ಸಂಗ್ರಹವಾಗಿದೆ. ಇದೇ ಕೆರೆಯಿಂದ ಗ್ರಾಮದ 800 ಜನರಿಗೆ ಕುಡಿಯುವ ನೀರು ಪೂರೈಸುತ್ತಿದ್ದೇವೆ. ಜಾನುವಾರುಗಳ ಕುಡಿಯುವ ನೀರಿನ ಸಮಸ್ಯೆಯೂ ನಿವಾರಣೆಯಾಗಿದೆ' ಎಂದು ಶ್ರೀನಿವಾಸ ವಿವರಿಸಿದರು.

'ಗ್ರಾಮದಲ್ಲಿ ಕುಡಿಯುವ ನೀರಿನ ಸಮಸ್ಯೆ ಇತ್ತು. ಹೀಗಾಗಿ ಜನರು ಪಂಚಾಯಿತಿಯೊಂದಿಗೆ ಕೈಜೋಡಿಸಿದರು. ಗ್ರಾಮದ ಪರಿಸರದಲ್ಲಿ ಅಂತರ್ಜಲ ಮಟ್ಟ 400 ಅಡಿ ಆಳದ ವರೆಗೆ ಕುಸಿದಿತ್ತು. ಕೆರೆಯಲ್ಲಿ ನೀರು ನಿಲ್ಲಿಸಿದ ನಂತರ ಅಂತರ್ಜಲ ಮಟ್ಟ 150 ಅಡಿ ವರೆಗೆ ಬಂದಿದೆ' ಎಂದು ತಿಳಿಸಿದರು.

'ಅಕ್ಕಪಕ್ಕದ ಗ್ರಾಮಗಳ ಜನರು ನಮ್ಮ ಕೆಲಸ ನೋಡಲು ಬರುತ್ತಿದ್ದಾರೆ. ನಮ್ಮ ಯಶೋಗಾಥೆಯನ್ನು ಆಸಕ್ತಿಯಿಂದ ಆಲಿಸುತ್ತಿದ್ದಾರೆ. ನಾವು ಬೇರೆ ಬೇರೆ ಪಂಚಾಯಿತಿಗಳಿಗೆ ತೆರಳಿ ಜಲ ಸಂರಕ್ಷಣೆಯ ಮಾಹಿತಿ ನೀಡುತ್ತಿದ್ದೇವೆ' ಎಂದು ಹೇಳಿದರು.

ಜಲಸಂರಕ್ಷಣೆಗೆ ಮುಂದಾಗಿ: 'ದೇಶದ ಗ್ರಾಮ ಪಂಚಾಯಿತಿಗಳು ಸ್ವಪ್ರೇರಣೆಯಿಂದ ಜಲ ಸಂರಕ್ಷಣೆಯ ಕಾರ್ಯ ಕೈಗೆತ್ತಿಕೊಳ್ಳಬೇಕು. ಗ್ರಾಮಸ್ಥರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಕೆರೆ ಹೂಳೆತ್ತುವ ಕಾಮಗಾರಿ ಕೈಗೊಳ್ಳಬೇಕು. ಮುಂಗಾರನ್ನು ಹಬ್ಬದ ಮಾದರಿಯಲ್ಲಿ ಬರಮಾಡಿಕೊಳ್ಳಬೇಕು. ನೀರು ಉಳಿಸುವುದು ಅಷ್ಟೇ ಅಲ್ಲ, ಅದನ್ನು ಸಮರ್ಪಕವಾಗಿ ಬಳಸುವುದಕ್ಕೂ ಮಹತ್ವ ಕೊಡಬೇಕು' ಎಂದು ಪ್ರಧಾನಿ ಮೋದಿ ಮನವಿ ಮಾಡಿದರು.

'ಜಲ ಸಂರಕ್ಷಣೆಗೆ ಬುಡಕಟ್ಟು ಸಮುದಾಯದವರೇ ನಮಗೆ ಮಾದರಿ. ಬೆಟ್ಟಗುಡ್ಡಗಳಲ್ಲಿ ವಾಸವಾಗಿದ್ದರೂ ಅವರಿಗೆ ನೀರಿನ ಮಹತ್ವ ಗೊತ್ತಿದೆ. ನೀರಿನ ಗಂಭೀರ ಸಮಸ್ಯೆ ಅನುಭವಿಸುವ ವ್ಯಕ್ತಿಗಳು ಅದಕ್ಕೆ ಶಾಶ್ವತ ಪರಿಹಾರ ಹುಡುಕಬಲ್ಲರು. ನೀರಿನ ಸಮಸ್ಯೆ ಇರುವ ಪ್ರದೇಶದ ವ್ಯಕ್ತಿಯನ್ನೇ ನಾನು ಈ ಖಾತೆಗೆ ಸಚಿವರನ್ನಾಗಿ ಮಾಡಿದ್ದೇನೆ' ಎಂದು ಹೇಳಿದರು.


ನವದೆಹಲಿಯಿಂದ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಬೀದರ್ ಜಿಲ್ಲೆ ಔರಾದ್ ತಾಲ್ಲೂಕಿನ ಧೂಪತ್‌ಮಹಾಗಾಂವ ಗ್ರಾಮ ಪಂಚಾಯಿತಿ ಅಧ್ಯಕ್ಷ ಶ್ರೀನಿವಾಸ ಜೊನ್ನಿಕೆರೆ ಅವರೊಂದಿಗೆ ವಿಡಿಯೊ ಸಂವಾದ ನಡೆಸಿದರು

ಪ್ರಧಾನಿ ಅವರು ದೇಶದ ಐದು ಗ್ರಾಮ ಪಂಚಾಯಿತಿಗಳ ಪೈಕಿ ನಮ್ಮ ಪಂಚಾಯಿತಿಯನ್ನೂ ಆಯ್ಕೆ ಮಾಡಿಕೊಂಡು ಸಂವಾದ ನಡೆಸಿರುವುದರಿಂದ ಖುಷಿಯಾಗಿದೆ.
ಶ್ರೀನಿವಾಸ ಜೊನ್ನಿಕೆರೆ, ಔರಾದ್ ತಾಲ್ಲೂಕಿನ ಧೂಪತ್‌ಮಹಾಗಾಂವ ಪಂಚಾಯಿತಿ ಅಧ್ಯಕ್ಷ

'ಗೆಟ್‌ಸೆಟ್ ಗೋ' ವ್ಯವಸ್ಥೆಗೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಈ ಬಾರಿ ಕೂಡಾ ಸಿಇಟಿ, ನೀಟ್ ಜತೆಗೆ ಜೆಇಇ ಪರೀಕ್ಷೆ ತೆಗೆದುಕೊಳ್ಳುವ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣ ಇಲಾಖೆ ವಿಶೇಷ ತರಬೇತಿ ನೀಡುವ 'ಗೆಟ್-ಸೆಟ್ ಗೋ' ವ್ಯವಸ್ಥೆಗೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಸೋಮವಾರ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಮುಖ್ಯಮಂತ್ರಿ, 'ಸಿಇಟಿ ಮತ್ತು ನೀಟ್‌ಗೆ ಮಾತ್ರ ತರಬೇತಿ ನೀಡುತ್ತಿದ್ದ ಆನ್‌ಲೈನ್ ತರಬೇತಿಯನ್ನು ಈ ವರ್ಷದಿಂದ ಜೆಇಇ ವಿದ್ಯಾರ್ಥಿಗಳಿಗೂ ವಿಸ್ತರಿಸಲಾಗಿದೆ. ಇದರಿಂದ ಸಾಮಾಜಿಕವಾಗಿ, ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ಅನುಕೂಲವಾಗಲಿದೆ' ಎಂದರು.

ಉನ್ನತ ಶಿಕ್ಷಣ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥ ನಾರಾಯಣ, 'ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ವತಿಯಿಂದ ಮುಂದಿನ ಶೈಕ್ಷಣಿಕ ವರ್ಷದಿಂದ 'ಗೆಟ್ ಸೆಟ್ ಗೋ' ತರಬೇತಿ ವರ್ಷಪೂರ್ತಿ ನಡೆಯಲಿದೆ' ಎಂದರು.

'ಕಲಿಕೆ, ಪರಿಷ್ಕರಣೆ ಹಾಗೂ ಪರೀಕ್ಷೆ ಪರಿಕಲ್ಪನೆಯಲ್ಲಿ 'ಗೆಟ್ ಸೆಟ್ ಗೋ ತರಬೇತಿ ವ್ಯವಸ್ಥೆ ರೂಪಿಸಲಾಗಿದೆ. ಇದರಲ್ಲಿ ನೀಟ್, ಜೆಇಇ, ಸಿಇಟಿ ಪರೀಕ್ಷಾರ್ಥಿಗಳಿಗೆ ಅಗತ್ಯವಾದ ಅಧ್ಯಯನ ಸಾಮಗ್ರಿಯ ಜತೆಗೆ ವಿಡಿಯೊಗಳು, ಪಠ್ಯ ಸಾರಾಂಶ, ಸಂವಾದಾತ್ಮಕ ಪರೀಕ್ಷೆಗಳು ಇರುತ್ತವೆ. ಐಐಟಿಗಳಲ್ಲಿ ರಾಜ್ಯದ ವಿದ್ಯಾರ್ಥಿಗಳ ಪ್ರಮಾಣ ಹೆಚ್ಚಿಸುವ ಗುರಿಯಿಂದ ಈ ಹೆಜ್ಜೆ ಇಡಲಾಗುತ್ತಿದೆ' ಎಂದರು.

'ವೆಬ್‌ಸೈಟ್, ಯುಟ್ಯೂಬ್ ಅಥವಾ ಗೆಟ್ ಸೆಟ್ ಗೋ ಆ್ಯಪ್ ಮೂಲಕ ಕೋಚಿಂಗ್ ಪಡೆಯಬಹುದು. ಈ ಆ್ಯಪ್ ಆಂಡ್ರಾಯಿಡ್, ಐಓಎಸ್‌ನಲ್ಲೂ ಲಭ್ಯ. ಇದಕ್ಕೆ ಗೂಗಲ್ ಆ್ಯಪ್ ಸ್ಟೋರ್‌ನಲ್ಲಿ 4.3 ರೇಟಿಂಗ್ ಇದೆ. ವಿದ್ಯಾರ್ಥಿಗಳು getcetgo.in ವೆಬ್ ಪೋರ್ಟ್, ಗೂಗಲ್ ಪ್ಲೇಸ್ಟೋರ್ ಆಂಡ್ರಾಯ್ಡ್ ಆ್ಯಪ್ GetCETGO ಮೂಲಕ ಮಾಹಿತಿ ಪಡೆಯಬಹುದು. ತಮ್ಮ ವಿವರಗಳನ್ನು ದಾಖಲಿಸಿ ನೋಂದಣಿ ಮಾಡಿಕೊಳ್ಳಬಹುದು' ಎಂದು ಉಪ ಮುಖ್ಯಮಂತ್ರಿ ತಿಳಿಸಿದರು.

'ಕಳೆದ ವರ್ಷ ಎರಡು ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ತರಬೇತಿ ನೀಡಿದ್ದ ದೀಕ್ಷಾ ಸಂಸ್ಥೆ ಈ ವರ್ಷ ಕೂಡಾ ತರಬೇತಿ ನೀಡಲಿದೆ. ಕೋವಿಡ್ ಕಾರಣದಿಂದ ವಿದ್ಯಾರ್ಥಿ ಮತ್ತು ಪೋಷಕರು ಇನ್ನೂ ಹೊರಬಾರದ ಕಾರಣ ಸರ್ಕಾರ ಈ ಕಾರ್ಯಕ್ರಮ ಮುಂದುವರಿಸಲು ನಿರ್ಧರಿಸಿದೆ. ಸಿಇಟಿ, ನೀಟ್ ಜತೆಗೆ ಜೆಇಇ ಪರೀಕ್ಷೆಗೂ ತಯಾರಿ ನಡೆಸುತ್ತಿರುವ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗೆ ಆನ್‌ಲೈನ್ ಮೂಲಕ ಅತ್ಯುತ್ತಮ ತರಬೇತಿ ನೀಡಲಾಗುವುದು' ಎಂದರು.

'ಕಾಲೇಜುಗಳು ಸ್ಥಗಿತ ಇಲ್ಲ'

'ಕೋವಿಡ್ ಕಾರಣದಕ್ಕೆ ಸದ್ಯ ಕಾಲೇಜುಗಳನ್ನು ಸ್ಥಗಿತ ಮಾಡುವುದಿಲ್ಲ. ಈಗಾಗಲೇ ಒಂದು ವರ್ಷ ವ್ಯರ್ಥವಾಗಿರುವುದು ಸಾಕು' ಎಂದು ಅಶ್ವತ್ಥನಾರಾಯಣ ಹೇಳಿದರು. 'ನೇರ ತರಗತಿಗೆ ಹಾಜರಾಗುವುದು ಕಡ್ಡಾಯವಲ್ಲ. ಆಫ್‌ಲೈನ್‌ನಲ್ಲೂ ಹಾಜರಾಗಬಹುದು. ಆದರೆ, ಹಾಜರಾತಿ ಕಡ್ಡಾಯ. ಶಿಕ್ಷಣ ಸಂಸ್ಥೆಗಳು ಇನ್ನೂ ಉತ್ತಮವಾಗಿ ಕೋವಿಡ್ ಪರಿಸ್ಥಿತಿ ನಿಭಾಯಿಸಬೇಕು' ಎಂದು ಅವರು ಸಲಹೆ ನೀಡಿದರು.

ಮಸ್ಕಿ: ಸ್ಪರ್ಧೆಗೆ ಜೆಡಿಎಸ್ ಜಿಲ್ಲಾ ಘಟಕ ನಿರಾಸಕ್ತಿ

ರಾಯಚೂರು: ಮಸ್ಕಿ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಯಲ್ಲಿ ಅಭ್ಯರ್ಥಿಯನ್ನು ಕಣಕ್ಕಿಳಿಸುವುದು ಬೇಡ ಎಂದು ಜೆಡಿಎಸ್ ಜಿಲ್ಲಾ ಘಟಕವು ತನ್ನ ಪಕ್ಷದ ವರಿಷ್ಠರಿಗೆ ಸಲಹೆ ನೀಡಿದೆ.

'ಸಿಂಧನೂರು ಶಾಸಕ ವೆಂಕಟರಾವ್ ನಾಡಗೌಡ, ಮಸ್ಕಿ ಶಾಸಕ ರಾಜಾ ವೆಂಕಟಪ್ಪ ನಾಯಕ ಹಾಗೂ ಮುಖಂಡರು, ಕಾರ್ಯಕರ್ತರೆಲ್ಲರೂ ಸೇರಿ ಚರ್ಚಿಸಿದ್ದೇವೆ. ಚುನಾವಣೆ ಘೋಷಣೆ ಆಗಿರುವುದರಿಂದ ಈಗ ತಯಾರಿ ಮಾಡಿಕೊಳ್ಳುವುದು ಕಷ್ಟ ಎಂಬ ವರದಿಯನ್ನು ವರಿಷ್ಠರಿಗೆ ನೀಡಿದ್ದೇವೆ' ಎಂದು ಜೆಡಿಎಸ್ ಜಿಲ್ಲಾ ಘಟಕದ ಅಧ್ಯಕ್ಷ ಎಂ.ವಿರೂಪಾಕ್ಷಪ್ಪ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

'ಒಂದು ವೇಳೆ ಸ್ಪರ್ಧಿಸಬೇಕು ಎಂದು ವರಿಷ್ಠರಿಂದ ಸೂಚನೆ ಬಂದರೆ, ಇಬ್ಬರು ಅಭ್ಯರ್ಥಿಗಳ ಹೆಸರು ಆಯ್ಕೆ ಮಾಡಿಕೊಂಡಿದ್ದೇವೆ' ಎಂದೂ ಅವರು ಹೇಳಿದರು.

ಮಸ್ಕಿ ಕ್ಷೇತ್ರ ಪರಿಶಿಷ್ಟ ಪಂಗಡ (ಎಸ್‌ಟಿ)ಕ್ಕೆ ಮೀಸಲಾಗಿದೆ.


ಅಟ್ಲಾಂಟಾ: ಸಂತ್ರಸ್ತ ಕುಟುಂಬಕ್ಕೆ ನೆರವು

ವಾಷಿಂಗ್ಟನ್ (ಎಪಿ): ಅಟ್ಲಾಂಟಾದಲ್ಲಿ ಮಸಾಜ್ ಪಾರ್ಲರ್‌ಗಳ ಮೇಲೆ ನಡೆದ ಗುಂಡಿನ ದಾಳಿಯಲ್ಲಿ ಸಂತ್ರಸ್ತರಾದ ಕುಟುಂಬಗಳಿಗೆ ನೆರವಿನ ಮಹಾಪೂರವೇ ಹರಿದು ಬರುತ್ತಿದೆ.ತಾಯಿಯ ಅಂತ್ಯಕ್ರಿಯೆ ನಡೆಸಲು ರ‍್ಯಾಂಡಿ ಪಾರ್ಕ್ ಫೇಸ್‌ಬುಕ್‌ನಲ್ಲಿ ಸಲ್ಲಿಸದ ಮನವಿಗೆ ₹ 21 ಲಕ್ಷ ಕೋಟಿಗೂ ಹೆಚ್ಚು ಹಣ ಬಂದಿದೆ.

ರಾಜ್ಯದಲ್ಲಿ ಸೋಮವಾರ ಹೊಸದಾಗಿ 1,445 ಮಂದಿಯಲ್ಲಿ ಸೋಂಕು ದೃಢ

ಕೋವಿಡ್ ಪ್ರಕರಣ ಅಲ್ಪ ಇಳಿಕೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಸತತ ಏರುಗತಿಯಲ್ಲಿದ್ದ ಕೋವಿಡ್ ಹೊಸ ಪ್ರಕರಣಗಳ ಸಂಖ್ಯೆ ಎರಡು ದಿನಗಳಿಂದ ಇಳಿಮುಖವಾಗಿವೆ. ಆದರೆ, ಸಾವಿಗೀಡಾದವರ ಸಂಖ್ಯೆ ಮತ್ತೆ ಎರಡಂಕಿ ತಲುಪಿದ್ದು, ಒಂದೇ ದಿನ ಹತ್ತು ಜನ ಮೃತಪಟ್ಟಿದ್ದಾರೆ.

ರಾಜ್ಯದಲ್ಲಿ ಸೋಮವಾರ ಹೊಸದಾಗಿ 1,445 ಮಂದಿಯಲ್ಲಿ ಸೋಂಕು ದೃಢಪಟ್ಟಿದೆ. ಭಾನುವಾರ 1,715 ಮಂದಿಗೆ ಸೋಂಕು ತಗುಲಿ, ಇಬ್ಬರು ಸಾವಿಗೀಡಾಗಿದ್ದರು. ಸೋಮವಾರ ಹೊಸ ಪ್ರಕರಣಗಳು 280 ಇಳಿಕೆಯಾಗಿದೆ. ಆದರೆ ಸಾವಿನ ಸಂಖ್ಯೆ ಎಂಟು ಹೆಚ್ಚಾಗಿದೆ. ಇನ್ನು ಭಾನುವಾರ ಒಂದು ಲಕ್ಷ ಪರೀಕ್ಷೆ ನಡೆಸಲಾಗಿತ್ತು. ಆದರೆ, ಮಾ.22ರಂದು 78 ಸಾವಿರ ಜನ ಮಾತ್ರ ಪರೀಕ್ಷೆಗೆ ಒಳಪಟ್ಟಿರುವುದು, ಹೊಸ ಪ್ರಕರಣಗಳ ಸಂಖ್ಯೆ ಇಳಿಯಲು ಕಾರಣವಾಗಿದೆ.

ಬೆಂಗಳೂರಿನಲ್ಲಿ ಅತಿ ಹೆಚ್ಚು ಅಂದರೆ 886, ಉಡುಪಿ 113, ಮೈಸೂರು 61, ತುಮಕೂರು ಮತ್ತು ಬೀದರ್ ತಲಾ 51, ದಕ್ಷಿಣ ಕನ್ನಡ 31, ಕಲಬುರ್ಗಿ 43 ಪ್ರಕರಣಗಳು ವರದಿಯಾಗಿವೆ. ಬೆಂಗಳೂರು 4, ಉತ್ತರ ಕನ್ನಡ, ತುಮಕೂರು, ಮೈಸೂರು, ಕಲಬುರಗಿ, ದಕ್ಷಿಣ ಕನ್ನಡದಲ್ಲಿ ತಲಾ ಒಂದು ಸಾವಾಗಿದೆ.

ಒಟ್ಟಾರೆ 9.71 ಲಕ್ಷ ಮಂದಿ ಕೋವಿಡ್ ಪೀಡಿತರಾಗಿದ್ದು, 9.44 ಲಕ್ಷ ಮಂದಿ ಕೋವಿಡ್‌ನಿಂದ ಮುಕ್ತರಾಗಿದ್ದಾರೆ. 12,444 ಸೋಂಕಿತರು ಸಾವಿಗೀಡಾಗಿದ್ದಾರೆ. 14,267 ಸೋಂಕಿತರು ಆಸ್ಪತ್ರೆ, ಮನೆಯಲ್ಲಿ ಚಿಕಿತ್ಸೆ, ಆರೈಕೆಯಲ್ಲಿದ್ದಾರೆ. ಈ ಪೈಕಿ 136 ಮಂದಿ ಪರಿಸ್ಥಿತಿ ಗಂಭೀರವಾಗಿದ್ದು, ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಲಸಿಕೆ: ಸೋಮವಾರ 72.879 ಹಿರಿಯ ನಾಗರಿಕರು, 19727 ಆರೋಗ್ಯ ಸಮಸ್ಯೆಯುಳ್ಳವರು, ಆರೋಗ್ಯ ಮತ್ತು ಮುಂಚೂಣಿ ಕಾರ್ಯಕರ್ತರು ಸೇರಿ ಒಟ್ಟು 99,361 ಮಂದಿ ಲಸಿಕೆ ಪಡೆದಿದ್ದಾರೆ.

‘ಕಾಡಲಿದೆ ಲಸಿಕೆ ಕೊರತೆ’

ಲಸಿಕೆ ವಿತರಣೆ ಕಾರ್ಯ ಚುರುಕಿನಿಂದ ನಡೆದಿರುವ ಬೆನ್ನಲ್ಲೇ ಒಂದೆರಡು ದಿನಗಳಲ್ಲಿ ಲಸಿಕೆ ಕೊರತೆ ಕಾಡಲಿದೆ ಎಂದು ಆರೋಗ್ಯ ಇಲಾಖೆಯ ಅಧಿಕಾರಿಗಳು ಹೇಳಿದ್ದಾರೆ.

‘ಎರಡು ದಿನಗಳಲ್ಲಿ ಲಸಿಕೆಯ ಕೊರತೆ ತಲೆದೋರಬಹುದು. ಆದರೆ, ಹೆಚ್ಚುವರಿ ಲಸಿಕೆಗಳನ್ನು ಪೂರೈಸುವಂತೆ ಈಗಾಗಲೇ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿದೆ’ ಎಂದು ಆರೋಗ್ಯ ಇಲಾಖೆಯ ಕಾರ್ಯದರ್ಶಿ ಜಾವೇದ್ ಅಖ್ತರ್ ತಿಳಿಸಿದರು.

‘8 ಸಾವಿರ ಡೋಸ್ ಲಸಿಕೆಯನ್ನು ಈಗಾಗಲೇ ವಿತರಿಸಲಾಗಿದೆ. ಮಂಗಳವಾರದವರೆಗೆ ಇದು ಸಾಕಾಗಲಿದೆ. ಬುಧವಾರದಿಂದ ಯಾವುದೇ ಡೋಸ್ ಲಭ್ಯ ಇರುವುದಿಲ್ಲ’ ಎಂದು ಬಳ್ಳಾರಿ ಜಿಲ್ಲೆಯ ಅಧಿಕಾರಿಗಳು ಹೇಳಿದರು.

ನಿಯಮ ವಿಸ್ತರಣೆ

ಕೊರೊನಾ ಎರಡನೇ ಅಲೆ ನಿಯಂತ್ರಿಸಲು ಕೇರಳ ಮತ್ತು ಮಹಾರಾಷ್ಟ್ರದಿಂದ ಬರುವ ಪ್ರಯಾಣಿಕರಿಗೆ ಜಾರಿ ಮಾಡಿರುವ ನಿಯಮವನ್ನು ಪಂಜಾಬ್ ಮತ್ತು ಚಂಡೀಗಡಕ್ಕೂ ವಿಸ್ತರಿಸಲಾಗಿದೆ. ಈ ರಾಜ್ಯಗಳಿಂದ ಕರ್ನಾಟಕಕ್ಕೆ ಬರುವ ಪ್ರಯಾಣಿಕರು 72 ಗಂಟೆಗಳಿಗಿಂತ ಹಳೆಯದಲ್ಲದ ಕೋವಿಡ್ ನೆಗಟಿವ್ ವರದಿ ಹೊಂದಿರುವುದು ಕಡ್ಡಾಯ ಎಂದು ಆರೋಗ್ಯ ಇಲಾಖೆ ಹೇಳಿದೆ.

ಶಿಕ್ಷಕರ ಸಂಘದ ವಂಚನೆ: ‘ಸುಪ್ರೀಂ’ ನೋಟಿಸ್

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಪದಾಧಿಕಾರಿಗಳಿಗೆ ಸಂಬಂಧಿಸಿದ ವಂಚನೆ ಪ್ರಕರಣದಲ್ಲಿ ರಾಜ್ಯ ಹೈಕೋರ್ಟ್ ನೀಡಿರುವ ಆದೇಶದ ಸಿಂಧುತ್ವ ಪ್ರಶ್ನಿಸಿ ಕರ್ನಾಟಕ ಲೋಕಾಯುಕ್ತದಿಂದ ಸಲ್ಲಿಕೆಯಾಗಿರುವ ಮೇಲ್ಮನವಿಯ ವಿಚಾರಣೆ ಕುರಿತು ಪರಿಶೀಲಿಸುವುದಾಗಿ ಸುಪ್ರೀಂ ಕೋರ್ಟ್ ತಿಳಿಸಿದೆ.

ಸಂಘದ ಅಧ್ಯಕ್ಷ ಹಾಗೂ ಖಜಾಂಚಿಯವರು ಸರ್ಕಾರಿ ನೌಕರರಲ್ಲ ಹಾಗಾಗಿ ಈ ಪದಾಧಿಕಾರಿಗಳನ್ನು ಸಂಘದ ನಿಧಿಯ ದುರ್ಬಳಕೆ ಮತ್ತು ವಂಚನೆ ಆರೋಪದಲ್ಲಿ ಲೋಕಾಯುಕ್ತದ ಭ್ರಷ್ಟಾಚಾರ ನಿಗ್ರಹ ದಳದ ವಿಚಾರಣೆಗೆ ಒಳಪಡಿಸಲು ಸಾಧ್ಯವಿಲ್ಲ ಎಂದು ರಾಜ್ಯ ಹೈಕೋರ್ಟ್ 2020ರ ಮಾರ್ಚ್ 26ರಂದು ಆದೇಶ ನೀಡಿದೆ.

ನ್ಯಾಯಮೂರ್ತಿಗಳಾದ ವಿನೀತ್ ಸರನ್, ಸಂಜೀವ್ ಖನ್ನಾ ಅವರಿದ್ದ ಪೀಠವು, ರಾಜ್ಯ ಸರ್ಕಾರ, ಸಂಘದ ಅಧ್ಯಕ್ಷ ವಿ.ಎಂ. ನಾರಾಯಣಸ್ವಾಮಿ ಮತ್ತು ಖಜಾಂಚಿ ಎಸ್.ಟಿ. ಗಂಗಣ್ಣವರ ಅವರಿಗೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸೋಮವಾರ ನೋಟಿಸ್ ಜಾರಿ ಮಾಡಿದೆ.

‘ಸಂಘದ ಸದಸ್ಯತ್ವವು ಕೇವಲ ರಾಜ್ಯ ಸರ್ಕಾರಿ ಉದ್ಯೋಗಿಗಳಿಗೆ ಮೀಸಲಿದ್ದು, ಈ ಇಬ್ಬರೂ ಪದಾಧಿಕಾರಿಗಳು ಸರ್ಕಾರಿ ನೌಕರರೇ ಆಗಿದ್ದಾರೆ’ ಎಂದು ಲೋಕಾಯುಕ್ತ ಪರ ವಾದ ಮಂಡಿಸಿದ ವಕೀಲ ಶೈಲೇಶ್ ಮಡಿಯಾಳ್ ನ್ಯಾಯಪೀಠಕ್ಕೆ ತಿಳಿಸಿದರು.

ಸರ್ಕಾರಿ ನೌಕರರು ಮಾತ್ರವೇ ಸಂಘದ ಸದಸ್ಯ ಹಾಗೂ ಪದಾಧಿಕಾರಿ ಆಗಬಹುದು. ಆದರೆ, ಸರ್ಕಾರಿ ನೌಕರ ಮತ್ತು ಪದಾಧಿಕಾರಿ ಹುದ್ದೆಗಳ ವ್ಯತ್ಯಾಸ ಅರಿಯುವಲ್ಲಿ ಹೈಕೋರ್ಟ್ ಪ್ರಮಾದ ಎಸಗಿದೆ. ಲೋಕಾಯುಕ್ತ ಕಾಯ್ದೆಗೆ ಸೀಮಿತವಾಗಿಸಿ ಸಂಘದ ಪದಾಧಿಕಾರಿಗಳನ್ನು ಸರ್ಕಾರಿ ನೌಕರರಲ್ಲ ಎಂದು ತಿಳಿಸಲು ಹೈಕೋರ್ಟ್ ಪ್ರಯತ್ನಿಸುವ ಮೂಲಕ ಸಂಘದ ಸದಸ್ಯತ್ವವು ಸರ್ಕಾರಿ ನೌಕರರಿಗಾಗಿ ಮಾತ್ರ ಇದೆ ಎಂಬುದನ್ನು ಮರೆತಂತಿದೆ ಎಂದು ವಿವರಿಸಿದರು.

‘ಶಿಕ್ಷಕರಿಗೆ ಸ್ಮಾರ್ಟ್ ಕಾರ್ಡ್ ಹಂಚುವ ಸಲುವಾಗಿ ಅವರ ಸಂಬಳದಿಂದಲೇ ತಲಾ ₹ 210ರಂತೆ ಒಟ್ಟು ₹ 3.78 ಕೋಟಿ ಸಂಗ್ರಹಿಸಿದ್ದ ಸಂಘದ ಅಧ್ಯಕ್ಷ ಹಾಗೂ ಖಜಾಂಚಿ, ಈ ಸಂಬಂಧ ಟೆಂಡರ್ ಕರೆಯದೆಯೇ ನಿಯಮ ಉಲ್ಲಂಘಿಸಿದ್ದಾರೆ. 2011 ಹಾಗೂ 2014ರಲ್ಲಿ ಕೂಡಲಸಂಗಮ ಮತ್ತು ಹುಬ್ಬಳ್ಳಿಯಲ್ಲಿ ಶಿಕ್ಷಕರಿಗಾಗಿ ಏರ್ಪಡಿಸಿದ್ದ ವಿಚಾರ ಸಂಕಿರಣಕ್ಕೆ ಮಾಡಲಾದ ವೆಚ್ಚಕ್ಕೂ ಲೆಕ್ಕ ನೀಡಿಲ್ಲ’ ಎಂದು ಆರೋಪಿಸಿ ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಧಾರವಾಡ ಜಿಲ್ಲಾ ಘಟಕದ ಅಧ್ಯಕ್ಷ ಶಂಕರಗೌಡ ಪಾಟೀಲ ಅವರು ನೀಡಿದ್ದ ದೂರಿನನ್ವಯ, ಭ್ರಷ್ಟಾಚಾರ ನಿಗ್ರಹ ದಳದ ಪೊಲೀಸ್ ವರಿಷ್ಠಾಧಿಕಾರಿ ಪ್ರಕರಣ ದಾಖಲಿಸಿದ್ದರು.

ನಾಲ್ವರು ಎಲ್‌ಇಟಿ ಉಗ್ರರ ಹತ್ಯೆ

ಶ್ರೀನಗರ: ಜಮ್ಮು–ಕಾಶ್ಮೀರದ ಶೋಪಿಯಾನ್ ಜಿಲ್ಲೆಯಲ್ಲಿ ಭದ್ರತಾ ಸಿಬ್ಬಂದಿ ಮತ್ತು ಉಗ್ರರ ನಡುವೆ ಗುಂಡಿನ ಚಕಮಕಿ ನಡೆದಿದ್ದು, ಲಷ್ಕರ್ ಇ ತೊಯಿಬಾ (ಎಲ್‌ಇಟಿ) ಸಂಘಟನೆಗೆ ಸೇರಿದ ನಾಲ್ವರು ಉಗ್ರರು ಹತರಾಗಿದ್ದಾರೆ. ಸ್ಥಳದಲ್ಲಿ ಉಗ್ರರಿಗೆ ಸೇರಿದ್ದ 3 ಪಿಸ್ತೂಲ್, ಎ.ಕೆ. ರೈಫಲ್ ಪತ್ತೆಯಾಗಿದ್ದು, ಜಪ್ತಿ ಮಾಡಿರುವುದಾಗಿ ಪೊಲೀಸರು ತಿಳಿಸಿದ್ದಾರೆ.

ರಾಜ್ಯಗಳಿಂದ ಬಾರದ ಉತ್ತರ: ಸುಪ್ರೀಂ ಗರಂ



ನವದೆಹಲಿ (ಪಿಟಿಐ): ಶೌಚಗುಂಡಿ ಶುಚಿಗೊಳಿಸುವ ಕಾರ್ಮಿಕರ (ಮ್ಯಾನುಯಲ್ ಸ್ಕ್ಯಾವೆಂಜಿಂಗ್) ಸಾವಿನ ಕುರಿತಂತೆ ಪ್ರತಿಕ್ರಿಯೆ ದಾಖಲಿಸಲು ರಾಜ್ಯಗಳಿಗೆ ಒತ್ತಾಯಿಸಲು ಸಾಧ್ಯವಿಲ್ಲ ಎಂದಿರುವ ಸುಪ್ರೀಂ ಕೋರ್ಟ್, ಈ ಕುರಿತು ಸಲ್ಲಿಕೆಯಾಗಿರುವ ಅರ್ಜಿಯ ವಿಚಾರಣೆ ಮುಂದುವರಿಸುವುದಾಗಿ ತಿಳಿಸಿದೆ.

ಮುಖ್ಯ ನ್ಯಾಯಮೂರ್ತಿ ಎಸ್.ಎ. ಬೊಬಡೆ, ನ್ಯಾಯಮೂರ್ತಿಗಳಾದ ಎ.ಎಸ್.ಬೋಪಣ್ಣ ಮತ್ತು ವಿ. ರಾಮಸುಬ್ರಮಣಿಯನ್ ಅವರನ್ನೊಳಗೊಂಡ ನ್ಯಾಯಪೀಠವು ಈ ಕುರಿತು ವಿಚಾರಣೆಯನ್ನು ಆಗಸ್ಟ್ ಮೂರನೇ ವಾರ ನಡೆಸುವುದಾಗಿ ಹೇಳಿತು.

ಸೋಮವಾರ ನಡೆದ ವಿಚಾರಣೆಯ ಸಂದರ್ಭದಲ್ಲಿ, ‘ಕ್ರಿಮಿನಲ್ ಜಸ್ಟಿಸ್ ಸೊಸೈಟಿ ಆಫ್ ಇಂಡಿಯಾ’ ಎನ್‌ಜಿಒ ಪರ ಹಾಜರಾದ ವಕೀಲೆ ಅಶಿಮಾ ಮಾಂಡ್ಲಾ, ದೇಶದಲ್ಲಿ ಪ್ರತಿ 5 ದಿನಗಳಿಗೆ ಶೌಚ ಗುಂಡಿ ಶುಚಿಗೊಳಿಸುವ ಒಬ್ಬ ಕಾರ್ಮಿಕ ಬಲಿಯಾಗುತ್ತಿದ್ದಾನೆ. ಈ ವಿಷಯವು ರಾಜ್ಯಸಭೆಯಲ್ಲೂ ಚರ್ಚೆಯಾಗಿದೆ ಎಂದು ತಿಳಿಸಿದರು.

2019ರ ಫೆಬ್ರುವರಿಯಲ್ಲಿ ಈ ವಿಷಯಕ್ಕೆ ಸಂಬಂಧಿಸಿದಂತೆ ನೀಡಲಾಗಿದ್ದ ನೋಟಿಸ್‌ಗೆ 40ಕ್ಕೂ ಹೆಚ್ಚಿನ ಪ್ರತಿಕ್ರಿಯೆ ಬರಬೇಕಿತ್ತು. ಆದರೆ 13 ರಾಜ್ಯಗಳು ಮಾತ್ರ ಪ್ರಮಾಣ ಪತ್ರ ಸಲ್ಲಿಸಿವೆ ಎಂದು ಮಾಂಡ್ಲಾ ಹೇಳಿದರು.

‘ಕ್ಯಾಚ್ ದಿ ರೈನ್’ ಅಭಿಯಾನ: ಪ್ರಧಾನಿ ಮೋದಿ ಚಾಲನೆ

‘ನರೇಗಾ ಅನುದಾನ ಜಲಸಂರಕ್ಷಣೆಗೆ ಬಳಸಿ’

ಪ್ರಜಾವಾಣಿ ವಾರ್ತೆ

ನವದೆಹಲಿ: ‘ಮಹಾತ್ಮಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ (ನರೇಗಾ) ಯೋಜನೆಗೆ ಮೀಸಲಿಟ್ಟಿರುವ ಅನುದಾನದ ಪ್ರತಿ ಪೈಸೆಯನ್ನೂ ಮುಂಗಾರು ಆರಂಭವಾಗುವವರೆಗೂ ಮಳೆ ನೀರು ಸಂರಕ್ಷಣೆ ಉದ್ದೇಶಗಳಿಗೆ ವ್ಯಯಿಸಲು ಒತ್ತು ನೀಡಬೇಕು’ ಎಂದು ಪ್ರಧಾನಿ ನರೇಂದ್ರ ಮೋದಿ ಸೋಮವಾರ ಸಲಹೆ ನೀಡಿದರು.

ವಿಶ್ವ ಜಲ ದಿನಾಚರಣೆ ಅಂಗವಾಗಿ ಕ್ಯಾಚ್ ದಿ ರೈನ್’ ‘ಜಲ ಶಕ್ತಿ ಅಭಿಯಾನಕ್ಕೆ ವರ್ಚುವಲ್ ವೇದಿಕೆಯಲ್ಲಿ ಚಾಲನೆ ನೀಡಿದ ಅವರು, ‘ಭಾರತದಲ್ಲಿ ಮಳೆ ನೀರು ಬಹುತೇಕ ಪೋಲು ಆಗುತ್ತಿದೆ. ಇದು ಆತಂಕದ ವಿಷಯ. ಮಳೆ ನೀರು ಸಂರಕ್ಷಣೆ ಹೆಚ್ಚಿದಷ್ಟೂ ಅಂತರ್ಜಲದ ಮೇಲೆ ಅವಲಂಬನೆ ಕುಗ್ಗಲಿದೆ’ ಎಂದು ಪ್ರತಿಪಾದಿಸಿದರು.

‘ಭಾರತ ಜಲ ಸಂಪನ್ಮೂಲ ವಿಷಯದಲ್ಲಿ ಸ್ವಾವಲಂಬನೆ ಸಾಧಿಸಬೇಕಿದೆ. ಪರಿಣಾಮಕಾರಿ ಜಲ ಸಂರಕ್ಷಣಾ ವಿಧಾನ ಅಳವಡಿಸಿಕೊಳ್ಳದಿದ್ದರೆ, ದೇಶ ವೇಗವಾಗಿ ಅಭಿವೃದ್ಧಿ ಹೊಂದಲು ಸಾಧ್ಯವಿಲ್ಲ‘ ಎಂದು ಹೇಳಿದ ಪ್ರಧಾನಿ, ‘ನೀರನ್ನು ಜವಾಬ್ದಾರಿಯಿಂದ ಮತ್ತು ನ್ಯಾಯಯುತವಾಗಿ ಬಳಸಬೇಕು’ ಎಂದು ಸಲಹೆ ಮಾಡಿದರು.

ಈ ಕಾರ್ಯಕ್ರಮದಲ್ಲಿ ದೇಶದಾದ್ಯಂತ ವಿವಿಧ ಗ್ರಾಮ ಪಂಚಾಯಿತಿಗಳ ಅಧ್ಯಕ್ಷರು, ಸದಸ್ಯರು ಭಾಗವಹಿಸಿದ್ದರು. ಕೆಲವರು ಜಲ ಸಂರಕ್ಷಣೆ ಕುರಿತು ಕೈಗೊಂಡಿರುವ ಕಾರ್ಯಕ್ರಮಗಳ ಮಾಹಿತಿಯನ್ನು ಹಂಚಿಕೊಂಡರು.

‘ಕ್ಯಾಚ್ ದಿ ರೈನ್‘ ಅಭಿಯಾನವನ್ನು ದೇಶದಾದ್ಯಂತ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಆರಂಭಿಸಲಾಗುತ್ತಿದೆ. ನವೆಂಬರ್ 30ರವರೆಗೆ (ಮುಂಗಾರು ಮತ್ತು ಹಿಂಗಾರು ಅವಧಿ) ಈ ಅಭಿಯಾನವು ಚಾಲನೆಯಲ್ಲಿರುತ್ತದೆ.

ಜನರ ಸಕ್ರಿಯ ಸಹಭಾಗಿತ್ವದ ಮೂಲಕ ಜಲಸಂರಕ್ಷಣೆಯ ಕಾರ್ಯವನ್ನು ಕೆಳಹಂತದವರೆಗೂ ಒಯ್ಯುವುದು. ಹವಾಮಾನ ಪರಿಸ್ಥಿತಿ ಮತ್ತು ಮಣ್ಣಿನ ಗುಣಮಟ್ಟ ಆಧರಿಸಿ ನೀರಿನ ಪರಿಣಾಮಕಾರಿ ಸಂಗ್ರಹ ಮತ್ತು ಮಳೆ ನೀರು ಸಂರಕ್ಷಣೆಯ ಮಹತ್ವ ಕುರಿತು ಜಾಗೃತಿ ಮೂಡಿಸುವುದು ಇದರ ಉದ್ದೇಶವಾಗಿದೆ.



ಪ್ರಧಾನಿ ನರೇಂದ್ರ ಮೋದಿ ಅವರು ಸೋಮವಾರ ವಿಶ್ವ ಜಲದಿನದ ಅಂಗವಾಗಿ ‘ಜಲಶಕ್ತಿ ಅಭಿಯಾನ್: ಕ್ಯಾಚ್ ದಿ ರೈನ್‘ ಆಂದೋಲನಕ್ಕೆ ವಿಡಿಯೊ ಕಾನ್ಫರೆನ್ಸ್ ಮೂಲಕ ಚಾಲನೆ ನೀಡಿದರು —ಪಿಟಿಐ ಚಿತ್ರ

ಕೆನ್–ಬೆಟ್ವಾ ನದಿ ಜೋಡಣೆಗೆ ಸಹಿ

ನವದೆಹಲಿ (ಪಿಟಿಐ): ಕೆನ್ ಹಾಗೂ ಬೆಟ್ವಾ ನದಿಗಳ ಜೋಡಣೆಗೆ ಸಂಬಂಧಿಸಿದ ಮಹತ್ವದ ಒಪ್ಪಂದಕ್ಕೆ ಕೇಂದ್ರ ಜಲಶಕ್ತಿ ಸಚಿವಾಲಯ, ಮಧ್ಯಪ್ರದೇಶ ಮತ್ತು ಉತ್ತರಪ್ರದೇಶ ಸರ್ಕಾರಗಳು ಸೋಮವಾರ ಸಹಿ ಹಾಕಿದವು.


ಕೇಂದ್ರ ಜಲಶಕ್ತಿ ಸಚಿವ ಗಜೇಂದ್ರ ಸಿಂಗ್ ಶೇಖಾವತ್, ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಮತ್ತು ಮಧ್ಯಪ್ರದೇಶ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಅವರು ನದಿ ಜೋಡಣೆ ಒಪ್ಪಂದಕ್ಕೆ ಸಹಿ ಹಾಕಿದರು.

ದೌಧನ್ ಅಣೆಕಟ್ಟು ನಿರ್ಮಿಸಿ, ಕೆನ್ ನದಿಯಿಂದ ಬೆಟ್ವಾ ನದಿಗೆ ನೀರು ಹರಿಸುವುದು, ಎರಡು ನದಿಗಳನ್ನು ಸಂಪರ್ಕಿಸುವ ಕಾಲುವೆ ನಿರ್ಮಾಣ, ಲೋವರ್ ಓಆರ್‌ಆರ್ ಯೋಜನೆ, ಕೋಥಾ ಬ್ಯಾರೇಜ್ ಮತ್ತು ಬಿನಾ ಕಾಂಪ್ಲೆಕ್ಸ್ ನಿರ್ಮಾಣ ಸೇರಿದಂತೆ ವಿವಿಧೋದ್ದೇಶ ಯೋಜನೆಗಳನ್ನು ಇದು ಒಳಗೊಂಡಿದೆ.

ಈ ಯೋಜನೆಯಿಂದ ವಾರ್ಷಿಕ 10.62 ಲಕ್ಷ ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ದೊರೆಯಲಿದ್ದು, ಸುಮಾರು 62 ಲಕ್ಷ ಜನರಿಗೆ ಕುಡಿಯುವ ನೀರು ಪೂರೈಕೆಯಾಗುತ್ತದೆ. ಜತೆಗೆ, 103 ಮೆಗಾವಾಟ್ ಜಲವಿದ್ಯುತ್ ಉತ್ಪಾದನೆಯಾಗುತ್ತದೆ.

ಈ ಯೋಜನೆಯು ನೀರಿನ ಕೊರತೆಯಿಂದ ಬಳಲುತ್ತಿರುವ ಬುಂದೇಲ್‌ಖಂಡ್‌ನ ಪ್ರದೇಶಕ್ಕೆ, ವಿಶೇಷವಾಗಿ ಪನ್ನಾ, ಟಿಕಮ್‌ಗಡ, ಛತ್ತರ್‌ಪುರ್, ಸಾಗರ್, ದಮೋಹ್, ದಾಟಿಯಾ, ವಿದಿಶಾ, ಶಿವಪುರಿ ಮತ್ತು ಮಧ್ಯಪ್ರದೇಶದ ರೈಸನ್ ಮತ್ತು ಉತ್ತರ, ಬಾಂಡಾ, ಮಹೋಬಾ, ಝೂನ್ಸಿ ಮತ್ತು ಲಲಿತಪುರ ಜಿಲ್ಲೆಗಳಿಗೆ ಪ್ರಯೋಜನವಾಗಲಿದೆ ಎಂದು ಪ್ರಧಾನಿ ಕಚೇರಿಯ ಪ್ರಕಟಣೆ ತಿಳಿಸಿದೆ.

ಪನ್ನಾ ಹುಲಿ ಸಂರಕ್ಷಿತ ಪ್ರದೇಶ ನಾಶ: ‘ಕೆನ್ ಮತ್ತು ಬೆಟ್ವಾ ನದಿಗಳ ಜೋಡಣೆಯಿಂದ ಮಧ್ಯಪ್ರದೇಶದ ಪನ್ನಾ ಹುಲಿ ಮೀಸಲು ಅರಣ್ಯ ಪ್ರದೇಶ ನಾಶವಾಗಲಿದೆ’ ಎಂದು ಕಾಂಗ್ರೆಸ್ ನಾಯಕ ಜೈರಾಮ್ ರಮೇಶ್ ಆತಂಕ ವ್ಯಕ್ತಪಡಿಸಿದ್ದಾರೆ.



ಎನ್‌ಆರ್‌ಐ ಪತಿಯ ಕಿರುಕುಳ: ವಿಚಾರಣೆಗೆ ‘ಸುಪ್ರೀಂ’ ಸಮ್ಮತಿ


ನವದೆಹಲಿ (ಪಿಟಿಐ): ವರದಕ್ಷಿಣೆಗಾಗಿ ಹೆಂಡತಿಯರನ್ನು ಪೀಡಿಸಿದ ಅನಿವಾಸಿ ಭಾರತೀಯ (ಎನ್‌ಆರ್‌ಐ) ಗಂಡಂದಿರ ಬಂಧನಕ್ಕೆ ಸಂಬಂಧಿಸಿದ ಪ್ರಕರಣಗಳ ಅರ್ಜಿಗಳ ವಿಚಾರಣೆಗಳನ್ನು ಜುಲೈನಲ್ಲಿ ಕೈಗೆತ್ತಿಕೊಳ್ಳುವುದಾಗಿ ಸುಪ್ರೀಂ ಕೋರ್ಟ್ ಸೋಮವಾರ ಹೇಳಿದೆ.

ನ್ಯಾಯಪೀಠವು, ಮಹಿಳಾ ಅರ್ಜಿದಾರರ ಪರವಾಗಿರುವ ಹಿರಿಯ ವಕೀಲ ಕೊಲಿನ್ ಗೋನ್ಸಾಲ್ವಿಸ್ ಅವರಿಗೆ ಪ್ರಕರಣಗಳ ಕುರಿತು ಮಾಹಿತಿ ನೀಡಿದೆ.

ಮಹಿಳಾ ಅರ್ಜಿದಾರರ ಗುಂಪು ಪ್ರಕರಣಕ್ಕೆ ಸಂಬಂಧಿಸಿದಂತೆ ಮನವಿಯನ್ನು ಪೂರ್ಣಗೊಳಿಸಿದ್ದು, ನ್ಯಾಯಾಲಯದಲ್ಲಿ ವಾದಿಸಲು ಸಿದ್ಧವಾಗಿದೆ ಎಂದು ಅರ್ಜಿದಾರರ ಪರ ವಕೀಲ ಕೋರ್ಟ್ ಗಮನಕ್ಕೆ ತಂದರು. ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠವು ಈ ಪ್ರಕರಣಗಳ ವಿಚಾರಣೆಯನ್ನು ಜುಲೈ ತಿಂಗಳಿನಲ್ಲಿ ಕೈಗೆತ್ತಿಕೊಳ್ಳುವುದಾಗಿ ತಿಳಿಸಿತು.

ನಿಧನ ವಾರ್ತೆ

ಬಾಲಿವುಡ್ ಸಾಹಿತಿ, ನಿರ್ದೇಶಕ ಸಾಗರ್ ಸರಹದಿ



ಮುಂಬೈ: ಪ್ರಸಿದ್ಧ ಸಾಹಿತಿ, ಸಿನಿಮಾ ನಿರ್ದೇಶಕ ಸಾಗರ್ ಸರಹದಿ ಅವರು (88) ಭಾನುವಾರ ತಡರಾತ್ರಿ ಸಿಯಾನ್‌ನಲ್ಲಿರುವ ತಮ್ಮ ನಿವಾಸದಲ್ಲಿ ನಿಧನರಾದರು.

‘ವಯೊಸಹಜ ಅನಾರೋಗ್ಯದಿಂದ ಅವರು ಬಳಲುತ್ತಿದ್ದರು. ಸೋಮವಾರ ಬೆಳಿಗ್ಗೆ 11 ಗಂಟೆಗೆ ಸಿಯಾನ್ ಶವಗಾರದಲ್ಲಿ ಅವರ ಅಂತ್ಯಕ್ರಿಯೆ ನಡೆಸಲಾಯಿತು’ ಎಂದು ಅವರ ಸೋದರಳಿಯ ರಾಮೇಶ್ ತಲ್ವಾರ್ ತಿಳಿಸಿದರು.

ಸಾಗರ್ ಸರಹದಿ ಅವರು ಅಮಿತಾಭ್ ಬಚ್ಚನ್ ಮತ್ತು ರಾಖೀ ಅವರ ಅಭಿನಯದ ‘ಕಬೀ ಕಬೀ’ ಸಿನಿಮಾದ ಮೂಲಕ ಸಾಗರ್ ಅವರು ಬಾಲಿವುಡ್‌ಗೆ ಕಾಲಿಟ್ಟಿದ್ದರು. ‘ಸಿಲ್‌ಸಿಲಾ,’, ‘ಬಜಾರ್’ ಸಿನಿಮಾಗಳು ಅವರಿಗೆ ಜನಪ್ರಿಯತೆ ತಂದುಕೊಟ್ಟಿತ್ತು.

ಸಂಕ್ಷಿಪ್ತ ಸುದ್ದಿ

ಮ್ಯಾನ್ಮಾರ್: ಬಿಬಿಸಿ ಪತ್ರಕರ್ತ ಬಿಡುಗಡೆ

ಯಾಂಗೂನ್ (ಎಎಫ್‌ಪಿ): ‘ಮ್ಯಾನ್ಮಾರ್‌ನಲ್ಲಿ ಬಂಧಿಸಿದ್ದ ಬಿಬಿಸಿ ಪತ್ರಕರ್ತನನ್ನು ಸೋಮವಾರ ಬಿಡುಗಡೆಗೊಳಿಸಲಾಗಿದೆ’ ಎಂದು ಸುದ್ದಿ ಸಂಸ್ಥೆಯೊಂದು ಹೇಳಿದೆ.

ನೈಪಿತಾವ್‌ನ ನ್ಯಾಯಾಲಯದ ಮುಂದೆ ಪ್ರತಿಭಟನೆ ಕುರಿತಂತೆ ವರದಿ ಮಾಡುತ್ತಿದ್ದ ಬಿಬಿಸಿ ಪತ್ರಕರ್ತ ಆಂಗ್ ಥುರಾ ಅವರನ್ನು ಬಿಳಿ ಬಣ್ಣದ ವಸ್ತ್ರ ಧರಿಸಿದ್ದ ವ್ಯಕ್ತಿಗಳು ಶುಕ್ರವಾರ ಬಂಧಿಸಿದ್ದರು. ‘ಸದ್ಯ ಆಂಗ್ ಥುರಾ ಅವರನ್ನು ಬಿಡುಗಡೆಗೊಳಿಸಲಾಗಿದೆ. ಆದರೆ, ಈ ಬಗ್ಗೆ ಹೆಚ್ಚಿನ ಮಾಹಿತಿ ಲಭ್ಯವಿಲ್ಲ’ ಎಂದು ಸುದ್ದಿ ಸಂಸ್ಥೆ ತಿಳಿಸಿದೆ.

ಮ್ಯಾನ್ಮಾರ್‌ನಲ್ಲಿ ಮಿಲಿಟರಿ ಆಡಳಿತದ ವಿರುದ್ಧ ಪ್ರತಿಭಟನೆ ಮುಂದುವರಿದಿದ್ದು, ಸೋಮವಾರ ಶಿಕ್ಷಕರು ಸೇರಿದಂತೆ ಹಲವಾರು ಮಂದಿ ಮಾಂಡಲಾ ನಗರದಲ್ಲಿ ಜಮಾಯಿಸಿದ್ದರು.

ತೆಲಂಗಾಣ: ಸರ್ಕಾರಿ ನೌಕರರ ವೇತನ ಹೆಚ್ಚಳ

ಹೈದರಾಬಾದ್: ಕೊರೊನಾ ಸಾಂಕ್ರಾಮಿಕದ ಬಿಕ್ಕಟ್ಟಿನ ನಡುವೆಯೇ ಮುಖ್ಯಮಂತ್ರಿ ಕೆ. ಚಂದ್ರಶೇಖರ್ ರಾವ್ ಅವರು ತೆಲಂಗಾಣ ರಾಜ್ಯ ಸರ್ಕಾರಿ ನೌಕರರ ನಿವೃತ್ತಿ ವಯಸ್ಸನ್ನು 58ರಿಂದ 61 ವರ್ಷಕ್ಕೆ ಹೆಚ್ಚಿಸುವ ಜತೆಗೆ, ವೇತನವನ್ನು ಶೇ 30ರಷ್ಟು ಪರಿಷ್ಕರಿಸುವುದಾಗಿ ಘೋಷಿಸಿದ್ದಾರೆ.

ವೇತನ ಪರಿಷ್ಕರಣೆ ಏಪ್ರಿಲ್ 1, 2021ರಿಂದ ಅನ್ವಯವಾಗಲಿದ್ದು, ನಿವೃತ್ತಿ ವಯಸ್ಸಿನ ಹೆಚ್ಚಳ ತಕ್ಷಣದಿಂದಲೇ ಜಾರಿಗೆ ಬರಲಿದೆ. 'ಅನುಭವಿ ನೌಕರರ ಸೇವೆಯನ್ನು ಬಳಸಿಕೊಳ್ಳುವುದು ಈ ಕ್ರಮಗಳ ಉದ್ದೇಶವಾಗಿದೆ' ಎಂದು ಮುಖ್ಯಮಂತ್ರಿ ಹೇಳಿದ್ದಾರೆ. ನಿವೃತ್ತಿ ವಯಸ್ಸಿನ ಹೆಚ್ಚಳ, ಟಿಆರ್‌ಎಸ್ ಪಕ್ಷದ ಚುನಾವಣೆ ಪ್ರಣಾಳಿಕೆಯಲ್ಲಿ ನೀಡಿದ ಭರವಸೆಯಾಗಿತ್ತು.

ಸೋಮವಾರ ರಾಜ್ಯ ವಿಧಾನಸಭೆಯಲ್ಲಿ ನಿವೃತ್ತಿ ವಯಸ್ಸು ಹೆಚ್ಚಳ ಮತ್ತು ವೇತನ ಪರಿಷ್ಕರಣೆಯನ್ನು ಘೋಷಿಸಿದ ಚಂದ್ರಶೇಖರ ರಾವ್, ಸರ್ಕಾರದ ನಿರ್ಧಾರದಿಂದ 917 ಲಕ್ಷ ಸರ್ಕಾರಿ ನೌಕರರು, ಪಿಂಚಣಿದಾರರು, ಗುತ್ತಿಗೆ ಮತ್ತು ಹೊರಗುತ್ತಿಗೆ ನೌಕರರಿಗೆ

ಆಸ್ಟ್ರೇಲಿಯಾದಲ್ಲಿ ಪ್ರವಾಹ: 18 ಸಾವಿರ ಜನರ ಸ್ಥಳಾಂತರ

ಸಿಡ್ನಿ (ಎಪಿ): ಆಸ್ಟ್ರೇಲಿಯಾದ ಆಗ್ನೇಯ ಭಾಗದ ನ್ಯೂಸೌತ್ ವೇಲ್ಸ್ ರಾಜ್ಯದಲ್ಲಿ ಸುರಿಯುತ್ತಿರುವ ಭಾರಿ ಮಳೆಯಿಂದ ಪ್ರವಾಹ ಸ್ಥಿತಿ ಮುಂದುವರಿದಿದ್ದು, 18 ಸಾವಿರಕ್ಕೂ ಅಧಿಕ ಮಂದಿಯನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಲಾಗಿದೆ.

ಸೋಮವಾರ ಸಿಡ್ನಿಯ ಉತ್ತರ ಭಾಗದಲ್ಲಿ 100 ವರ್ಷಗಳಲ್ಲೇ ಅತ್ಯಂತ ದೊಡ್ಡ ಪ್ರವಾಹ ಪರಿಸ್ಥಿತಿ ಉಂಟಾಗಿದೆ. 200ಕ್ಕೂ ಹೆಚ್ಚು ಶಾಲೆಗಳನ್ನು ಮುಚ್ಚಲಾಗಿದೆ.

ತುಮಕೂರು ಹುಣಸೆಗೆ ಜಾಗತಿಕ ಮನ್ನಣೆ

• ಕೆ.ಜೆ.ಮರಿಯಪ್ಪ



ಲಕ್ಷ್ಮಣ ಅವರ ಜಮೀನಿನಲ್ಲಿ ಹುಣಸೆ ಹಣ್ಣು ಪರಿಶೀಲಿಸಿದ ವಿಜ್ಞಾನಿಗಳು

ತುಮಕೂರು: ಹುಣಸೆ ಹಣ್ಣಿನ ಹೊಸ ತಳಿಯೊಂದನ್ನು ಗುರುತಿಸುವ ಮೂಲಕ ಜಿಲ್ಲೆಯ ಹುಣಸೆಗೆ ವಿಜ್ಞಾನಿಗಳು ಅಂತ-ರರಾಷ್ಟ್ರೀಯ ಮಟ್ಟದಲ್ಲಿ ಮನ್ನಣೆ ತಂದು ಕೊಟ್ಟಿದ್ದಾರೆ. ದೇಶದಲ್ಲಿ ಇದೇ ಮೊದಲ ಬಾರಿಗೆ ತಳಿ ಗುರುತಿಸಿ ಹೆಸರಿಸಲಾಗಿದೆ.

ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆಯು (ಐಸಿಎಆರ್) ತುಮಕೂರು ತಾಲ್ಲೂಕು ನಂದಿಹಳ್ಳಿ ಗ್ರಾಮದ ರೈತ ಲಕ್ಷ್ಮಣ ಅವರು ಬೆಳೆಸಿರುವ ಹುಣಸೆಯನ್ನು ಉತ್ಕೃಷ್ಟ ಗುಣಮಟ್ಟದ ತಳಿಯೆಂದು ಗುರುತಿಸಿದೆ. ರೈತ 'ಲಕ್ಷ್ಮಣ' ಅವರ ಹೆಸರನ್ನೇ ಈ ತಳಿಗೆ ನಾಮಕರಣ ಮಾಡಲಾಗಿದೆ.

ಜಿಲ್ಲೆಯಲ್ಲಿ ಸದಾ ಬರಕ್ಕೆ ತುತ್ತಾಗುವ ಪಾವಗಡ, ಮಧುಗಿರಿ, ಕೊರಟಗೆರೆ ತಾಲ್ಲೂಕಿನಲ್ಲಿ ದೊಡ್ಡ ಪ್ರಮಾ ಣದಲ್ಲಿ ಹುಣಸೆ ಬೆಳೆಸಲಾಗಿದೆ. ಶಿರಾ, ತುಮಕೂರು ಹಾಗೂ ಕಡಿಮೆ ಮಳೆಯಾಗುವ ಜಿಲ್ಲೆಯ ಇತರೆಡೆಯೂ ಬೆಳೆಯಲಾಗುತ್ತದೆ. ಒಂದು ಅಂದಾಜಿನ ಪ್ರಕಾರ ಜಿಲ್ಲೆಯಲ್ಲಿ ಹುಣಸೆ ಹಣ್ಣಿನಿಂದ ವರ್ಷಕ್ಕೆ ₹500 ಕೋಟಿಗೂ ಅಧಿಕ ವಹಿವಾಟು ನಡೆಯುತ್ತದೆ. ಶೇಂಗಾ ಹೊರತುಪಡಿಸಿದರೆ ಬರಪೀಡಿತ ಪ್ರದೇಶಗಳ ಜನರಿಗೆ ಆದಾಯ ತಂದುಕೊಡುವ ಏಕೈಕ ಬೆಳೆ ಹುಣಸೆ.

ಜಿಲ್ಲೆಯ ಹುಣಸೆಗೆ ಬ್ರ್ಯಾಂಡ್ ರೂಪ ತಂದುಕೊಟ್ಟರೆ, ಅದಕ್ಕೆ ಮಾರುಕಟ್ಟೆ ಸೃಷ್ಟಿಸಿ ರೈತರನ್ನು ಆರ್ಥಿಕವಾಗಿ ಇನ್ನಷ್ಟು ಮುಂದೆ ತರಬಹುದು ಎಂಬ ಗುರಿಯೊಂದಿಗೆ ಹೊಸ ತಳಿಗಳನ್ನು ಗುರುತಿಸುವ ಪ್ರಯತ್ನ ನಡೆದಿದೆ.

ಅಧ್ಯಯನ- ಮಾನದಂಡ: ತೋಟಗಾರಿಕಾ ಸಂಸ್ಥೆ ವಿಜ್ಞಾನಿಗಳು ಸತತವಾಗಿ ಮೂರು ವರ್ಷಗಳಿಂದ ಅಧ್ಯಯನ ನಡೆಸಿ 40 ವರ್ಷಗಳಷ್ಟು ಹಳೆಯದಾದ 'ಲಕ್ಷ್ಮಣ' ತಳಿಯನ್ನು ಗುರುತಿಸಿದ್ದಾರೆ. ಈ ಮರ ಪ್ರತಿ ವರ್ಷವೂ ಸಮ ಪ್ರಮಾಣದಲ್ಲಿ ಇಳುವರಿ ಕೊಡುತ್ತದೆ. ಹಣ್ಣಿನ ದಪ್ಪ, ಉದ್ದ, ಬಣ್ಣ, ತಿರುಳು, ಸ್ವಾದದಲ್ಲಿ ಇತರ ಹಣ್ಣಿಗಿಂತ ವಿಭಿನ್ನ, ವಿಶಿಷ್ಟವಾಗಿದೆ. 'ಲಕ್ಷ್ಮಣ' ಮರದಲ್ಲಿ ಸುಮಾರು 2.50 ಕ್ವಿಂಟಲ್ ಹಣ್ಣು ಸಿಕ್ಕರೆ, ಸಾಮಾನ್ಯ ತಳಿಯ ಮರದಲ್ಲಿ 1.50 ಕ್ವಿಂಟಲ್ ಸಿಗುತ್ತದೆ. ಇತರ ತಳಿಯ ಹಣ್ಣಿಗಿಂತ ಕ್ವಿಂಟಲ್‌ಗೆ ₹ 15 ಸಾವಿರದಿಂದ ₹ 20 ಸಾವಿರ ಅಧಿಕ ಬೆಲೆ ಇರುತ್ತದೆ. ಕಳೆದ ವರ್ಷ ಈ ಮರದಿಂದ ₹ 1 ಲಕ್ಷ ಆದಾಯ ಬಂದಿದೆ.

ಈ ಮರದ ರೈತನ ಜತೆಗೆ ತೋಟಗಾರಿಕಾ ಸಂಸ್ಥೆ ಒಪ್ಪಂದ ಮಾಡಿಕೊಂಡಿದ್ದು, ಶೀಘ್ರವೇ ಸಸಿಗಳನ್ನು ಬೆಳೆಸಿ ಮಾರಾಟ ಮಾಡಲಿದೆ. ಇದರಿಂದ ಬರುವ ಹಣದಲ್ಲಿ ಸ್ವಲ್ಪ ಭಾಗವನ್ನು ರೈತನಿಗೂ ಕೊಡಲಾಗುತ್ತದೆ.

'ಬೀಜ ಹಾಕಿ ಗಿಡ ಬೆಳೆಸಿದರೆ ತಾಯಿ ಮರದ ಮೂಲ ಗುಣ ಪೂರ್ಣ ಪ್ರಮಾಣದಲ್ಲಿ ಬರುವುದಿಲ್ಲ. ಕಸಿ ಮಾಡಿ ಬೆಳೆಸಿದರೆ ಮಾತ್ರ ತಾಯಿ ಗುಣ ಬರುತ್ತದೆ' ಎಂದು ತಜ್ಞರು ಹೇಳುತ್ತಾರೆ.



3 ವರ್ಷ ಅಧ್ಯಯನ ನಡೆಸಿ ಹುಣಸೆ ಮರದ ವಿಶೇಷಗಳನ್ನು ಗುರುತಿಸಿ ರೈತರ ಹೆಸರಿನಲ್ಲೇ 'ಲಕ್ಷ್ಮಣ' ಎಂದು ನಾಮಕರಣ ಮಾಡಲಾಗಿದೆ.

ಜಿ. ಕರುಣಾಕರನ್, ನಿರ್ದೇಶಕ, ಐಸಿಎಆರ್, ತುಮಕೂರು

ಒಂದೇ ಬೀಜ ಆದರೂ ವ್ಯತ್ಯಾಸ

'ನೆಲಕ್ಕೆ ಒಂದೇ ಮರದ ಎರಡು ಹುಣಸೆ ಬೀಜ ಹಾಕಿದೆ. ಎರಡೂ ಬೆಳೆದಿವೆ. ಒಂದು ಸಾಮಾನ್ಯ ಪ್ರಮಾಣದಲ್ಲಿ ಹಣ್ಣು ಕೊಟ್ಟರೆ, ಮತ್ತೊಂದು ಉತ್ತಮ ಗುಣಮಟ್ಟದ ಹಣ್ಣು ಬಿಡುತ್ತಿದೆ. ಏಕೆ ವ್ಯತ್ಯಾಸವಾಯಿತು ಎಂಬುದು ಗೊತ್ತಿಲ್ಲ' ಎಂದು ರೈತ ಲಕ್ಷ್ಮಣ ಹೇಳುತ್ತಾರೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ

ಬಂಟ್ವಾಳ	
ಕೋಕ	10000-22500
ಹೊಸತು	23500-40500
ಹಳತು	42500-50500
ಪುತ್ತೂರು	
ಕೋಕ	9500-24000
ಹೊಸತು	28500-40500
ಚಿತ್ರದುರ್ಗ	
ಆಪಿ	41210-41611
ಬೆಟ್ಟೆ	33339-33779
ಕೆಂಪುಗೋಟು	29419-29899
ರಾಶಿ	40729-41169
ಕುಮಟ	
ಚಿಪ್ಪು	26099-30509
ಕೋಕ	17009-27609
ಹಳೆಚಾಲಿ	39099-41799
ಹೊಸಚಾಲಿ	35099-38099
ಸಿದ್ದಾಪುರ	
ಬಿಳಿಗೋಟು	22080-29619
ಚಾಲಿ	34399-36744
ಕೋಕ	17699-28908
ಕೆಂಪುಗೋಟು	27469-29609
ರಾಶಿ	39509-41899
ತಟ್ಟಿಬೆಟ್ಟೆ	28605-36099
ಶಿರಸಿ	
ಬಿಳಿಗೋಟು	26899-37999
ಚಾಲಿ	32829-37761
ರಾಶಿ	34709-41400
ಯಲ್ಲಾಪುರ	
ಬಿಳಿಗೋಟು	23009-31500
ಚಾಲಿ	31790-37511
ಕೋಕ	18312-29299
ಕೆಂಪುಗೋಟು	27619-33799
ರಾಶಿ	39819-44119
ತಟ್ಟಿಬೆಟ್ಟೆ	32919-39500
ಶಿವಮೊಗ್ಗ ಎಪಿಎಂಸಿ	
ಬೆಟ್ಟೆ	42500-43309
ಗೊರಬಲು	15009-31510
ರಾಶಿ	37170-42288
ಸರಕು	51100-74000
ಸಾಗರ	
ಬಿಳಿಗೋಟು	20190-29699
ಚಾಲಿ	26009-34511
ಕೋಕ	13899-29899
ಕೆಂಪುಗೋಟು	26009-32929
ರಾಶಿ	32699-42710
ಸಿಪ್ಪೆಗೋಟು	7869-17800
ಚನ್ನಗಿರಿ (ತುಮ್ಕೋಸ್)	
ರಾಶಿ	39629-43000
ಬೆಟ್ಟೆ	32779-35699
ರಾಮನಗರ ರೇಷ್ಮೆ	
ಮಿಶ್ರತಳಿ (ಸಿ.ಬಿ)	245-381
ದ್ವಿತಳಿ (ಬಿ.ವಿ)	273-468

ಮುಂಬೈ ಧಾರಣೆ

ಶೇಂಗಾ

22-3-2021

ಜಾವಾ 70/80(ಹೊಸ)	10900-10950
ಜಾವಾ 80/90(ಹೊಸ)	10400-10450
ದಪ್ಪ ಮಧ್ಯಪ್ರದೇಶ(ಹೊಸ)	9700-9800
ದಪ್ಪ ಗುಜರಾತ್(ಹೊಸ)	9000-9100

ಶೇಂಗಾ ಎಣ್ಣೆ (10 ಕೆಜಿಗೆ)


ಕಚ್ಚಾ (ತೆರಿಗೆ ಬಿಟ್ಟು)	1565 (1560)
ಒಂದು ವಾರದ ಡೆಲಿವರಿ	1560 (1555)
ಸೋಯಾ ಕಚ್ಚಾ	1240 (1235)
ಪಾಮ್ ವಾರದ ಡೆಲಿವರಿ	1226 (1198)
ಸೂರ್ಯಕಾಂತಿ ಎಣ್ಣೆ ಕಚ್ಚಾ	1680 (1680)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ
44,700 (45,100)
ಬೆಳ್ಳಿ ಕೆ.ಜಿ 65,750 (67,000)

ಆವರಣದಲ್ಲಿ ಶನಿವಾರದ ಧಾರಣೆ

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	14,744
ಇಂದಿನ ಅಂತ್ಯ	14,737
▼	7
ದಿನದ ಕನಿಷ್ಠ	14,598

ವಿನಿಮಯ ದರ

$ ಡಾಲರ್	72.37
£ ಪೌಂಡ್	100.26
€ ಯುರೊ	86.08
¥ ಯೆನ್ (100ಕ್ಕೆ)	67

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹385
12 ಮೊಟ್ಟೆಗೆ	₹52
ಮೈಸೂರು	
100 ಮೊಟ್ಟೆಗೆ	₹388

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1550 (1550)
ಸೋಯಾ (ರಿಫೈನ್ಡ್)	₹1240 (1230)
ಸೂರ್ಯಕಾಂತಿ (ರಿಫೈನ್ಡ್)	₹1730 (1730)
ಪಾಮೋಲಿನ್	₹1228 (1200)

ತೆರಿಗೆ ಲೆಕ್ಕಾಚಾರ ಅರಿಯದೆ ಷೇರು ಹೂಡಿಕೆ ಬೇಡ!

ಷೇರು ಮಾತು

ಶರತ್ ಎಂ.ಎಸ್.





'ಷೇರುಪೇಟೆಯಲ್ಲಿ ಹೂಡಿಕೆ ಮಾಡಿದರೆ ಸಿಕ್ಕಾಪಟ್ಟೆ ತೆರಿಗೆ ಕಟ್ಟಬೇಕು. ಹೂಡಿಕೆ ಮಾಡಿ ಗಳಿಸಿದ್ದ-ಕ್ಕಿಂತ ಅಲ್ಲಿ ತೆರಿಗೆ ಹೊರೆಯೇ ಹೆಚ್ಚು...' 'ಅಯ್ಯೋ, ಹೂಡಿಕೆ ಮಾಡುವಾಗ ನಷ್ಟ ಆದ್ರೆ ಏನು ಮಾಡೋದು? ಅಲ್ಪಾವಧಿ--ದೀರ್ಘಾವಧಿ ಗಳಿಕೆ ಲೆಕ್ಕಾಚಾರ ಹೇಗೆ?'

ಹೀಗೆ ಹೂಡಿಕೆದಾರರಲ್ಲಿ ತೆರಿಗೆ ವಿಚಾರವಾಗಿ ಬಹಳಷ್ಟು ಗೊಂದಲಗಳಿವೆ. ಆದರೆ ವಾಸ್ತವದಲ್ಲಿ ಷೇರುಗಳ ಮೇಲಿನ ಹೂಡಿಕೆಯಲ್ಲಿನ ತೆರಿಗೆ ಲೆಕ್ಕಾಚಾರ ಕಬ್ಬಿಣದ ಕಡಲೆಯಲ್ಲ.

ಅಲ್ಪಾವಧಿ ಬಂಡವಾಳ ಗಳಿಕೆ ತೆರಿಗೆ (TAX ON STCG): ಯಾವುದೇ ಕಂಪನಿಯ ಷೇರಿನಲ್ಲಿ ಹೂಡಿಕೆ ಮಾಡಿ ಒಂದು ವರ್ಷದ (365 ದಿನಗಳ ಅವಧಿ) ಒಳಗೆ ಅದನ್ನು ಮಾರಾಟ ಮಾಡಿದರೆ ಅಲ್ಪಾವಧಿ ಬಂಡವಾಳ ಗಳಿಕೆ (STCG) ತೆರಿಗೆ ಅನ್ವಯವಾಗುತ್ತದೆ. ಶೇಕಡ 15ರಷ್ಟು ಅಲ್ಪಾವಧಿ ಬಂಡವಾಳ ಗಳಿಕೆ ತೆರಿಗೆ ಮೇಲೆ ಶೇ 4ರಷ್ಟು ಸೆಸ್ ಪಾವತಿಸಬೇಕಾಗುತ್ತದೆ. ಉದಾಹರಣೆಗೆ ನೀವು 'ಅ' ಎಂಬ ಕಂಪನಿಯ ಷೇರುಗಳಲ್ಲಿ ₹ 30,000 ಹೂಡಿಕೆ ಮಾಡಿದ ಬಳಿಕ, ಏಳು ತಿಂಗಳ ಅವಧಿಯಲ್ಲಿ ₹ 10 ಸಾವಿರ ಲಾಭ ಗಳಿಸಿದ್ದೀರಿ ಎಂದಿಟ್ಟುಕೊಳ್ಳಿ. ಒಂದೊಮ್ಮೆ ಆ ಷೇರುಗಳನ್ನು ₹ 10 ಸಾವಿರ ಲಾಭಕ್ಕೆ ಮಾರಾಟ ಮಾಡಿದಲ್ಲಿ ಶೇ 15ರಷ್ಟು ಅಂದರೆ ₹ 1,500 ತೆರಿಗೆಯಾಗಿ ಪಾವತಿಸಬೇಕಾಗುತ್ತದೆ. ನೀವು ಆದಾಯ ತೆರಿಗೆಗೆ ಸಂಬಂಧಿಸಿದಂತೆ ಯಾವುದೇ ವರ್ಗದ ಅಡಿಯಲ್ಲಿ ಬಂದರೂ, ಷೇರು ಹೂಡಿಕೆ ಮೇಲಿನ ಅಲ್ಪಾವಧಿ ಗಳಿಕೆಗೆ ಶೇ 15 ರಷ್ಟು ತೆರಿಗೆ, ಅದರ ಮೇಲೆ ಶೇ 4 ರಷ್ಟು ಸೆಸ್ ಪಾವತಿಸಿದರೆ ಆಯಿತು.

ದೀರ್ಘಾವಧಿ ಬಂಡವಾಳ ಗಳಿಕೆ ತೆರಿಗೆ (TAX ON LTCG): ಯಾವುದೇ ಕಂಪನಿಯ ಷೇರಿನಲ್ಲಿ ಹೂಡಿಕೆ ಮಾಡಿದ ಒಂದು ವರ್ಷದ ಬಳಿಕ ಅದನ್ನು ಮಾರಾಟ ಮಾಡಿದರೆ ಶೇ 10ರಷ್ಟು ದೀರ್ಘಾವಧಿ ಬಂಡವಾಳ ಗಳಿಕೆ (LTCG) ತೆರಿಗೆ ಅನ್ವಯಿಸುತ್ತದೆ. ಆದರೆ ಇಲ್ಲಿ ಹೂಡಿಕೆ ಮೇಲಿನ ₹ 1 ಲಕ್ಷದವರೆಗಿನ ಗಳಿಕೆಗೆ ತೆರಿಗೆ ಇರುವುದಿಲ್ಲ.

ಉದಾಹರಣೆ-1: ನೀವು ₹ 50,000 ಮೌಲ್ಯದ ಷೇರುಗಳನ್ನು ಖರೀದಿಸಿ ₹ 30,000 ಲಾಭ ಗಳಿಸಿದ್ದೀರಿ ಎಂದುಕೊಳ್ಳಿ. ಷೇರು ಖರೀದಿಸಿದ 365 ದಿನಗಳ (ಒಂದು ವರ್ಷದ) ನಂತರ ಅವನ್ನು ಮಾರಾಟ ಮಾಡಿದರೆ ನೀವು ಗಳಿಸಿರುವ ₹ 30,000 ಲಾಭಕ್ಕೆ ತೆರಿಗೆ ಕಟ್ಟಬೇಕಿಲ್ಲ.

ಉದಾಹರಣೆ-2: ನೀವು ₹ 9 ಲಕ್ಷ ಮೌಲ್ಯದ ಷೇರುಗಳನ್ನು ಖರೀದಿಸಿ ಒಂದು ವರ್ಷದ ನಂತರ ₹ 10 ಲಕ್ಷ ಲಾಭ ಗಳಿಸಿದ್ದು, ಷೇರುಗಳ ಮಾರಾಟಕ್ಕೆ ನಿರ್ಧರಿಸಿದ್ದೀರಿ ಎಂದು ಭಾವಿಸೋಣ. ಈಗ ನೀವು ₹ 10 ಲಕ್ಷ ಲಾಭದಲ್ಲಿ ₹ 1 ಲಕ್ಷಕ್ಕೆ ಯಾವುದೇ ತೆರಿಗೆ ಕಟ್ಟಬೇಕಿಲ್ಲ. ಇನ್ನುಳಿದ ₹ 9 ಲಕ್ಷದ ಮೇಲೆ ಶೇ 10ರಷ್ಟು ಅಂದರೆ ₹ 90 ಸಾವಿರ ತೆರಿಗೆ ಕಟ್ಟಬೇಕಾಗುತ್ತದೆ.

ಷೇರುಪೇಟೆ ಹೂಡಿಕೆ ತೆರಿಗೆ ಲೆಕ್ಕಾಚಾರ

ಅಲ್ಪಾವಧಿ ಬಂಡವಾಳ ಗಳಿಕೆ ತೆರಿಗೆ (STCG)	ದೀರ್ಘಾವಧಿ ಬಂಡವಾಳ ಗಳಿಕೆ ತೆರಿಗೆ (LTCG)
ಷೇರನ್ನು 1 ವರ್ಷದ ಒಳಗೆ ಮಾರಾಟ ಮಾಡಿದರೆ, ಬಂದ ಲಾಭಕ್ಕೆ ಶೇ15 ರಷ್ಟು ತೆರಿಗೆ + ಶೇ 4ರಷ್ಟು ಸೆಸ್	ಷೇರನ್ನು 1 ವರ್ಷದ ನಂತರ ಮಾರಿದರೆ, ₹ 1 ಲಕ್ಷದವರೆಗಿನ ಗಳಿಕೆಗೆ ತೆರಿಗೆ ಇಲ್ಲ. ನಂತರದ ಗಳಿಕೆಗೆ ಶೇ 10ರಷ್ಟು ತೆರಿಗೆ ಅನ್ವಯ.

ಸಂಕ್ಷಿಪ್ತ ಸುದ್ದಿ

ಚಿನ್ನ ₹ 302, ಬೆಳ್ಳಿ ₹ 1,533 ಇಳಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಸೋಮವಾರ ಚಿನ್ನ ಮತ್ತು ಬೆಳ್ಳಿ ದರ ಇಳಿಕೆಯಾಗಿದೆ. 10 ಗ್ರಾಂ ಚಿನ್ನದ ದರ ₹ 302ರಷ್ಟು ಇಳಿಕೆಯಾಗಿ ₹ 44,269ರಂತೆ ಮಾರಾಟವಾಯಿತು. ಬೆಳ್ಳಿ ಧಾರಣೆ ಕೆ.ಜಿ.ಗೆ ₹ 1,533ರಷ್ಟು ಇಳಿಕೆ ಕಂಡು ₹ 65,319ಕ್ಕೆ ತಲುಪಿತು.

ಈ ವಾರ ಹರಾಜಾಗಲಿರುವ ಅಮೆರಿಕದ ಬಾಂಡ್‌ನತ್ತ ಹೂಡಿಕೆದಾರರು ಗಮನ ಹರಿಸಿದ್ದಾರೆ. ಇದರಿಂದಾಗಿ ಚಿನ್ನದ ದರ ಇಳಿಕೆಯಾಗಿದೆ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್ ಹೇಳಿದೆ.

ಏಪ್ರಿಲ್‌ನಿಂದ ಮಾರುತಿ ಕಾರುಗಳ ಬೆಲೆ ಏರಿಕೆ

ನವದೆಹಲಿ (ಪಿಟಿಐ): ತಯಾರಿಕಾ ವೆಚ್ಚ ಹೆಚ್ಚಾಗಿರುವ ಪರಿಣಾಮ, ಎಲ್ಲ ಮಾದರಿಯ ಕಾರುಗಳ ಬೆಲೆಯು ಏಪ್ರಿಲ್‌ನಿಂದ ಹೆಚ್ಚಾಗಲಿದೆ ಎಂದು ಮಾರುತಿ ಸುಜುಕಿ ಇಂಡಿಯಾ ಕಂಪನಿ ತಿಳಿಸಿದೆ. ಹೆಚ್ಚುವರಿ ವೆಚ್ಚವನ್ನು ಗ್ರಾಹಕರಿಗೆ ವರ್ಗಾಯಿಸುವುದು ಅನಿ-ವಾರ್ಯವಾಗಿದೆ ಎಂದು ಅದು ಹೇಳಿದೆ.

ಬೆಲೆ ಏರಿಕೆಯು ಬೇರೆ ಬೇರೆ ಮಾದರಿಗಳಿಗೆ ಬೇರೆ ಬೇರೆ ಪ್ರಮಾಣದಲ್ಲಿ ಇರಲಿದೆ. ಆದರೆ, ಯಾವ ಪ್ರಮಾಣದಲ್ಲಿ ಬೆಲೆ ಹೆಚ್ಚಳ ಆಗಲಿದೆ ಎನ್ನುವ ಮಾಹಿತಿಯನ್ನು ಕಂಪನಿ ನೀಡಿಲ್ಲ.

ಔಡಿ 'ಎಸ್5 ಸ್ಪೋರ್ಟ್‌ಬ್ಯಾಕ್'ನ ಹೊಸ ಆವೃತ್ತಿ ಬಿಡುಗಡೆ



ಔಡಿ ಎಸ್5 ಸ್ಪೋರ್ಟ್‌ಬ್ಯಾಕ್

ಮುಂಬೈ (ಪಿಟಿಐ): ಐಷಾರಾಮಿ ಕಾರು ತಯಾರಿಸುವ ಔಡಿ ಕಂಪನಿಯು ತನ್ನ 'ಎಸ್5 ಸ್ಪೋರ್ಟ್‌ಬ್ಯಾಕ್' ಕಾರಿನ ಸುಧಾರಿತ ಆವೃತ್ತಿಯನ್ನು ಸೋಮವಾರ ಬಿಡುಗಡೆ ಮಾಡಿದೆ. ಇದರ ಎಕ್ಸ್ ಷೋರೂಂ ಬೆಲೆ ₹ 79.06 ಲಕ್ಷ.

ಕಂಪನಿಯು ಈ ವರ್ಷದಲ್ಲಿ ಬಿಡುಗಡೆ ಮಾಡುತ್ತಿರುವ ಎರಡನೇ ವಾಹನ ಇದಾಗಿದೆ. 'ಎಸ್5 ಸ್ಪೋರ್ಟ್‌ಬ್ಯಾಕ್' ಕಾರು ತನ್ನ ವಿಶೇಷ ವಿನ್ಯಾಸ, ಆರಾಮದಾಯಕ ಐದು ಆಸನಗಳಿಂದ ಗಮನ ಸೆಳೆಯಲಿದೆ. ಇದನ್ನು ಬಿಡುಗಡೆ ಮಾಡಿದ್ದರಿಂದಾಗಿ ದೇಶದಲ್ಲಿ ಕಂಪನಿಯ ಕಾರುಗಳ ವಿಭಾಗವು ಇನ್ನಷ್ಟು ಬಲಗೊಳ್ಳಲಿದೆ ಎಂದು ಔಡಿ ಇಂಡಿಯಾದ ಮುಖ್ಯಸ್ಥ ಬಲ್ಬೀರ್ ಧಿಲ್ಲೋನ್ ತಿಳಿಸಿದ್ದಾರೆ.

'ಎರಡು ಮತ್ತು ಮೂರನೇ ಶ್ರೇಣಿಯ ನಗರಗಳಲ್ಲಿಯೂ ನಮ್ಮ ಮಾರಾಟ ಬೆಳವಣಿಗೆ ಕಾಣುತ್ತಿದ್ದು, ಈ ವರ್ಷದಲ್ಲಿ ಇನ್ನಷ್ಟು ಹೆಚ್ಚಾಗುವ ನಿರೀಕ್ಷೆ ಇದೆ' ಎಂದೂ ಧಿಲ್ಲೋನ್ ಹೇಳಿದ್ದಾರೆ.

3.0 ಲೀಟರ್ ಟ್ವಿನ್ ಟರ್ಬೊ ಟಿಎಫ್‌ಎಸ್‌ಐ ಪೆಟ್ರೋಲ್ ಎಂಜಿನ್ ಈ ಕಾರಿನಲ್ಲಿದ್ದು, ಸ್ಪೋರ್ಟ್ ಫ್ರಂಟ್ ಸೀಟ್, ವರ್ಚುವಲ್ ಕಾಕ್‌ಪಿಟ್, ಸುಧಾರಿತ ಮಲ್ಟಿಮೀಡಿಯಾ ಇಂಟರ್‌ಫೇಸ್ ಸಿಸ್ಟಂ ಸೇರಿದಂತೆ ಹಲವು ವೈಶಿಷ್ಟ್ಯಗ-ಳನ್ನು ಒಳಗೊಂಡಿದೆ ಎಂದು ಕಂಪನಿ ಹೇಳಿದೆ.

ಪೆಟ್ರೋಲ್, ಡೀಸೆಲ್ ತೆರಿಗೆ ಆದಾಯ ಶೇ 300ರಷ್ಟು ಏರಿಕೆ!

ನವದೆಹಲಿ (ಪಿಟಿಐ): ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಎಕ್ಸೈಸ್ ಸುಂಕದಿಂದ ಕೇಂದ್ರ ಸರ್ಕಾರಕ್ಕೆ ಬರುವ ಆದಾಯದಲ್ಲಿ ಕಳೆದ ಆರು ವರ್ಷಗಳ ಅವಧಿಯಲ್ಲಿ ಶೇಕಡ 300ರಷ್ಟು ಹೆಚ್ಚಳ ಆಗಿದೆ.

ಸರ್ಕಾರವು ಪೆಟ್ರೋಲ್ ಮೇಲಿನ ಎಕ್ಸೈಸ್ ಸುಂಕದಿಂದ ₹ 29,279 ಕೋಟಿ, ಡೀಸೆಲ್ ಮೇಲಿನ ಎಕ್ಸೈಸ್ ಸುಂಕದಿಂದ ₹ 42,881 ಕೋಟಿ ಮೊತ್ತವನ್ನು 2014–15ರಲ್ಲಿ ಸಂಗ್ರಹಿಸಿತ್ತು. ನರೇಂದ್ರ ಮೋದಿ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದ ಮೊದಲ ವರ್ಷ ಅದು.

ಹಾಲಿ ಆರ್ಥಿಕ ವರ್ಷದ ಮೊದಲ ಹತ್ತು ತಿಂಗಳ ಅವಧಿಯಲ್ಲಿ ಪೆಟ್ರೋಲ್ ಹಾಗೂ ಡೀಸೆಲ್ ಮೇಲಿನ ಎಕ್ಸೈಸ್ ಸುಂಕದಿಂದ ಕೇಂದ್ರ ಸಂಗ್ರಹಿಸಿರುವ ಒಟ್ಟು ಮೊತ್ತ ₹ 2.94 ಲಕ್ಷ ಕೋಟಿ ಎಂದು ಕೇಂದ್ರ ಹಣಕಾಸು ಖಾತೆ ರಾಜ್ಯ ಸಚಿವ ಅನುರಾಗ್ ಸಿಂಗ್ ಠಾಕೂರ್ ಅವರು ಲೋಕಸಭೆಗೆ ನೀಡಿರುವ ಲಿಖಿತ ಉತ್ತರದಲ್ಲಿ ಹೇಳಿದ್ದಾರೆ.

ಪೆಟ್ರೋಲ್, ಡೀಸೆಲ್ ಜೊತೆ ನೈಸರ್ಗಿಕ ಅನಿಲದ ಮೇಲೆ ಸಂಗ್ರಹಿಸಿದ ಎಕ್ಸೈಸ್ ಸುಂಕವನ್ನೂ ಪರಿಗಣಿಸಿದರೆ 2014–15ರಲ್ಲಿ ಕೇಂದ್ರಕ್ಕೆ ಒಟ್ಟು ₹ 74,158 ಕೋಟಿ ಆದಾಯ ಬಂದಿತ್ತು. ಈ ಆದಾಯದ ಪ್ರಮಾಣವು 2020ರ ಏಪ್ರಿಲ್‌ನಿಂದ 2021ರ ಜನವರಿ ನಡುವಿನ ಅವಧಿಯಲ್ಲಿ ₹ 2.95 ಲಕ್ಷ ಕೋಟಿಗೆ ಏರಿಕೆ ಆಗಿದೆ. 2014ರಲ್ಲಿ ಪೆಟ್ರೋಲ್ ಮೇಲಿನ ಎಕ್ಸೈಸ್ ಸುಂಕ ಲೀಟರ್‌ಗೆ ₹ 9.48 ಆಗಿತ್ತು. ಇದು ಈಗ ₹ 32.90ಕ್ಕೆ ಹೆಚ್ಚಳವಾಗಿದೆ. 2014ರಲ್ಲಿ ಡೀಸೆಲ್ ಮೇಲಿನ ಎಕ್ಸೈಸ್ ಸುಂಕ ₹ 3.56 ಇದ್ದಿದ್ದು ಈಗ ₹ 31.80ಕ್ಕೆ ತಲುಪಿದೆ.

ಲ್ಯಾಂಕಾಶೈರ್ ಸೇರಿದ ಶ್ರೇಯಸ್

ಮ್ಯಾಂಚೆಸ್ಟರ್ (ಪಿಟಿಐ): ಭಾರತದ ಬ್ಯಾಟ್ಸ್‌ಮನ್ ಶ್ರೇಯಸ್ ಅಯ್ಯರ್ ರಾಯಲ್ ಲಂಡನ್ ಕಪ್ ಏಕದಿನ ಟೂರ್ನಿಯಲ್ಲಿ ಆಡುವ ಇಂಗ್ಲಿಷ್ ಕೌಂಟಿ ಕ್ಲಬ್ ಲ್ಯಾಂಕಾಶೈರ್ ತಂಡ ಸೇರಿದ್ದಾರೆ.

ಈ ವಿಷಯವನ್ನು ಲ್ಯಾಂಕಾಶೈರ್ ಕ್ಲಬ್ ತನ್ನ ಟ್ವಿಟರ್ ಖಾತೆಯಲ್ಲಿ ಪ್ರಕಟಿಸಿದೆ.

ಇಂಗ್ಲೆಂಡ್ ಎದುರಿನ ಏಕದಿನ ಸರಣಿ ಇಂದು ಆರಂಭ; ಶಿಖರ್ ಧವನ್ ಮೇಲೆ ಎಲ್ಲರ ಕಣ್ಣು

ಜಯದ ಮುನ್ನುಡಿಗೆ ಭಾರತ ಕಾತರ

ಪುಣೆ (ಪಿಟಿಐ): ಟೆಸ್ಟ್ ಮತ್ತು ಚುಟುಕು ಕ್ರಿಕೆಟ್‌ನಲ್ಲಿ ಅಮೋಘ ಸಾಧನೆ ಮಾಡಿ ಸರಣಿ ಗೆದ್ದಿರುವ ಭಾರತ ತಂಡ ಇಂಗ್ಲೆಂಡ್ ಎದುರಿನ ಏಕದಿನ ಕ್ರಿಕೆಟ್ ಸರಣಿಗೆ ಸಜ್ಜಾಗಿದ್ದು ಮಹಾರಾಷ್ಟ್ರ ಕ್ರಿಕೆಟ್ ಸಂಸ್ಥೆಯ ಕ್ರೀಡಾಂಗಣದಲ್ಲಿ ಆಯೋಜನೆಯಾಗಿರುವ ಮೂರು ಪಂದ್ಯಗಳ ಸರಣಿಯ ಮೊದಲ ಹಣಾಹಣಿ ಮಂಗಳವಾರ ನಡೆಯಲಿದೆ.

ಹಾಲಿ ವಿಶ್ವ ಚಾಂಪಿಯನ್ ಇಂಗ್ಲೆಂಡ್ ಟೆಸ್ಟ್ ಮತ್ತು ಟಿ20 ಸರಣಿಯಲ್ಲಿ ಅನುಭವಿಸಿದ ಸೋಲಿನಿಂದ ಕಂಗೆಟ್ಟಿದೆ. ಆದ್ದರಿಂದ ತಿರುಗೇಟು ನೀಡುವ ಗುರಿಯೊಂದಿಗೆ ಕಣಕ್ಕೆ ಇಳಿಯಲಿದ್ದು ಭಾರತ ಶುಭಾರಂಭದ ನಿರೀಕ್ಷೆಯಲ್ಲಿದೆ. ಆದರೆ ಆರಂಭಿಕ ಬ್ಯಾಟ್ಸ್‌ಮನ್ ಶಿಖರ್ ಧವನ್ ಕಳಪೆ ಫಾರ್ಮ್ ತಂಡದಲ್ಲಿ ಆತಂಕ ಮೂಡಿಸಿದೆ. ಟಿ20 ಸರಣಿಯ ಮೊದಲ ಪಂದ್ಯದಲ್ಲಿ ಕಳಪೆ ಆಟವಾಡಿದ ಧವನ್ ಉಳಿದ ಪಂದ್ಯಗಳಲ್ಲಿ ಬೆಂಚು ಕಾದಿದ್ದರು. ತಂಡದ ಆಡಳಿತದ ಮುಂದೆ ಈಗ ಸಾಕಷ್ಟು ಆಯ್ಕೆಗಳಿವೆ. ತಂಡದ ಒಳಗೇ ಇರುವ ಶುಭಮನ್ ಗಿಲ್, ಹೊರಗಿರುವ ಪೃಥ್ವಿ ಶಾ ಮತ್ತು ದೇವದತ್ತ ಪಡಿಕ್ಕಲ್ ಮೇಲೆ ಕಣ್ಣಿಟ್ಟಿರುವುದರಿಂದ ಧವನ್ ಅಸ್ತಿತ್ವ ಉಳಿಸಿಕೊಳ್ಳಲು ಈ ಪಂದ್ಯದಲ್ಲಿ ಉತ್ತಮ ಸಾಮರ್ಥ್ಯ ತೋರಲೇಬೇಕು.

ಈ ವರ್ಷ ವಿಶ್ವದಲ್ಲಿ ಯಾವುದೇ ಪ್ರಮುಖ ಏಕದಿನ ಟೂರ್ನಿ ಇಲ್ಲ. ಆದ್ದರಿಂದ ಈ ಸರಣಿ ಅಷ್ಟೊಂದು ಮಹತ್ವ ಪಡೆದುಕೊಂಡಿಲ್ಲ. ಭಾರತ, ಈ ಸರಣಿಯನ್ನು ವಿಶ್ವಕಪ್ ಟೂರ್ನಿಯ ಸಿದ್ಧತೆಗಳ ಮುಂದುವರಿದ ಭಾಗ ಎಂದೇ ತಿಳಿದು ಆಡಲಿದೆ.

ನಾಯಕ ವಿರಾಟ್ ಕೊಹ್ಲಿ ಈಗ ಉತ್ತಮ ಫಾರ್ಮ್‌ನಲ್ಲಿದ್ದಾರೆ. ಟಿ20 ಸರಣಿಯಲ್ಲಿ ಅವರು ಭರ್ಜರಿ ಬ್ಯಾಟಿಂಗ್ ಮಾಡಿ ಮಿಂಚಿದ್ದಾರೆ. ಅದೇ ಲಯದಲ್ಲಿ ಇಲ್ಲೂ ಆಡುವ ನಿರೀಕ್ಷೆ ಇದೆ. ಏಕದಿನ ಕ್ರಿಕೆಟ್‌ನಲ್ಲಿ 2019ರಲ್ಲಿ ಕೊಹ್ಲಿ ಕೊನೆಯದಾಗಿ ಶತಕ ಸಿಡಿಸಿದ್ದರು. ಪೋರ್ಟ್ ಆಫ್ ಸ್ಪೇನ್‌ನಲ್ಲಿ ವೆಸ್ಟ್ ಇಂಡೀಸ್ ವಿರುದ್ಧ 114 ರನ್ ಗಳಿಸಿದ್ದರು.

ಕೆ.ಎಲ್.ರಾಹುಲ್ ಅಗ್ರ ಕ್ರಮಾಂಕದಲ್ಲಿ ಕಾಣಿಸಿಕೊಳ್ಳುವುದು ಸಂದೇಹ. ಮಧ್ಯಮ ಕ್ರಮಾಂಕದಲ್ಲಿ ಅವರು ಆಡಿದರೆ ರಿಷಭ್ ಪಂತ್ ಮತ್ತು ಹಾರ್ದಿಕ್ ಪಾಂಡ್ಯ ಅವರಿಗೆ ಬಲ ತುಂಬಲಿದೆ. ಮುಂಬೈನವರಾದ ಶ್ರೇಯಸ್ ಅಯ್ಯರ್ ಮತ್ತು ಸೂರ್ಯಕುಮಾರ್ ಯಾದವ್ ಪೈಕಿ ಯಾರಿಗೆ ಮಣೆ ಹಾಕಬೇಕು ಎಂಬ ಗೊಂದಲ ತಂಡವನ್ನು ಕಾಡಬಹುದು.

ಬೌಲಿಂಗ್ ವಿಭಾಗದಲ್ಲಿ ಭುವನೇಶ್ವರ್ ಕುಮಾರ್ ಅವರ ಶಕ್ತಿ ವರ್ಧಿಸಲು ಶಾರ್ದೂಲ್ ಠಾಕೂರ್ ಇದ್ದಾರೆ. ಕೊಹ್ಲಿ ಮೆಚ್ಚುಗೆಗೆ ಪಾತ್ರರಾಗಿರುವ ಕರ್ನಾಟಕದ ಪ್ರಸಿದ್ಧ ಕೃಷ್ಣ ಅಂತಿಮ 11ರಲ್ಲಿ ಸ್ಥಾನ ಗಳಿಸುವ ಸಾಧ್ಯತೆ ನಿಚ್ಚಳವಾಗಿದೆ. ಸ್ಪಿನ್ನರ್‌ಗಳ ಪೈಕಿ ಕೃಣಾಲ್ ಪಾಂಡ್ಯ ಮತ್ತು ಕುಲದೀಪ್ ಯಾದವ್ ಬದಲಿಗೆ ಯಜುವೇಂದ್ರ ಚಾಹಲ್ ಮತ್ತು ವಾಷಿಂಗ್ಟನ್ ಸುಂದರ್‌ಗೆ ಸ್ಥಾನ ಸಿಗಬಹುದು.

ಇಂಗ್ಲೆಂಡ್ ತಂಡ ಭಾರತ ಪ್ರವಾಸದ ಕೊನೆಯ ಸರಣಿಯಲ್ಲಿ ಜಯದ ಸಿಹಿ ಹೊತ್ತುಕೊಂಡು ತವರಿಗೆ ಮರಳುವ ಪ್ರಯತ್ನ ನಡೆಸಲಿದೆ. ಜೋಸ್ ಬಟ್ಲರ್, ಜೇಸನ್ ರಾಯ್ ಮತ್ತು ಬೆನ್ ಸ್ಟೋಕ್ಸ್ ತಂಡದ ಆಧಾರ. ನೋವಿನಿಂದ ಬಳಲುತ್ತಿರುವ ಜೊಫ್ರಾ ಆರ್ಚರ್ ಬದಲಿಗೆ ಬೌಲಿಂಗ್ ವಿಭಾಗದ ಜವಾಬ್ದಾರಿ ಮಾರ್ಕ್ ವುಡ್, ಕ್ರಿಸ್ ಜೋರ್ಡಾನ್ ಮತ್ತು ಸ್ಯಾಮ್ ಕರನ್ ಮೇಲಿದೆ. ಟಿ20 ಸರಣಿಯಲ್ಲಿ ಭಾರತದ ಬ್ಯಾಟಿಂಗ್ ಮೇಲೆ ಪರಿಣಾಮ ಬೀರಲು ಸಾಧ್ಯವಾಗದ ಸ್ಪಿನ್ನರ್‌ಗಳಾದ ಮೋಯಿನ್ ಅಲಿ ಮತ್ತು ಆದಿಲ್ ರಶೀದ್‌ಗೆ ಈ ಸರಣಿ ಸವಾಲಿನದ್ದಾಗಲಿದೆ.


ಸೋಮವಾರ ಅಭ್ಯಾಸದ ನಡುವೆ ಭಾರತ ತಂಡದ ಶುಭಮನ್ ಗಿಲ್ (ಎಡ) ಮತ್ತು ಶಾರ್ದೂಲ್ ಠಾಕೂರ್ –ಪಿಟಿಐ ಚಿತ್ರ


ಶಿಖರ್ ಧವನ್

ಎಂಸಿಎ ಕ್ರೀಡಾಂಗಣದಲ್ಲಿ ಭಾರತದ ಸಾಧನೆ

ಎದುರಾಳಿ	ವರ್ಷ	ಫಲಿತಾಂಶ	ಅಂತರ
ಆಸ್ಟ್ರೇಲಿಯಾ	2013	ಸೋಲು	72 ರನ್
ಇಂಗ್ಲೆಂಡ್	2017	ಜಯ	3 ವಿಕೆಟ್
ನ್ಯೂಜಿಲೆಂಡ್	2017	ಜಯ	6 ವಿಕೆಟ್
ವೆಸ್ಟ್ ಇಂಡೀಸ್	2018	ಸೋಲು	43 ರನ್

ಎಂಸಿಎ ಅಂಗಣದಲ್ಲಿ ಗರಿಷ್ಠ ಮೊತ್ತ

ರನ್	ತಂಡ	ಎದುರಾಳಿ	ವರ್ಷ
7ಕ್ಕೆ356	ಭಾರತ	ಇಂಗ್ಲೆಂಡ್	2017

ಎಂಸಿಎ ಅಂಗಣದಲ್ಲಿ ಗರಿಷ್ಠ ರನ್ (100ಕ್ಕೂ ಹೆಚ್ಚು)

ಆಟಗಾರ	ದೇಶ	ರನ್	ಎದುರಾಳಿ	ವರ್ಷ
ವಿರಾಟ್ ಕೊಹ್ಲಿ	ಭಾರತ	122	ಇಂಗ್ಲೆಂಡ್	2017
ಕೇದಾರ್ ಜಾಧವ್	ಭಾರತ	120	ಇಂಗ್ಲೆಂಡ್	2017
ವಿರಾಟ್ ಕೊಹ್ಲಿ	ಭಾರತ	107	ವೆಸ್ಟ್ ಇಂಡೀಸ್	2018

ಎಂಸಿಎ ಅಂಗಣದಲ್ಲಿ ಉತ್ತಮ ಬೌಲಿಂಗ್

ಬೌಲರ್	ದೇಶ	ವಿಕೆಟ್	ಎದುರಾಳಿ	ವರ್ಷ
ಜಸ್‌ಪ್ರೀತ್ ಬೂಮ್ರಾ	ಭಾರತ	35ಕ್ಕೆ4	ವೆಸ್ಟ್ ಇಂಡೀಸ್	2018
ಮಾರ್ಲನ್ ಸ್ಯಾಮ್ಯುಯೆಲ್ಸ್	ವೆಸ್ಟ್ ಇಂಡೀಸ್	12ಕ್ಕೆ3	ಭಾರತ	2018

ಮುಖಾಮುಖಿ ಸಾಧನೆ

ಪಂದ್ಯಗಳು	ಭಾರತ ಗೆಲುವು	ಇಂಗ್ಲೆಂಡ್ ಜಯ	ಟೈ	ಫಲಿತಾಂಶವಿಲ್ಲ
100	53	42	2	3

ಉಭಯ ತಂಡಗಳ ಬಲಾಬಲ

ಭಾರತ	ಪಂದ್ಯಗಳು	ಇಂಗ್ಲೆಂಡ್
990		752
514	ಜಯ	378
426	ಸೋಲು	337
9	ಟೈ	9
41	ಫಲಿತಾಂಶವಿಲ್ಲ	28

ತಂಡಗಳು

ಭಾರತ: ವಿರಾಟ್ ಕೊಹ್ಲಿ (ನಾಯಕ), ರೋಹಿತ್ ಶರ್ಮಾ (ಉಪನಾಯಕ), ಶಿಖರ್ ಧವನ್, ಶುಭಮನ್ ಗಿಲ್, ಶ್ರೇಯಸ್ ಅಯ್ಯರ್, ಸೂರ್ಯಕುಮಾರ್ ಯಾದವ್, ಹಾರ್ದಿಕ್ ಪಾಂಡ್ಯ, ರಿಷಭ್ ಪಂತ್ (ವಿಕೆಟ್ ಕೀಪರ್), ಕೆ.ಎಲ್.ರಾಹುಲ್ (ವಿಕೆಟ್ ಕೀಪರ್), ಯಜುವೇಂದ್ರ ಚಾಹಲ್, ಕುಲದೀಪ್ ಯಾದವ್, ಕೃಣಾಲ್ ಪಾಂಡ್ಯ, ವಾಷಿಂಗ್ಟನ್ ಸುಂದರ್, ಟಿ.ನಟರಾಜನ್, ಭುವನೇಶ್ವರ್ ಕುಮಾರ್, ಮೊಹಮ್ಮದ್ ಸಿರಾಜ್, ಪ್ರಸಿದ್ಧ ಕೃಷ್ಣ, ಶಾರ್ದೂಲ್ ಠಾಕೂರ್.

ಇಂಗ್ಲೆಂಡ್: ಏಯಾನ್ ಮಾರ್ಗನ್ (ನಾಯಕ), ಮೋಯಿನ್ ಅಲಿ, ಜಾನಿ ಬೆಸ್ಟೊ, ಸ್ಯಾಮ್ ಬಿಲಿಂಗ್ಸ್, ಜೋಸ್ ಬಟ್ಲರ್, ಸ್ಯಾಮ್ ಕರನ್, ಟಾಮ್ ಕರನ್, ಲಿಯಾಮ್ ಲಿವಿಂಗ್‌ಸ್ಟನ್, ಮ್ಯಾಟ್ ಪಾರ್ಕಿನ್ಸನ್, ಆದಿಲ್ ರಶೀದ್, ಜೇಸನ್ ರಾಯ್, ಬೆನ್ ಸ್ಟೋಕ್ಸ್, ರೀಸ್ ಟೊಪ್ಲಿ, ಮಾರ್ಕ್ ವುಡ್, ಜೇಕ್ ಬಾಲ್, ಕ್ರಿಸ್ ಜೋರ್ಡಾನ್, ಡೇವಿಡ್ ಮಲಾನ್.

ಪಂದ್ಯ ಆರಂಭ ಮಧ್ಯಾಹ್ನ 1.30
ಲೈವ್ ಸ್ಟಾರ್ ಸ್ಪೋರ್ಟ್ಸ್

‘ಡಿಆರ್‌ಎಸ್‌ನಲ್ಲಿ ಲೋಪ ಇದೆ’

ಪುಣೆ (ಪಿಟಿಐ): ಇತ್ತೀಚೆಗೆ ಭಾರಿ ಚರ್ಚೆಗೆ ಒಳಗಾಗಿರುವ ‘ಅಂಪೈರ್ ಕಾಲ್’ ಬಗ್ಗೆ ಖಾರವಾಗಿ ಪ್ರತಿಕ್ರಿಯಿಸಿರುವ ಭಾರತ ತಂಡದ ನಾಯಕ ವಿರಾಟ್ ಕೊಹ್ಲಿ ‘ತೀರ್ಪು ಮರುಪರಿಶೀಲನಾ ವ್ಯವಸ್ಥೆಯಲ್ಲಿ (ಡಿಆರ್‌ಎಸ್) ತುಂಬ ಲೋಪಗಳಿದ್ದು ಚೆಂಡು ವಿಕೆಟ್‌ಗೆ ಬಡಿಯುವುದು ಖಾತರಿಯಾಗಿದ್ದರೆ ಔಟ್ ಕೊಡುವುದೇ ಒಳಿತು’ ಎಂದಿದ್ದಾರೆ.

ಸದ್ಯ ಇರುವ ನಿಯಮದ ಪ್ರಕಾರ ಎಲ್‌ಬಿಡಬ್ಲ್ಯುಗೆ ಸಂಬಂಧಿಸಿ ಅಂಪೈರ್ ನೀಡಿದ ತೀರ್ಪು ಪ್ರಶ್ನಿಸಿದರೆ ಮೂರು ಸ್ಟಂಪ್‌ಗಳಲ್ಲಿ ಯಾವುದಾದರೂ ಒಂದಕ್ಕೆ ಚೆಂಡಿನ 50 ಶೇಕಡಾ ಭಾಗ ತಾಗುವಂತಿರಬೇಕು.

‘ಡಿಆರ್‌ಎಸ್ ಇಲ್ಲದಿದ್ದಾಗ ಅನೇಕ ವರ್ಷ ನಾನು ಕ್ರಿಕೆಟ್ ಆಡಿದ್ದೇನೆ. ಅಂಪೈರ್ ನೀಡಿದ ತೀರ್ಪು ಬ್ಯಾಟ್ಸ್‌ಮನ್‌ಗೆ ಇಷ್ಟವಾಗಲಿ, ಆಗದಿರಲಿ ತೀರ್ಪು ಅಂತಿಮವಾಗಿರುತ್ತದೆ. ನಾಟೌಟ್ ಘೋಷಿಸಿದಾಗಲೂ ಅದೇ ರೀತಿ ಇರುತ್ತದೆ. ಸದ್ಯ ನನ್ನ ಪ್ರಕಾರ ಅಂಪೈರ್ಸ್ ಕಾಲ್ ತುಂಬ ಗಲಿಬಿಲಿ ಉಂಟುಮಾಡುತ್ತಿದೆ’ ಎಂದರು ಕೊಹ್ಲಿ.

ಮಹಿಳಾ ಟಿ20: ಭಾರತಕ್ಕೆ ಗೌರವ ಉಳಿಸುವ ಛಲ

ಲಖನೌ (ಪಿಟಿಐ): ಸರಣಿಯನ್ನು ಈಗಾಗಲೇ ಕೈಚೆಲ್ಲಿರುವ ಭಾರತ ಮಹಿಳಾ ತಂಡದವರು ದಕ್ಷಿಣ ಆಫ್ರಿಕಾ ಮಹಿಳೆಯರ ಎದುರಿನ ಟಿ20 ಕ್ರಿಕೆಟ್ ಸರಣಿಯ ಕೊನೆಯ ಪಂದ್ಯದಲ್ಲಿ ಮಂಗಳವಾರ ಗೌರವ ಉಳಿಸಿಕೊಳ್ಳುವ ಛಲದಲ್ಲಿ ಕಣಕ್ಕೆ ಇಳಿಯಲಿದ್ದಾರೆ.

ಏಕದಿನ ಸರಣಿಯಲ್ಲಿ ನೀರಸ ಆಟವಾಡಿದ ಭಾರತ ತಂಡ ಟಿ20 ಸರಣಿಯಲ್ಲಿ ಸವಾಲು ಎಸೆಯುವಲ್ಲಿ ಯಶಸ್ವಿಯಾಗಿದೆ. ಎರಡನೇ ಪಂದ್ಯದಲ್ಲಿ ಗೆಲುವಿನ ಸನಿಹ ತಲುಪಿದ್ದ ತಂಡ ಕೊನೆಯಲ್ಲಿ ಸೋಲಿನ ದವಡೆಗೆ ಸಿಲುಕಿ ಸರಣಿಯನ್ನು ಕಳೆದುಕೊಂಡಿತ್ತು. ಏಕಾನ ಕ್ರೀಡಾಂಗಣದಲ್ಲಿ ನಡೆಯಲಿರುವ ಮೂರನೇ ಹಾಗೂ ಅಂತಿಮ ಪಂದ್ಯದಲ್ಲಿ ಮತ್ತೊಮ್ಮೆ ತಂಡ ತನ್ನ ಅದೃಷ್ಟ ಪರೀಕ್ಷೆಗೆ ಮುಂದಾಗಲಿದೆ.

ದಕ್ಷಿಣ ಆಫ್ರಿಕಾ ಎದುರಿನ ಏಕದಿನ ಸರಣಿಯನ್ನು 1–4ರಲ್ಲಿ ಮಿಥಾಲಿ ಬಳಗ ಕಳೆದುಕೊಂಡಿತ್ತು. ಟಿ20ಯಲ್ಲಿ ನಾಯಕಿ ಹರ್ಮನ್‌ಪ್ರೀತ್ ಕೌರ್‌ಗೆ ಆಡಲು ಸಾಧ್ಯವಾಗದಿದ್ದರೂ ಯುವ ಆಟಗಾರ್ತಿಯರು ಉತ್ತಮ ಸಾಮರ್ಥ್ಯ ತೋರಿದ್ದಾರೆ. ಅಗ್ರ ಕ್ರಮಾಂಕದ ಬ್ಯಾಟರ್‌ಗಳು ಭರ್ಜರಿ ಆಟವಾಡಿದ್ದಾರೆ. ಆದರೂ ದಕ್ಷಿಣ ಆಫ್ರಿಕಾ ಎದುರು ಮೊದಲ ಬಾರಿ ಟಿ20 ಸರಣಿ ಸೋತ ಕಳಂಕ ತಂಡಕ್ಕೆ ತಟ್ಟಿದೆ.

ಪಂದ್ಯ ಆರಂಭ: ಸಂಜೆ 7.00;
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ 2

ಕಬಡ್ಡಿ ಟೂರ್ನಿ: ಸ್ಟ್ಯಾಂಡ್ ಕುಸಿದು ಹಲವರಿಗೆ ಗಾಯ

ಬೆಂಗಳೂರು: ರಾಷ್ಟ್ರೀಯ ಜೂನಿಯರ್ ಕಬಡ್ಡಿ ಚಾಂಪಿಯನ್‌ಷಿಪ್ ನಡೆಯುತ್ತಿರುವ ತೆಲಂಗಾಣದ ಸೂರ್ಯಪೇಟೆಯಲ್ಲಿ ಕ್ರೀಡಾಂಗಣದ ಸ್ಟ್ಯಾಂಡ್ ಕುಸಿದು ಬಿದ್ದು ನೂರಕ್ಕೂ ಹೆಚ್ಚು ಮಂದಿ ಗಾಯಗೊಂಡಿರುವುದಾಗಿ ಸ್ಥಳೀಯ ಮಾಧ್ಯಮಗಳಲ್ಲಿ ವರದಿಯಾಗಿದೆ.

ಎಸ್.ಪಿ.ಕಚೇರಿ ಆವರಣದ ಕ್ರೀಡಾಂಗಣದಲ್ಲಿ ಉದ್ಘಾಟನಾ ಸಮಾರಂಭಕ್ಕೂ ಮೊದಲು ಅವಘಡ ಸಂಭವಿಸಿದೆ. ಒಂದು ಭಾಗದ ಸ್ಟ್ಯಾಂಡ್ ಏಕಾಏಕಿ ಕುಸಿದುಬಿತ್ತು. ಅದರಡಿ ಸಿಲುಕಿದವರು ಗಾಯಗೊಂಡರು. ತಕ್ಷಣ ಅವರನ್ನು ಆಸ್ಪತ್ರೆಗೆ ಸಾಗಿಸಲಾಯಿತು. ಸ್ಟ್ಯಾಂಡ್ ಕುಸಿದ ವಿಡಿಯೊ ಸಾಮಾಜಿಕ ತಾಣಗಳಲ್ಲಿ ವೈರಲ್ ಆಗಿದೆ.

ಪ್ಯಾರಾ ಈಜು: ಕರ್ನಾಟಕಕ್ಕೆ ಪ್ರಶಸ್ತಿ

ಬೆಂಗಳೂರು: ಕರ್ನಾಟಕ ತಂಡವು ಇಲ್ಲಿಯ ವೈಟ್‌ಫೀಲ್ಡ್‌ನಲ್ಲಿರುವ ಜೀ ಈಜು ಅಕಾಡೆಮಿಯಲ್ಲಿ ನಡೆದ 20ನೇ ರಾಷ್ಟ್ರೀಯ ಪ್ಯಾರಾ ಈಜು ಚಾಂಪಿಯನ್‌ಷಿಪ್‌ನಲ್ಲಿ ಸಮಗ್ರ ಪ್ರಶಸ್ತಿ ಜಯಿಸಿತು .

ಸೋಮವಾರ ಕೊನೆಗೊಂಡ ಚಾಂಪಿಯನ್‌ಷಿಪ್‌ನಲ್ಲಿ ಕರ್ನಾಟಕ ಒಟ್ಟು 362 ಪಾಯಿಂಟ್ಸ್ ಕಲೆಹಾಕಿತು. ಮಹಾರಾಷ್ಟ್ರ ರನ್ನರ್ ಅಪ್ ಸ್ಥಾನ ಗಳಿಸಿತು.

ಐಎಸ್‌ಎಸ್‌ಎಫ್ ಶೂಟಿಂಗ್ ವಿಶ್ವಕಪ್: ಮುಂದುವರಿದ ಭಾರತದ ಸ್ಪರ್ಧಿಗಳ ಪಾರಮ್ಯ

ಮಿಶ್ರ ತಂಡ ವಿಭಾಗಗಳಲ್ಲಿ ಚಿನ್ನದ ಬೇಟೆ

ನವದೆಹಲಿ (ಪಿಟಿಐ): ಭಾರತದ ಯುವ ಶೂಟಿಂಗ್ ಪಟುಗಳು ಐಎಸ್‌ಎಸ್‌ಎಫ್ ವಿಶ್ವಕಪ್ ಟೂರ್ನಿಯಲ್ಲಿ ಪದಕಗಳ ಬೇಟೆ ಮುಂದುವರಿಸಿದರು. ಇಲ್ಲಿಯ ಕರ್ಣಿ ಸಿಂಗ್ ಶೂಟಿಂಗ್ ರೇಂಜ್‌ನಲ್ಲಿ ನಡೆಯುತ್ತಿರುವ ಟೂರ್ನಿಯ ನಾಲ್ಕನೇ ದಿನವಾದ ಸೋಮವಾರ ಮಿಶ್ರ ತಂಡಗಳಿಗಾಗಿ ಇದ್ದ 10 ಮೀಟರ್ ಏರ್ ರೈಫಲ್ ಹಾಗೂ 10 ಮೀ. ಏರ್ ಪಿಸ್ತೂಲ್ ಸ್ಪರ್ಧೆಗಳಲ್ಲಿ ಅಗ್ರಸ್ಥಾನ ಪಡೆದರು. ಇದರೊಂದಿಗೆ ಭಾರತ ಒಟ್ಟು 14 ಪದಕಗಳೊಂದಿಗೆ ಪಟ್ಟಿಯಲ್ಲಿ ಮೊದಲ ಸ್ಥಾನವನ್ನು ಇನ್ನಷ್ಟು ಭದ್ರಪಡಿಸಿಕೊಂಡಿತು.

10 ಮೀ. ಏರ್ ಪಿಸ್ತೂಲ್ ವಿಭಾಗದಲ್ಲಿ ಸೌರಭ್ ಚೌಧರಿ ಹಾಗೂ ಮನು ಭಾಕರ್ ಜೋಡಿ ಪಾರಮ್ಯ ಮೆರೆದರು. ದಿವ್ಯಾಂಶ್ ಸಿಂಗ್ ಪನ್ವರ್ ಹಾಗೂ ಇಳವೆನ್ನಿಲಾ ವಾಳರಿವನ್ ಏರ್ ರೈಫಲ್ ವಿಭಾಗದ ಚಿನ್ನ ತಮ್ಮದಾಗಿಸಿಕೊಂಡರು.



ಸ್ಕೀಟ್ ವಿಭಾಗದಲ್ಲಿ ಚಿನ್ನದ ಪದಕ ಗೆದ್ದ (ಎಡದಿಂದ)ಗುರುಜೋತ್ ಖಂಗುರ, ಮೈರಾಜ್ ಅಹಮದ್ ಖಾನ್ ಮತ್ತು ಅಂಗದ್ ವೀರ್ ಸಿಂಗ್ ಬಾಜ್ವಾ.

18 ವರ್ಷದ ಚೌಧರಿ ಹಾಗೂ 19ರ ಹರಯದ ಭಾಕರ್ ಫೈನಲ್‌ನಲ್ಲಿ 16–12ರಿಂದ ಇರಾನ್‌ನ ಗೋಲ್‌ನೌಶ್ ಸೆಬಾತೊಲ್ಲಾಹಿ–ಜಾವೇದ್ ಫಾರೋಗಿ ಅವರನ್ನು ಮಣಿಸಿದರು. ಈ ಟೂರ್ನಿಯಲ್ಲಿ ಭಾರತಕ್ಕೆ ಇದು ಐದನೇ ಚಿನ್ನದ ಪದಕವಾಗಿತ್ತು. ಒಟ್ಟಾರೆ ವಿಶ್ವಕಪ್ ಟೂರ್ನಿಗಳಲ್ಲಿ ಭಾರತದ ಈ ಯುವ ಜೋಡಿ ಮುಡಿಗೇರಿಸಿಕೊಂಡ ಐದನೇ ಚಿನ್ನ ಎಂಬುದು ವಿಶೇಷ.

10 ಮೀ. ಏರ್ ಪಿಸ್ತೂಲ್ ವಿಭಾಗದಲ್ಲೇ ಸ್ಪರ್ಧಿಸಿದ್ದ ಯಶಸ್ವಿನಿ ಸಿಂಗ್ ದೇಸ್ವಾಲ್–ಅಭಿಷೇಕ್ ವರ್ಮಾ ಜೋಡಿಯು ಚಿನ್ನದ ಪದಕ ಒಲಿಸಿಕೊಂಡಿತು. ಈ ಹಾದಿಯಲ್ಲಿ ಅವರು 17–13ರಿಂದ ಟರ್ಕಿಯ ಸೆವ್ವಾಲ್ ಇಲಾಯ್ದಾ ತರ್ಹಾನ್–ಇಸ್ಮಾಯಿಲ್ ಕೆಲೆಸ್ ಸವಾಲು ಮೀರಿದರು.

21 ವರ್ಷದ ಇಳವೆನ್ನಿಲಾ ಹಾಗೂ 18ರ ಪ್ರಾಯದ ದಿವ್ಯಾಂಶ್ ಸಿಂಗ್ ಅವರು 10 ಮೀ. ಏರ್ ರೈಫಲ್ ವಿಭಾಗದ ಫೈನಲ್ ಹಣಾಹಣಿಯಲ್ಲಿ 16–10ರಿಂದ ಹಂಗರಿಯ ಇಸ್ತವಾನ್ ಪೆನಿ ಹಾಗೂ ಈಸ್ತರ್ ಡೆನೆಸ್ ಅವರ ಸವಾಲು ಮೀರಿದರು. ಸೀನಿಯರ್ ವಿಶ್ವಕಪ್ ಟೂರ್ನಿಯಲ್ಲಿ ಇಳವೆನ್ನಿಲಾಗೆ ಇದು ಮೊದಲ ಚಿನ್ನವಾದರೆ, ದಿವ್ಯಾಂಶ್‌ಗೆ 4ನೆಯದು. ಈ ವಿಭಾಗದಲ್ಲಿ ಅಮೆರಿಕದ ಮೇರಿ ಕರೋಲಿನ್ ಟಕ್ಕರ್– ಲೂಕಾಸ್ ಕೊಜೆನಿಸ್ಕಿ ಜೋಡಿಯು ಕಂಚಿನ ಪದಕಕ್ಕೆ ಮುತ್ತಿಟ್ಟಿತು. ಭಾರತದ ಅಂಜುಮ್ ಮೌದ್ಗಿಲ್– ಅರ್ಜುನ್ ಬಬುತಾ ಫೈನಲ್ ತಲುಪಲು ವಿಫಲರಾದರು.

ಸ್ಕೀಟ್ ವಿಭಾಗದಲ್ಲಿ ‘ಸ್ವೀಟ್’: ಟೂರ್ನಿಯ ಪುರುಷರ ಸ್ಕೀಟ್ ವಿಭಾಗದಲ್ಲಿ ಭಾರತ ತಂಡವು ಚಿನ್ನದ ಪದಕದ ಸಿಹಿ ಸವಿಯಿತು. ಮಹಿಳಾ ತಂಡವು ಬೆಳ್ಳಿ ಪದಕ ಗೆದ್ದುಕೊಂಡಿತು.

ಪುರುಷರ ವಿಭಾಗದಲ್ಲಿ ಸ್ಪರ್ಧಿಸಿದ್ದ ಗುರುಜೋತ್ ಖಂಗುರ, ಮೈರಾಜ್ ಅಹಮದ್ ಖಾನ್ ಹಾಗೂ ಅಂಗದ್ ವೀರ್ ಸಿಂಗ್ ಬಾಜ್ವಾ ಅವರು ಫೈನಲ್ ಹಣಾಹಣಿಯಲ್ಲಿ 6–2ರಿಂದ ಕತಾರ್ ತಂಡವನ್ನು ಸೋಲಿಸಿದರು. ಕತಾರ್ ತಂಡವು ನಾಸರ್ ಅಲ್ ಅತಿಯಾ, ಅಲಿ ಅಹಮದ್ ಎ ಒ ಅಲ್ ಇಷಾಕ್ ಹಾಗೂ ರಶೀದ್ ಹಮಾದ್ ಅವರನ್ನು ಒಳಗೊಂಡಿತ್ತು.

ಮಹಿಳೆಯರ ಸ್ಕೀಟ್ ಫೈನಲ್‌ನಲ್ಲಿ ಪರಿನಾಜ್ ಧಲಿವಾಲ್, ಕಾರ್ತಿಕಿ ಸಿಂಗ್ ಶಕ್ತಾವತ್ ಹಾಗೂ ಗಣೆಮತ್ ಶೆಕೋನ್ ಅವರನ್ನೊಳಗೊಂಡ ಭಾರತ ತಂಡವು 4–6ರಿಂದ ಕಜಕಸ್ತಾನದ ರಿನಾತ ನಾಸ್ಸಿರೊವಾ, ಓಲ್ಗಾ ಪನಾರಿನಾ ಹಾಗೂ ಜೋಯಾ ಕ್ರಾವ್‌ಚೆಂಕೊ ಅವರಿಗೆ ಮಣಿಯಿತು.

ಕ್ರಿಕೆಟ್: ಕರ್ನಾಟಕ ಕ್ವಾರ್ಟರ್‌ಫೈನಲ್‌ಗೆ

ಬೆಂಗಳೂರು: ಡಿ.ಡಿ. ಕಸತ್ (ಔಟಾಗದೆ 126, 149 ಎಸೆತ, 15 ಬೌಂಡರಿ, 2 ಸಿಕ್ಸರ್) ಅವರ ಭರ್ಜರಿ ಶತಕದ ನೆರವಿಂದ ವಿದರ್ಭ ತಂಡವು ಕರ್ನಾಟಕ ತಂಡವನ್ನು ಮಣಿಸಿತು. ಚೆನ್ನೈನ ವಿ.ಬಿ.ನೆಸ್ಟ್ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಬಿಸಿಸಿಐ ಮಹಿಳಾ ಏಕದಿನ ಟ್ರೋಫಿ ಕ್ರಿಕೆಟ್ ಪಂದ್ಯದಲ್ಲಿ ನಾಲ್ಕು ರನ್‌ಗಳಿಂದ ಕರ್ನಾಟಕ ಸೋಲು ಅನುಭವಿಸಿತು.

ಆದರೆ ಪಾಯಿಂಟ್ಸ್ ಪಟ್ಟಿಯಲ್ಲಿ ಎರಡನೇ ಸ್ಥಾನದಲ್ಲಿರುವುದರಿಂದ ಕರ್ನಾಟಕ ಕ್ವಾರ್ಟರ್‌ಫೈನಲ್‌ಗೆ ತಲುಪಿತು.

ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ವಿದರ್ಭ ನಿಗದಿತ ಓವರ್‌ಗಳಲ್ಲಿ 5 ವಿಕೆಟ್‌ಗೆ 216 ರನ್ ಗಳಿಸಿತು. ಗುರಿ ಬೆನ್ನತ್ತಿದ ಕರ್ನಾಟಕ 50 ಓವರ್‌ಗಳಲ್ಲಿ ಒಂಬತ್ತು ವಿಕೆಟ್ ಕಳೆದುಕೊಂಡು 212 ರನ್ ಕಲೆಹಾಕಿತು.


ಕೆಕೆಆರ್ ತಂಡದ ಸಹಾಯಕ ಕೋಚ್ ಅಭಿಷೇಕ್ ನಾಯರ್ ಹೋಟೆಲ್‌ನಲ್ಲಿ ಆಟಗಾರನ ಜೊತೆ –ಟ್ವಿಟರ್ ಚಿತ್ರ

ಐಪಿಎಲ್: ಮುಂಬೈಯಲ್ಲಿ ಕೆಕೆಆರ್ ಆಟಗಾರರು

ಮುಂಬೈ (ಪಿಟಿಐ): ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿಯಲ್ಲಿ ಆಡುವ ಕೋಲ್ಕತ್ತ ನೈಟ್ ರೈಡರ್ಸ್ ತಂಡದ ಆಟಗಾರರು ಮುಂಬೈನಲ್ಲಿ ಜಮಾಯಿಸತೊಡಗಿದ್ದು ಒಂದು ವಾರದ ಕಡ್ಡಾಯ ಕ್ವಾರಂಟೈನ್‌ಗೆ ಸಜ್ಜಾಗುತ್ತಿದ್ದಾರೆ. ಈ ವಿಷಯವನ್ನು ತಂಡವು ಅಧಿಕೃತ ಟ್ವಿಟರ್ ಖಾತೆಯಲ್ಲಿ ಪೋಸ್ಟ್ ಮಾಡಿದೆ.

ಐಪಿಎಲ್ ಟೂರ್ನಿಯ 14ನೇ ಆವೃತ್ತಿಗೆ ಮುಂದಿನ ತಿಂಗಳು ಒಂಬತ್ತರಂದು ಚಾಲನೆ ಸಿಗಲಿದೆ. ಕೋಲ್ಕತ್ತ ತಂಡದ ನಾಯಕ ದಿನೇಶ್ ಕಾರ್ತಿಕ್, ವರುಣ್ ಚಕ್ರವರ್ತಿ, ರಾಹುಲ್ ತ್ರಿಪಾಠಿ, ಕಮಲೇಶ್ ನಾಗರಕೋಟಿ, ಸಂದೀಪ್ ವಾರಿಯರ್ ಮತ್ತು ವೈಭವ್ ಅರೋರ ಮೊದಲ ತಂಡದಲ್ಲಿ ಇಲ್ಲಿಗೆ ಬಂದಿದ್ದು ಸಹಾಯಕ ಕೋಚ್ ಅಭಿಷೇಕ್ ನಾಯರ್ ಮತ್ತು ಸಹಾಯಕ ಬೌಲಿಂಗ್ ಕೋಚ್ ಓಂಕಾರ್ ಸಾಳ್ವಿ ಕೂಡ ತಂಡದೊಂದಿಗೆ ಇದ್ದಾರೆ.

ವೆಸ್ಟ್ ಇಂಡೀಸ್‌ನ ಸುನಿಲ್ ನಾರಾಯಣ್ ಮತ್ತು ಆ್ಯಂಡ್ರೆ ರಸೆಲ್ ಸದ್ಯದಲ್ಲೇ ತಂಡವನ್ನು ಸೇರಲಿದ್ದು ಉಳಿದ ಆಟಗಾರರ ಬರುವಿಕೆಯ ಬಗ್ಗೆ ಮಾಹಿತಿ ಲಭ್ಯವಿಲ್ಲ. ಮಾಸ್ಕ್ ಧರಿಸಿ ವಿಮಾನದಲ್ಲಿ ಕುಳಿತಿರುವ ರಸೆಲ್ ಚಿತ್ರವನ್ನು ಪೋಸ್ಟ್ ಮಾಡಿರುವ ತಂಡ ’ವಿಮಾನದಲ್ಲಿ ಯಾರಿದ್ದಾರೆ ನೋಡಿ. ಈ ದೈತ್ಯ ಆಟಗಾರನಿಗಾಗಿ ಕಾಯುತ್ತಿದ್ದೇವೆ’ ಎಂದು ಬರೆದಿದೆ. ‘ಕೆರಿಬಿಯನ್ ಆಟಗಾರರು ಕೆಲವೇ ತಾಸುಗಳಲ್ಲಿ ಅವರ ಮತ್ತೊಂದು ತವರು, ಭಾರತದಲ್ಲಿ ಕಾಣಿಸಿಕೊಳ್ಳಲಿದ್ದಾರೆ’ ಎಂದು ಮತ್ತೊಂದು ಟ್ವೀಟ್‌ನಲ್ಲಿ ಬರೆಯಲಾಗಿದೆ.

ಬಿಸಿಸಿಐ ಮಾರ್ಗಸೂಚಿ ಪ್ರಕಾರ ಆಟಗಾರರು, ನೆರವು ಸಿಬ್ಬಂದಿ ಮತ್ತು ತಂಡದ ಆಡಳಿತದವರು ಬಯೋಬಬಲ್ ಪ್ರವೇಶಿಸುವುದಕ್ಕಿಂತ ಏಳುದಿನ ಮೊದಲು ಹೋಟೆಲ್ ಕೊಠಡಿಯಲ್ಲಿ ಕ್ವಾರಂಟೈನ್‌ಗೆ ಒಳಗಾಗಬೇಕು.

‘ಕ್ವಾರಂಟೈನ್ ಅವಧಿಯಲ್ಲಿ ಪ್ರತಿಯೊಬ್ಬರನ್ನೂ ಅನೇಕ ಬಾರಿ ಪರೀಕ್ಷೆಗೆ ಒಳಪಡಿಸಲಾಗುವುದು. ನೆಗೆಟಿವ್ ವರದಿ ಬಂದರೆ ಮಾತ್ರ ಕೊಠಡಿಯಿಂದ ಹೊರಬರಲು ಮತ್ತು ಅಭ್ಯಾಸ ಮಾಡಲು ಅನುಮತಿ ನೀಡಲಾಗುವುದು’ ಎಂದು ಕೆಕೆಆರ್ ವೆಬ್‌ಸೈಟ್‌ನಲ್ಲಿ ಪ್ರಕಟಿಸಿದೆ.